ಬುಧವಾರ, ಜನವರಿ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 22 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮೊಬೈಲ್ ಫೋನ್‌ನಲ್ಲಿ ಅಪರಿಚಿತರ ಕರೆಗಳನ್ನು ಸ್ವೀಕರಿಸುವ ಮುನ್ನ ಎಚ್ಚರ ವಹಿಸಿ

ಆಳ-ಅಗಲ
ಬ್ಯಾಂಕ್ ದರೋಡೆ ಪ್ರಕರಣ: ಆರೋಪಿ ಕಾಲಿಗೆ ಗುಂಡೇಟು 11
ಹಕ್ಕಿ ಜ್ವರ: ಬೇಕಿದೆ ಎಚ್ಚರ
ಶರಾವತಿ ಯೋಜನೆ: ಪಶ್ಚಿಮ ಘಟ್ಟಕ್ಕೆ ಆಪತ್ತು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,838	23,024	₹83,680 (ಬೆಂಗಳೂರು)	₹96,600 (ಬೆಂಗಳೂರು)	86.58

ಪ್ರತಿಷ್ಠಿತ ಕಂಪನಿಗಳ ಔಷಧದ ಹೆಸರು ನಕಲು ಮಾಡಿ ಮಾರಾಟ • ಪರಿಶೀಲನೆಯಲ್ಲಿ ದೃಢ

ನಕಲಿ ಔಷಧ ಜಾಲ ವ್ಯಾಪಕ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ಆಸ್ಪತ್ರೆಗಳಲ್ಲಿ ಬಳಸುತ್ತಿರುವ ಕೆಲವು ಔಷಧಗಳಲ್ಲಿ ಪ್ರಮಾಣಿತ ಗುಣಮಟ್ಟ ಇಲ್ಲದಿರುವುದು ಒಂದು ಸಮಸ್ಯೆಯಾದರೆ, ಮತ್ತೊಂದೆಡೆ ಔಷಧ ಮಾರುಕಟ್ಟೆಯಲ್ಲಿ ನಕಲಿ ಔಷಧಗಳ ಪೂರೈಕೆ ಜಾಲ ವ್ಯಾಪಕವಾಗಿದೆ. ನಕಲಿ ಔಷಧಗಳ ಮಾರಾಟದಲ್ಲಿ ಹೊರ ರಾಜ್ಯಗಳ ಕಂಪನಿಗಳು ಸಕ್ರಿಯವಾಗಿವೆ.

ಮಾರುಕಟ್ಟೆಯಲ್ಲಿ ಇರುವ ಪ್ರತಿಷ್ಠಿತ ಕಂಪನಿಗಳ ಔಷಧದ ಹೆಸರಿನಲ್ಲಿ ನಕಲಿ ಔಷಧ ಪೂರೈಸುತ್ತಿರುವುದು ರಾಜ್ಯದ ವಿವಿಧೆಡೆ ಔಷಧ ನಿಯಂತ್ರಕರು ನಡೆಸಿದ ತಪಾಸಣೆಯಿಂದ ದೃಢಪಟ್ಟಿದೆ. ಔಷಧಗಳ ಹೆಸರು ಒಂದೇ ಆಗಿದ್ದರೂ ಉತ್ಪಾದಕರು ಬೇರೆ ಬೇರೆ ಆಗಿರುವುದರಿಂದ ಔಷಧಗಳ ಮಾದರಿಗಳನ್ನು ಸಂಗ್ರಹಿಸಿ, ಇಲ್ಲಿನ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದರಿಂದ ಅಸಲಿ–ನಕಲಿಯ ಪತ್ತೆ ಸಾಧ್ಯವಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ ಗುರುತಿಸಲಾದ ನಕಲಿ ಔಷಧ ತಯಾರಿಕಾ ಕಂಪನಿಗಳ ಪಟ್ಟಿಯು ‘ಪ್ರಜಾವಾಣಿ’ಗೆ ಲಭ್ಯವಾಗಿದ್ದು, ಈ ಕಂಪನಿಗಳ 40ಕ್ಕೂ ಅಧಿಕ ನಕಲಿ ಔಷಧಗಳನ್ನು ಪತ್ತೆ ಮಾಡಲಾಗಿದೆ. 2023–24ನೇ ಸಾಲಿನಲ್ಲಿ 17 ನಕಲಿ ಔಷಧಗಳನ್ನು ಗುರುತಿಸಿದರೆ, 2024–25ನೇ ಸಾಲಿನಲ್ಲಿ (ಕಳೆದ ವರ್ಷಾಂತ್ಯಕ್ಕೆ) 26 ನಕಲಿ ಔಷಧಗಳನ್ನು ಪತ್ತೆ ಮಾಡಲಾಗಿದೆ.

ರಾಜ್ಯದಲ್ಲಿ ನಕಲಿ ಔಷಧ ಮಾರಾಟ ಪ್ರಕರಣಗಳು ಗಮನಕ್ಕೆ ಬಂದಿವೆ. ನಕಲಿ ಔಷಧ ಮಾರಾಟ ಮಾಡುವ ಸಂಸ್ಥೆಗಳನ್ನು ಪತ್ತೆ ಮಾಡಿ, ಮೊಕದ್ದಮೆ ಹೂಡಲಾಗುತ್ತಿದೆ
ದಿನೇಶ ಗುಂಡೂರಾವ್, ಆರೋಗ್ಯ ಸಚಿವ

ರಾಜ್ಯದ ಔಷಧ ಮಾರುಕಟ್ಟೆ ಪ್ರವೇಶಿಸುವ ಔಷಧಗಳನ್ನು ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳು ನಿಯಮಿತವಾಗಿ ತಪಾಸಣೆ ಮಾಡುತ್ತಿದ್ದಾರೆ. ಔಷಧಗಳು ಮತ್ತು ಕಾಂತಿವರ್ಧಕ ಕಾಯ್ದೆ 1940ರ ಅಡಿ ನಕಲಿ ಔಷಧ ತಯಾರಕರ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ.

7ನೇ ಪುಟ ನೋಡಿ

ಮೂಗು– ಕಣ್ಣಿಗೆ ಹಾಕುವ ದ್ರಾವಣವೂ ನಕಲಿ

ರಾಜ್ಯ ಔಷಧ ನಿಯಂತ್ರಣಾಧಿಕಾರಿಗಳ ಪರಿಶೀಲನೆ ವೇಳೆ ಒಂದೇ ಉತ್ಪಾದಕರು ಹಲವು ನಕಲಿ ಔಷಧಗಳನ್ನು ಮಾರುಕಟ್ಟೆಗೆ ಪೂರೈಸಿರುವುದು ದೃಢಪಟ್ಟಿದೆ. ಹಿಮಾಚಲ ಪ್ರದೇಶದ ಪುಷ್ಕರ್ ಫಾರ್ಮಾ ಎಂಬ ಕಂಪನಿಯ 17 ಔಷಧಗಳು ನಕಲಿ ಎನ್ನುವುದು ಪ್ರಯೋಗಾಲಯ ಪರೀಕ್ಷೆಗಳಿಂದ ಖಚಿತಪಟ್ಟಿದೆ. ಈ ಕಂಪನಿಯು ಮೂಗಿಗೆ ಹಾಗೂ ಕಣ್ಣಿಗೆ ಹಾಕುವ ದ್ರಾವಣವನ್ನು ಹೆಚ್ಚಾಗಿ ಮಾರುಕಟ್ಟೆಗೆ ಪೂರೈಸಿದೆ. ಔಷಧಗಳು ಮತ್ತು ಕಾಂತಿವರ್ಧಕ ಕಾಯ್ದೆ 1940ರ ಪರಿಚ್ಛೇದ 17ರ (ಬಿ) ಅಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ.

‘ಫಲಿತಾಂಶ ನೀಡದ ಔಷಧ’

‘ಮಾರುಕಟ್ಟೆಯಲ್ಲಿ ಜನಪ್ರಿಯವಾಗಿರುವ, ಉತ್ತಮ ಫಲಿತಾಂಶ ನೀಡುವ ಔಷಧಗಳ ಹೆಸರಿನಲ್ಲಿ ನಕಲಿ ಔಷಧಗಳ ಮಾರಾಟ ವ್ಯಾಪಕವಾಗಿ ನಡೆದಿದೆ. ಹೊರಗಡೆಯಿಂದ ಅಸಲಿಯಂತೆ ಕಾಣಿಸಿದರೂ ಅದು ಫಲಿತಾಂಶ ನೀಡುವುದಿಲ್ಲ. ಔಷಧದ ಗುಣ ಇಲ್ಲದಿರುವುದೇ ಇದಕ್ಕೆ ಕಾರಣ. ಆದ್ದರಿಂದ ಔಷಧ ಖರೀದಿಸುವಾಗ ಅದರ ಮೇಲಿರುವ ಎಲ್ಲ ಮಾಹಿತಿಗಳನ್ನೂ ಪರಿಶೀಲಿಸಬೇಕು. ವೈದ್ಯರ ಚೀಟಿ ಹೊಂದಿಯೇ ಔಷಧ ಖರೀದಿ ಮಾಡಬೇಕು. ಔಷಧ ಖರೀದಿಸಿದ ಬಳಿಕ ಕಡ್ಡಾಯವಾಗಿ ರಶೀತಿಯನ್ನೂ ಪಡೆದುಕೊಳ್ಳಬೇಕು. ನಕಲಿ ಔಷಧ ಅಥವಾ ಪ್ರಮಾಣಿತ ಗುಣಮಟ್ಟ ಹೊಂದಿರದ ಬಗ್ಗೆ ಸಂಶಯ ಇದ್ದಲ್ಲಿ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು’ ಎಂದು ಔಷಧ ನಿಯಂತ್ರಕರೊಬ್ಬರು ತಿಳಿಸಿದರು.

115 ವೈದ್ಯರ ನಿಯೋಜನೆ ರದ್ದು

ಆರೋಗ್ಯ ಇಲಾಖೆಯಿಂದ ನಿಯೋಜನೆಗೊಂಡು ವೈದ್ಯಕೀಯ ಶಿಕ್ಷಣ ಇಲಾಖೆಯ ವೈದ್ಯಕೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ 94 ವೈದ್ಯರು ಮತ್ತು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಡಿ ವಿವಿಧ ಜಿಲ್ಲೆಗಳಲ್ಲಿ ಅಂಕಿತಾಧಿಕಾರಿಗಳಾಗಿದ್ದ 21 ವೈದ್ಯರ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಈ ಎಲ್ಲ ವೈದ್ಯಾಧಿಕಾರಿಗಳು ಮತ್ತು ತಜ್ಞ ವೈದ್ಯರು ಆರೋಗ್ಯ ಇಲಾಖೆಗೆ ನೇಮಕಗೊಂಡಿದ್ದರು. ಹುದ್ದೆಗಳಲ್ಲಿ ತಮ್ಮ ಅವಧಿ ಮುಗಿದಿದ್ದರೂ ಅದೇ ಸ್ಥಾನಗಳಲ್ಲಿ ಮುಂದುವರಿದಿದ್ದರು. ಇಲಾಖೆಯ ಅಧೀನ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಮತ್ತು ವೈದ್ಯಾಧಿಕಾರಿಗಳ ಕೊರತೆ ಇರುವ ಕಾರಣ ಈ ಎಲ್ಲರ ನಿಯೋಜನೆಯನ್ನು ರದ್ದುಪಡಿಸಿ, ಅವರನ್ನು ಮಾತೃ ಇಲಾಖೆಗೆ ಹಿಂಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ಬೆಳಗಾವಿಯ ಸುವರ್ಣ ಸೌಧದ ಆವರಣದಲ್ಲಿ ಮಹಾತ್ಮ ಗಾಂಧಿ ಪ್ರತಿಮೆ ಅನಾವರಣ ಮಾಡಿದ ಬಳಿಕ ಗಾಂಧೀಜಿ ಕುರಿತ ಪುಸ್ತಕವನ್ನು ಮಂಗಳವಾರ ಬಿಡುಗಡೆ ಮಾಡಲಾಯಿತು. ಸಚಿವರಾದ ಸತೀಶ ಜಾರಕಿಹೊಳಿ, ಎಚ್‌.ಕೆ.ಪಾಟೀಲ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಿ.ಎಂ ಸಿದ್ದರಾಮಯ್ಯ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

‘ಗಾಂಧಿ ಭಾರತ’ ಸಮಾವೇಶದಲ್ಲಿ ಕೇಂದ್ರ ಸರ್ಕಾರದ ಟೀಕೆ

ಅಂಬೇಡ್ಕರ್‌ಗೆ ಅವಮಾನ ಸಹಿಸುವುದಿಲ್ಲ: ಪ್ರಿಯಾಂಕಾ

• ಸಂತೋಷ ಈ. ಚಿನಗುಡಿ

ಬೆಳಗಾವಿ: ‘ಭಾರತದ ಸಂವಿಧಾನಕ್ಕೆ, ಸಂವಿಧಾನ ನೀಡಿದ ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದರೆ ಸಹಿಸುವುದಿಲ್ಲ. ಸಂವಿಧಾನ ರಕ್ಷಣೆಗೆ ನಾವು ಪ್ರಾಣ ತ್ಯಾಗಕ್ಕೂ ಸಿದ್ಧ’ ಎಂದು ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದರು.

‘ಗಾಂಧಿ ಭಾರತ’ ಪ್ರಯುಕ್ತ ಎಐಸಿಸಿ ವತಿಯಿಂದ ನಗರದಲ್ಲಿ ಮಂಗಳವಾರ ನಡೆದ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಸಮಾವೇಶದಲ್ಲಿ ಮಾತನಾಡಿದ ಅವರು, ‘ಬಿಜೆಪಿ ಅಧಿಕಾರಕ್ಕೆ ಬಂದ ಮೊದಲ ವರ್ಷವೇ ಸಂವಿಧಾನ ಪರಾಮರ್ಶೆಗೆ ಮುಂದಾಯಿತು. ಬಡವರು, ರೈತರು, ಕಾರ್ಮಿಕರು, ಮಹಿಳೆಯರ ಕೈಯಲ್ಲಿರುವ ಏಕಮಾತ್ರ ಅಸ್ತ್ರ ಸಂವಿಧಾನ. ಅದನ್ನೇ ಬದಲಿಸಿದರೆ, ಇಡೀ ದೇಶವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಬಹುದು ಎಂಬುದು ಅವರ ಉಪಾಯ’ ಎಂದರು.

ನಮ್ಮವರು ದೇಶಕ್ಕಾಗಿ ಹೋರಾಡಿ ಪ್ರಾಣ ಬಿಟ್ಟರು. ಜೈಲಿನಲ್ಲಿ ಇದ್ದು ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆಯಲಿಲ್ಲ. ಸಂವಿಧಾನಕ್ಕಾಗಿ ನಾವು ಪ್ರಾಣ ಬಿಡಲೂ ಸಿದ್ಧ
ಪ್ರಿಯಾಂಕಾ ಗಾಂಧಿ ವಾದ್ರಾ, ಸಂಸದೆ

ಮಹಾತ್ಮ ಗಾಂಧೀಜಿ ಅವರನ್ನು ಕೊಂದ ಗೋಡ್ಸೆ, ಸಾವರ್ಕರ್ ಅವರ ಶಿಷ್ಯ. ಹೀಗಾಗಿ, ಬಿಜೆಪಿಯವರು ಅವರಿಬ್ಬರನ್ನೂ ತಮ್ಮ ನಾಯಕರನ್ನಾಗಿ ಮಾಡಿಕೊಂಡಿದ್ದಾರೆ
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

‘ಸ್ವಾತಂತ್ರ್ಯದ ಬಳಿಕ ಹಲವು ಸರ್ಕಾರಗಳು ಬಂದಿವೆ. ಎಲ್ಲಾ ಪಕ್ಷಗಳೂ ಆಡಳಿತ ಮಾಡಿವೆ. ಆದರೆ, ಬಿ.ಆರ್. ಅಂಬೇಡ್ಕರ್ ಅವರನ್ನು ಸಂಸತ್ತಿನಲ್ಲಿಯೇ ಅವಮಾನಿಸಿದ ಅಪಕೀರ್ತಿ ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲುತ್ತದೆ. ಆರ್‌ಎಸ್‌ಎಸ್ ತತ್ವಗಳು ಗಾಂಧಿ– ಅಂಬೇಡ್ಕರ್ ತತ್ವಗಳಿಗೆ ವಿರುದ್ಧವಾಗಿವೆ. ಅದಕ್ಕೆ ಬಿಜೆಪಿ ಯಾವಾಗಲೂ ಸಂವಿಧಾನ ಮತ್ತು ಅಂಬೇಡ್ಕರ್ ಅವರನ್ನು ಅವಮಾನಿಸುತ್ತದೆ’ ಎಂದರು.

‘ಮಹಾತ್ಮ ಗಾಂಧಿ ಸತ್ಯ–ಅಹಿಂಸೆ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಸತ್ಯ–ಅಹಿಂಸೆ ತಳಹದಿಯಲ್ಲೇ ಅಂಬೇಡ್ಕರ್ ಸಂವಿಧಾನ ರಚಿಸಿದರು. ಇದನ್ನು ಅರಗಿಸಿಕೊಳ್ಳದ ಬಿಜೆಪಿ ಸಂವಿಧಾನ ಬದಲಿಸುವ ಹುನ್ನಾರ ನಡೆಸಿದೆ. ಸಂವಿಧಾನ ಬದಲಾದರೆ ಬಹುತ್ವದ ಭಾರತ ಉಳಿಯುವುದಿಲ್ಲ’ ಎಂದು ಎಚ್ಚರಿಸಿದರು.

11ನೇ ಪುಟ ನೋಡಿ

ಬಸನಗೌಡ ಪಾಟೀಲ ಯತ್ನಾಳ ಬಣದ ವಿರುದ್ಧ ದೂರು ನೀಡಲು ಸಭೆ ಬಳಕೆ

ಬಿಜೆಪಿ ‘ಭಿನ್ನ’ರ ಸದ್ದಡಗಿಸಲು ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಘಟನೆ ಹಾಗೂ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಕುರಿತು ಮಾಹಿತಿ ಸಂಗ್ರಹಿಸಲು ಮಂಗಳವಾರ ಕರೆದಿದ್ದ ಸಭೆಯನ್ನು ಬಸನಗೌಡ ಪಾಟೀಲ ಯತ್ನಾಳ ಬಣದ ವಿರುದ್ಧ ದೂರು ನೀಡಲು ಹೆಚ್ಚಿನ ಶಾಸಕರು ಬಳಸಿಕೊಂಡಿದ್ದಾರೆ.

ಪಕ್ಷದ ಸಂಘಟನಾ ಪರ್ವ ಹಾಗೂ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಕುರಿತು ಚರ್ಚಿಸಲು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ನೇತೃತ್ವದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್‌ನ 45 ಸದಸ್ಯರು ಮಾತ್ರ ಭಾಗವಹಿಸಿದ್ದರು. 12 ಶಾಸಕರು ತಮ್ಮ ಅಭಿಪ್ರಾಯ ಮಂಡಿಸಿದರು. ಅವರಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್ ಮಾತ್ರ ವಿಜಯೇಂದ್ರ ಹಾಗೂ ಅವರ ನಿಷ್ಠರ ವಿರುದ್ಧ ಹರಿಹಾಯ್ದಿದ್ದಾರೆ.

‘ಯತ್ನಾಳ, ರಮೇಶ ಜಾರಕಿಹೊಳಿ ಮತ್ತು ಅವರ ತಂಡ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ವಿರುದ್ಧ ನಿರಂತರವಾಗಿ ಬಹಿರಂಗ ಹೇಳಿಕೆ ನೀಡುತ್ತಿದೆ. ಹೈಕಮಾಂಡ್ ಬಗ್ಗೆಯೂ ಅವರಿಗೆ ಗೌರವ ಇಲ್ಲವಾಗಿದೆ. ಇದರಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ. ಕಾಂಗ್ರೆಸ್ ನಾಯಕರು, ಶಾಸಕರು ಹಾಗೂ ರಾಜ್ಯ ಸರ್ಕಾರದ ಮುಖ್ಯಮಂತ್ರಿ, ಸಚಿವರು ಅವರ ಹೇಳಿಕೆಗಳನ್ನು ಬಳಸಿಕೊಂಡು ಟೀಕೆ ಮಾಡುತ್ತಿದ್ದಾರೆ. ಇಂತಹ ಹೇಳಿಕೆಗಳಿಗೆ ತಕ್ಷಣ ತಡೆ ಹಾಕಬೇಕು. ಬಹಿರಂಗ ಹೇಳಿಕೆ ನೀಡುವವರ ವಿರುದ್ಧ ತಕ್ಷಣ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಕುರಿತು ಚರ್ಚೆ ನಡೆದಿಲ್ಲ. ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಬಂದ ನಂತರ ಈ ಕುರಿತು ಪ್ರತ್ಯೇಕ ಸಭೆ ನಡೆಯಲಿದೆ
ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಯತ್ನಾಳ ಅವರು ರೈಲ್ವೆ ಸಚಿವರಾದಾಗ ಅವರ ವಯಸ್ಸು 32. ಆಗ ಅವರಿಗೆ ಚಿಕ್ಕ ವಯಸ್ಸು ಎಂದು ಯಾರಾದರೂ ವಿರೋಧ ವ್ಯಕ್ತಪಡಿಸಿದ್ದರಾ? ವಿಜಯೇಂದ್ರಗೆ ಏಕೆ ಈ ಪ್ರಶ್ನೆ?
ಡಾ.ಶೈಲೇಂದ್ರ ಬೆಲ್ದಾಳೆ, ಶಾಸಕ

13ನೇ ಪುಟ ನೋಡಿ

ಭಾಗವಹಿಸಿದ್ದು ಇಬ್ಬರೇ ಸಂಸದರು

ಸಂಸದರಾದ ಕೆ. ಸುಧಾಕರ್, ಬ್ರಿಜೇಶ್ ಚೌಟ ಮಾತ್ರ ಬಿಜೆಪಿ ಸಭೆಯಲ್ಲಿ ಭಾಗವಹಿಸಿದ್ದರು. ಇತರೆ 15 ಸಂಸದರು ಗೈರು ಹಾಜರಾಗಿದ್ದರು.

ವಿಜಯೇಂದ್ರ ವಿರುದ್ಧ ಬಹಿರಂಗ ಹೇಳಿಕೆ ನೀಡುತ್ತಿರುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ ತಂಡ ಹಾಗೂ ತಟಸ್ಥ ಬಣದ ವಿ. ಸುನಿಲ್‌ಕುಮಾರ್, ಸಿ.ಸಿ. ಪಾಟೀಲ, ಸುರೇಶ್ ಕುಮಾರ್, ಅಭಯ್ ಪಾಟೀಲ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮೊದಲಾದವರು ಭಾಗವಹಿಸಿರಲಿಲ್ಲ.

‘ಅನರ್ಹತೆ’ಯಿಂದ ಶಾಸಕರ ರಕ್ಷಣೆ ಮಸೂದೆಗೆ ಅಸ್ತು

ಬೆಂಗಳೂರು: ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಇತರ ಲಾಭದಾಯಕ ಹುದ್ದೆ ಹೊಂದಿದ ಕಾರಣಕ್ಕೆ ಶಾಸಕ ಸ್ಥಾನದಿಂದ ಅನರ್ಹರಾಗುವುದನ್ನು ತಡೆಯುವ ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ್ದಾರೆ. 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮುನಿರತ್ನ ವಿರುದ್ಧ ಮತ್ತೆ ಎಫ್‌ಐಆರ್

ಗುಡಿಸಲು ನೆಲಸಮ ಮಾಡಿದ ಪ್ರಕರಣ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಮುನಿರತ್ನ

ಬೆಂಗಳೂರು: ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಸೇರಿದಂತೆ ಏಳು ಮಂದಿ ವಿರುದ್ಧ ಕಾರ್ಮಿಕರು ಹಾಕಿಕೊಂಡಿದ್ದ ಗುಡಿಸಲುಗಳನ್ನು ನೆಲಸಮ ಮಾಡಿದ ಆರೋಪದ ಅಡಿ ನಗರದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮುನಿರತ್ನ ಹಾಗೂ ಅವರ ಬೆಂಬಲಿಗರಾದ ವಸಂತಕುಮಾರ್, ಚನ್ನಕೇಶವ, ನವೀನ್, ಶ್ರೀರಾಮ, ಪೀಣ್ಯ ಕಿಟ್ಟಿ, ಪೀಣ್ಯ ಗಂಗ ವಿರುದ್ಧ ಪ್ರಕರಣ ದಾಖಲಾಗಿದೆ.

‘ಪೀಣ್ಯದ ನಿವಾಸಿ ಗೀತಾ ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

‘ಪೀಣ್ಯ ಪ್ರಥಮ ದರ್ಜೆ ಕಾಲೇಜು ಪಕ್ಕದ ಅಕ್ಕಮಹಾದೇವಿ ಕೊಳೆಗೇರಿಯಲ್ಲಿ ವಿವಿಧ ಕಡೆಯಿಂದ ಬಂದಿದ್ದ 60 ಕುಟುಂಬಗಳು ಗುಡಿಸಲು ಹಾಕಿಕೊಂಡು ನೆಲಸಿದ್ದವು. ಮುನಿರತ್ನ ನೇತೃತ್ವದಲ್ಲಿ ಸ್ಥಳಕ್ಕೆ ಬಂದಿದ್ದ ತಂಡವು ಜೆಸಿಬಿ ಯಂತ್ರ ಬಳಸಿ ಗುಡಿಸಲುಗಳನ್ನು ನೆಲಸಮಗೊಳಿಸಿದೆ. ಗುಡಿಸಲುಗಳಲ್ಲಿ ಇಡಲಾಗಿದ್ದ ₹70 ಸಾವಿರ ನಗದು ಹಾಗೂ 30 ಗ್ರಾಂ ಚಿನ್ನಾಭರಣ ಮಣ್ಣಿನಲ್ಲಿ ಹೂತುಹೋಗಿದೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಮುನಿರತ್ನ ಸೂಚನೆ ಮೇರೆಗೆ ಅವರ ಸಹಚರರು ಕೃತ್ಯ ಎಸಗಿದ್ದಾರೆ. ಗುಡಿಸಲು ಕೆಡವಬೇಡಿ ಎಂದು ಮನವಿ ಮಾಡಿದಾಗ ಜಾತಿ ನಿಂದನೆ ಮಾಡಿದ್ದಾರೆ. ಎಲ್ಲರೂ ಜಾಗ ಬಿಟ್ಟು ಉತ್ತರ ಕರ್ನಾಟಕಕ್ಕೆ ತೆರಳಬೇಕು. ನೀವ್ಯಾರೂ ನಮ್ಮನ್ನು ಏನೂ ಮಾಡಲು ಆಗುವುದಿಲ್ಲವೆಂದು ಬೆದರಿಸಿದ್ದಾರೆ. ಹೆಣ್ಣು ಮಕ್ಕಳನ್ನು ಎಳೆದಾಡಿ ಕಾಲಿನಿಂದ ಒದ್ದಿದ್ದಾರೆ. ಕಾಲು ಹಿಡಿದು ಬೇಡಿಕೊಳ್ಳಲು ಮುಂದಾದ ವೇಳೆ ಕೆಲವು ಮಹಿಳೆಯರ ಮೈ-ಕೈ ಮುಟ್ಟಿ ಆರೋಪಿಗಳು ಎಳೆದಾಡಿದ್ದಾರೆ. ಚಪ್ಪಲಿ ಕಾಲಿನಿಂದ ಒದ್ದಿದ್ದಾರೆ’ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಹಲವು ಕಾರ್ಯಕಾರಿ ಆದೇಶಗಳಿಗೆ ಟ್ರಂಪ್ ಸಹಿ

ಡಬ್ಲ್ಯುಎಚ್‌ಒದಿಂದ ಅಮೆರಿಕ ಹೊರಕ್ಕೆ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಡೊನಾಲ್ಡ್ ಟ್ರಂಪ್ ಅವರು, ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯುಎಚ್‌ಒ) ಹೊರಹೋಗುವ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದಾರೆ. ಇದರಿಂದಾಗಿ, ಜಾಗತಿಕ ಮಟ್ಟದಲ್ಲಿ ಸಾರ್ವಜನಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆಯಲ್ಲಿ ಜೊತೆಗಿದ್ದ ನಿರ್ಣಾಯಕ ಪಾಲುದಾರನನ್ನು ಡಬ್ಲ್ಯುಎಚ್‌ಒ ಕಳೆದುಕೊಳ್ಳಲಿದೆ.

ತಾವು ನೀಡಿರುವ ಭರವಸೆಗಳನ್ನು ಈಡೇರಿಸುವ ದಿಸೆಯಲ್ಲಿ ಹಲವು ಮಹತ್ವದ ಕಾರ್ಯಕಾರಿ ಅದೇಶಗಳಿಗೆ ಮೊದಲ ದಿನವೇ ಟ್ರಂಪ್ ರುಜು ಹಾಕಿದ್ದಾರೆ. ಮಾಜಿ ಅಧ್ಯಕ್ಷ ಜೋ ಬೈಡನ್ ನೇತೃತ್ವದ ಸರ್ಕಾರ ಕೈಗೊಂಡಿದ್ದ ಹಲವಾರು ತೀರ್ಮಾನಗಳನ್ನು ರದ್ದುಗೊಳಿಸುವ ನಿರ್ಧಾರವನ್ನೂ ಕೈಗೊಂಡಿದ್ದಾರೆ.

5 ವರ್ಷದ ಒಳಗೆ, ಎರಡನೇ ಬಾರಿಗೆ ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಯಿಂದ ನಿರ್ಗಮಿಸಲಿದೆ. ಈ ಹಿಂದೆ, 2020ರಲ್ಲಿ ಕೋವಿಡ್–19 ಪಿಡುಗಿನಿಂದಾಗಿ ವಿಶ್ವವೇ ತಲ್ಲಣಗೊಂಡಿತ್ತು. ಆಗ, ಅಧ್ಯಕ್ಷರಾಗಿದ್ದ ಟ್ರಂಪ್ ಅವರು ಡಬ್ಲ್ಯುಎಚ್‌ಒ ಕಾರ್ಯವೈಖರಿ ಟೀಕಿಸಿದ್ದರಲ್ಲದೇ, ಅದರಿಂದ ಹೊರಬರುವ ನಿರ್ಧಾರ ಪ್ರಕಟಿಸಿದ್ದರು. ಈ ಕುರಿತ ಆದೇಶಕ್ಕೆ ಸಹಿ ಹಾಕಿದ ನಂತರ ಮಾತನಾಡಿದ ಅವರು, ‘ಇದೊಂದು ದೊಡ್ಡ ನಿರ್ಧಾರ’ ಎಂದರು.

‘ನಾನು ಈ ಹಿಂದೆ ಅಧ್ಯಕ್ಷನಾಗಿದ್ದಾಗ ಡಬ್ಲ್ಯುಎಚ್‌ಒಗೆ 50 ಕೋಟಿ ಡಾಲರ್ (ಅಂದಾಜು ₹4300 ಕೋಟಿ) ನೀಡಿದ್ದೆವು. 140 ಕೋಟಿ ಜನಸಂಖ್ಯೆ ಹೊಂದಿರುವ ಚೀನಾ 3.9 ಕೋಟಿ ಡಾಲರ್ (ಅಂದಾಜು ₹335 ಕೋಟಿ) ನೀಡಿತ್ತು. ಇದು ಅನ್ಯಾಯ ಎಂದು ನನಗೆ ಅನಿಸಿತು’ ಎಂದರು. ‘ಆಗ ನಾನು ಡಬ್ಲ್ಯುಎಚ್‌ಒದಿಂದ ನಿರ್ಗಮಿಸಿದೆ. 3.9 ಕೋಟಿ ಡಾಲರ್ ದೇಣಿಗೆ ನೀಡಿ, ಮತ್ತೆ ಸೇರ್ಪಡೆಯಾಗಿ ಎಂದು ಅವರು (ಡಬ್ಲ್ಯುಎಚ್‌ಒ) ಆಹ್ವಾನ ನೀಡಿದರು. ವಾಸ್ತವವಾಗಿ, ಇದಕ್ಕಿಂತಲೂ ಕಡಿಮೆ ದೇಣಿಗೆ ಪಡೆಯಬೇಕಿತ್ತು. ಆದರೆ, ಬೈಡನ್ ಅಧ್ಯಕ್ಷರಾದ ನಂತರ, 500 ಕೋಟಿ ಡಾಲರ್ ನೀಡುವುದರೊಂದಿಗೆ ಮತ್ತೆ ಡಬ್ಲ್ಯುಎಚ್‌ಒಗೆ ಅಮೆರಿಕವನ್ನು ಸೇರ್ಪಡೆ ಮಾಡಿದರು’ ಎಂದು ಹೇಳಿದರು.

ಟ್ರಂಪ್ ನಿಲುವಿನ ಪರಿಣಾಮ

ಲಂಡನ್ (ರಾಯಿಟರ್ಸ್): ಡಬ್ಲ್ಯುಎಚ್‌ಒದಿಂದ ಅಮೆರಿಕ ಹೊರಬರುವ ಕುರಿತು ಅಧ್ಯಕ್ಷ ಟ್ರಂಪ್ ಕೈಗೊಂಡಿರುವ ನಿರ್ಧಾರವು, ಸಂಸ್ಥೆಯ ಕಾರ್ಯಾಚರಣೆ ಕುರಿತು ಹಲವು ಪ್ರಶ್ನೆಗಳನ್ನು ಮೂಡಿಸಿದೆ.

ಡಬ್ಲ್ಯುಎಚ್‌ಒಗೆ ಹರಿದು ಬರುವ ಹಣಕಾಸು ನೆರವಿನಲ್ಲಿ ಅಮೆರಿಕದ ಪಾಲು ದೊಡ್ಡದು. ಈ ನೆರವು ನಿಂತಲ್ಲಿ, ಜಾಗತಿಕ ಮಟ್ಟದಲ್ಲಿ ಆರೋಗ್ಯ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಹಿನ್ನಡೆ ಆಗಲಿದೆ ಎಂಬ ಆತಂಕ ಮನೆ ಮಾಡಿದೆ.

ಗಾಜಾ ಪಟ್ಟಿ, ಉಕ್ರೇನ್‌ನಲ್ಲಿ ಯುದ್ಧದಿಂದಾಗಿ ಉದ್ಭವಿಸಿದ ಆರೋಗ್ಯ ತುರ್ತುಗಳಿಗೆ ಅಪಾರ ಹಣದ ಅಗತ್ಯವಿದ್ದು, 2024–25ನೇ ಸಾಲಿಗೆ 6.8 ಶತಕೋಟಿ ಡಾಲರ್ (ಅಂದಾಜು ₹60 ಸಾವಿರ ಕೋಟಿ) ಮೊತ್ತದ ಬಜೆಟ್ ಅನ್ನು ಡಬ್ಲ್ಯುಎಚ್‌ಒ ಸಿದ್ಧಪಡಿಸಿದೆ. ಈಗ ಈ ಹಣಕಾಸು ನೆರವಿನ ಮೇಲೆ ಅನಿಶ್ಚಿತತೆ ಸೃಷ್ಟಿಯಾಗಿದೆ.

ಕೋವಿಡ್–19 ಪಿಡುಗಿನ ನಂತರ ಜಾಗತಿಕ ಮಟ್ಟದಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟ ಸುಧಾರಿಸಲು ಮಾಡಿಕೊಂಡಿರುವ ಒಪ್ಪಂದ ಬಗ್ಗೆಯೂ ಟ್ರಂಪ್ ಸಂದೇಹ ವ್ಯಕ್ತಪಡಿಸಿದ್ದಾರೆ. ಈಗ, ಈ ಕಾರ್ಯಕ್ರಮಕ್ಕೂ ನೆರವು ಸ್ಥಗಿತಗೊಳ್ಳಲಿದೆ. ಜಗತ್ತಿನ ವಿವಿಧ ದೇಶಗಳಲ್ಲಿ ಕಂಡುಬರುತ್ತಿರುವ ಇನ್‌ಫ್ಲುಯೆಂಜಾ ಮೇಲೆ ನಿಗಾ ಇಡುವುದಕ್ಕೆ ಡಬ್ಲ್ಯುಎಚ್‌ಒ ಕಾರ್ಯಕ್ರಮ ರೂಪಿಸಿದೆ. ಏಡ್ಸ್ ವಿರುದ್ಧದ ಹೋರಾಟ, ವಿವಿಧ ಲಸಿಕೆಗಳ ಅಭಿವೃದ್ಧಿ ಮತ್ತು ಸಂಶೋಧನೆಗೂ ಹಣಕಾಸಿನ ಅಡಚಣೆ ಉಂಟಾಗುವ ಆತಂಕ ಎದುರಾಗಿದೆ.

ಡಾ|| ಸಿ.ಎನ್.ಮಂಜುನಾಥ್
ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಎಂ. ಕೃಷ್ಣಪ್ಪ
ಶಾಸಕರು
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ನಾಡಿನ ಯುವ ರೈತ ಬಂಧು, ಬದ್ಧತೆ, ನಂಬಿಕೆ,
ಮಾತೃ ಹೃದಯದ ಹೃದಯವಂತಿಕೆಯ
ಮೇರು ವ್ಯಕ್ತಿತ್ವ ಹೊಂದಿರುವ
ಜಾತ್ಯತೀತ ಜನತಾದಳ
ಯುವ ರಾಜ್ಯಾಧ್ಯಕ್ಷರಾದ
ಸನ್ಮಾನ್ಯ ಶ್ರೀ
ನಿಖಿಲ್ ಕುಮಾರಸ್ವಾಮಿ
ರವರಿಗೆ
ಜನ್ಮದಿನದ ಶುಭಾಶಯಗಳು
22.01.2025
ಬುಧವಾರ
ಶ್ರೀ ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ
ರಾಜ್ಯ ಯುವ ಜನತಾದಳ, ಜೆಡಿಎಸ್
ಶ್ರೀ ಬಿ.ಎನ್. ಕುಮಾರ್
ಬಸವನಪುರ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿಬಿಎಂಪಿ, ಗ್ರಾಪಂ ಮತ್ತು ತಾಪಂ
ಮಾಜಿ ಸದಸ್ಯರು, ಉತ್ತರಹಳ್ಳಿ
ವಿಧಾನಸಭಾ ಕ್ಷೇತ್ರ
ಶುಭ ಕೋರುವವರು: ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ

ಕೆ.ಆರ್. ಮಾರುಕಟ್ಟೆ: ತಮಿಳುನಾಡಿನ ಮಹಿಳೆ ಮೇಲೆ ಅತ್ಯಾಚಾರ, ಸುಲಿಗೆ ಪ್ರಕರಣ

ಸಾಮೂಹಿಕ ಅತ್ಯಾಚಾರ: ಕೂಲಿ ಕಾರ್ಮಿಕರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು : ಕೆ.ಆರ್. ಮಾರುಕಟ್ಟೆಯಲ್ಲಿ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದ ಇಬ್ಬರು ಆರೋಪಿಗಳನ್ನು ಕೇಂದ್ರ ವಿಭಾಗದ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್. ಮಾರುಕಟ್ಟೆಯ ಕೂಲಿ ಕಾರ್ಮಿಕರಾದ ಗಣೇಶ್ (23) ಮತ್ತು ಶರವಣ (35) ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿ, ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.

ಆರೋಪಿಗಳು ಜ.19ರಂದು ರಾತ್ರಿ ಸುಮಾರು 11.30ಕ್ಕೆ ಕೆ.ಆರ್.ಮಾರುಕಟ್ಟೆ ಗೋಡೌನ್ ಸ್ಟ್ರೀಟ್‌ನಲ್ಲಿ ತಮಿಳುನಾಡಿನ 37 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿ, ₹650 ನಗದು, ಚಿನ್ನದ ತಾಳಿ, ಓಲೆ, ಬೆಳ್ಳಿ ಕಾಲು ಚೈನು ಹಾಗೂ ಮೊಬೈಲ್ ದೋಚಿಕೊಂಡು ಪರಾರಿಯಾಗಿದ್ದರು.

ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆಗೆ ಕೈಗೊಂಡರು. ಘಟನಾ ಸ್ಥಳ ಹಾಗೂ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದರು. ಸಿಸಿಟಿವಿ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿದರು. ಮಂಗಳವಾರ ಆರೋಪಿಗಳನ್ನು ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆ ಮಾಡಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗಣೇಶ್

ಶರವಣ

ಕೆ.ಆರ್. ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುವ ಇಬ್ಬರಿಗೂ ಮನೆ ಇಲ್ಲ. ಹಲವು ವರ್ಷಗಳ ಹಿಂದೆಯೇ ಕುಟುಂಬದಿಂದ ದೂರವಾಗಿದ್ದಾರೆ. ಹಗಲಿನಲ್ಲಿ ಕೂಲಿ ಕೆಲಸ ಮಾಡಿ, ರಾತ್ರಿ ವೇಳೆ ಕೆ.ಆರ್. ಮಾರುಕಟ್ಟೆಯಲ್ಲಿನ ಖಾಲಿ ಜಾಗಗಳಲ್ಲಿ ಮಲಗುತ್ತಾರೆ.

‘ಸಂತ್ರಸ್ತೆ, ಪತಿ ಜತೆಗೆ ಜಗಳ ಮಾಡಿಕೊಂಡು ವಾರದ ಹಿಂದೆ ನಗರಕ್ಕೆ ಬಂದಿದ್ದರು. ಭಾನುವಾರ ರಾತ್ರಿ ಯಲಹಂಕದಲ್ಲಿರುವ ಅಣ್ಣನ ಮನೆಗೆ ತೆರಳಲು ಕೆ.ಆರ್. ಮಾರುಕಟ್ಟೆಯಲ್ಲಿ ಬಸ್‌ಗಾಗಿ ಕಾಯುತ್ತಿದ್ದರು. ಬಸ್‌ಗಳ ಬಗ್ಗೆ ಅಲ್ಲೇ ಇದ್ದ ಆರೋಪಿಗಳನ್ನು ವಿಚಾರಿಸಿದ್ದಾರೆ. ಬಸ್ ತೋರಿಸುವುದಾಗಿ ಗೋಡೌನ್ ಸ್ಟ್ರೀಟ್‌ಗೆ ಕರೆದೊಯ್ದು ಅತ್ಯಾಚಾರ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಮಹಿಳಾ ಸುರಕ್ಷತೆಗೆ ಕ್ರಮ ಕೈಗೊಳ್ಳಿ’

ಕಾನೂನು- ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾದ ಗೃಹ ಸಚಿವ ಜಿ. ಪರಮೇಶ್ವರ ರಾಜೀನಾಮೆ ಕೊಡಬೇಕು ಎಂದು ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಆಗ್ರಹಿಸಿದ್ದಾರೆ.

‘ಮಹಿಳೆ ಮೇಲೆ ಇಬ್ಬರು ಅತ್ಯಾಚಾರ ಎಸಗಿದ್ದಾರೆ. ಮಹಿಳೆಯರ ಸುರಕ್ಷತೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರು ಬ್ರ್ಯಾಂಡ್ ಬೆಂಗಳೂರು ಮಾಡುತ್ತೇವೆ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಅಂದರೆ, ಮಹಿಳೆಯರಿಗೆ ರಕ್ಷಣೆ ಕೊಡದೆ ಇರುವುದೇ ಬ್ರ್ಯಾಂಡ್ ಬೆಂಗಳೂರಾ?’ ಎಂದು ಪ್ರಶ್ನಿಸಿದ್ದಾರೆ.

‘ಹೊಯ್ಸಳ ಗಸ್ತು ವಾಹನಕ್ಕೆ ತಿಂಗಳಿಗೆ 100 ಲೀಟರ್ ಮಾತ್ರ ಇಂಧನ ಕೊಡುತ್ತೇವೆ. ಅಷ್ಟೇ ಇಂಧನ ಬಳಸಿಕೊಂಡು ಗಸ್ತು ತಿರುಗಾಡಬೇಕು ಎಂಬ ಸೂಚನೆಯನ್ನು ಸಿಬ್ಬಂದಿಗೆ ಸರ್ಕಾರ ಕೊಟ್ಟಿದೆ. ಇದರಿಂದಾಗಿ ನಗರದಲ್ಲಿ ಹೊಯ್ಸಳ ವಾಹನದ ಗಸ್ತು ಕೂಡ ಕಡಿಮೆಯಾಗಿರುವುದು ಘಟನೆಗೆ ಕಾರಣವಾಗಿದೆ ಎಂದು ಆ ಭಾಗದ ಮಹಿಳಾ ಪ್ರಮುಖರು ತಿಳಿಸಿದ್ದಾರೆ’ ಎಂದು ಗಮನ ಸೆಳೆದಿದ್ದಾರೆ.

ಅಪರಾಧ ಸುದ್ದಿಗಳು

₹38 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಬೆಂಗಳೂರು: ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಕಳೆದ ಆರು ತಿಂಗಳ ಅವಧಿಯಲ್ಲಿ ವಶಪಡಿಸಿಕೊಂಡ ₹38.11 ಕೋಟಿ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ನಗರ ಪೊಲೀಸರು ನಾಶಪಡಿಸಿದ್ದಾರೆ.

2024ರ ಜೂನ್ 27 ರಿಂದ 2025ರ ಜನವರಿ 10 ರವರೆಗೆ ನಗರದಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಒಟ್ಟು 745.769 ಕೆ.ಜಿ. ವಿವಿಧ ಮಾದಕ ವಸ್ತುಗಳನ್ನು ದಾಬಸ್‌ಪೇಟೆಯ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್ ಡಿವಿಷನ್ ಆಫ್ ರಿ-ಸಸ್ಟೇನಬೆಲಿಟಿ ಲಿಮಿಟೆಡ್‌ನಲ್ಲಿ ನಾಶಪಡಿಸಲಾಗಿದೆ.

ನಾಶಪಡಿಸಲಾದ ಮಾದಕ ವಸ್ತುಗಳ ವಿವರ: 699.29 ಕೆ.ಜಿ ಗಾಂಜಾ, 1.970 ಕೆಜಿ ಹ್ಯಾಶಿಶ್ ಆಯಿಲ್, 702 ಗ್ರಾಂ ಚರಸ್, 163 ಗ್ರಾಂ ಕೊಕೇನ್, 19.557 ಕೆ.ಜಿ. ಎಕ್ಸ್‌ಟಸಿ ಪುಡಿ/ಹರಳುಗಳು, 287 ಎಕ್ಸ್‌ಟಸಿ ಮಾತ್ರೆಗಳು, 38 ಗ್ರಾಂ ಎಕ್ಸ್‌ಟಸಿ ಯಾಬಾ, 12.450 ಕೆ.ಜಿ. ಎಂಎಸ್‌ಎಂ, 842 ಟಪೆಂಟಾಡೋಲ್ ಮಾತ್ರೆಗಳು, 5.100 ಕೆ.ಜಿ. ಪವರ್ ಮುನಕ್ಕಾವತಿ, 60 ಟೈಡಾಲ್ ಮಾತ್ರೆಗಳು, 260 ಬಾಟಲ್ ಎಸ್ಕಫ್ ಸಿರಪ್, 4.900 ಕೆ.ಜಿ ಸೋಡಿಯಂ ಹೈಡ್ರಾಕ್ಸೈಡ್.

ವಶಪಡಿಸಿಕೊಂಡಿರುವ ಮಾದಕವಸ್ತು

ನ್ಯಾಯಾಲಯ, ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪಡೆದು ಮಾದಕ ವಿಲೇವಾರಿ ಸಮಿತಿಯ ಸದಸ್ಯರ ಸಮ್ಮುಖದಲ್ಲಿ ಡ್ರಗ್ಸ್ ನಾಶಪಡಿಸಲಾಗಿದೆ.

ಎಚ್‌ಎಎಲ್ ಮ್ಯಾನೇಜರ್‌ಗೆ ವಂಚನೆ

ಬೆಂಗಳೂರು: ಬ್ಯಾಂಕ್ ರಿವಾರ್ಡ್ ಪಾಯಿಂಟ್ಸ್ ಹೆಸರಿನಲ್ಲಿ ಸೈಬರ್ ವಂಚಕರು ಎಚ್‌ಎಎಲ್‌ನ ಹೆಲಿಕಾಪ್ಟರ್ ವಿಭಾಗದ ಮ್ಯಾನೇಜರ್‌ಗೆ ₹50 ಸಾವಿರ ವಂಚಿಸಿದ್ದಾರೆ.

ಈ ಸಂಬಂಧ ಸಿ.ಕೆ. ಅಚ್ಚುಕಟ್ಟು ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ದೂರುದಾರರಿಗೆ ₹14,453 ಮೌಲ್ಯದ ಬ್ಯಾಂಕ್ ರಿವಾರ್ಡ್ ಪಾಯಿಂಟ್ ಹೆಸರಿನಲ್ಲಿ ಲಿಂಕ್ ಒಳಗೊಂಡ ಸಂದೇಶವೊಂದನ್ನು ಆರೋಪಿಗಳು ಕಳಿಸಿದ್ದಾರೆ. ನಿಜವೆಂದು ನಂಬಿ ಲಿಂಕ್ ಕ್ಲಿಕ್ ಮಾಡಿದಾಗ ಇಂಟರ್‌ನೆಟ್ ಬ್ಯಾಂಕಿಂಗ್ ಲಾಗಿನ್ ಆಗುವಂತೆ ಕೇಳಲಾಗಿದೆ. ಅದರಂತೆ ಹೈಯರ್ ಸೆಕ್ಯುರಿಟಿ ಪಾಸ್‌ವರ್ಡ್ ನಮೂದಿಸಿ ಲಾಗಿನ್ ಆಗುತ್ತಿದ್ದಂತೆಯೇ ದೂರುದಾರರ ಖಾತೆಯಿಂದ ₹50 ಸಾವಿರ ಕಡಿತವಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಯಿಗೋಲ್ಡ್ ಪ್ಯಾಲೆಸ್‌ನ ಚಿನ್ನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಟಿ. ಎ. ಶರವಣ ಅವರ ಮಾಲೀಕತ್ವದ ಶ್ರೀ ಸಾಯಿ ಗೋಲ್ಡ್ ಪ್ಯಾಲೆಸ್‌ನ ಚಿನ್ನಾಭರಣಗಳನ್ನು ಪಡೆದು ವಂಚಿಸಲಾಗಿದೆ.

ಶ್ರೀ ಸಾಯಿ ಗೋಲ್ಡ್ ಪ್ಯಾಲೆಸ್ ಬಸವನಗುಡಿ ಶಾಖೆಯ ಮ್ಯಾನೇಜರ್ ಭೀಮರಾಜು ನೀಡಿರುವ ದೂರಿನ ಮೇರೆಗೆ ಬಸವನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಜ.14ರಂದು ಶ್ರೀ ಸಾಯಿ ಗೋಲ್ಡ್ ಪ್ಯಾಲೆಸ್ ಬಸವನಗುಡಿ ಶಾಖೆಯ 1 ಕೆ.ಜಿ. 249 ಗ್ರಾಂ ಚಿನ್ನದ ಆಭರಣಗಳನ್ನು ಹಾಲ್ ಮಾರ್ಕ್ ಮುದ್ರೆ ಹಾಕಲು ನಗರತ್ ಪೇಟೆಯ ಕೊನಾರ್ಕ್ ಹಾಲ್ ಮಾರ್ಕಿಂಗ್ ಸೆಂಟರ್‌ಗೆ ನೀಡಲಾಗಿತ್ತು. ಜ.15ರಂದು ಚಿನ್ನಾಭರಣ ಕೊಡುವಂತೆ ಸೆಂಟರ್‌ನ ಮಾಲೀಕ ಭರತ್ ಚಟಡ್ ಅವರನ್ನು ಕೇಳಿದಾಗ, ಚಿನ್ನಾಭರಣ ವಾಪಸ್ ಕೊಡದೇ, ನಿಮ್ಮ ಸಂಸ್ಥೆಯ ಉದ್ಯೋಗಿಯೇ ಕಳ್ಳತನ ಮಾಡಿದ್ದಾನೆ ಎಂದು ಉತ್ತರಿಸಿದ್ದಾರೆ. ಭರತ್ ಚಟಡ್ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಮ್ಯಾನೇಜರ್ ದೂರಿನಲ್ಲಿ ತಿಳಿಸಿದ್ದಾರೆ.

‘ರಾಜ್ಯದಲ್ಲಿ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿವೆ. ಗೃಹ ಇಲಾಖೆ ಇದೆಯೋ, ಇಲ್ಲವೋ ಎಂಬ ಅನುಮಾನ ಮೂಡಿದೆ. ಚಿನ್ನದಂಗಡಿ ನಡೆಸಬೇಕಾ? ಬಿಡಬೇಕಾ? ಎಂಬ ಭಯ ಕಾಡುತ್ತಿದೆ. ಗೃಹ ಸಚಿವರು ಪೊಲೀಸ್ ಬಂದೋಬಸ್ತ್ ಮತ್ತಷ್ಟು ಬಿಗಿಗೊಳಿಸಬೇಕು’ ಎಂದು ಟಿ.ಎ.ಶರವಣ ಹೇಳಿದರು.

ಶಾಸ್ತ್ರ ಹೇಳುವ ನೆಪದಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸ್ತ್ರ ಹೇಳುವ ನೆಪದಲ್ಲಿ ಒಂಟಿ ಮಹಿಳೆಯರು ವಾಸಿಸುವ ಮನೆಗಳಿಗೆ ತೆರಳಿ ಅವರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ದೋಚಿ ಪರಾರಿಯಾಗುತ್ತಿದ್ದ ಆರೋಪಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಂತಾಮಣಿಯ ವೆಂಕಟರಮಣಪ್ಪ (52) ಬಂಧಿತ ಆರೋಪಿ.

ಆರೋಪಿಯಿಂದ ₹8 ಲಕ್ಷ ಮೌಲ್ಯದ 115 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಬುಡುಬುಡಿಕೆ ವೇಷಧರಿಸಿ ಆರೋಪಿ ಮಹಿಳೆಯರನ್ನು ವಂಚಿಸುತ್ತಿದ್ದ ಎಂದು ಪೊಲೀಸರು ಹೇಳಿದರು.

ಹೊಂಗಸಂದ್ರದ ಸತೀಶ್‌ರೆಡ್ಡಿ ಲೇಔಟ್‌ನ ಮಹಿಳೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದರು.

‘ಹೊಂಗಸಂದ್ರದ ಸತೀಶ್‌ರೆಡ್ಡಿ ಲೇಔಟ್‌ನ ಮನೆಯೊಂದರಲ್ಲಿ ಮಹಿಳೆ ವಾಸಿಸುತ್ತಿದ್ದರು. ಬುಡುಬುಡಿಕೆ ವೇಷ ಧರಿಸಿ ಆರೋಪಿ ಮನೆಗೆ ಬಂದಿದ್ದ. ಶಾಸ್ತ್ರ ಹೇಳುತ್ತೇನೆ ಎಂದು ಹೇಳಿದ್ದ. ಶಾಸ್ತ್ರ ಕೇಳಲು ಮಹಿಳೆ ಒಪ್ಪಿದ್ದರು. ನಿಮಗೆ ಯಾರೋ ಮಾಟ ಮಾಡಿಸಿದ್ದಾರೆ ಎಂದಿದ್ದ. ಈ ಮಾಟವನ್ನು ಪರಿಹರಿಸಲು ಪೂಜೆ ಮಾಡಬೇಕು ಎಂದು ಹೇಳಿದ್ದ. ಪೂಜೆ ಮಾಡಲು 100 ಗ್ರಾಂ ಚಿನ್ನಾ-ಭರಣವನ್ನು ಒಂದು ಕುಡಿಕೆಯಲ್ಲಿ ಹಾಕಿಕೊಡುವಂತೆ ಹೇಳಿದ್ದ. ಅದರಂತೆ ಮಹಿಳೆ ಕುಡಿಕೆಗೆ 100 ಗ್ರಾಂ ಚಿನ್ನಾಭರಣ ಹಾಕಿಕೊಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

‘ಪೂಜೆ ವೇಳೆ ಮಹಿಳೆಯ ಗಮನವನ್ನು ಬೇರೆಡೆ ಸೆಳೆದು ತಾನು ತಂದಿದ್ದ ಕುಡಿಕೆಯನ್ನು ಸ್ಥಳದಲ್ಲಿಟ್ಟು, ಚಿನ್ನಾಭರಣ ತುಂಬಿದ್ದ ಕುಡಿಕೆಯನ್ನು ತೆಗೆದುಕೊಂಡು ಪರಾರಿ ಆಗಿದ್ದ. ಕೆಲವು ಸಮಯದ ಬಳಿಕ ಮಹಿಳೆ ಕುಡಿಕೆಯ ಬಾಯಿಗೆ ಕಟ್ಟಿದ್ದ ಬಟ್ಟೆ ತೆಗೆದು ಪರಿಶೀಲಿಸಿದಾಗ ಚಿನ್ನಾಭರಣದ ಬದಲು ಅಕ್ಕಿ ಇರುವುದು ಕಂಡು ಬಂದಿತ್ತು. ಬಳಿಕ ತಾನು ವಂಚನೆಗೆ ಒಳಗಾಗಿರುವುದು ಗೊತ್ತಾಗಿತ್ತು’ ಎಂದರು.

‘ಜ.10ರಂದು ಬೊಮ್ಮನಹಳ್ಳಿ ಡೆಕ್ಕನ್ ಬಸ್ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಂಚನೆಗೆ ಬಳಸುತ್ತಿದ್ದ ಕುಡಿಕೆಯು ತಪಾಸಣೆ ವೇಳೆ ಪತ್ತೆಯಾಗಿದೆ. ಬಳಿಕ ಆತನನ್ನು ಠಾಣೆಗೆ ಕರೆ ತಂದು ವಿಚಾರಣೆ ನಡೆಸಲಾಯಿತು. ಮಹಿಳೆಯರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕಳ್ಳತನ ಹಾಗೂ ಮನೆಗೆ ನುಗ್ಗಿ ನಗದು ಕಳ್ಳತನ ಮಾಡುತ್ತಿರು-ವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ವಶಪಡಿಸಿಕೊಂಡ ಚಿನ್ನಾಭರಣ

ಕದ್ದ ಚಿನ್ನ ಅಡಮಾನ ಇರಿಸಿದ್ದ

‘ಮಹಿಳೆಗೆ ವಂಚಿಸಿ ಆರೋಪಿ ತೆಗೆದುಕೊಂಡು ಹೋಗಿದ್ದ ಚಿನ್ನಾಭರಣವನ್ನು ಎಚ್.ಕ್ರಾಸ್‌ನ ಫೈನಾನ್ಸ್‌ನಲ್ಲಿ 65 ಗ್ರಾಂ ಮತ್ತು ಚಿನ್ನಾಭರಣ ತಯಾರಿಸುವ ಆಚಾರಿ ಬಳಿ 30 ಗ್ರಾಂ ಚಿನ್ನಾಭರಣ ಅಡಮಾನ ಇರಿಸಿದ್ದ. ಅಲ್ಲಿಂದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಆರೋಪಿಯ ಕುಟುಂಬದ ಸದಸ್ಯರಿಂದ 20 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ. ಆರೋಪಿಯ ಬಂಧನದಿಂದ ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಮತ್ತು ಮನೆಗಳವು ಪ್ರಕರಣಗಳು ಪತ್ತೆಯಾಗಿವೆ’ ಎಂದು ಪೊಲೀಸರು ತಿಳಿಸಿದರು.

ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಬಾಲಕ

ಬೆಂಗಳೂರು: ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗಳಿಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಬಾಲಕನಿಂದ ₹2.50 ಲಕ್ಷ ಮೌಲ್ಯದ 40 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ‘ಕಾಳಸ್ತ್ರಿನಗರದ ನಿವಾಸಿಯೊಬ್ಬರ ಮನೆಯಲ್ಲಿ ಡಿ.20ರಂದು ₹20 ಸಾವಿರ ಹಾಗೂ 40 ಗ್ರಾಂ ಚಿನ್ನಾಭರಣ ಕಳ್ಳತನ ನಡೆದಿತ್ತು. ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು’ ಎಂದರು.

‘ಶೆಟ್ಟಿಹಳ್ಳಿ ರೈಲ್ವೆಗೇಟ್ ಬಳಿ ಬಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡಿರುವುದಾಗಿ ಬಾಲಕ ತಪ್ಪೊಪ್ಪಿಕೊಂಡಿದ್ದಾನೆ. ಕಳ್ಳತನ ಮಾಡಿರುವ ಚಿನ್ನಾಭರಣವನ್ನು ಲಗ್ಗೆರೆಯ ಅಂಗಡಿಯಲ್ಲಿ ಅಡಮಾನ ಇಟ್ಟಿದ್ದ. ಅಲ್ಲಿಂದ 40 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದರು. ‘ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಮಡಿವಾಳದ ಬಾಲ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ವೃದ್ಧೆ ಪರಿಚಯಿಸಿಕೊಂಡು ಚಿನ್ನಾಭರಣ ಕಳ್ಳತನ

ಬೆಂಗಳೂರು: ವೃದ್ಧರನ್ನು ಗುರಿಯಾಗಿಸಿ ಚಿನ್ನಾಭರಣ ಕಳ್ಳತನ ಮಾಡಿ ಪರಾರಿ ಆಗುತ್ತಿದ್ದ ಆರೋಪಿಯನ್ನು ಹುಳಿಮಾವು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಕಮ್ಮನಹಳ್ಳಿಯ ನಿವಾಸಿ ಸಹೀದಾ ಭಾನು ಬಂಧಿತ ಮಹಿಳೆ. ಆರೋಪಿಯಿಂದ ₹9 ಲಕ್ಷ ಮೌಲ್ಯದ 136 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ಕಾಮಾಕ್ಷಿಲೇಔಟ್ ಗೊಟ್ಟಿಗೆರೆಯ ನಿವಾಸಿ ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದರು.

‘ವೃದ್ಧೆ ಕಿರಾಣಿ ಅಂಗಡಿ ನಡೆಸುತ್ತಿದ್ದರು. ಅಂಗಡಿಯ ಪಕ್ಕದಲ್ಲಿಯೇ ಅವರ ಮನೆಯಿತ್ತು. ಅಂಗಡಿಗೆ ಬರುತ್ತಿದ್ದ ಆರೋಪಿ, ವೃದ್ಧೆಯನ್ನು ಪರಿಚಯಿಸಿಕೊಂಡಿದ್ದರು. ಅಂಗಡಿಗೆ ಬಂದಾಗ ಶೌಚಾಲಯಕ್ಕೆ ಹೋಗಲೆಂದು ಮನೆಯ ಬೀಗದ ಕೀ ತೆಗೆದುಕೊಂಡು ಹೋಗಿ ಕಳ್ಳತನ ಮಾಡಿದ್ದರು’ ಎಂದರು.

‘ಕಳವು ಮಾಡಿದ್ದ ಚಿನ್ನಾಭರಣದ ಪೈಕಿ ಸ್ವಲ್ಪ ಭಾಗವನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು, ಉಳಿದ ಚಿನ್ನವನ್ನು ಮಾವಳ್ಳಿಯ ಚಿನ್ನಾಭರಣ ಅಂಗಡಿಯಲ್ಲಿ ಅಡಮಾನ ಇಟ್ಟಿದ್ದರು’ ಎಂದು ಪೊಲೀಸರು ತಿಳಿಸಿದರು.

ವಾಹನದಲ್ಲಿದ್ದ ₹2 ಲಕ್ಷ ಹಣ ಕಳವು

ನೆಲಮಂಗಲ: ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡು ಮನೆಗೆ ತೆರಳುತ್ತಿದ್ದ ವ್ಯಕ್ತಿಯೊಬ್ಬರಿಂದ ₹2 ಲಕ್ಷ ನಗದನ್ನು ದುಷ್ಕರ್ಮಿಗಳು ಕದ್ದು ಪರಾರಿ ಆಗಿರುವ ಘಟನೆ ಇಂದಿರಾನಗರದಲ್ಲಿ ನಡೆದಿದೆ.

ನಗರಸಭೆ ಉಪಾಧ್ಯಕ್ಷೆ ಸುಜಾತಾ ಮುನಿಯಪ್ಪ ಸಹೋದರ ಸಿದ್ದಲಿಂಗಯ್ಯ ಎಂಬವರು ಮಂಗಳವಾರ ಬೆಳಿಗ್ಗೆ 11ರ ಸುಮಾರಿಗೆ ನಗರದ ಎಸ್‌ಬಿಐ ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡು ದ್ವಿಚಕ್ರ ವಾಹನದ ಡಿಕ್ಕಿಯಲ್ಲಿ ಇಟ್ಟಿದ್ದರು.

ಇದನ್ನು ಇಬ್ಬರು ದುಷ್ಕರ್ಮಿಗಳು ಗಮನಿಸಿದ್ದರು. ಸಿದ್ದಲಿಂಗಯ್ಯ ಅವರು ಇಂದಿರಾನಗರದ ಸುಜಾತಾ ಅವರ ಮನೆ ಮುಂಭಾಗ ವಾಹನ ನಿಲ್ಲಿಸಿದ್ದರು. ವಾಹನವನ್ನು ಹಿಂಬಾಲಿಸಿಕೊಂಡು ಬಂದ ದುಷ್ಕರ್ಮಿಗಳು, ಹಣವನ್ನು ಕದ್ದು ಪರಾರಿಯಾಗಿದ್ದಾರೆ. ಸ್ವಲ್ಪ ಸಮಯದ ಬಳಿಕ ಸಿದ್ದಲಿಂಗಯ್ಯ ಬಂದು ನೋಡಿದಾಗ ಕಳವಾದದ್ದು ಗೊತ್ತಾಗಿದೆ. ಹಣ ಡ್ರಾ ಮಾಡುತ್ತಿದ್ದ ವೇಳೆ ದುಷ್ಕರ್ಮಿಯೊಬ್ಬ ಬ್ಯಾಂಕ್‌ನಲ್ಲಿ ಕುಳಿತು ಗಮನಿಸಿದ್ದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸಾಲದ ಕಂತು ಕಟ್ಟಲು ಕಳ್ಳತನಕ್ಕಿಳಿದ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ ಆಟೊ ಬುಕ್ ಮಾಡಿದ್ದ ವ್ಯಕ್ತಿಯ ಸ್ನೇಹ ಗಳಿಸಿ ಅವರ ಮನೆಯಲ್ಲೇ ಕಳ್ಳತನ ಮಾಡಿದ್ದ ಆರೋಪಿಯನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸತೀಶ್ ಬಂಧಿತ ಆರೋಪಿ.

‘ಊರಿಗೆ ತೆರಳಲು ಪ್ರಕಾಶ್ ಅವರು ಓಲಾ ಆಟೊ ಬುಕ್ ಮಾಡಿದ್ದರು. ಈ ವೇಳೆ ಆಟೊ ಓಡಿಸುತ್ತಿದ್ದ ಚಾಲಕ ಸತೀಶ್, ಪ್ರಕಾಶ್ ಅವರನ್ನು ಕರೆದೊಯ್ದಿದ್ದ. ಆಟೊದಲ್ಲಿ ತೆರಳುವಾಗ ಪ್ರಕಾಶ್ ಅವರ ಸ್ನೇಹ ಸಂಪಾದಿಸಿದ್ದ. ಮಾರ್ಗ ಮಧ್ಯದಲ್ಲಿ ಮದ್ಯವನ್ನೂ ಕೊಡಿಸಿದ್ದ. ಮನೆಯಲ್ಲಿ ಯಾರೂ ಇಲ್ಲದ ಮಾಹಿತಿಯನ್ನೂ ತಿಳಿದುಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

‘ಅತ್ತ ಪ್ರಕಾಶ್ ಊರಿಗೆ ಹೋಗುತ್ತಿದ್ದಂತೆ ಮನೆಗೆ ನುಗ್ಗಿದ್ದ ಆರೋಪಿ, ಮನೆಯಲ್ಲಿದ್ದ ₹18 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿ ಪರಾರಿಯಾಗಿದ್ದ’ ಎಂದರು.

‘ಪ್ರಕಾಶ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಆಟೊ ಖರೀದಿಗೆ ಸಾಲ ಮಾಡಿದ್ದೆ. ಕಂತು ಕಟ್ಟಲು ಕಳ್ಳತನ ಮಾಡಿದ್ದಾಗಿ ಆರೋಪಿ ಒಪ್ಪಿಕೊಂಡಿ-ದ್ದಾನೆ’ ಎಂದು ಪೊಲೀಸರು ಹೇಳಿದರು.

ಚಿನ್ನ, ಬೆಳ್ಳಿ ಸಾಮಗ್ರಿ ಜಪ್ತಿ

ಬೆಂಗಳೂರು: ಮನೆಯೊಂದರ ಬೀಗ ತೆಗೆದು ನಗದು ಹಾಗೂ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆನೇಕಲ್ ನಿವಾಸಿ ವೆಂಕಟೇಶ್ ಅಲಿಯಾಸ್ ವೆಂಕಿ (27) ಬಂಧಿತ. ಇವರಿಂದ 42 ಗ್ರಾಂ ಚಿನ್ನಾಭರಣ, 137 ಗ್ರಾಂ ಬೆಳ್ಳಿ ಸಾಮಗ್ರಿ, ₹2 ಸಾವಿರ ಜಪ್ತಿ ಮಾಡಲಾಗಿದೆ.

ವಿರಾಟ್ ನಗರದ ನಾಡಮ್ಮಲೇಔಟ್ ನಿವಾಸಿಯೊಬ್ಬರು ಮನೆಗೆ ಬೀಗ ಹಾಕಿಕೊಂಡು ಕೆಲಸಕ್ಕೆ ತೆರಳಿದ್ದರು. ಸಂಜೆ ಬಂದು ನೋಡಿದಾಗ ದುಷ್ಕರ್ಮಿಗಳು ಮನೆಯ ಬೀಗ ಮುರಿದು ಮನೆ ಪ್ರವೇಶಿಸಿ, ಬೀರುವಿನಲ್ಲಿದ್ದ ನಗದು, ಚಿನ್ನಾಭರಣ ಕಳವು ಮಾಡಿದ್ದು ಗೊತ್ತಾಗಿತ್ತು. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹2.33 ಕೋಟಿ ದಂಡ ಆದೇಶಕ್ಕೆ ಎನ್‌ಜಿಟಿ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಲಿನ್ಯ ಉಂಟು ಮಾಡಿದ ಕಾರಣಕ್ಕೆ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ವಿನೀರ್ ಎಂಜಿನಿಯರಿಂಗ್ ಲಿಮಿಟೆಡ್‌ಗೆ ₹2.33 ಕೋಟಿ ದಂಡ ವಿಧಿಸಿದ್ದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಚೆನ್ನೈ ಪೀಠ ತಡೆ ನೀಡಿದೆ.

ಮೇಲ್ಮನವಿದಾರರ ವಿಚಾರಣೆ ನಡೆಸದೆ ಮಂಡಳಿ ದಂಡ ವಿಧಿಸಿದ್ದು ಸರಿಯಲ್ಲ. ಮೇಲ್ಮನವಿದಾರರಿಗೆ ಹೊಸದಾಗಿ ನೋಟಿಸ್ ನೀಡಿ ವಿಚಾರಣೆ ನಡೆಸಬೇಕು. ಈ ಪ್ರಕ್ರಿಯೆಯನ್ನು ನಾಲ್ಕು ವಾರಗಳಲ್ಲಿ ಪೂರ್ಣಗೊಳಿಸಬೇಕು ಎಂದು ನ್ಯಾಯಮೂರ್ತಿಗಳಾದ ಪುಷ್ಪಾ ಸತ್ಯನಾರಾಯಣ ಹಾಗೂ ಡಾ. ಸತ್ಯಗೋಪಾಲ್ ಕೊರ್ಲಪಾಟಿ ಇದ್ದ ಪೀಠವು ನಿರ್ದೇಶನ ನೀಡಿದೆ.

ಜಲ ಹಾಗೂ ವಾಯುಮಾಲಿನ್ಯ ಉಂಟು ಮಾಡಿದ ಕಾರಣಕ್ಕೆ ಈ ಕಂಪನಿಗೆ ಪರಿಸರ ಪರಿಹಾರ ರೂಪದಲ್ಲಿ ಮಂಡಳಿಯು ₹1 ಕೋಟಿ ದಂಡವನ್ನು 2020ರಲ್ಲಿ ವಿಧಿಸಿತ್ತು. ಮಂಡಳಿಯು 2023ರಲ್ಲಿ ಮತ್ತೆ ₹97 ಲಕ್ಷ ಪಾವತಿಸುವಂತೆ ಕಂಪನಿಗೆ ನೋಟಿಸ್ ನೀಡಿತ್ತು. ಮಾಲಿನ್ಯ ಉಂಟು ಮಾಡಿಲ್ಲ ಎಂದು ಕಂಪನಿ ಸಮಜಾಯಿಷಿ ನೀಡಿತ್ತು. ಮಂಡಳಿಯು 2024ರ ಜನವರಿಯಲ್ಲಿ ಮತ್ತೊಂದು ನೋಟಿಸ್ ಕೊಟ್ಟಿತ್ತು. ‘ಈ ಹಿಂದೆ ಮಧ್ಯಂತರ ಪರಿಸರ ಪರಿಹಾರ ವಿಧಿಸಲಾಗಿತ್ತು. ಈಗ ಸಮಗ್ರ ಮೌಲ್ಯಮಾಪನ ಮಾಡಿ ದಂಡವನ್ನು ಲೆಕ್ಕ ಹಾಕಲಾಗಿದೆ. ಕಂಪನಿಯು ₹2.33 ಕೋಟಿ ದಂಡ ಪಾವತಿಸಬೇಕು’ ಎಂದು ಮಂಡಳಿಯು ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಕಂಪನಿಯು ಎನ್‌ಜಿಟಿಗೆ ಮೇಲ್ಮನವಿ ಸಲ್ಲಿಸಿತ್ತು.

ಸಂಬಳ ನೀಡದ್ದಕ್ಕೆ ಕೃತ್ಯ • ₹45 ಲಕ್ಷ ಮೌಲ್ಯದ 682 ಗ್ರಾಂ ಚಿನ್ನಾಭರಣ ಜಪ್ತಿ

ಮಾಲೀಕನ ಮನೆಯಲ್ಲಿ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಬಳ ಕೊಡದಿದ್ದಕ್ಕೆ ಮಾಲೀಕರ ಮನೆಯಲ್ಲೇ ಕಳ್ಳತನ ಮಾಡಿದ್ದ ಆರೋಪಿಯನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿಯ ಸಿದ್ದು (32) ಬಂಧಿತ ಆರೋಪಿ.

ಆರೋಪಿಯಿಂದ ₹45 ಲಕ್ಷ ಮೌಲ್ಯದ 682 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ದೂರುದಾರರ ಮನೆಯಲ್ಲಿ ಆರೋಪಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕೆಲವು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದ. ಮಾಲೀಕರು ನಾಲ್ಕು ತಿಂಗಳ ಸಂಬಳ ನೀಡಿರಲಿಲ್ಲ. ಕೆಲಸ ಬಿಟ್ಟ ಬಳಿಕ ಸಂಬಳ ನೀಡುವಂತೆ ಮಾಲೀಕರ ಬಳಿ ಆರೋಪಿ ಮನವಿ ಮಾಡಿದ್ದ. ಆದರೂ ಸಂಬಳ ನೀಡಿರಲಿಲ್ಲ. ಇದರಿಂದ ಆರೋಪಿ ಕೋಪಗೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

ಆರೋಪಿಯಿಂದ ವಶಕ್ಕೆ ಪಡೆದ ಚಿನ್ನಾಭರಣವನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ವೀಕ್ಷಿಸಿದರು

ಆರೋಪಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಮಾಲೀಕರ ಮನೆಯ ಮುಂದಿನ ಬಾಗಿಲಿನ ಕೀಯನ್ನು ನಕಲು ಮಾಡಿಸಿಕೊಂಡಿದ್ದ. ಮನೆ ಮಾಲೀಕರು ಕಾರ್ಯನಿಮಿತ್ತ ಹೊರಗಡೆ ಹೋಗಿದ್ದ ಮಾಹಿತಿ ತಿಳಿದು, ನಕಲಿ ಕೀ ಬಳಸಿ ಮನೆಗೆ ನುಗ್ಗಿ ಕಪಾಟಿನಲ್ಲಿ ಇಟ್ಟಿದ್ದ ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಬೈಕ್ ಕಳ್ಳರ ಬಂಧನ

ಮನೆ ಎದುರು ನಿಲುಗಡೆ ಮಾಡುತ್ತಿದ್ದ ಬೈಕ್‌ಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಶೋಕ್ (35) ಮತ್ತು ರವಿಕುಮಾರ್(34) ಬಂಧಿತರು.

ಆರೋಪಿಗಳಿಂದ ₹12 ಲಕ್ಷ ಮೌಲ್ಯದ 103 ಗ್ರಾಂ ಚಿನ್ನಾಭರಣ ಮತ್ತು 3 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ. 172, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020.

ಪತ್ರಿಕಾ ಪ್ರಕಟಣೆ

ದಿನಾಂಕ 25.01.2025ರಂದು ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕಾಗಿ ಈಗಾಗಲೆ ಪ್ರಕಟಿಸಿದ್ದ ವೇಳಾಪಟ್ಟಿಯಂತೆ ಚುನಾವಣೆ ನಿಗದಿಯಾಗಿದ್ದು, ಅದರನ್ವಯ ನಿಗದಿತ ಮತಕ್ಷೇತ್ರಗಳ ಸ್ಥಾನಕ್ಕೆ ಅಗತ್ಯಕ್ಕಿಂತ ಮಿಗಿಲಾಗಿ ನಾಮಪತ್ರ ಸಲ್ಲಿಕೆಯಾಗದ ಕಾರಣ, ನಿಯೋಜಿತ ಚುನಾವಣಾಧಿಕಾರಿಗಳು ಚುನಾವಣಾ ಪ್ರಕ್ರಿಯೆಯ ಪ್ರಕಾರ ಅರ್ಹ ಉಮೇದುವಾರರ ಪಟ್ಟಿಯನ್ನು 19.01.2025ರಂದು ಪ್ರಕಟಿಸಿ ತದನಂತರ 20.01.2025ರಂದು ಈ ಕೆಳಗೆ ನಮೂದಿಸಿರುವ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಿದ್ದಾರೆ.

ಅವಿರೋಧವಾಗಿ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿ ಇಂತಿದೆ

1. ಶ್ರೀ ಗೋಪಾಲ್. ಕೆ. ಎನ್.
2. ಶ್ರೀ ಡಿ. ಹೆಚ್. ಗೌಡ
3. ಶ್ರೀ ಕೆ. ಪಿ. ನರಸಿಂಹಮೂರ್ತಿ
4. ಶ್ರೀ ರವೀಂದ್ರ. ಹೆಚ್. ವಿ.
5. ಶ್ರೀ ಕೆ. ಹೆಚ್. ರಾಜೇಂದ್ರ ಕುಮಾರ್
6. ಶ್ರೀ ಸಿ. ವೇಣು
7. ಶ್ರೀ ಎಂ. ಸೋಮಶೇಖರ್
8. ಶ್ರೀ ರವಿ. ಅ. ಲಮಾಣಿ
9. ಶ್ರೀ ದೇವರಾಜು. ಎಸ್. ಹೆಚ್.
10. ಶ್ರೀ ಆರ್. ಶರತ್‌ಚಂದ್ರ
11. ಡಾ॥ ರಜನಿ. ಎಸ್.
12. ಶ್ರೀಮತಿ ಹೆಚ್.ಜಿ. ಸುಮತಿ

ಹಾಗಾಗಿ, ಸ್ಪರ್ಧೆಯಲ್ಲಿದ್ದವರೆಲ್ಲಾ ನಿರ್ದೇಶಕ ಮಂಡಳಿಯ ದಿನಾಂಕ: 25.01.2025 ರಿಂದ ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಚುನಾಯಿತರಾಗಿರುವುದರಿಂದ, ದಿನಾಂಕ: 25.01.2025ರಂದು ಚುನಾವಣೆ ಇರುವುದಿಲ್ಲ ಎಂದು ನಿಯೋಜಿತ ಚುನಾವಣಾಧಿಕಾರಿ ತಿಳಿಸಿದ್ದಾರೆ ಎಂಬ ವಿಷಯವನ್ನು ಮಾನ್ಯ ಸದಸ್ಯರೆಲ್ಲರ ಗಮನಕ್ಕೆ ಈ ಪತ್ರಿಕಾ ಪ್ರಕಟಣೆಯ ಮೂಲಕ ತರುತ್ತಿದ್ದೇನೆ.

ದಿನಾಂಕ: 20.01.2025 ಸಹಿ/–
ಸ್ಥಳ: ಬೆಂಗಳೂರು ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸುಧಾ ಮಯೂರ ಓದಿರಿ

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ
ವೈದ್ಯಕೀಯ ಅಧೀಕ್ಷಕರ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560008

ವಿಚಾರಣೆ ಸಂಖ್ಯೆ : ಕಾರಾವಿಆ/ಇಂನಗರ/24–2024–25 ದಿನಾಂಕ: 16.01.2025

ಟೆಂಡರ್ ಪ್ರಕಟಣೆ

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ ಇಲ್ಲಿಗೆ ಡಯಟ್ (DIET) ಪದಾರ್ಥ ಬ್ರೆಡ್ ಹಾಗೂ ಮೊಟ್ಟೆಗಳನ್ನು ಒಳಗೊಂಡಂತೆ ಸರಬರಾಜು ಮಾಡಲು ಒಂದು ವರ್ಷದ ಅವಧಿಗಾಗಿ (ಏಪ್ರಿಲ್ 2025 ರಿಂದ ಮಾರ್ಚ್ 2026 ರವರೆಗೆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು/ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ **ಸಮಯ: 31.01.2025, ಸಂಜೆ 4.00 ಗಂಟೆಯವರೆಗೆ,** (2) ಟೆಂಡರ್ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ **ಸಮಯ: 05.02.2025 ಬೆಳಿಗ್ಗೆ 11.30 ಗಂಟೆಗೆ.** (3) ಟೆಂಡರ್ ತೆರೆಯುವ ವಿಳಾಸ: ವೈದ್ಯಕೀಯ ಅಧೀಕ್ಷಕರ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560008. (4) ಸ್ಯಾಂಪಲ್‌ಗಳನ್ನು ಸಲ್ಲಿಸಲು ನಿಗದಿತ ದಿನಾಂಕ: ಲಕೋಟೆ–1 ನ್ನು ತೆರೆದ ನಂತರ ತಿಳಿಸಲಾಗುವುದು. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ ಸಲ್ಲಿಸಬೇಕು. ಸಹಾಯವಾಣಿ: 080–25501216/227. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ.

ಸಹಿ/–
ವೈದ್ಯಕೀಯ ಅಧೀಕ್ಷಕರು,
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ,
ಬೆಂಗಳೂರು–08

ವಾಸಾಸಂಇ/ವಾ.ಪ್ರ/4452/ಶಿರಡಿ ಸಾಯಿ/2024–25

ಸ್ಪೋರ್ಟಿಂಗ್ ಕ್ಲಬ್ ತಂಡಕ್ಕೆ ಜಯ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಮಂಗಳವಾರ ಸೌತ್ ಯುನೈಟೆಡ್ ಎಫ್‌ಸಿ ವಿರುದ್ಧ 4–0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಲೀಗ್‌ನ ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡ 2-1 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಮೂರನೇ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡ 4–1 ಗೋಲುಗಳಿಂದ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು.

ಎಫ್‌ಸಿ ಅಗ್ನಿಪುತ್ರ ತಂಡದ ಅಫ್ಜರ್ ನೂರಾನಿ (ಕೇಸರಿ) ಚೆಂಡಿಗಾಗಿ ಪೈಪೋಟಿ ನಡೆಸಿದ ಕ್ಷಣ

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 51/2024, ದಿನಾಂಕ: 19.12.2024 ರ ತಿದ್ದುಪಡಿ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಈಗಿರುವ ದಿನಾಂಕ	ಬಿಡ್‌ಗಳನ್ನು ಸಲ್ಲಿಸಲು ಪರಿಷ್ಕೃತಗೊಂಡ ಕೊನೆಯ ದಿನಾಂಕ
ಎಲ್‌8246275ಬಿ	ಇ–70 ಬ್ರೇಕ್ ಉಪಕರಣದ ವಾಲ್ವ್‌ಗಳಿಗೆ ಟೆಸ್ಟ್ ರಿಗ್‌ಗಳ ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ. (ಪರಿಮಾಣ: 01 ನಂ.).	17.01.2025 10:30 ಗಂಟೆಯ ವರೆಗೆ	31.01.2025 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/719/AAF/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ವಿಜಯಶಂಕರ್, ಬಾಬುಕೃಷ್ಣಮೂರ್ತಿಗೆ ‘ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ’ಗೆ ಲೇಖಕ ಎಸ್.ಆರ್. ವಿಜಯಶಂಕರ್ ಮತ್ತು ‘ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ’ಗೆ ಪತ್ರಕರ್ತ ಬಾಬುಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ. ಫೆ.9ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ನಡೆಯಲಿರುವ ‘ಪ್ರೊ.ಎಲ್.ಎಸ್. ಶೇಷಗಿರಿರಾವ್ ಶತಮಾನೋತ್ಸವ ಸಮಾರಂಭ’ದಲ್ಲಿ ವಿಮರ್ಶಕ ಎಚ್. ಎಸ್.ರಾಘವೇಂದ್ರರಾವ್ ಅವರು ಪ್ರಶಸ್ತಿ ಪ್ರದಾನ ಮಾಡುವವರು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಎಸ್.ಆರ್. ವಿಜಯಶಂಕರ್

ಬಾಬು ಕೃಷ್ಣಮೂರ್ತಿ

45 ಇನ್‌ಸ್ಪೆಕ್ಟರ್‌ಗಳ ವರ್ಗಾವಣೆ

ಬೆಂಗಳೂರು: ರಾಜ್ಯದಾದ್ಯಂತ ಇನ್‌ಸ್ಪೆಕ್ಟರ್‌ಗಳು ಮತ್ತು ಡಿವೈಎಸ್‌ಪಿಗಳನ್ನು ವರ್ಗಾವಣೆ ಮಾಡಲಾಗಿದೆ.

ಆರು ಡಿವೈಎಸ್‌ಪಿ, 45 ಇನ್‌ಸ್ಪೆಕ್ಟರ್ ಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಮಹಾನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

BGS BLOOMFIELD SCHOOL & PU COLLEGE
Recognised by Govt. of Karnataka
CBSE Curriculum
No.38, 6th Cross, 3rd Block, T.R. Nagar, Bengaluru -560070
Ph. No. : 080 – 26763777
REQUIRED
PRINCIPAL & TEACHERS
FOR SCHOOL / PU COLLEGE
A minimum qualification of M.A. / M.Sc. & B.Ed. with minimum 5 years of experience (as Principal).
Experienced Teachers with M.A / M.Sc. / B.A / B.Sc. & B.Ed. to Teach Science (Biology, Physics, Chemistry), Maths, Social Science, English, Kannada, Hindi and Computer Science
Experienced Nursery Teachers with NTT.
Note: Attractive salary package based on qualification and experience.
Apply within 7 days to
bloomfieldadm@gmail.com
94485 28484

Aureus University
SCHOOL OF MEDICINE
Rank: Lecturer, Associate Professor, Assistant Professor and Professor
Aureus University School of Medicine has currently openings for the faculty in the basic medical sciences at our Aruba campus, Dutch West Indies. We are searching for dedicated and innovative professionals who are committed to collaborating with our team to educate and train the future generation of physicians. Our mission is founded on the principles of excellence in education, research, clinical care, and community service.
Candidates must possess a terminal degree (MD or PhD) and demonstrate a strong interest in teaching medical students. We are particularly seeking faculty members for courses in Anatomy, Physiology, Pathology, Pharmacology, Psychiatric Medicine and Microbiology.
Apply to:
careers@aureusuniversity.com

BRIGHT WAY SCHOOL
No.105, 12th Main, Opp.BHCS Layout, Gowdanapalya, Bangalore-61
WALK-IN-INTERVIEW
Saturday : 25.01.2025 9.30 a.m - 2.00 p.m
HIGH SCHOOL
English, Social Science, Dance, Accounts.
B.A, B.Ed/M.A, B.Ed/Vidwath/ Degree with Computer Knowledge
Ph: 080-26396720, 9241204762
brightways.school@yahoo.in

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA
+ PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE * HSR & * KODATIGATE (SARJAPURA)
About us: NBGI having 9 Schools, 4 PU College, 2 Degree College & Upcoming University are the Pioneers in providing quality education since 1990. Our campuses are well facilitated in providing education of International standards. We are collaborated with ICSE, CBSE & Cambridge (IGCSE) Boards. We cater to Day Schooling and on campus Boarding Facilities.
PRINCIPAL/VICE PRINCIPAL
Candidates possessing with brilliant academy records. Post Graduate with 5 to 10 yrs experience & leadership qualities in reputed institution.
KINDERGARTEN - Teachers
Candidates with NTT & MTT, having experience handling KG students, should be humble and committed to provide quality & innovative teaching.
PRIMARY SCHOOL - ALL SUBJECTS
Graduated candidates with experience teaching primary classes for grade 1 to 4 - ICSE / CBSE & IGCSE streams. Should be team bounded and committed to provide quality & innovation teaching.
HIGH SCHOOL - ALL SUBJECTS
Graduate / Post graduate candidates with experience teaching High school section from grade 5 to 10 - ICSE / CBSE & IGCSE streams. Should be result oriented & committed to provide quality and innovative teaching.
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78992 27591
hrcentral.nbgi@gmail.com www.newbaldwininstitutions.org

KNS INSTITUTE OF TECHNOLOGY
Approved by AICTE, Govt of Karnataka & Affiliated to VTU
FACULTY/STAFF REQUIREMENT
PROFESSORS, ASSOCIATE PROFESSORS & ASST. PROFESSORS IN THE FOLLOWING DEPARTMENTS
CSE, ISE, ECE, AI&ML, Data Science, IOT, Cyber Security
ADMINSTRATIVE STAFF:
Adminstrative Officer, First Division Clerk, Librarian
INSTRUCTOR / ASSISTANT INSTRUCTOR:
Diploma in CSE, ISE, AI&ML, ECE
Qualification & Salary as per AICTE Norms & State Govt.
Higher Salary may be considered for deserving candidates
Apply within 7 days with detailed CV and copies of Testimonials to:
Principal, KNS INSTITUTE OF TECHNOLOGY
Hegde Nagar, Kogilu Road, Thirumenahalli, Bangalore-560064.
career@knsit.com, knsit.hr@gmail.com, www.knsit.com.
Ph: 080-28567958 Sd/- Chairman

ವಿಶ್ವ ವೆಂಕಟೇಶ್ವರ ಇಂಟರ್‌ನ್ಯಾಷನಲ್ ಸ್ಕೂಲ್
V.V.INTERNATIONAL SCHOOL
Affiliated to CBSE upto Senior Secondary, New Delhi, Affiliation Number 830685
V.V.PU & DEGREE COLLEGE
Invites applications for
Vice Principal - (School, PU & Degree College)
Co-ordinators - (Pre-Primary, Primary & Secondary)
Pre-Primary - NTT/ ECE / Montessori
PRT & TGT - All Subjects
Post Graduates Teachers & Lecturers for
PU & Degree College - (English, Kannada, Sanskrit, Hindi, Physics, Chemistry, Mathematics, Biology, Economics, Business Studies, Accountancy, Computer Science, Statistics)
Art & Craft, Music, Dance, Physical Instructor, Librarian
Call: 9448 516 410 / 9141 300 990 / 9141 300 991 / 7676 863 934
Sy. No. 72, Tirumala Garden, Kodipalya, Kengeri, Bengaluru - 560 060
E-mail: tirumalabalaji75@gmail.com
hr.vvinstitutions@gmail.com
www.vishwavenkateshwaradegreecollege.com | www.vvinternationalschool.com | www.kbcpucollege.com

NEW MILLENNIUM SCHOOL
Horamavu Agara, Bangalore-560043.
[Affiliated to CISCE New Delhi]
Invites application for the following positions from suitably qualified and experienced full time Teachers.
English Teacher
Middle and Senior School
Kannada Teacher
Middle and Senior School
Mathematics:
Middle and Senior School
Physics
Middle and Senior School
Music Teacher & Dance Teacher
Send your CV to newmillenniumschool@gmail.com
Walk in interview between 8am to 12.30 pm on a working day.
Contact: 8660541421/ 7892839366
Visit:www.newmillenniumschool.com

JANANI VIDYA MANDIRA
Affiliated to CBSE, New Delhi. No. 830885
3rd Block, Sir M.V. Layout, Ullal Road, Bengaluru-560110
REQUIRES
Qualified TEACHERS for Social, EVS and Maths (Primary & High School), Sanskrit, Nursery, Art & Craft, PE, Librarian, Mother Teachers (Grade 1& 2) and Office Admin.
Walk-In-Interview on 25th January 2025 at 8:30 am.
For details Contact: 9449832935, 7337774350
Email:career@jananividyamandira.com
Website:www.jananividyamandira.com

JOB
To Place your Classified Ads Contact:
9886213331

HOLY ANGEL'S High School Hampinagar,Vijayanagar, Bengaluru-560104. Phone: 23404465, 23202042 E-mail : holyangels.highschoolrpclayout@gmail.com Requires Experienced Trained Teachers for Academic year 2025-2026 for Nursery, Primary, High-School, Music Teacher & P.E.Teacher. State & ICSE. Qualification : B.A/B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

NIRMAN INTERNATIONAL PUBLIC SCHOOL (CBSE), Near Automated RTO,7th Block, Vishweshwaraiah Layout, Bangalore-91 Requires Qualified, Experienced TEACHERS for All Subjects, from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

Wanted

HINDUSTAN PHARMA Distributor Pvt. Ltd. Required for DELIVERY BOYS, Attractive Salary with P.F. and E.S.I. Address: 76/1, Aruna Complex, above Union Bank, J.C. Road, Bangalore-560002. Contact: 9980120613.

General

D.N.M ASSOCIATES required Junior Advocates having experience of 2-3 years, fluency in languages, hardworking and interested in profession, both trial and High Court work. 9845081411, dnmanjunathadvocate@gmail.com

MARBLE AND Granite factory in Bangalore requires Head of sales, sales representatives. pharma14g@gmail.com

BANGALORE REGIONAL CONFERENCE
(Methodist Church In India)
WE ARE HIRING!!!!
PERSONAL SECRETARY
For the Bishop's Office - Bangalore Regional Conference & Chairman of Baldwin Methodist Educational Society.
Qualification: Any Bachelor's degree from a reputed University
Experience:
- 3-5 years of relevant experience
- Proficient in verbal & written Communication Skills
- Processes Correspondence
- Knowledge of MS Office & good Computer Skills
- Calendar Management, Meeting Coordination & Appointments
- Managing Travel Arrangements

Skills:
- Impeccable communication skills in English & Confidentiality
- A systematic person with attention to detail
- Ability to multitask & prioritize tasks efficiently
- Good communication in Kannada will be an advantage
- Flexibility & Adaptability

Age: 30-40 years
If you meet the requirements, email your application with a recent passport size photograph to hrhead.bmes@gmail.com on or before 25th January, 2025

Multiple Vacancy

POM POWER POM SYSTEMS AND SERVICES PVT LTD
JOB OPPORTUNITIES
A leading Manufacturers of Advanced Online UPS Systems, Solar (Hybrid & On-Grid) Inverters and Energy Storage Systems requires the following
General Manager Marketing
5 to 6 Years of Experience in UPS Industry.
Asst. General Manager
Experience in Channel Business and 4 to 5 Years Experience in UPS & Solar Inverters.
Sales Manager
3 to 4 Years Experience in UPS Systems.
Senior Marketing Executives
3 to 4 Years Experience in Selling UPS Systems / Solar Inverters.
For Walk-in Interview Call: 90350 10265
Share your Resume to: pompower@pompower.in
No. 75, 6tha Main, 3rd Phase, Peenya Indl. Area, Bangalore - 560 058.

Placement Bureaus/Consultants

CONTACT FOR All Placement Assistance, 74, 1 Floor, 17 Cross,Malleshwaram, Bengaluru 560003 08023443555, 8183046799

Engg/ Production Technical

WANTED: SITE ENGINEER FOR PROJECT SUPERVISION in Bangalore. Qualification: BE (Civil), Experience: Minimum 10 years, Salary: Rs. 30,000 to 40,000 per month, Job Role: Supervise construction projects, ensure quality, safety, timely completion. WhatsApp: 9886083424

WANTED TECHNICIANS: ITI/Diploma Electronics (Male) with 3-5 years Experience. PURCHASE_MANAGER: (Male) 2-3 years Experience in Manufacturing Industry. Immediate appointment Industry at Peenya. 9972410541 9845915484

WANTED TECHNICIANS for_factory`in Bommasandra Male ITI_Mechanical and Diploma Electrical`with Experience. Residing near_by Preferred. Contact: 9740144182

Marketing & Sales

Required
SALES EXECUTIVE
at Bangalore for wholesale distributor of Speciality Chemicals
⇨ Any Graduate with minimum 2-3 years of experience in Sales
⇨ Salary: Rs.18,000/- to Rs. 20,000/- pm
Contact / Call: hr@gloryinfinity.com
9902027116

Hospital & Medical Jobs

LEADING MULTISPECIALTY HOSPITAL IN BANGALORE AND VIJAYAPURA
which state-of-the-art, having facilities and equipments
Hiring Doctors in the Department of Emergency Response/ Critical Care Unit and other Departments.
Experienced Doctors to apply.
Apartment accommodation provided.
Attractive Salary package offered.
Kindly apply to: ibc2@ibc.co.in.
Contact: Dr. Mohammed Azmath 9513011191
Hurry to setup interview and apply for openings.

ಅಪೋಲೋ ಫಾರ್ಮಸಿ ವತಿಯಿಂದ
ಬೃಹತ್ ಉದ್ಯೋಗ ಮೇಳ
ಫಾರ್ಮಸಿಸ್ಟ್ (ಡಿ/ಬಿ. ಫಾರ್ಮಸಿ) ಮತ್ತು ಫಾರ್ಮಸಿ ಅಸಿಸ್ಟೆಂಟ್‌ಗಳಿಗೆ ಉದ್ಯೋಗ ಅವಕಾಶ.
ದಿನಾಂಕ: 24 ನೇ ಜನವರಿ 25
RAMEE STRAND INN, Hosur Main Road, Singasandra, B'lore-68. &
ದಿನಾಂಕ: 25 ನೇ ಜನವರಿ 25
SJES Education Institution Old Madras Road, B'lore-49.
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ & ಆನ್‌ಲೈನ್‌ನಲ್ಲಿ ಅಪ್ಲೆ ಮಾಡಿ.

EDUCATIONAL

Overseas Studies

FOREIGN UNIVERSITIES Studies? Assisting you A-Z formalities including Visa, Funding- Under graduate to PG. Contact Dr. Swamynaidu- 9342247637.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, **Venkataravanappa Munichowdappa,** S/o Munichowdappa, residing at Harapanayakanahalli, H.Gollahalli, Mulbagal, Kolar, Karnataka- 563131 has changed my name from **VENKATARAVANAPPA** to **VENKATARAVANAPPA MUNICHOWDAPPA** vide affidavit dated 15.01.2025 before Notary P.M. Sadhashivaiah, Mulbagal Taluk, Kolar Dist.

I, EMRANI AFZAL HUSAIN W/o.C.H. Kamarudin R/a.Flat`No.954 45th Cross, Opposite Annamma Devi Park Kumaraswamy Layout 2nd Stage,JP.Nagar Bangalore South Bangalore 560078 have changed my Name to EMRANI vide`affidait dated:17.1.2025 before`Notary L.Puttaraju, Bengaluru

CHANGE OF NAME
I,**RAMESHA** S/o Venkatarayappa, residing at Channasandra, Hope Farm, Bengaluru- 560098, my name in some documents recorded as **RAVANAPPA** and **RAMESHA.** Hereby declaring that my correct name is **RAMESHA** vide affidavit dated 03/01/2025 before notary G.Dakshahini, Bengaluru. Henceforth I shall be called as **RAMESHA** only.

CHANGE OF NAME
I, **RANJITHA JAGADISH** W/o Rakesh. M residing at #508, 6th main, 10 cross, Coffee Board Layout, Kempapura, Hebbal, Bengaluru- 560024 my name in some documents recorded as **RANJITHA RAKESH, RANJITHA. J, J. RANJITHA** and **RANJITHA. R** Hereby declaring that my correct name is **RANJITHA JAGADISH** Henceforth I shall be called as RANJITHA JAGADISH only, vide affidavit dated 15/01/2025 before notary H.H. Nagaraj, Bengaluru.

I, SHARDINDU TIWARI alias SHARDINDU Residing #B-1002, Janapriya Lakeview Phase-2, Kodichikkanahalli, Bangalore-76 wish to state that both the name belongs to me vide affidavit dated 28.12.2024 sworn before K.C.Shashikala Notary, Bangalore

CHANGE OF NAME
I, **Jhon Duleep Ravindran** S/o John Singh, residing at No.81, Elsa Enclave, Vaddaapalya, Horamavu, Bengaluru-560043, have changed my name to **JOHN DULEEP RAVINDRAN** Vide affidavit dated 20.01.2025 sworn before Notary S.R. Nanjunda Swamy, Bengaluru. Henceforth I shall be called as **JOHN DULEEP RAVINDRAN** only

I, MAHAVEER JAIN. N residing #684/A, New No. 42/1, Ramanjaneya main road, Srinagar, Bengaluru 560050 have changed my name to MAHAVEER JAIN vide affidavit dated 21.01.2025 before Notary Mamatha N.K., Bengaluru

CHANGE OF NAME
I, **Prabhakara N @ Prabhakar N** S/o Narayana Reddy, residing at # 608, Sri Nidhi, 24th Cross, 10th Main, AECS Layout, B Block, Singasandra, Bommanahalli, Bengaluru-560068, declare that the above names pertain to me and henceforth I shall be known as **PRABHAKAR N** Vide affidavit dated 21.01.2025 sworn before Notary B.M. Chandrashekar, Bengaluru.

SUMITHRAMMA #296, Ramanilaya, VKR Layout, Near RK Dhaba, Old Chandapura, Bengaluru-99, have changed my name to SUMITHRA N. Vide affidavit dated- 21/01/2025

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT

START YOUR OWN BUSINESS
JOIN OUR FREE START UP OPEN HOUSE
Start-up ideas for Micro Small and Medium enterprises (MSME)
Age and Education are no bar
Everyday 18.01.2025 to 16.02.2025
Duration: 2hrs Timing: 11am to 1pm
Content: • See100 products you can make
- Start your screen-printing journey
- Learn how to startand run a profitable business and many more....

Fees: Free
Location: Jigani, Bengaluru-560105.
For More Details, Course content and online registration
Contact - +91 90710 79992
Email: startups@aronuniversal.com
LIMITED SEATS
ARON UNIVERSAL LTD
ARON Entrepreneurship Program

ADMISSIONS OPEN FOR 2025
Only for NIOS (NATIONAL INSTITUTE OF OPEN SCHOOLING)
@ VIDYANIKETAN SCHOOL
(* We are not an AI)
Our features:
- Unique and Flexible approach to education
- Subject flexibility
- Students with Learning Disability
- Language Exemption
- Aspiring Athletes

For more details
Please contact the School office:
No. 30 Kempapura, Hebbal, Bangalore-560024
Phone: 080-2333 1531 / 2353 1338 / 2363 5303 / 98456 27053

ಪೌರಕಾರ್ಮಿಕರ ಸೇವೆ ಕಾಯಂಗೆ ಕೋರಿಕೆ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಲವು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಪೌರನೌಕರರು ಮತ್ತು ಪೌರಕಾರ್ಮಿಕರ ಸೇವೆ ಕಾಯಂಗೊಳಿಸಲು ನ್ಯಾಯಾಲಯ ಹೊರಡಿಸಿರುವ ಆದೇಶ ಪಾಲಿಸದ ಹಿನ್ನೆಲೆಯಲ್ಲಿ ದಾಖಲಾಗಿರುವ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 'ರಾಜ್ಯ ನಿವೃತ್ತ ಪೌರನೌಕರರು ಮತ್ತು ಪೌರಕಾರ್ಮಿಕರ ಸಂಘ' ಹಾಗೂ ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಪ್ ಆಪರೇಟರ್, ಬಿಲ್ ಕಲೆಕ್ಟರ್, ದ್ವಿತೀಯ ದರ್ಜೆ ಸಹಾಯಕರು, ಕಿರಿಯ ಎಂಜಿನಿಯರ್, ಎಲೆಕ್ಟ್ರಿಕಲ್ ಲೈನ್‌ಮನ್, ದಫೇದಾರರೂ ಸೇರಿದಂತೆ ಒಟ್ಟು 23 ಜನರು ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಪೌರಾಡಳಿತ ಇಲಾಖೆ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಏನಿದು ಪ್ರಕರಣ?: ರಾಜ್ಯದ ವಿವಿಧ ನಗರ ಮತ್ತು ಪುರಸಭೆಯಲ್ಲಿ 2-3 ದಶಕಗಳಿಂದ ಕೆಲಸ ಮಾಡುತ್ತಿರುವ ಪಂಪ್ ಆಪರೇಟರ್, ಬಿಲ್ ಕಲೆಕ್ಟರ್, ಎಸ್‌ಡಿಎ, ಟೈಪಿಸ್ಟ್, ದಫೇದಾರ್, ಕಿರಿಯ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ನೌಕರರು, ರಾಜ್ಯ ನಿವೃತ್ತ ಪೌರನೌಕರರ ಮತ್ತು ಪೌರಕಾರ್ಮಿಕರ ಸಂಘವು 2023ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ನಾವು, ಎರಡು- ಮೂರು ದಶಕಗಳಿಂದ ಸೇವೆ ಸಲ್ಲಿಸುತ್ತಿದ್ದೇವೆ. ಆದರೆ, ಸರ್ಕಾರ ನಮ್ಮ ಸೇವೆಯನ್ನು ಕಾಯಂಗೊಳಿಸುತ್ತಿಲ್ಲ. ಪ್ರೇಮ್ ಸಿಂಗ್ ಹಾಗೂ ಉತ್ತರ ಪ್ರದೇಶ ಸರ್ಕಾರದ ನಡುವಿನ ಪ್ರಕರಣ, ಕರ್ನಾಟಕ ಸರ್ಕಾರ ಮತ್ತು ಉಮಾದೇವಿ ನಡುವಿನ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ ನಮ್ಮ ಸೇವೆಯನ್ನು ಕಾಯಂಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸೇವಾ ಕಾಯಂ ವಿಚಾರದಲ್ಲಿ ನೌಕರರು ಕಾರ್ಯ ನಿರ್ವಹಿಸುತ್ತಿರುವ ನಗರ-ಪುರಸಭೆ ಹಾಗೂ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಯನ್ನು ಪೌರಾಡಳಿತ ಇಲಾಖೆ ನಿರ್ದೇಶಕರು ಪರಿಗಣಿಸಬೇಕು' ಎಂದು 2023ರ ಜೂನ್ 19ರಂದು ವಿಚಾರಣೆ ನಡೆಸಿದ್ದ ನಿರ್ದೇಶಿಸಿತ್ತು.

'ಅರ್ಜಿದಾರ ನೌಕರರು ತಮ್ಮ ಸೇವೆ ಕಾಯಂಗೊಳಿಸುವಂತೆ ಕೋರಿ ಸರ್ಕಾರಕ್ಕೆ ಮತ್ತೊಮ್ಮೆ ಅಗತ್ಯ ದಾಖಲೆಗಳು ಮತ್ತು ಸುಪ್ರೀಂಕೋರ್ಟ್ ತೀರ್ಪಿನ ಪ್ರತಿಯೊಂದಿಗೆ ಮನವಿ ಸಲ್ಲಿಸಬೇಕು' ಎಂದು ಸೂಚಿಸಿತ್ತು.

'ಏಕಸದಸ್ಯ ನ್ಯಾಯಪೀಠದ ಆದೇಶದಂತೆ ನಾವು ಮನವಿ ಪತ್ರ ಸಲ್ಲಿಸಿದರೂ, ಅದನ್ನು ಪರಿಗಣಿಸಿ ಸರ್ಕಾರ ಈವರೆಗೂ ನಮ್ಮ ಸೇವೆಯನ್ನು ಕಾಯಂಗೊಳಿಸಿಲ್ಲ. 2023ರ ಜೂನ್ 19ರಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಹೊರಡಿಸಿರುವ ಆದೇಶದ ಅನ್ವಯ ನಮ್ಮ ಸೇವೆ ಕಾಯಂಗೊಳಿಸಲು ಸರ್ಕಾರ ವಿಫಲವಾಗಿದೆ. ಆದ್ದರಿಂದ, ನಮ್ಮ ಸೇವೆಯನ್ನು ಕಾಯಂಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿದೆ.

ಜಿಲ್ಲಾ ಘಟಕಕ್ಕೂ ವರಿಷ್ಠರ ಒಪ್ಪಿಗೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿ ವರಿಷ್ಠರ ಅನುಮತಿ ಪಡೆದು ಈ ಬಾರಿ ಜಿಲ್ಲಾ ಘಟಕಗಳ ಅಧ್ಯಕ್ಷರ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ತಿಳಿಸಿದರು.

ರಾಜ್ಯ ಬಿಜೆಪಿ ಪ್ರಮುಖ ನಾಯಕರ ಸಮಿತಿ ಸಭೆಯ ನಂತರ ಮಾತನಾಡಿದ ಅವರು, ತಲಾ ಮೂವರು ಅರ್ಹ ಆಕಾಂಕ್ಷಿಗಳ ಪಟ್ಟಿಯನ್ನು ದೆಹಲಿ ವರಿಷ್ಠರಿಗೆ ಕಳುಹಿಸಲಾಗುವುದು. ರಾಜ್ಯ ನಾಯಕರ ಜತೆ ವರಿಷ್ಠರು ಚರ್ಚಿಸಿದ ನಂತರ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಸಾಮಾಜಿಕ ನ್ಯಾಯ, ಮಹಿಳಾ ಪ್ರಾತಿನಿಧ್ಯ, ಹಿಂದೆ ಎರಡು ಬಾರಿ ಸಕ್ರಿಯ ಪದಾಧಿಕಾರಿಗಳಾಗಿ ಕೆಲಸ ಮಾಡಿದ ಅನುಭವ, ವಯೋಮಿತಿ ಆಧಾರದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಮುಂದಿನ ಮೂರು ವರ್ಷ ಆಯಾ ಜಿಲ್ಲೆಯಲ್ಲಿ ಪಕ್ಷವನ್ನು ಸದೃಢಗೊಳಿಸುವ ಸಮರ್ಥರನ್ನೇ ಪರಿಗಣಿಸಲಾಗುತ್ತದೆ ಎಂದು ರವಿ ಅವರು ಮಾಹಿತಿ ನೀಡಿದರು.

ಪಕ್ಷ ಬಲಗೊಂಡರೆ ಚುನಾಯಿತ ಪ್ರತಿನಿಧಿಗಳೂ ಸೇರಿದಂತೆ ಎಲ್ಲರಿಗೂ ಭವಿಷ್ಯ. ವರ್ತಮಾನದ ರಾಜಕಾರಣ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕುರಿತು ಚರ್ಚೆ ನಡೆದಿಲ್ಲ. ಜಿಲ್ಲಾ ಘಟಕದ ಆಯ್ಕೆಯ ನಂತರ ಈ ಕುರಿತು ಚರ್ಚೆ ನಡೆಯಲಿದೆ ಎಂದರು.

'ಬಿಜೆಪಿ: ಗೊಂದಲ ಬಗೆಹರಿಯುವ ವಿಶ್ವಾಸ'

ಬಿಜೆಪಿ ಸಭೆಯಲ್ಲಿ ಕಾರ್ಯಕರ್ತರ ಪರವಾಗಿ, ಅವರ ಧ್ವನಿಯಾಗಿ ಹಲವು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಅಭಿಪ್ರಾಯ ಕೇಂದ್ರದ ವರಿಷ್ಠರನ್ನು ತಲುಪಿದೆ ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೆಲವರ ಬೀದಿ ಮಾತು ಪಕ್ಷದ ವರ್ಚಸ್ಸಿಗೆ ಧಕ್ಕೆ ತರುತ್ತಿದೆ. ಕಾರ್ಯಕರ್ತರ ಮನಸ್ಸಿಗೂ ನೋವಾಗಿದೆ. ತಾರ್ಕಿಕ ಅಂತ್ಯ ಸಿಗಬೇಕು. ರಾಧಾಮೋಹನ್ ದಾಸ್ ಅಗರವಾಲ್ ಅವರು ಗೊಂದಲಕ್ಕೆ ತೆರೆ ಎಳೆಯುವ ವಿಶ್ವಾಸವನ್ನು ಎಲ್ಲ ಶಾಸಕರು ವ್ಯಕ್ತಪಡಿಸಿದ್ದಾರೆ ಎಂದರು.

ಸಿಐಡಿ ಎದುರು ಹೇಳಿಕೆ ದಾಖಲಿಸಿದ ಯತೀಂದ್ರ

ಬೆಂಗಳೂರು: ಬೆಳಗಾವಿಯಲ್ಲಿ ನಡೆದಿದ್ದ ಅಧಿವೇಶನದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಅಶ್ಲೀಲ ಪದಗಳಿಂದ ನಿಂದಿಸಿದ್ದಾರೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಎದುರು ಯತೀಂದ್ರ ಸಿದ್ದರಾಮಯ್ಯ ಅವರು ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆ ದಾಖಲಿಸಿದ್ದಾರೆ.



ಯತೀಂದ್ರ

ವಿಧಾನ ಪರಿಷತ್ ಸದಸ್ಯರಾಗಿರುವ ಯತೀಂದ್ರ ಅವರಿಗೆ ವಿಚಾರಣೆಗೆ ಬರುವಂತೆ ಸಿಐಡಿ ತನಿಖಾಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದರು. 'ಕಲಾಪದ ಸಂದರ್ಭದಲ್ಲಿ ಸಿ.ಟಿ.ರವಿ ಅವರು ಸಚಿವರಿಗೆ ಅಶ್ಲೀಲ ಪದ ಬಳಸಿದ್ದು ನಿಜ. ಅದನ್ನು ನಾವುಗಳು ವಿರೋಧಿಸಿದ್ದೆವು ಎಂಬುದಾಗಿ ಹೇಳಿಕೆ ದಾಖಲಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಲಿಖಿತ ರೂಪದಲ್ಲಿ ನೋಟಿಸ್ ನೀಡಿ, ಬುಧವಾರದ ಒಳಗೆ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಲಾಗಿತ್ತು. ಸೋಮವಾರ ಸಂಜೆ 5ರ ಸುಮಾರಿಗೆ ಯತೀಂದ್ರ ಸಿದ್ದರಾಮಯ್ಯ ಅವರು ಸಿಐಡಿ ಕಚೇರಿಗೆ ಬಂದಿದ್ದರು. ಸಂಜೆ 7 ಗಂಟೆವರೆಗೂ ತನಿಖಾಧಿಕಾರಿ ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಯತೀಂದ್ರ ಅವರ ಹೇಳಿಕೆಯನ್ನು ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ದಾಖಲಿಸಲಾಗಿದೆ. ಅವರು ನೀಡಿದ ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಳ್ಳಲಾಗಿದೆ. ಬೆಳಗಾವಿಯಲ್ಲಿ ಮಂಗಳವಾರ ಕಾರ್ಯಕ್ರಮವಿದ್ದ ಕಾರಣಕ್ಕೆ ಸೋಮವಾರವೇ ಅವರು ವಿಚಾರಣೆಗೆ ಬಂದಿದ್ದರು ಎಂದು ಸಿಐಡಿ ಮೂಲಗಳು ತಿಳಿಸಿವೆ.

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್ ಸಭಾಂಗಣದಲ್ಲಿ ಶಿವಕುಮಾರ ಸ್ವಾಮೀಜಿ ಅವರ 6ನೇ ವರ್ಷದ ಪುಣ್ಯಸ್ಮರಣೆ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಫೌಂಡೇಷನ್ ಅಧ್ಯಕ್ಷೆ ಲತಾ ಕುಂದರಗಿ, ರಾಜ್ಯ ಸಂಚಾಲಕ ಶರಣಬಸವ ಭಗವತಿ, ಕನ್ನಡ ಜಾನಪದ ಪರಿಷತ್‌ನ ದಾಸರಹಳ್ಳಿ ಕ್ಷೇತ್ರ ಘಟಕ ಅಧ್ಯಕ್ಷ ವೈ.ಬಿ.ಎಚ್ ಜಯದೇವ್, ವೀರಶೈವ ಮುಖಂಡ ಎಂ.ಎಚ್.ಪಾಟೀಲ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಪದಾಧಿಕಾರಿಗಳಾದ ಮಂಜು ಭಾಷಿಣಿ, ಭಾಮಾ, ಸದಾಶಿವಯ್ಯ, ಸವಿತಾ, ಲಕ್ಷ್ಮೀ ವೀರಭದ್ರಪ್ಪ, ಮಂಜುನಾಥ್ ಉಪಸ್ಥಿತರಿದ್ದರು

ವೇಮನರ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: 'ಮಹಾಯೋಗಿ ವೇಮನರು ಸಮಾಜಕ್ಕೆ ಬಿಟ್ಟುಹೋದ ತತ್ವಗಳು, ಸಂದೇಶ ಮತ್ತು ವಿಚಾರ ಧಾರೆಗಳು ಪ್ರಸ್ತುತ ಸಂದರ್ಭದಲ್ಲಿ ಮಾರ್ಗಸೂಚಿಯಾಗಿವೆ' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಅಭಿಪ್ರಾಯಪಟ್ಟರು.

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘ ಹಾಗೂ ಬೆಂಗಳೂರು ಉತ್ತರ ವಲಯ, ರೆಡ್ಡಿ ಜನಸಂಘದ ಆಶ್ರಯದಲ್ಲಿ ಮಹಾಯೋಗಿ ವೇಮನರ 613ನೇ ಜಯಂತ್ಯುತ್ಸವದ ಪ್ರಯುಕ್ತ ಯಲಹಂಕ ಉಪನಗರದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ವೇಮನ ಸಹಕಾರಿ ಸಂಘದ ವತಿಯಿಂದ ಪ್ರತಿವರ್ಷ ವೇಮನರ ಜಯಂತಿಯಂದು ರಕ್ತದಾನ ಶಿಬಿರ ಏರ್ಪಡಿಸಿ, ಸಂಗ್ರಹವಾದ ರಕ್ತವನ್ನು ರಕ್ತನಿಧಿ ಸಂಸ್ಥೆಗೆ ನೀಡುವ ಮೂಲಕ ಜನಸಾಮಾನ್ಯರಿಗೆ ಅನುಕೂಲ ಆಗುವಂತಹ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನಾರ್ಹ ಎಂದರು.

ಯಲಹಂಕ ಉಪನಗರದಲ್ಲಿ ಸಾರ್ವಜನಿಕರು ರಕ್ತದಾನ ಮಾಡಿದರು

ಶಿಬಿರದಲ್ಲಿ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ರಕ್ತದಾನ ಮಾಡಿದರು. ದಾನಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಒಟ್ಟು 448 ಯುನಿಟ್ ರಕ್ತ ಸಂಗ್ರಹವಾಯಿತು.

ಚಿತ್ರನಟ ಶೋಭರಾಜ್, ಸಂಘದ ಅಧ್ಯಕ್ಷ ಎಂ.ಮುನಿರೆಡ್ಡಿ, ನಿರ್ದೇಶಕರಾದ ಎಸ್.ಜಿ.ನರಸಿಂಹಮೂರ್ತಿ, ಎಂ.ಮೋಹನ್‌ಕುಮಾರ್, ಸಿ.ಆರ್. ಜಯಪ್ಪರೆಡ್ಡಿ, ರಾಜಣ್ಣ, ಶ್ರೀನಿವಾಸ್, ಅರುಣ ಪ್ರಕಾಶ್, ಸಿಇಒ ನಾಗೇಶ್. ಟಿ.ಆರ್, ಮುಖಂಡರಾದ ದಿಬ್ಬೂರು ಜಯಣ್ಣ, ಕೆ.ವೀರಣ್ಣ, ಎಸ್.ಜಿ. ಪ್ರಶಾಂತರೆಡ್ಡಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಆವಲಹಳ್ಳಿ ಕೇಶವಮೂರ್ತಿ ಉಪಸ್ಥಿತರಿದ್ದರು.

ಮಹದಾಯಿ ಯೋಜನೆಯ ಬಂಡೂರಿ ನಾಲೆ ತಿರುವು

ತಜ್ಞರ ಸಮಿತಿಯಿಂದ ಪರಾಮರ್ಶೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಬಂಡೂರಿ ನಾಲೆ ತಿರುವು ಯೋಜನೆಗೆ 71 ಎಕರೆ ಅರಣ್ಯ ಭೂಮಿ ಬಳಸಲು ಅನುಮೋದನೆ ನೀಡುವಂತೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ ಪ್ರಸ್ತಾವವನ್ನು ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ತಜ್ಞರ ತಂಡವು ಈ ವಾರ ನಡೆಯಲಿರುವ ಸಭೆಯಲ್ಲಿ ಪರಿಶೀಲನೆ ನಡೆಸಲಿದೆ.

ಮಹದಾಯಿ ನದಿ

ಮಹದಾಯಿ ಜಲವಿವಾದ ನ್ಯಾಯ ಮಂಡಳಿಯು 2018ರ ಆ.14ರಂದು ಕಳಸಾ-ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಇದರಲ್ಲಿ ಬಂಡೂರಿ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಮೂರು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡಬೇಕು ಎಂದು ಕರ್ನಾಟಕ ಸರ್ಕಾರವು ಕೇಂದ್ರ ಪರಿಸರ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. 'ಪ್ರಸ್ತಾವಿತ ಬಂಡೂರಿ ನಾಲಾ ತಿರುವು ಯೋಜನೆಯ 10 ಕಿ.ಮೀ. ವ್ಯಾಪ್ತಿಯಲ್ಲಿ ವನ್ಯಜೀವಿಧಾಮ ಹಾಗೂ ಸಂರಕ್ಷಿತ ಪ್ರದೇಶ ಇಲ್ಲ ಎಂದು ಕರ್ನಾಟಕ ಸರ್ಕಾರ ಪ್ರತಿಪಾದಿಸಿದೆ. ಆದರೆ, ಭೀಮಗಢ ವನ್ಯಜೀವಿಧಾಮದಿಂದ ನಾಲಾ ತಿರುವು ಪ್ರದೇಶ 1.44 ಕಿ.ಮೀ. ದೂರದಲ್ಲಿದೆ' ಎಂದು ಕೇಂದ್ರ ಅರಣ್ಯ ಸಚಿವಾಲಯ ಆಕ್ಷೇಪ ಎತ್ತಿತ್ತು. ಈ ಬಗ್ಗೆ ವಿವರಣೆ ನೀಡುವಂತೆ ರಾಜ್ಯಕ್ಕೆ ಸೂಚಿಸಿತ್ತು.

ಬಂಡೂರಿನಾಲಾ ತಿರುವು ಯೋಜನಾ ಸ್ಥಳಕ್ಕೆ ಬೆಳಗಾವಿ ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು 2024ರ ಫೆಬ್ರುವರಿಯಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. 'ಈ ಪ್ರದೇಶದ ಸುತ್ತ ಹುಲಿ, ಚಿರತೆ, ಕರಡಿ, ಕಾಡುಕೋಣ, ಜಿಂಕೆ ಸೇರಿದಂತೆ ಅನೇಕ ಕಾಡು ಪ್ರಾಣಿಗಳು ಕಂಡುಬಂದಿವೆ. ಈ ಪ್ರದೇಶವು ರಾಷ್ಟ್ರೀಯ ಉದ್ಯಾನ, ವನ್ಯಜೀವಿಧಾಮ, ಹುಲಿ ಸಂರಕ್ಷಿತ ಪ್ರದೇಶ ಹಾಗೂ ಆನೆ ಕಾರಿಡಾರ್‌ನ ಭಾಗ ಅಲ್ಲ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಅಧಿಸೂಚಿಸಿದ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೂ ಈ ಪ್ರದೇಶ ಬರುವುದಿಲ್ಲ. ಈ ಯೋಜನೆಯ ಅನುಷ್ಠಾನದಿಂದ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆ ಆಗುವುದಿಲ್ಲ. ಕುಡಿಯುವ ನೀರು ಒದಗಿಸುವ ಉದ್ದೇಶದ ಈ ಯೋಜನೆಗಾಗಿ ಕನಿಷ್ಠ ಪ್ರಮಾಣದ ಅರಣ್ಯ ಬಳಕೆ ಮಾಡಲಾಗುತ್ತದೆ' ಎಂದು ರಾಜ್ಯ ಸರ್ಕಾರವು ಪರಿಸರ ಸಚಿವಾಲಯಕ್ಕೆ ಪ್ರತಿಕ್ರಿಯೆ ನೀಡಿತ್ತು.

ಈ ಯೋಜನಾ ಪ್ರದೇಶವು ಪರಿಸರ ಸೂಕ್ಷ್ಮ ವಲಯದ ಭಾಗವಲ್ಲ ಎಂದು ಅಧಿಕಾರಿಗಳು ವಾದಿಸಿದ್ದರು. ಆದರೆ, ಯೋಜನೆಗೆ ಅರಣ್ಯ ಬಳಸುವ ಜಾಗವು ಪರಿಸರ ಸೂಕ್ಷ್ಮ ಪ್ರದೇಶದ ಕರಡು ಅಧಿಸೂಚನೆಯ ಭಾಗವಾಗಿದೆ ಎಂದು ಪರಿಸರ ಸಚಿವಾಲಯದ ಪ್ರಾದೇಶಿಕ ಕಚೇರಿ ಗಮನಿಸಿತ್ತು.

ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಕ್ರಮ

ತೆರಿಗೆ ಬಾಕಿ: ಸ್ಥಿರಾಸ್ತಿ ಹರಾಜು ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದಿಂದ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿರುವ ಆಸ್ತಿಗಳನ್ನು ತುರ್ತು ಹರಾಜು ಮಾಡುವ ಪ್ರಕ್ರಿಯೆಯನ್ನು ಬಿಬಿಎಂಪಿ ಆರಂಭಿಸಿದೆ.

ಆಸ್ತಿ ತೆರಿಗೆ ಬಾಕಿ ಪಾವತಿ ವಿಳಂಬಕ್ಕೆ ಕಾರಣ ಕೇಳುವ ನೋಟಿಸ್, ಬೇಡಿಕೆ ನೋಟಿಸ್, ಆಸ್ತಿ ಮುಟ್ಟುಗೋಲು, ವಸತಿಯೇತರ ಆಸ್ತಿಗಳಿಗೆ ಬೀಗಮುದ್ರೆ ಹಾಕಿದರೂ ಸುಸ್ತಿದಾರರು ತೆರಿಗೆ ಪಾವತಿಸಿರಲಿಲ್ಲ. ಆದ್ದರಿಂದ, ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 156 ಉಪಪ್ರಕರಣ 5ರ ಅಡಿಯಲ್ಲಿ ಹರಾಜು ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಹರಾಜಿನಲ್ಲಿ ಬಂದ ಹಣದಲ್ಲಿ ಪಾಲಿಕೆಗೆ ಸಂದಾಯವಾಗಬೇಕಿರುವ ಆಸ್ತಿ ತೆರಿಗೆಯ ಬಾಕಿಯನ್ನು ಪೂರ್ಣ ವಸೂಲಿ ಮಾಡಿಕೊಳ್ಳಲಾಗುತ್ತದೆ. ಹೆಚ್ಚುವರಿ ಹಣವನ್ನು ಆಸ್ತಿ ಮಾಲೀಕರ ಬ್ಯಾಂಕ್ ಖಾತೆಗೆ ಜಮೆಮಾಡಲಾಗುವುದು. ಪಾಲಿಕೆಯ ಪ್ರತಿ ವಲಯದಿಂದ ಒಂದರಿಂದ ಇಬ್ಬರು ಸುಸ್ತಿದಾರರನ್ನು ಗುರುತಿಸಲಾಗಿದೆ. ಎಂಟರಿಂದ ಹತ್ತು ಆಸ್ತಿಗಳನ್ನು ಹರಾಜು ಮಾರಾಟ ಮಾಡುವ ಪ್ರಕ್ರಿಯೆ ದಿನಾಂಕ ನಿಗದಿಪಡಿಸಿ, ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

‘ಇದು ಒಂದು ಆರಂಭವಾಗಿದ್ದು, ಪ್ರತಿ ವಾರವೂ ಈ ಪ್ರಕ್ರಿಯೆ ನಡೆಸಲಾಗುತ್ತದೆ. ಅತಿಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ/ಕೈಗಾರಿಕಾ ಮತ್ತು ವಸತಿ ಆಸ್ತಿಗಳ ಹರಾಜು ಪ್ರಕ್ರಿಯೆಯಿಂದ ಬಾಕಿ ವಸೂಲಿ ಮಾಡಲಾಗುತ್ತದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಎರಡು ಲಕ್ಷ ಆಸ್ತಿಗಳು ತೆರಿಗೆ ಪಾವತಿಸಿಲ್ಲ. ಹರಾಜಿನಂತಹ ಬಲವಂತದ ಕ್ರಮ ಕೈಗೊಳ್ಳಲು ಸುಸ್ತಿದಾರರು ಅವಕಾಶ ನೀಡಬಾರದು’ ಎಂದು ಮುನೀಶ್ ಮನವಿ ಮಾಡಿದ್ದಾರೆ.

ನಾಲ್ಕು ಆಸ್ತಿಗಳಿಗೆ ಹರಾಜು ನೋಟಿಸ್



ಚೊಕ್ಕಸಂದ್ರದಲ್ಲಿ 9090 ಚದರಡಿಯಲ್ಲಿ 44,933 ಚದರಡಿ ಕಟ್ಟಡ ಹೊಂದಿರುವ ಎಂ. ರಂಗಪ್ಪ ಅವರು ₹1.85 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಎಚ್ಎಸ್ಆರ್ ಲೇಔಟ್‌ನಲ್ಲಿ 399 ಚದರಡಿ ನಿವೇಶನದಲ್ಲಿ 12,080 ಚದರಡಿ ಕಟ್ಟಡ ಹೊಂದಿರುವ ಎಂ. ಕುಮಾರ್ ಅವರು ₹31.94 ಲಕ್ಷ ಆಸ್ತಿ ತೆರಿಗೆ ಪಾವತಿಸಬೇಕಿದೆ. ಬಾಗಲಗುಂಟೆಯಲ್ಲಿ 6785 ಚದರಡಿಯಲ್ಲಿ 29,100 ಚದರಡಿ ಕಟ್ಟಡ ಹೊಂದಿರುವ ಶಂಕರೇಗೌಡ ಅವರಿಂದ ₹30.99 ಲಕ್ಷ ತೆರಿಗೆ ಬಾಕಿ ಇದೆ. ಶಾಂತಲಾನಗರದಲ್ಲಿ 2008 ಚದರಡಿ ನಿವೇಶನದಲ್ಲಿ 6,400 ಚದರಡಿ ಕಟ್ಟಡ ಹೊಂದಿರುವ ಮೊಹಮದ್ ಇಷಾಖ್, ಮೊಹಮದ್ ಅಯೂಬ್, ಮೊಹಮದ್ ಶೋಯೀಬ್ ಅವರು ₹11.22 ಲಕ್ಷ ಆಸ್ತಿ ತೆರಿಗೆ ಉಳಿಸಿಕೊಂಡಿದ್ದಾರೆ. ಈ ನಾಲ್ಕೂ ಆಸ್ತಿಗಳನ್ನು ಹರಾಜು ಹಾಕಲು ಬಿಬಿಎಂಪಿ ನೋಟಿಸ್ ಜಾರಿ ಮಾಡಿದೆ.

ಇದೇ 28ರಿಂದ ಆಹಾರ ಮೇಳ

ಬೆಂಗಳೂರು: ಸಿನರ್ಜಿ ಎಕ್ಸ್‌ಪೋಶರ್ಸ್ ಆ್ಯಂಡ್ ಇವೆಂಟ್ಸ್ ಇಂಡಿಯಾ ಸಂಸ್ಥೆಯು ಇದೇ 28ರಿಂದ 30ರವರೆಗೆ ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ರಾಷ್ಟ್ರೀಯ ಮಟ್ಟದ ಆಹಾರ ಮೇಳ ಹಮ್ಮಿಕೊಂಡಿದ್ದು, ಇಲ್ಲಿ ಆಹಾರ ತಯಾರಿಕಾ ಸಾಮಗ್ರಿಗಳ ಸಮಗ್ರ ಪ್ರದರ್ಶನ ನಡೆಯಲಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಉಪಾಧ್ಯಕ್ಷ ಜಿ.ಶಶಿಕುಮಾರ್, ‘ಆಹಾರ ವಲಯದ ಭವಿಷ್ಯ ರೂಪಿಸುವ ಮೇಳ ಇದಾಗಲಿದೆ. ಆಹಾರ ವಲಯಕ್ಕೆ ಉಜ್ವಲ ಭವಿಷ್ಯವಿದ್ದು, ಇದು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಆಹಾರ ವಲಯದ ಹೊಸ ತಂತ್ರಜ್ಞಾನ, ವೈವಿಧ್ಯಗಳನ್ನು ಪ್ರದರ್ಶಿಸಲಾಗುತ್ತದೆ. ಆಹಾರ ಉದ್ಯಮದಲ್ಲಿ ತೊಡಗಿರುವ 200ಕ್ಕೂ ಅಧಿಕ ಸಂಸ್ಥೆಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ. ಬೇಕರಿ ಮತ್ತು ಕೆಫೆ ಉದ್ಯಮಕ್ಕೆ ಸಂಬಂಧಿಸಿದಂತೆ ಕೌಶಲ ಮತ್ತು ಜ್ಞಾನ ಹೆಚ್ಚಿಸಲು ವಿಶೇಷ ಕಾರ್ಯಾಗಾರವನ್ನು ವಿನ್ಯಾಸಗೊಳಿಸಲಾಗಿದೆ. ತಯಾರಕರು, ಪೂರೈಕೆದಾರರು ಮತ್ತು ಉದ್ಯಮ ವಲಯದ ಹತ್ತು ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ’ ಎಂದರು.

ದಕ್ಷಿಣ ಭಾರತದ ಚೆಫ್ ಅಸೋಸಿಯೇಷನ್ ಕಾರ್ಯದರ್ಶಿ ಕಾಶಿನಾಥ್, ಬೆಂಗಳೂರು ಬೇಕರಿ ಉತ್ಪನ್ನಗಳಿಗೆ ಮಹತ್ವದ ಮಾರುಕಟ್ಟೆ ಆಗಿದ್ದು, ಆರ್ಥಿಕ ಬೆಳವಣಿಗೆಗೆ ಪ್ರಮುಖ ಕೊಡುಗೆ ನೀಡುತ್ತಿದೆ’ ಎಂದು ಹೇಳಿದರು.

‘2025ರ ಜನಗಣತಿ ಆಧರಿಸಿ ಒಳ ಮೀಸಲಾತಿ ಕಲ್ಪಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಹೊಸತಾಗಿ 2025ರ ಜನಗಣತಿ ಮಾಡುತ್ತಿದ್ದು, ಈ ಜನಗಣತಿಯ ದತ್ತಾಂಶಗಳನ್ನು ಪರಿಗಣಿಸಿ ಎಲ್ಲ ಸಮುದಾಯಗಳಿಗೆ ನ್ಯಾಯುತವಾಗಿ ಒಳ ಮೀಸಲಾತಿ ನಿರ್ಣಯಿಸಬೇಕು’ ಎಂದು ಆಗ್ರಹಿಸಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಆಯೋಗದ ಅಧ್ಯಕ್ಷ ಎಚ್.ಎನ್. ನಾಗಮೋಹನ್‌ದಾಸ್ ಅವರಿಗೆ ಭಾರತೀಯ ಬೋವಿ ಜನಾಂಗದ ಪರಿಷತ್ (ಒಡಿ ಕಮ್ಯೂನಿಟಿ ಆಫ್ ಇಂಡಿಯಾ ಇಂಟರ್‌ನ್ಯಾಷನಲ್) ಮನವಿ ಸಲ್ಲಿಸಿದೆ.

‘2011ರ ಜನಗಣತಿಯಲ್ಲಿರುವ ಜಾತಿ ಸಮುದಾಯಗಳ ದತ್ತಾಂಶಗಳು 14–15 ವರ್ಷಗಳ ಹಿಂದಿನದ್ದು. ಅದರಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಸದಾಶಿವ ಆಯೋಗ ಕೂಡಾ ಜಾತಿ ಸಮುದಾಯಗಳ ದತ್ತಾಂಶದ ಆಧಾರದಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಿತ್ತು. ಅದೇ ದತ್ತಾಂಶವನ್ನು ಪರಿಗಣಿಸಿ ಜೆ.ಸಿ. ಮಾಧುಸ್ವಾಮಿಯವರ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ವರದಿ ನೀಡಿತ್ತು. ಈ ವರದಿಗಳನ್ನು ಆಧರಿಸಿ ಒಳ ಮೀಸಲಾತಿ ನೀಡಲು ಸಾಧ್ಯವಿಲ್ಲ’ ಎಂದೂ ಪರಿಷತ್ ಅಭಿಪ್ರಾಯಪಟ್ಟಿದೆ.

‘ಮಾಧುಸ್ವಾಮಿ ಅವರ ಅಧ್ಯಕ್ಷತೆಯ ಸಮಿತಿಯು 2022ರಲ್ಲಿ ನೀಡಿದ್ದ ವರದಿ ಅವೈಜ್ಞಾನಿಕವಾಗಿದೆ. ಯಾವುದೇ ಸರ್ಕಾರಿ ಇಲಾಖೆ ಕಡೆಯಿಂದ ಜಾತಿ ಸಮುದಾಯದಿಂದ ದತ್ತಾಂಶ ಪಡೆಯದೆ ತರಾತುರಿಯಲ್ಲಿ ವರದಿಯನ್ನು ಸಲ್ಲಿಸಲಾಗಿತ್ತು. ಹೀಗಾಗಿ, ಆ ವರದಿಯನ್ನು ರದ್ದುಪಡಿಸಬೇಕು’ ಎಂದೂ ಪರಿಷತ್ ಆಗ್ರಹಿಸಿದೆ.

ಪರಿಷತ್‌ನ ಗೌರವಾಧ್ಯಕ್ಷ ಅರವಿಂದ ಲಿಂಬಾವಳಿ ಮತ್ತು ಸಲಹಾ ಸಮಿತಿಯ ಅಧ್ಯಕ್ಷ ಎಚ್. ರವಿ ಅವರು ಈ ಮನವಿ ಸಲ್ಲಿಸಿದ್ದಾರೆ.

ಪುಷ್ಪ ನಮನ

ನಗರದ ಕನ್ನಡ ಭವನದ ನಯನ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಪಿ.ವಿ. ನಾಗರಾಜ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ನಿಜಶರಣ ಅಂಬಿಗರ ಚೌಡಯ್ಯ ಪೀಠದ ಶಾಂತ ಭೀಷ್ಮ ಚೌಡಯ್ಯ ಸ್ವಾಮಿ ಅವರು ನಿಜಶರಣ ಅಂಬಿಗರ ಚೌಡಯ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಮೈಸೂರು ರೇಸ್

‘ಗ್ರೇಸ್’ ಗೆಲ್ಲುವ ನಿರೀಕ್ಷೆ

ಈಕ್ವೈನ್ ವೆಟರಿನರಿಯನ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ರೇಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರೆಟ್ಟಿ ಮೂವ್ 6, ಇಮ್ರಾರಿಫ 1, ಮೈಂಡ್ ಗೇಮ್ಸ್ 2
2ನೇ ರೇಸ್: ಧುರಂದರ್ 5, ಅರಿಗಾಟೊ 6, ಎಪ್ಸಮ್ ಡೌನ್ಸ್ 1
3ನೇ ರೇಸ್: ಆರಿಲ್ 1, ವಾಟ್ ಈಸ್ ದಿಸ್ 4, ಕೊಯೊಟೆ ಗರ್ಲ್ 6
4ನೇ ರೇಸ್: ಕೂಲ್ ವಿಂಟರ್ 5, ಜೆಂಟಲ್‌ಮ್ಯಾನ್ಸ್ ವರ್ಡ್ 11, ಹಲ್‌ಚೆಮಿನಿ 1
5ನೇ ರೇಸ್: ಗ್ರೇಸ್ 9, ವರ್ದಾನ್ 8, ಕೋರ್ಟ್ ಜೆಸ್ಟರ್ 1
6ನೇ ರೇಸ್: ಫೆರೆಟ್ಟಿ 3, ಆಬ್ರೂಶನ್ 4, ಕಾನ್ಫಿಡೆಂಟ್ ಗೇಮ್ 6
7ನೇ ರೇಸ್: ಸ್ಟ್ರೀಟ್ ಸೆನ್ಸ್ 7, ಮನಿ ಎಕ್ಸ್‌ಚೇಂಜ್ 5, ಮಾರ್ಕ್ ಒನ್ 3

ಉತ್ತಮ ಬೆಟ್: ಸ್ಟ್ರೀಟ್ ಸೆನ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ಶ್ರೀಧರ ಹೆಗಡೆ ಬಿದ್ರಕಾನ್ ಅವರ ‘ನೆಲದಾಳದ ನೀರು’ ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಮುಖ್ಯ ಅತಿಥಿ: ರಾಘವನ್ ಕೆ.ಇ.ಎಸ್., ಅಧ್ಯಕ್ಷತೆ: ಎನ್. ಜ್ಯೋತಿ ಕುಮಾರ್, ಆಯೋಜನೆ: ಅಭಿನವ, ಸ್ಥಳ: ಪ್ರೆಸ್‌ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಕದಳಿ ಮಹಿಳಾ ಸಮಾವೇಶ ಹಾಗೂ ಕದಳಿ ಪ್ರಶಸ್ತಿ ಪ್ರದಾನ ಸಮಾರಂಭ: ‘ಮಹಿಳೆ ಮತ್ತು ಸುಸ್ಥಿರ ಬದುಕು’ ಉಪನ್ಯಾಸ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಎಸ್.ಜಿ. ಸುಶೀಲಮ್ಮ, ಆಧುನಿಕ ವಚನ ಗೋಷ್ಠಿ, ಸಮಾರಂಭದ ಸಾನ್ನಿಧ್ಯ: ತೋಂಟದ ಸಿದ್ಧರಾಮ ಸ್ವಾಮೀಜಿ, ಕದಳಿ ಪ್ರಶಸ್ತಿ ಪ್ರದಾನ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ಪ್ರಶಸ್ತಿ ಪುರಸ್ಕೃತರು: ಎಸ್.ಜಿ. ತುಂಗರೇಣುಕ, ಸ್ಮರಣ ಸಂಚಿಕೆ ಬಿಡುಗಡೆ: ಧರಣೀದೇವಿ ಮಾಲಗತ್ತಿ, ಅಧ್ಯಕ್ಷತೆ: ಸುಶೀಲಾ ಸೋಮಶೇಖರ್, ಮುಖ್ಯ ಅತಿಥಿ: ಆಯೇಷಾ ಖಾನಂ, ಆಯೋಜನೆ: ಕದಳಿ ಮಹಿಳಾ ವೇದಿಕೆ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 2

ರಾಷ್ಟ್ರೀಯ ತಾಂತ್ರಿಕ ಸಮ್ಮೇಳನದ ಸಮಾರೋಪ, ಜಾನುವಾರು ತಳಿಗಳ ಪ್ರದರ್ಶನ: ಮುಖ್ಯ ಅತಿಥಿಗಳು: ಅಭಿಜಿತ್ ಮಿತ್ರಾ, ಕೆ.ಸಿ. ವೀರಣ್ಣ, ಬಿ.ಪಿ. ಮಿಶ್ರಾ, ಮಂಜುನಾಥ್ ಎಸ್. ಪಾಳೇಗಾರ್, ಆಯೋಜನೆ: ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ, ದೇಶಿಯ ಪ್ರಾಣಿ ಜೀವವೈವಿಧ್ಯ ಸಂರಕ್ಷಣೆ ಸಂಘ, ಸ್ಥಳ: ಪಶುವೈದ್ಯಕೀಯ ಮಹಾವಿದ್ಯಾಲಯದ ಕನ್ನಡ ಸಭಾಂಗಣ, ಹೆಬ್ಬಾಳ, ಸಂಜೆ 4

ಪುರಂದರದಾಸರ ಆರಾಧನಾ ಮಹೋತ್ಸವ: ಹರಿದಾಸ ವಾಣಿ: ಶಾಂಭವಿ ಎ.ಎಚ್. ಮತ್ತು ಸಂಗಡಿಗರು, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಸಂಜೆ 6.30

‘ದಿವ್ಯದಂಗಡಿ’ ನಾಟಕ ಪ್ರದರ್ಶನ: ರಚನೆ: ಕಾವ್ಯ ಕಡಮೆ, ನಿರ್ದೇಶನ: ಶಶಿಧರ ಭಾರಿಘಾಟ್, ಆಯೋಜನೆ: ರಂಗಸಿರಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



ಮಹಾಭಾರತ (ಆದಿಪರ್ವ) ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಪೂರ್ಣಪ್ರಜ್ಞ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

ನೆಲಮಂಗಲ: ಲಕ್ಷಾಂತರ ರೂಪಾಯಿಗೆ ರಾಸುಗಳ ಮಾರಾಟ

ಮಹಿಮರಂಗನ ದನಗಳ ಜಾತ್ರೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಪ್ರಸಿದ್ಧ ದನಗಳ ಜಾತ್ರೆಯಲ್ಲಿ ಒಂದಾದ ಮಹಿಮರಂಗನ ದನಗಳ ಜಾತ್ರೆ ಆರಂಭವಾಗಿದೆ. ಸ್ಥಳೀಯವಾಗಿ ಇದನ್ನು ‘ಗುಟ್ಟೆ ಜಾತ್ರೆ’ ಎಂದೂ ಕರೆಯುತ್ತಾರೆ.

ಸುತ್ತಮುತ್ತಲ ರೈತರು ಅಷ್ಟೇ ಅಲ್ಲ ದೂರದ ಊರುಗಳಿಂದಲೂ ಜಾತ್ರೆಗೆ ದನಗಳು ಬರುತ್ತವೆ. ಖರೀದಿದಾರರೂ ಬರುತ್ತಾರೆ. ನಾಟಿ ತಳಿಗಳಾದ ಹಳ್ಳಿಕಾರ್, ಅಮೃತಮಹಲ್ ರಾಸುಗಳ ವ್ಯಾಪಾರ ಹೆಚ್ಚಾಗಿರುತ್ತದೆ.

ಮಹಿಮರಂಗಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಹಿಪ್ಪೆ, ಗೋಣಿ, ಆಲದ ಮರಗಳ ನೆರಳಿನಲ್ಲಿ ನೂರಾರು ಜೊತೆ ರಾಸುಗಳು ಈ ಬಾರಿ ಸೇರಿದ್ದು ಜಾತ್ರೆ ಕಳೆಕಟ್ಟಿದೆ. ಹೊಸದಾಗಿ ರಾಸುಗಳನ್ನು ಕೊಳ್ಳುವವರು, ರಾಸುಗಳನ್ನು ಮಾರುವವರು ಇಬ್ಬರ ಮಧ್ಯೆ ಸಂಧಾನ ಮಾಡುವ ದಲ್ಲಾಳಿಗಳನ್ನು ಜಾತ್ರೆಯಲ್ಲಿ ಕಾಣಬಹುದಾಗಿದೆ.

ವ್ಯಾಪಾರಸ್ಥರು, ರಾಸುಗಳಿಗೆ ಬೇಕಾದ ಹಗ್ಗ, ಮೂಗುದಾರ, ಮಕಾಡ, ಕಪ್ಪುದಾರ, ಗಂಟೆ, ಬಾರಿಕೋಲು, ಚಾಟಿಗಳ ಮಳಿಗೆಗಳನ್ನಿಟ್ಟಿದ್ದಾರೆ.

‘ಕೃಷಿಗೆ ಬೇಕಾದ ಎತ್ತುಗಳು ಖರೀದಿಗೆ ಸಿಗುತ್ತವೆ ಎಂದು ಬಂದಿದ್ದೇವೆ. ನಮ್ಮ ಬಳಿ ಇರುವ ಹಣಕ್ಕೆ ಬರುವಂತಹ ಎತ್ತುಗಳನ್ನು ಖರೀದಿಗೆ ನೋಡುತ್ತೇವೆ’ ಎಂದು ನಂದಿ ಹಾಗೂ ಚುಂಚನಗಿರಿ ಭಾಗದಿಂದ ಎತ್ತುಗಳು ಕೊಳ್ಳಲು ಬಂದಿದ್ದ ರೈತರು ಹೇಳಿದರು.

ಬಿಡದಿಯ ಎರಡು ಜೊತೆ ಎತ್ತುಗಳಿಗೆ ₹1.4 ಲಕ್ಷ ಬೆಲೆ ಎಂದು ಹೇಳಲಾಗಿತ್ತು. ಹಲ್ಲು, ಬಾಯಿ, ನಡಿಗೆಯನ್ನು ಖರೀದಿದಾರರು ಪರೀಕ್ಷಿಸಿದರು.

‘ಈಗ ವ್ಯಾಪಾರ ಪರವಾಗಿಲ್ಲ. ಮುಂದಿನ ದಿನಗಳಲ್ಲಿ ಹೇಗಿರುತ್ತದೆ ಎಂಬುದು ಗೊತ್ತಿಲ್ಲ’ ಎಂದು ಬೇಗೂರಿನಿಂದ ಬಂದಿದ್ದ ರೈತ ಕುಮಾರ್ ಆತಂಕ ವ್ಯಕ್ತಪಡಿಸಿದರು.

ಹತ್ತು ಸಾವಿರದಿಂದ ಸುಮಾರು ₹2 ಲಕ್ಷದವರೆಗಿನ ಬೆಲೆಯ ಇರಾಸುಗಳು ಜಾತ್ರೆಯಲ್ಲಿದ್ದವು.

ಜಾತ್ರೆಗೆ ಬರುವ ರೈತರಿಗೆ ರಾಸುಗಳನ್ನು ಕಟ್ಟಲು ಪಂಚಾಯಿತಿ ವತಿಯಿಂದ ಜಾಗ ಶುಚಿ ಮಾಡಿಸಿ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಕುಲವನಹಳ್ಳಿ ಪಂಚಾಯಿತಿ ಅಧ್ಯಕ್ಷೆ ಸುನಂದಮ್ಮ ಹೇಳಿದರು.

ಶಾಸಕ ಎನ್.ಶ್ರೀನಿವಾಸ್ ಅವರು ಜಾತ್ರೆಗೆ ಬರುವ ರೈತರಿಗೆ ಮೂರು ಹೊತ್ತಿನ ಊಟದ ವ್ಯವಸ್ಥೆಯನ್ನು ಉಚಿತವಾಗಿ ಮಾಡಿದ್ದಾರೆ.

ಜಿಲ್ಲಾಡಳಿತದಿಂದ ಸರ್ವೆ, ಮಾರ್ಕಿಂಗ್ ಕೆಲಸಕ್ಕೂ ತಾತ್ಸಾರ; ಹೈಕೋರ್ಟ್ ಆದೇಶಕ್ಕೂ ನಿರ್ಲಕ್ಷ್ಯ

77 ಕೆರೆಗಳಲ್ಲಿ ಒತ್ತುವರಿ ಗುರುತಿಸಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆರೆಗಳ ಒತ್ತುವರಿಯನ್ನು ಗುರುತಿಸಿ, ತೆರವುಗೊಳಿಸಲು ಹೈಕೋರ್ಟ್ 2023ರಲ್ಲಿ ಮೂರು ಆದೇಶಗಳನ್ನು ನೀಡಿದ್ದರೂ ಜಿಲ್ಲಾಡಳಿತ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಿಲ್ಲ. ಕೆಲವು ಕೆರೆಗಳಲ್ಲಿ ಒತ್ತುವರಿ ಗುರುತಿಸಿದ್ದರೂ, ಸ್ಥಳದಲ್ಲಿ 'ಮಾರ್ಕಿಂಗ್' ಮಾಡಿಲ್ಲ.

ಕೆರೆಗಳ ಒತ್ತುವರಿಯನ್ನು ಕಂದಾಯ ಇಲಾಖೆ ವತಿಯಿಂದಲೇ ಗುರುತಿಸಿ, ಅದನ್ನು ತೆರವುಗೊಳಿಸಬಹುದು ಎಂಬ ದಾಖಲೆ, ಶಿಫಾರಸುಗಳನ್ನು ಬಿಬಿಎಂಪಿಗೆ ಒದಗಿಸಬೇಕು. ಸರ್ಕಾರ ಅನುಮೋದಿಸಿರುವ ಬಿಬಿಎಂಪಿಯ ಕೆರೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು, ಒತ್ತುವರಿ ತೆರವು ಆದೇಶವನ್ನು ಹೊರಡಿಸಿ, ತೆರವು ಕಾರ್ಯಾಚರಣೆಯನ್ನೂ ಕೈಗೊಳ್ಳಬೇಕು. ಆದರೆ ಈ ಕಾರ್ಯ ಚುರುಕುಗೊಂಡಿಲ್ಲ.

ಹೈಕೋರ್ಟ್ 2023ರ ಜುಲೈ 21, ಆಗಸ್ಟ್ 1, ಸೆಪ್ಟೆಂಬರ್ 4ರಂದು ಕೆರೆಗಳ ಒತ್ತುವರಿ ತೆರವಿಗೆ ನಿರ್ದೇಶನ ನೀಡಿದೆ. ಬಿಬಿಎಂಪಿ ಕೂಡ ತೆರವು ಕಾರ್ಯಾಚರಣೆಯ ಕ್ರಿಯಾಯೋಜನೆಯನ್ನು ಸಲ್ಲಿಸಿತ್ತು. ಅದರಂತೆ ಕೆಲಸ ನಡೆದಿದ್ದರೆ ಎಲ್ಲ ಕೆರೆಗಳ ಒತ್ತುವರಿ ತೆರವಾಗಿ ಒಂದು ವರ್ಷವಾಗಬೇಕಿತ್ತು. ಆದರೆ, ಈವರೆಗೆ 28 ಕೆರೆಗಳು ಮಾತ್ರ ಒತ್ತುವರಿಯಿಂದ ಮುಕ್ತವಾಗಿವೆ. ಇನ್ನು 29 ಕೆರೆಗಳಲ್ಲಿ ಸರ್ಕಾರಿ ಇಲಾಖೆಗಳ ಒತ್ತುವರಿ ಇರುವುದರಿಂದ ಅವುಗಳನ್ನೂ 'ಒತ್ತುವರಿ ಮುಕ್ತ' ಎಂದು ಬಿಬಿಎಂಪಿ ಅಧಿಕಾರಿಗಳು ಭಾವಿಸಿದ್ದಾರೆ.

ಕೆರೆಗಳ ವಿಸ್ತೀರ್ಣದ ಸರ್ವೆ ಮಾಡಿ, ಒತ್ತುವರಿ ಹಾಗೂ ಗಡಿಯನ್ನು ಗುರುತಿಸಿಕೊಡುವಂತೆ 2023ರಿಂದಲೂ ಬಿಬಿಎಂಪಿ ಮುಖ್ಯ ಆಯುಕ್ತರು ಸಭೆಗಳನ್ನು ನಡೆಸಿ ಜಿಲ್ಲಾಧಿಕಾರಿ, ತಹಶೀಲ್ದಾರ್, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರಿಗೆ ಸೂಚಿಸಿದ್ದಾರೆ. ಆದರೆ, ಸರ್ವೆ ಕಾರ್ಯ ನಡೆಯುತ್ತಿಲ್ಲ.

'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳ ಒತ್ತುವರಿ ಸರ್ವೆ ಕಾರ್ಯ ಹಾಗೂ ಗಡಿ ಗುರುತಿಸುವಂತೆ' ನಗರ ಜಿಲ್ಲಾಧಿಕಾರಿಯವರಿಗೆ 2024ರ ಡಿಸೆಂಬರ್ 23ರಂದು ಪತ್ರ (ವಿಅ/ಅಪಹವೈ/ ಪಿಆರ್/2825) ಬರೆದಿರುವ, ಬಿಬಿಎಂಪಿಯ ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆಯ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಅವರು, ಹಿಂದಿನ ಸಭೆ ಹಾಗೂ ಹೈಕೋರ್ಟ್ ಸೂಚನೆಗಳನ್ನು ಉಲ್ಲಂಘಿಸಿದ್ದಾರೆ. ಭೂಮಾಪನ ಇಲಾಖೆ ಆಯುಕ್ತರಿಗೂ ಪತ್ರ (ವಿಅ/ಅಪಹವೈ/ ಪಿಆರ್/2552) ಬರೆದು, ಕೆರೆಗಳ ಸರ್ವೆ ನಡೆಸಲು ಮನವಿ ಮಾಡಿಕೊಂಡಿದ್ದಾರೆ.

ದಕ್ಷಿಣ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕೆರೆಗಳಲ್ಲಿ ಒತ್ತುವರಿಯಿದ್ದು, ಅವುಗಳ ಸರ್ವೆ ನಡೆಸಲು ನಗರ ಜಿಲ್ಲೆಯ ಭೂದಾಖಲೆ ಸಹಾಯಕ ನಿರ್ದೇಶಕ (ದಕ್ಷಿಣ) ಅವರಿಗೆ ಪ್ರತ್ಯೇಕ ಪತ್ರ (ವಿಅ/ಅಪಹವೈ/ಪಿಆರ್/2826) ಬರೆದು, ನಿಧಾನಗತಿಯಲ್ಲಿರುವ ಸರ್ವೆ ಕಾರ್ಯವನ್ನು ಚುರುಕುಗೊಳಿಸಲು ಹೇಳಿದ್ದಾರೆ. ನ್ಯಾಯಾಲಯಕ್ಕೆ ವರದಿ ಸಲ್ಲಿಬೇಕಾಗಿದ್ದು, ಸರ್ವೆ ಕಾರ್ಯ, ಒತ್ತುವರಿ ಗುರುತಿಸುವುದನ್ನು ಶೀಘ್ರ ಪೂರೈಸಲು ಮೂರು ಪತ್ರದಲ್ಲೂ ಕೋರಿದ್ದಾರೆ. ಇಷ್ಟಾದರೂ ಸರ್ವೆ ಕಾರ್ಯ ವೇಗ ಪಡೆದುಕೊಂಡಿಲ್ಲ.

202 ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೆರೆಗಳು | **19** ನಶಿಸಿಹೋಗಿರುವ ಕೆರೆಗಳು | **183** ಜೀವಂತ ಕೆರೆಗಳು | **105** ಒತ್ತುವರಿ ಗುರುತಿನೊಂದಿಗೆ ಸರ್ವೆ ಮಾಡಲಾಗಿರುವ ಕೆರೆಗಳು | **62** ಒತ್ತುವರಿ ಗುರುತಿಗೆ ಬಾಕಿ ಇರುವ ಕೆರೆಗಳು | **16** ಸರ್ವೆಗೆ ಬಾಕಿ ಇರುವ ಕೆರೆಗಳು

'ಮಾರ್ಕಿಂಗ್ ಇಲ್ಲದೆ ತೆರವು ಸಾಧ್ಯವಿಲ್ಲ'

'ಕೆರೆಗಳ ಸರ್ವೆ ಮಾಡಿ, ಒತ್ತುವರಿಯನ್ನು ನಕ್ಷೆಯಲ್ಲಿ ಗುರುತಿಸಿದ್ದರೂ ತೆರವು ಮಾಡಲು ಸಾಧ್ಯವಿಲ್ಲ. ಸ್ಥಳದಲ್ಲಿ ಮಾರ್ಕಿಂಗ್ ಮಾಡಿಕೊಟ್ಟರಷ್ಟೇ ತೆರವು ಕಾರ್ಯಾಚರಣೆ ಮಾಡಲು ಸಾಧ್ಯ. ಮಾರ್ಕಿಂಗ್ ಮಾಡಿಕೊಡಲು ಹಲವು ಸಲ ಮನವಿ ಮಾಡಿಕೊಂಡಿದ್ದರೂ ಕ್ರಮವಾಗಿಲ್ಲ' ಎಂದು ಬಿಬಿಎಂಪಿ ಎಂಜಿನಿಯರ್‌ಗಳು ತಿಳಿಸಿದರು.

'ಬಹುತೇಕ ಎಲ್ಲ ಕೆರೆಗಳ ಸರ್ವೆ ಕಾರ್ಯ ಮುಗಿದಿದೆ. ಬಿಬಿಎಂಪಿ ಕ್ರಮ ಕೈಗೊಳ್ಳಬೇಕು' ಎಂದು ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತ ಮಂಜುನಾಥ್ ಪ್ರತಿಕ್ರಿಯಿಸಿದರು. ನಗರ ಜಿಲ್ಲಾಧಿಕಾರಿ ಜಗದೀಶ್ ಅವರು ಈ ಬಗ್ಗೆ ಪ್ರತಿಕ್ರಿಯಿಸಲು ಕರೆಗೆ ಸ್ಪಂದಿಸಲಿಲ್ಲ.

ಮುಖ್ಯಾಂಶಗಳು

- 2023ರಲ್ಲಿ ಮೂರು ಆದೇಶಗಳನ್ನು ನೀಡಿದ್ದ ಹೈಕೋರ್ಟ್
- ಬಿಬಿಎಂಪಿ ಕ್ರಿಯಾಯೋಜನೆ ಸಲ್ಲಿಸಿದ್ದರೂ ನಡೆಯದ ಕೆಲಸ
- 2023ರಿಂದಲೂ ಹಲವು ಸಭೆಗಳನ್ನು ನಡೆಸಿರುವ ಬಿಬಿಎಂಪಿ ಮುಖ್ಯ ಆಯುಕ್ತರು



ಡಿ.1ರಂದು ಕಾರ್ಯಾಚರಣೆ ನಡೆಸಿದ್ದ ಬಿಬಿಎಂಪಿ ಸಿಬ್ಬಂದಿ, ವಿಭೂತಿಪುರ ಕೆರೆಯಲ್ಲಿನ ಒತ್ತುವರಿ ತೆರವುಗೊಳಿಸಿದ್ದರು

ಸರ್ವೆ, ಒತ್ತುವರಿ ಗುರುತಿಸಬೇಕಾದ ಕೆರೆಗಳು	
37	ದಕ್ಷಿಣ ತಾಲ್ಲೂಕು
27	ಪೂರ್ವ ತಾಲ್ಲೂಕು
7	ಉತ್ತರ ತಾಲ್ಲೂಕು
4	ಯಲಹಂಕ ತಾಲ್ಲೂಕು
1	ಆನೇಕಲ್ ತಾಲ್ಲೂಕು
1	ಸಿಟಿಎಸ್ ಸರ್ವೆ ಇಲಾಖೆ (ಸ್ಯಾಂಕಿ ಕೆರೆ)

29 ಕೆರೆಗಳಲ್ಲಿ ಸರ್ಕಾರಿ ಇಲಾಖೆಗಳ ಒತ್ತುವರಿ

92 ಕೆರೆಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಒತ್ತುವರಿ

17 ಕೆರೆಗಳಲ್ಲಿ ಖಾಸಗಿ ಒತ್ತುವರಿ

28 ಕೆರೆಗಳು ಒತ್ತುವರಿಯಿಂದ ಮುಕ್ತ

'ಮಣ್ಣಿನ ಸಂಶೋಧನೆ: ಅನುದಾನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಣ್ಣಿನ ಆರೋಗ್ಯದ ಕುರಿತು ಕೈಗೊಳ್ಳುವ ಸಂಶೋಧನೆಗಳಿಗೆ ಹೆಚ್ಚಿನ ಅನುದಾನವನ್ನು ಒದಗಿಸಬೇಕು' ಎಂದು ರಾಷ್ಟ್ರೀಯ ಮಣ್ಣು ಸರ್ವೇಕ್ಷಣೆ ಮತ್ತು ಭೂ ಬಳಕೆ ನಿಯೋಜನೆ ಸಂಸ್ಥೆ (ಎನ್‌ಬಿಎಸ್‌ಎಸ್ ಆ್ಯಂಡ್ ಎಲ್‌ಯುಪಿ) ನಿರ್ದೇಶಕ ಎನ್.ಜಿ.ಪಾಟೀಲ್ ಅಭಿಪ್ರಾಯಪಟ್ಟರು.

ನಗರದಲ್ಲಿ ಮಣ್ಣು ಸರ್ವೇಕ್ಷಣೆ ಸಂಸ್ಥೆಯ ಸಹಯೋಗದೊಂದಿಗೆ ಮಂಗಳವಾರ ಆರಂಭವಾದ 3ನೇ ಅಂತರರಾಷ್ಟ್ರೀಯ ಮಣ್ಣು ವಿಜ್ಞಾನ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ಮಣ್ಣಿನ ಆರೋಗ್ಯದ ಸಂಶೋಧನೆಗೆ ಖಾಸಗಿಯವರು ಹಣ ತೊಡಗಿಸುವುದಿಲ್ಲ. ಸರ್ಕಾರದ ಅನುದಾನ ಕಡಿಮೆ ಇರುವಾಗ ಹೊಸ ತಂತ್ರಜ್ಞಾನಗಳ ಮೂಲಕ ಸಂಶೋಧನೆ ಮುಂದುವರಿಸುವುದು ಅತ್ಯವಶ್ಯ' ಎಂದರು.

ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್–ನೈಸರ್ಗಿಕ ಸಂಪನ್ಮೂಲ ನಿರ್ವಹಣೆ) ಉಪ ಮಹಾ ನಿರ್ದೇಶಕ ಸುರೇಶ್ ಚೌಧರಿ 'ದೇಶದಲ್ಲಿ ಹೆಚ್ಚು ಸಣ್ಣ ಹಿಡುವಳಿದಾರರಿದ್ದು, ಮಣ್ಣಿನ ಆರೋಗ್ಯ ರಕ್ಷಣೆ ಕುರಿತು ಕೇಂದ್ರ ಸರ್ಕಾರ ಹೆಚ್ಚು ಒತ್ತು ನೀಡುತ್ತಿದೆ' ಎಂದು ಹೇಳಿದರು.

ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ಮಹೇಶ ಶಿರೂರ ಮಾತನಾಡಿ, 'ರಿವಾರ್ಡ್ ಮತ್ತು ಸುಜಲಾ ಯೋಜನೆಗಳಡಿ ರಾಜ್ಯದ 45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಣ್ಣಿನ ಆರೋಗ್ಯದ ಮಾಹಿತಿಯನ್ನು ತಯಾರಿಸುತ್ತಿದ್ದೇವೆ. ಈ ವಿಷಯದಲ್ಲಿ ರಾಜ್ಯ ಮಾದರಿಯಾಗಿದೆ' ಎಂದರು.

ಅಂತರರಾಷ್ಟ್ರೀಯ ಮಣ್ಣು ವಿಜ್ಞಾನಗಳ ಒಕ್ಕೂಟದ ಅಧ್ಯಕ್ಷೆ ಪ್ರೊ.ಲೌರಾ ಪೊಗಿಯೊ ಮಾತನಾಡಿದರು. 'ಡಿಜಿಟಲ್ ಮಣ್ಣು ಸರ್ವೇಕ್ಷಣೆ ಮತ್ತು ಭೂ ಬಳಕೆ' ಕುರಿತು ವೈಜ್ಞಾನಿಕ ಬೆಳವಣಿಗೆಗಳನ್ನು ತಜ್ಞರು ವಿವರಿಸಿದರು. ಕೃತಕ ಬುದ್ಧಿಮತ್ತೆ, ಮಷಿನ್‌ಲರ್ನಿಂಗ್ ಲಾಂಗ್ವೇಜ್‌ನಂಥ ತಂತ್ರಜ್ಞಾನಗಳಿಂದ ಮಣ್ಣಿನ ಆರೋಗ್ಯದ ಮಾಹಿತಿ ಸಂಗ್ರಹಿಸಿ, ಇಲಾಖೆಗಳು ಮತ್ತು ರೈತರ ಜೊತೆ ಹೇಗೆ ಹಂಚಿಕೊಳ್ಳಬಹುದು ಎಂಬ ಪ್ರಬಂಧಗಳನ್ನು ಮಂಡಿಸಿದರು.



ಶಿವಕುಮಾರ ಸ್ವಾಮೀಜಿಯವರ ಪುತ್ಥಳಿಗೆ ಶಿವಕುಮಾರಸ್ವಾಮಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ವೆಂಕಟೇಶ್ ಗೌಡ, ಶಂಕರ ಬಿದರಿ, ಪ್ರಭುಚನ್ನಬಸವ ಸ್ವಾಮೀಜಿ, ಛಲವಾದಿ ನಾರಾಯಣಸ್ವಾಮಿ ಮಾಲಾರ್ಪಣೆ ಮಾಡಿದರು – ಪ್ರಜಾವಾಣಿ ಚಿತ್ರ

ಶಿವಕುಮಾರ ಸ್ವಾಮೀಜಿ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ ಅವರ ಜೀವನ ಸಮಾಜಕ್ಕೆ ಮಾದರಿ' ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಹೇಳಿದರು.

ನಗರದ ಶಿವಕುಮಾರಸ್ವಾಮಿ ಚಾರಿಟಬಲ್ ಟ್ರಸ್ಟ್ ಮಂಗಳವಾರ ಏರ್ಪಡಿಸಿದ್ದ 6ನೇ ವರ್ಷದ ಪುಣ್ಯ ಸಂಸ್ಮರಣೋತ್ಸವದಲ್ಲಿ ಅವರು ಮಾತನಾಡಿದರು.

'ಲಿಂಗಾಯತ ಸಮುದಾಯ ಮಾತ್ರವಲ್ಲದೇ ಎಲ್ಲಾ ಸಮುದಾಯದ ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ನೀಡಿ, ಉಚಿತ ಶಿಕ್ಷಣ ಮತ್ತು ವಸತಿ ಮೂಲಕ ಅವರ ಬದುಕನ್ನು ಹಸನು ಮಾಡಿದರು' ಎಂದರು.

'ಆಚಾರ, ವಿಚಾರ ಸಿದ್ಧಾಂತಗಳ ಮೂಲಕ ವಿಶ್ವದ ಗಮನ ಸೆಳೆದ ಸ್ವಾಮೀಜಿ ಅವರ ಆದರ್ಶ, ತತ್ವಗಳಿಂದ ನಾಡಿನಲ್ಲಿ ಶಾಂತಿ ನೆಲಸಲಿ' ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಸಿದ್ದಗಂಗಾ ಶ್ರೀ ಅವರು ಸಮಾಜಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಬೇಕು. ಮಠದಲ್ಲಿ ಓದಿದ ಅಸಂಖ್ಯಾತ ವಿದ್ಯಾರ್ಥಿಗಳು ಇಂದು ಸಮಾಜದಲ್ಲಿ ಉನ್ನತ ಹುದ್ದೆ ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದಾರೆ' ಎಂದರು.

ಸಾನ್ನಿಧ್ಯ ವಹಿಸಿದ್ದ ಅಥಣಿಯ ಮೋಟಗಿ ಮಠದ ಪ್ರಭುಚನ್ನಬಸವ ಸ್ವಾಮೀಜಿ, 'ಅನ್ನ, ಶಿಕ್ಷಣ, ಆಶ್ರಯದ ಮಹತ್ವಗಳನ್ನು ಸಾರಿದ ಸ್ವಾಮೀಜಿ, ಲೋಕಕಲ್ಯಾಣಕ್ಕಾಗಿ ಅವರ ಜೀವನವನ್ನು ಮುಡಿಪಾಗಿಟ್ಟರು. ಶಾಂತಿ, ಸೌಹಾರ್ದ, ಸಹೋದರತ್ವ ಮತ್ತು ಜೀವನವನ್ನು ಹೇಗೆ ಸಾಗಿಸಬೇಕು ಎಂಬುದನ್ನು ನಾಡಿನ ಜನರಿಗೆ ತೋರ್ಪಡಿಸಿದ ಮಹಾನ್ ಸಂತ' ಎಂದರು.

ವೀರಶೈವ–ಲಿಂಗಾಯತ ಮಹಾಸಭಾ ನಗರ ಘಟಕದ ಅಧ್ಯಕ್ಷ ಬಿ.ಆರ್. ನವೀನ್ ಕುಮಾರ್, ಟ್ರಸ್ಟ್ ಅಧ್ಯಕ್ಷ ಟಿ.ವೆಂಕಟೇಶ್ ಗೌಡ, ಉಪಾಧ್ಯಕ್ಷ ಕ್ರಾಂತಿರಾಜು, ಸಲಹೆಗಾರ ಪಾಲನೇತ್ರ, ಪ್ರಧಾನ ಕಾರ್ಯದರ್ಶಿ ಬಿ.ಎಂ. ಶಿವಕುಮಾರ್, ಖಜಾಂಚಿ ವಿಜಯ ಕುಮಾರ್, ಸಂಚಾಲಕರಾದ ಬಿ.ದೇವರಾಜು, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಹಾಜರಿದ್ದರು.

ಅತಿಥಿ ಉಪನ್ಯಾಸಕರ ಕೌನ್ಸೆಲಿಂಗ್ ಮುಂದೂಡಿಕೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸ್ಥಳ ಆಯ್ಕೆಗೆ ನಡೆಯಬೇಕಿದ್ದ ಕೌನ್ಸೆಲಿಂಗ್ ಅನ್ನು ಕಾಲೇಜು ಶಿಕ್ಷಣ ಇಲಾಖೆ ಮುಂದೂಡಿದೆ.

ಸಂಸ್ಕೃತ ಮತ್ತು ಚಿತ್ರಕಲಾ ಕಾಲೇಜುಗಳೂ ಸೇರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕಾಯಂ ಅಧ್ಯಾಪಕರಿಗೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರಕ್ಕೆ ಅನುಗುಣವಾಗಿ 2024-25ನೇ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಇದೇ ಜ. 2 ರಂದು ಅರ್ಜಿ ಆಹ್ವಾನಿಸಲಾಗಿತ್ತು. ವೇಳಾಪಟ್ಟಿಯಂತೆ ಪ್ರಕ್ರಿಯೆಗಳೂ ಆರಂಭವಾಗಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನೂ ಪ್ರಕಟಿಸಲಾಗಿತ್ತು. ಸ್ಥಳ ಆಯ್ಕೆಯ ಕೌನ್ಸೆಲಿಂಗ್ ಬಾಕಿ ಇತ್ತು. ಹೈಕೋರ್ಟ್ ಧಾರವಾಡ ಪೀಠ ನೀಡಿದ ತಡೆಯಾಜ್ಞೆ ಅನ್ವಯ ಕೌನ್ಸೆಲಿಂಗ್ ಮುಂದೂಡಲಾಗಿದೆ.

ಈಗಾಗಲೇ 2,4 ಹಾಗೂ 6ನೇ ಸೆಮಿಸ್ಟರ್ ತರಗತಿಗಳು ಆರಂಭವಾಗಿರುವ ಕಾರಣ ವಿದ್ಯಾರ್ಥಿಗಳ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ಹೈಕೋರ್ಟ್ ನಿರ್ದೇಶನದಂತೆ ಯುಜಿಸಿ ನಿಯಮಗಳ ಪ್ರಕಾರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಕಾಲೇಜು ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿತ್ತು. ಇದರಿಂದ ಯುಜಿಸಿ ಅರ್ಹತೆ ಪಡೆಯದ 5 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಅರ್ಜಿ ಸಲ್ಲಿಸಲು ಸಾಧ್ಯವಾಗಿರಲಿಲ್ಲ. ಅವಕಾಶ ವಂಚಿತರಾದ ಉಪನ್ಯಾಸಕರು ಕೋರ್ಟ್ ಮೊರೆ ಹೋಗಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ರಮಣಿ ಅಯ್ಯರ್, ಬಿನ್. ಟಿ.ವಿ. ಚಲಂ, ಮತ್ತು ಶ್ರೀಮತಿ ಶಿಲ್ಪಾ ರಮೇಶ್ ರಮಣಿ, ಕೋಂ ಶ್ರೀ ರಮಣಿ ಅಯ್ಯರ್, ವಿಳಾಸ: 10ಎ ಕ್ರೌನ್ ಜಿರಾ ಅಪಾರ್ಟ್‌ಮೆಂಟ್, ಜಕ್ಕೂರ್ ಪ್ಲಾಂಟೇಶನ್ ರಸ್ತೆ, ಬೆಂಗಳೂರು – 560 054 ("ಮಾಲೀಕರು"), ಅವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿ ಮಾಲೀಕರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತಿಗೆ ತಾವೇ ಮಾಲೀಕರೆಂದು ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿನ ಸಂಬಂಧವಾಗಿ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಆಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಮೇಲಿನ ವ್ಯವಹಾರದ ಬಗ್ಗೆ ಯಾವುದೇ ರೀತಿಯ ಆಕರ್ಷಣೆ/ಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಹದಿನಾಲ್ಕು (14)** ದಿನಗಳ ಒಳಗೆ ಬೆಂಬಲಾರ್ಥ ದಾಖಲೆಗಳೊಡನೆ ಈ ಕೆಳಕಂಡ ಸಹಿದಾರರಿಗೆ ಅವುಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಅದರ ಮಾಲೀಕರ ಹೊರತು ಬೇರೆ ಯಾವುದೇ ವ್ಯಕ್ತಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಯಾವುದೇ ಕ್ಲೇಮು/ಗಳು ಇದ್ದಲ್ಲಿ ಅವುಗಳನ್ನು ಉಪೇಕ್ಷಿಸಿರುತ್ತಾರೆ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಬಿಲ್ಲಮಾರನಹಳ್ಳಿ ಗ್ರಾಮದಲ್ಲಿ ವಾಸದ ಉಪಯೋಗಕ್ಕಾಗಿ ಪರಿವರ್ತಿಸಲಾದ ಸರ್ವೆ ನಂ. 22/3, 25/1, 25/2, 33/1, 33/2, 27/2, 32/1, 30/2, 28/2, 21/4, 32/2, 22/1, 22/2, 4/6, 26, 4/1, 4/5, 27/1, 27/4, 2/6, 28/1, 27/3, 27/5, 29/1, 29/2, 2/5, 31, 4/4, 2/3 ಮತ್ತು ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಹೊಸಹಳ್ಳಿ ಗ್ರಾಮದಲ್ಲಿ ವಾಸದ ಉಪಯೋಗಕ್ಕಾಗಿ ಪರಿವರ್ತಿಸಲಾದ ಸರ್ವೆ ನಂ. 14,12,13/1,13/2 ಒಟ್ಟು ವಿಸ್ತೀರ್ಣ 28 ಎಕರೆ 02.68 ಗುಂಟೆಯಲ್ಲಿರುವ "ಎಂಬಸ್ಸಿ ಬೌಲೆವಾರ್ಡ್" ಲೇಔಟ್‌ನ ವಿಲ್ಲಾ ಸಂಖ್ಯೆ 27, ಬಿಐಎಪಿಎ ನಿವೇಶನ ಸಂಖ್ಯೆ 92 ಮತ್ತು ಸ್ವತ್ತಿನ ಸಂಖ್ಯೆ 2600687141 (ಸ್ವತ್ತಿನ ಹಳೇ ಸಂಖ್ಯೆ 1142/92/92), ನಿವೇಶನದ ಅಳತೆ 13686.50 ಚದರ ಅಡಿ (1271.98 ಚದರ ಮೀಟರ್) ಮತ್ತು ವಿಲ್ಲಾದ ಸೂಪರ್ ಬಿಲ್ಟ್ ಅಪ್ ಪ್ರದೇಶದ 7310 ಚದರ ಅಡಿಗಳು, ಈ ವಿಲ್ಲಾ ಮತ್ತು ನಿವೇಶನದ ಚೆಕ್ಕುಬಂಧಿ ವಿವರ :

ಪೂರ್ವಕ್ಕೆ : ಬಿಐಎಪಿಎ ನಿವೇಶನ ಸಂಖ್ಯೆ 93, ವಿಲ್ಲಾ ಸಂಖ್ಯೆ 26 ಮತ್ತು ಹೊಸಹಳ್ಳಿ ಗಡಿ; **ಪಶ್ಚಿಮಕ್ಕೆ** : ಬಿಐಎಪಿಎ ನಿವೇಶನ ಸಂಖ್ಯೆ 91, ವಿಲ್ಲಾ ಸಂಖ್ಯೆ 28.
ಉತ್ತರಕ್ಕೆ : ದಾರಿ ಮತ್ತು ಉದ್ಯಾನವನ 7; ಮತ್ತು **ದಕ್ಷಿಣಕ್ಕೆ** : ರಸ್ತೆ.

ದಿನಾಂಕ : 22/01/2025

ಸಹಿ/– ಎನ್.ಕೆ. ದಿಲೀಪ್/ಎಸ್.ರಘುನಂದನ
ತತ್ವ ಲೀಗಲ್, ವಕೀಲರು, ಬೆಂಗಳೂರು
ಫೀನಿಕ್ಸ್ ಪಿನ್ನಾಕಲ್, 46, ಹಲಸೂರು ರಸ್ತೆ, ಬೆಂಗಳೂರು–560042.

PUBLIC NOTICE

My client have entered into a transactions to purchase the property which is described as C-schedule property which constitutes both A and B schedule properties to this notice and has already considerable amount and to enter into a Sale transactions to purchase the property from **N.M.Krishnamurthy.** Any person or persons having any right shall within 10 days submit their objections to the undersigned. In the event no objections are submitted for proceeding to complete the sale transactions my client will get the registered sale deed registered into his name the possession which is with Sri.N.M.Krishnamurthy will also be delivered on the date of execution of the registered sale deed.

SCHEDULE 'A' PROPERTY

All that piece and parcel of the Middle Portion of the residential site bearing BDA No.315 now Municipal Corporation No.315 New No.315/23 new No.315/23-2 situated at 6th Cross Road, Gokul 1st Stage, 1st Phase, Bengaluru City Corporation within the limits of BMP Ward No.3, Bengaluru measuring East to West on the Northern Side : 45-0 Feet on the Southern Side: 45 Feet and North to South on the Eastern side: 66 Feet on the Western Side: 66-0 Feet bounded on:

East by: Eastern portion of the property bearing No.315/23 belongs to Sri.M.Nagappan;
West by: Western portion of the property No.315/23 Sold to Sri.G.Srinivas;
North by: Property Nos.298, 299 & 300;
South by: Road;

SCHEDULE 'B' PROPERTY

All that piece and parcel of the Middle Portion of the residential site bearing BDA No.315 now Municipal Corporation No.315 New No.315/23 new No.315/23-1 situated at 6th Cross Road, Gokul 1st Stage, 1st Phase, Bengaluru City Corporation within the limits of BMP Ward No.3, Bengaluru measuring East to West on the Northern Side : 28 Feet on the Southern Side: 26-6 Feet and North to South on the Eastern side : 68 Feet on the Western Side: 66-0 Feet bounded on:

East by: Property No.314;
West by: Middle Portion of the property No.315/23/2 sold to Smt.N.Deivanai;
North by: Property Nos.298, 299 & 300;
South by: Road;

SCHEDULE 'C' PROPERTY
(SOLD IN FAVOUR OF VENDOR WHICH CONSTITUTE BOTH SCHEDULE 'A' AND 'B' PROPERTY)

Ali that piece and parcel of Middle portion of residential site bearing BDA No.315 now Municipal Corporation No.315/23 New No.315/23-2 and Eastern Portion of the Residential property bearing Municipal Corporation No.315/23 New No.315/23-1 both situated at 6th Cross Road, Gokul 1st Stage, 1st Phase, Bengaluru City Corporation within the limits of BMP Ward No.3, Yeshwanthpur New No.23/1 (Old No.315) PID No.3-39-23/1 New Ward No.17, J.P.Park, PID No.0/315/23/1, New E-swathu PID.No.2065267037 Bengaluru measuring East to West on the Northern Side : 73-0 (Seventy Three) Feet on the Southern Side : 71-6 (Seventy One Feet six inches) Feet and North to South on the Eastern side 68-0 (Sixty Eight) Feet on the Western Side 66-0 (Sixty Six) Feet in all measuring 4840.75 square feet with constructed building consisting of Ground Floor measuring 30 square feet, First Floor measuring 30 square feet and Second Floor measuring 25 square feet with basic amenities/Civic Amenities, Jungle woods with vitrified tiles bounded on:

East by: Property No.314;
West by: Portion of the property sold to Sri. G.Srinivas And then private property;
North by: Property Nos.298, 299 and 300;
South by: Road;

Sd/- V.B.SHIVAKUMAR
Advocate & Solicitor
VBS LAW INC.
No.230, First Floor, 4th Main Road, Chamrajpet,
BENGALURU-560 018

Date : 22.01.2025

On the Occasion of Wedding Presenting

Presents **Weaves** ವೀವ್ಸ್ INDIA

An exposition of handloom textiles

An opulent show of Ethnic & Traditional Silk, Cotton Handloom Products made by master 100 Weavers from all over India

Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk

SINDHOOR CONVENTION CENTER
15th Cross, Sarakki, 1st Phase, J.P. Nagar Ring Road, Near Metro Station, Bengaluru
From : 17th to 26th Jan. 2025

Products on Display - **Orissa** : Sambhalpuri Ikkat Silk Saree, **Bihar** : Oragnic Tassar Silk Sarees, Suit & Stoles, **Assam** : Muga & Eri Silk Sarees, **Karnataka** : Creap Silk, Georgette Silk, Arini Silk & Printed Sarees, **Tamilnadu** : Kanjeevaram Silk Sarees & Designer Fancy Sarees, **Andra Pradesh** : Dharmavara, Uppada, Gadwal, Mangalagiri & Pochampalli Sarees, **Uttar Pradesh** : Mulbari Silk, Jamdani, Jamawar Silk Sarees & Chiffon Silk, **Maharashtra** : Designer Dress materials, **Chhatisgarh** : Exclusive Raw Silk Sarees, Kosa Silk, Tassar Suit & Duppatta, **Madhya Pradesh** : Maheswari, Chanderi Silk Sarees & Suit, **West Bengal** : Baluchari, Dhaka Masli, Gicha Sarees, Boutique Sarees, Kantha Sarees, Zordoshi, **Jammu & Kashmir** : Chinon Silk, Tady Silk Printed Sarees, Pashmina Shawls & Suit, **Rajasthan** : Kota Silk, Hand Block Print Dress & Sarees, Punjab : Fulkari Dress and many more...

Time : 10.30 am - 8.30 pm Call: 08850902824 **Entry & Parking Free**
All Credit & Debit Cards Accepted

ಉದ್ಯೋಗ ವಾಣಿ

Geetha Shishu Shikshana Sangha (R)
GSSS School of Architecture for Women
KRS Road, Metagalli, Mysuru – 570016
(Approved by COA, New Delhi, Affiliated to VTU, Belagavi)

APPOINTMENT NOTIFICATION

Position	Required for	Subjects / Experience
Professor	School of Architecture	for Architecture, Structures & Arts
Asst. Professor	School of Architecture	for Architecture, Structures & Arts

- **Salary: Based on credentials & experience.**
- **Free staff quarters will be provided for the post of Professor.**
- Application with latest colour photo and copies of qualification and experience must be sent on or before **03-02-2025** to: **The Secretary, GSSS(R), KRS Road, Metagalli, Mysuru - 570 016.**

Dr. M. Jagannatha Shenoi, President | www.geethashishu.in | Smt. Anupama B. Pandit, Secretary

GSSS GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

APPOINTMENT NOTIFICATION

Position	Department	Qual.&Exp.
Associate Professor	CSE | ISE | AI-ML | AI-DS | MBA (Specialization - Finance)	As per AICTE Norms
Assistant Professor	ECE | CSE | AI-ML | AI-DS | ISE | Maths Mechanical | Physics | Chemistry | MBA (Specialization-Finance & Business Analytics)	

NON - TEACHING

Position	Dept.	Qualification & Experience
Asst. Lab Instructor	CSE (AI-ML), AI-DS, ISE & ECE	Diploma in CSE / ISE / ECE or B.Sc - CS / IT. Experience in Engineering College preferred
Asst. Lab Instructor	Physics	B.Sc in PCM
Supervisor	Girls Hostel	Suitable Qualification & Experience
Asst. to Warden		
STP Operator		
Attender		

- **Salary: Based on credentials & experience.**
- **Free staff quarters will be provided for the post of Asso. Prof.**
- Application with latest colour photo and copies of qualification and experience must be sent on or before **03-02-2025** to: **The Secretary, GSSS(R), KRS Road, Metagalli, Mysuru - 570 016.**

Dr. M. Jagannatha Shenoi, President | www.geethashishu.in | Smt. Anupama B. Pandit, Secretary

ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ವಿದ್ಯಾಸಂಸ್ಥೆ (ರಿ), ನಾಯಕನಹಟ್ಟಿ.

ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ

ಅನುದಾನಿತ ಹುದ್ದೆಗಳ ಪ್ರಕಟಣೆ

ಸರ್ಕಾರಿ ಆದೇಶ ಸಂಖ್ಯೆ: ಡಿಪಿಯುಇ–ಇಎಸ್‌ಟಿ30ಜಿಜಿ(ಎಲ್‌ಪಿಎ)/6/2023–ಪಿಎಲ್‌ಸಿವೈ ದಿನಾಂಕ: 22.10.2024ರಂತೆ ನಮ್ಮ ಸಂಸ್ಥೆಯ ಅನುದಾನಿತ ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಇತಿಹಾಸ ಹಾಗೂ ಕನ್ನಡ ಉಪನ್ಯಾಸಕರ ಹುದ್ದೆಗಳಿಗೆ ಬ್ಯಾಕ್‌ಲಾಗ್ ನಿಯಮಗಳ ಅಡಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಗಳ ವಿವರ	ವಿದ್ಯಾರ್ಹತೆ	ಮೀಸಲಾತಿ	ವಯೋಮಿತಿ
1	ಇತಿಹಾಸ	ಎಂ.ಎ, ಬಿ.ಇಡಿ.	ಪರಿಶಿಷ್ಟ ಪಂಗಡ	45ವರ್ಷ
2	ಕನ್ನಡ	ಎಂ.ಎ, ಬಿ.ಇಡಿ.	ಪರಿಶಿಷ್ಟ ಜಾತಿ	45ವರ್ಷ

ಅಭ್ಯರ್ಥಿಗಳ ವಯಸ್ಸು ವೇತನ ವಿದ್ಯಾರ್ಹತೆ ಮತ್ತು ಇತರೆ ಕರಾರುಗಳು ಕರ್ನಾಟಕ ಸರ್ಕಾರ ನಿಯಮಗಳ ಅನ್ವಯ ಇರುತ್ತವೆ. ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ ಮತ್ತು ಇತರೆ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯನ್ನು ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗಾಗಿ ರೂ.1000 ಮೊತ್ತದ ಡಿಡಿಯನ್ನು ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ವಿದ್ಯಾ ಸಂಸ್ಥೆ (ರಿ), ಕೆನರಾ ಬ್ಯಾಂಕ್ ಶಾಖೆ, ನಾಯಕನಹಟ್ಟಿ ಇವರ ಹೆಸರಿನಲ್ಲಿ ತೆಗೆದು ಕಾರ್ಯದರ್ಶಿ ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ವಿದ್ಯಾಸಂಸ್ಥೆ (ರಿ) ನಾಯಕನಹಟ್ಟಿ ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ–577536 ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಚಿತ್ರದುರ್ಗ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆವರಣ ಚಿತ್ರದುರ್ಗ 577501 ಇವರ ವಿಳಾಸಕ್ಕೆ ಸಲ್ಲಿಸಬೇಕು.

ಸ್ಥಳ: ನಾಯಕನಹಟ್ಟಿ
ದಿನಾಂಕ: 20.01.2025

ಸಹಿ/– ಕಾರ್ಯದರ್ಶಿ, ಶ್ರೀ ತಿಪ್ಪೇರುದ್ರಸ್ವಾಮಿ ಗ್ರಾಮೀಣ ವಿದ್ಯಾಸಂಸ್ಥೆ (ರಿ), ನಾಯಕನಹಟ್ಟಿ.

GSSS GEETHA SHISHU SHIKSHANA SANGHA (R)
SIMHA SUBBAMAHALAKSHMI FIRST GRADE COLLEGE
(Affiliated to UoM, Mysuru, Recognized by Govt. of Karnataka)
KRS Road, Metagalli, Mysuru - 570016

APPOINTMENT NOTIFICATION

Designation	Eligibility Criteria
ASSOCIATE PROFESSOR - BCA	Candidate with Ph.D in Core Subject, thorough knowledge about AICTE and NAAC norms, having 10 years of teaching and administration experience preferred
ASSISTANT PROFESSOR - B.Com, BBA & BCA	Candidate with min. 5 years of experience with NET / KSET and pursuing Ph.D preferred
ASSISTANT PROFESSOR - English, Sanskrit & Hindi	Candidate with min. 5 years of experience with NET/KSET and pursuing Ph.D preferred
ASST. LAB INSTRUCTOR - BCA	Candidate with min. 2 years of experience with Diploma in CS / B.Sc - CS / BCA.

1. Fluency in English is mandatory for all the posts
2. Salary is not a constraint for the right candidate.
3. Free staff quarters will be provided for the post of Asso. Prof.
4. Application with latest colour photo and copies of qualification and experience must be sent on or before **03-02-2025** to: **The Secretary, GSSS(R), KRS Road, Metagalli, Mysuru - 570 016.**

Dr. M. Jagannatha Shenoi, President | Smt. Anupama B. Pandit, Secretary





ಚಂದ್ರನಿಗೆ ಈಗ ವಯಸ್ಸು ಎಷ್ಟು?

ಎಸ್. ಎನ್. ಹೆಗಡೆ

ಭೂಮಿಯ ನೈಸರ್ಗಿಕ ಉಪಗ್ರಹ ಚಂದ್ರ. ಬಾಹ್ಯಾಕಾಶ ಸಂಶೋಧನೆ ಆರಂಭವಾದಾಗಿನಿಂದ ಚಂದ್ರನ ಹುಟ್ಟನ್ನು ಕೆಲವು ಸಿದ್ಧಾಂತಗಳ ಮೂಲಕ ಪ್ರತಿಪಾದಿಸಲಾಯಿತು. ಭೂಮಿ ಮತ್ತು ಚಂದ್ರ – ಎರಡೂ ಒಂದೇ ಪ್ರಕ್ರಿಯೆಯ ಮೂಲಕ ಹುಟ್ಟಿದ್ದು ಎನ್ನುತ್ತದೆ ಒಂದು ಸಿದ್ಧಾಂತ. ಇವೆರಡೂ ಅನಿಲ ಹಾಗೂ ದೂಳಿನ ಕಣಗಳಿಂದ ಕೂಡಿದ ಒಂದೇ ಬಗೆಯ ವಸ್ತುಗಳ ಘನೀಕರಣದಿಂದ ರೂಪುಗೊಂಡವು. ಅಂದರೆ ಭೂಮಿ ಮತ್ತು ಚಂದ್ರ ಎರಡೂ ಗ್ರಹಗಳ ವಯಸ್ಸು ಒಂದೇ!

ಅಪೊಲೊ ಹಾಗೂ ಅನಂತರದ ಬಾಹ್ಯಾಕಾಶ ಯಾನಗಳು ಸಂಗ್ರಹಿಸಿದ ಮಾಹಿತಿಗಳು ಚಂದ್ರ ಮತ್ತು ಭೂಗ್ರಹದ ರಾಸಾಯನಿಕ ಸಂಯೋಜನೆಗಳು ಭಿನ್ನವಾಗಿವೆ ಎಂದು ತೋರಿಸಿದವು. ಎರಡೂ ಒಂದೇ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದರೆ ಅವು ಹೇಗೆ ಭಿನ್ನತೆಯನ್ನು ಪಡೆದವು? ಭೂಮಿ ಹೇಗೆ ಚಂದ್ರನಿಗಿಂತ ಹೆಚ್ಚು ಗುರುತ್ವಾಕರ್ಷಣೆ ಪಡೆಯಿತು? ಈ ಪ್ರಶ್ನೆಗಳಿಗೆ ಉತ್ತರವಿರಲಿಲ್ಲ. ಅದರಿಂದ ಈ ಸಿದ್ಧಾಂತವನ್ನು ತಿರಸ್ಕರಿಸಲಾಯಿತು.

ಚಂದ್ರನ ಉಗಮದ ಕುರಿತ ಇನ್ನೊಂದು ವಿದಳನ ಸಿದ್ಧಾಂತ. ಇದರ ಪ್ರಕಾರ ಚಂದ್ರ ಒಮ್ಮೆ ಭೂಮಿಯ ಭಾಗವಾಗಿತ್ತು. ಸುತ್ತುತ್ತಿರುವ ಭೂಮಿಯ ವೇಗದಿಂದಾಗಿ ಒಂದು ಭಾಗ ಸಿಡಿದು ಭೂಮಿಯಿಂದ ಬಾಹ್ಯಾಕಾಶಕ್ಕೆ ಹೊರಬಂತು. ಭೂಮಿ ಮತ್ತು ಚಂದ್ರಗ್ರಹಗಳ ಸಂಯೋಜನೆಯ ವ್ಯತ್ಯಾಸ ಹಾಗೂ ಭೂಮಿಯ ಸುತ್ತ ಚಂದ್ರನ ಕಕ್ಷೆ ಹೇಗೆ ನಿರ್ಮಾಣವಾಯಿತು ಎಂದು ವಿವರಣೆ ನೀಡಲು ವಿದಳನ ಸಿದ್ಧಾಂತವು ವಿಫಲವಾಗಿದೆ. 'ಸಹ-ಸಮೂಹ ಕಲ್ಪನೆ', 'ಕ್ಯಾಪ್ಚರ್ ಸಿದ್ಧಾಂತ' ಎಂಬ ಸಿದ್ಧಾಂತಗಳು ಇವೆಯಾದರೂ, ಅವನ್ನು ಒಪ್ಪಲು ಸೂಕ್ತ ಪುರಾವೆಗಳಿಲ್ಲ.

'ದೈತ್ಯ ಪ್ರಭಾವ' (ಜಯಂಟ್ ಇಂಪ್ಯಾಕ್ಟ್ ಹೈಪಾಥಿಸಿಸ್) ಎಂಬುದು ಇನ್ನೊಂದು ಸಿದ್ಧಾಂತ. ಇದರ ಪ್ರಕಾರ, 450 ಕೋಟಿ ವರ್ಷಗಳ ಹಿಂದೆ ಚಂದ್ರ, ಭೂಮಿ ಮತ್ತು ಮಂಗಳ ಗ್ರಹಗಳ ನಡುವಿನ ಬೃಹತ್ ಘರ್ಷಣೆಯ ಪರಿಣಾಮವಾಗಿ ರೂಪುಗೊಂಡಿತು. ಹೀಗೆ ಘರ್ಷಣೆಯುಂಟಾದ ಗ್ರಹಗಳ ಹೊರಭಾಗಗಳು ಕೂಡಿ ಘನೀಕರಣಗೊಂಡು ಚಂದ್ರನ ಉಗಮವಾಯಿತಂತೆ. ಭೂಮಿಯ ತಿರುಳಿನಲ್ಲಿ ಕಬ್ಬಿಣದ ಪ್ರಮಾಣ ಹೆಚ್ಚಿದ್ದು, ಅದಕ್ಕೆ ಹೋಲಿಸಿದರೆ ಚಂದ್ರನ ತಿರುಳಿನಲ್ಲಿ ಕಬ್ಬಿಣದ ಅಂಶ ಕಡಿಮೆ. ಚಂದ್ರನ ಸೃಷ್ಟಿಯಾದಾಗ ಭೂಮಿಯ ಹೊರಪದರಗಳು ಮಾತ್ರ ಕೂಡಿದ್ದರಿಂದ ಚಂದ್ರನ ತಿರುಳಿನಲ್ಲಿ ಕಡಿಮೆ ಕಬ್ಬಿಣ ಸಂಗ್ರಹವಾಗಿದೆ. ಭೂಮಿ ಮತ್ತು ಚಂದ್ರನ ಗುರುತ್ವಾಕರ್ಷಣೆಯ ವ್ಯತ್ಯಾಸಕ್ಕೆ ಇದೇ ಕಾರಣ. ಭೂಮಿಯ ಗುರುತ್ವಾಕರ್ಷಣೆ ಚಂದ್ರನಿಗಿಂತ ಆರು ಪಟ್ಟು ಹೆಚ್ಚಿರುತ್ತದೆ. ಗುರುತ್ವಾಕರ್ಷಣೆಯ ವ್ಯತ್ಯಾಸದಿಂದಾಗಿಯೇ ಚಂದ್ರ, ಭೂಮಿಯ ಸುತ್ತ ತನ್ನದೇ ಕಕ್ಷೆಯಲ್ಲಿ ಸುತ್ತುತ್ತಿರುತ್ತದೆ. ಅಪೊಲೊ ಗಗನಯಾತ್ರಿಗಳು ತಂದ ಚಂದ್ರನ ಬಂಡೆಗಳ ವಿಶ್ಲೇಷಣೆಯು ಅವು ಭೂಮಿಯ ಹೊರಕವಚವನ್ನು ಹೋಲುತ್ತವೆ ಎಂದು ತೋರಿಸಿದೆ. ಇದು ದೈತ್ಯ ಪ್ರಭಾವ ಸಿದ್ಧಾಂತಕ್ಕೆ ಪ್ರಬಲವಾದ ಪುರಾವೆ ನೀಡುತ್ತವೆ. ಅದರಿಂದ ಬಹುತೇಕ ವಿಜ್ಞಾನಿಗಳು ಈ ಸಿದ್ಧಾಂತವನ್ನು ಒಪ್ಪುತ್ತಾರೆ.

ಆ ಕಾಲದ ಘರ್ಷಣೆಯನ್ನು 'ಇಂಪ್ಯಾಕ್ಟರ್' ಎಂದೂ, ಇದರಿಂದ ಉದ್ಭವಿಸಿದ ಆಕಾಶಕಾಯವನ್ನು 'ಥಿಯಾ' ಎಂದು ಹೆಸರಿಸಲಾಯಿತು. ಈ ಸಿದ್ಧಾಂತದ ಪ್ರಕಾರ ಚಂದ್ರನ ವಯಸ್ಸು 450 ಕೋಟಿ ವರ್ಷಗಳು.

ಇತ್ತೀಚಿನ ಚಂದ್ರಯಾನದಿಂದ ದೊರೆತ ಕಂಪ್ಯೂಟರ್ ಅನುಕರಣಗಳು ('ಸಿಮುಲೇಷನ್'ಗಳು) ಹೊಸದಾಗಿ ಉಗಮವಾದ ಚಂದ್ರನ ಮೇಲಿನ ಶಿಲಾಖಂಡಗಳು ಘರ್ಷಣೆಯಲ್ಲಿ ಉಂಟಾದ ಶಾಖದ ಪರಿಣಾಮವಾಗಿ ಬಿಸಿಯಾಗಿ ಕರಗಿದವು ಹಾಗೂ ಅವುಗಳ ಕೆಲವು ಶೇಷಗಳು ಚಂದ್ರನ ತಿರುಳಿನ ಕಡೆಗೆ ಸಾಗಿದವು ಎಂದು ತೋರಿಸುತ್ತವೆ. ಈ ಶಿಲಾಖಂಡಗಳಲ್ಲಿ ಕಡಿಮೆ ಕಬ್ಬಿಣದ ಅಂಶವಿದ್ದುದರಿಂದ ಚಂದ್ರನ ತಿರುಳಿನಲ್ಲಿ ಕಡಿಮೆ ಕಬ್ಬಿಣದ ಅಂಶದ ಇರುವಿಕೆಗೆ ಕಾರಣ ಎನ್ನುತ್ತವೆ, ಈ ಕಂಪ್ಯೂಟರ್ ಅನುಕರಣಗಳು.

ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ ಭೂಮಿ ಮತ್ತು ಗ್ರಹವಿಜ್ಞಾನ ವಿಭಾಗದ ಫ್ರಾನ್ಸಿಸ್ ನಿಮ್ಮೊ ಮತ್ತು ಸಂಗಡಿಗರು ಇತ್ತೀಚಿಗೆ 'ನೇಚರ್' ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನದಲ್ಲಿ ಚಂದ್ರನ ಹುಟ್ಟಿನ ಬಗ್ಗೆ ಇನ್ನಷ್ಟು ದಾಖಲೆಗಳನ್ನು ನೀಡಿದ್ದಾರೆ. ಈ ತಂಡವು ದೈತ್ಯ ಪ್ರಭಾವ ಸಿದ್ಧಾಂತವನ್ನು ಅನುಮೋದಿಸುತ್ತದೆ. ಇತ್ತೀಚಿನ ಚಂದ್ರಯಾನಗಳಲ್ಲಿ ಚಂದ್ರನ ಶಿಲಾಪಾಕಸಾಗರದಿಂದ (Lunar Molten Ocean) ಸಂಗ್ರಹಿಸಿದ ಬಂಡೆಗಳ ಆಯಸ್ಸನ್ನು 'ಡೇಟಿಂಗ್' ಎಂಬ ತಂತ್ರದಿಂದ ಚಂದ್ರನ ವಯಸ್ಸನ್ನು ಊಹಿಸಿದ್ದಾರೆ. ಈ ಅಧ್ಯಯನವು ದೈತ್ಯ ಪ್ರಭಾವ ಸಿದ್ಧಾಂತವನ್ನು ಒಪ್ಪುವುದರ ಜೊತೆಗೆ ಚಂದ್ರಗ್ರಹವು ಸುಮಾರು 430–450 ಕೋಟಿ ವರ್ಷಗಳ ನಡುವೆ ಉದ್ಭವವಾಯಿತು ಎಂದೂ ತೋರಿಸಿದೆ. ಫ್ರಾನ್ಸಿಸ್ ನಿಮ್ಮೊ ಮತ್ತು ಸಂಗಡಿಗರ ಪ್ರಕಾರ, ಭೂಮಿ 460 ಕೋಟಿ ವರ್ಷಗಳ ಹಿಂದೆ ಉದ್ಭವವಾಯಿತು, ಚಂದ್ರನು ಭೂಮಿಯ ಉಗಮದ ಸುಮಾರು ಹದಿನೈದು ದಶಲಕ್ಷ ವರ್ಷಗಳ ನಂತರ ಉದ್ಭವವಾಯಿತು. ಎಂದರೆ ಚಂದ್ರನು ಭೂಮಿಯ ಸಹೋದರ ಎಂದಾಯಿತು.

ವಂಚಕರ ಜಾಲಕ್ಕೆ ದಾರಿಯಾದೀತು ಅಪರಿಚಿತ ಕರೆ

ಅವಿನಾಶ್ ಬಿ.

'ನನಗೂ ಅಮೆರಿಕ, ನೈಜೀರಿಯಾ ಅಥವಾ ಯುಕೆಯಿಂದ ಕರೆ ಬಂದಿದೆ' ಎಂದು ಕೆಲವರು ಹೇಳಿಕೊಳ್ಳುತ್ತಿರುವುದನ್ನು ಕೇಳಿದ್ದಿರಬಹುದು. ಅಥವಾ ನಿಮಗೂ ಅಂತರರಾಷ್ಟ್ರೀಯ, ಎಂದರೆ ವಿದೇಶಗಳಿಂದ ಕರೆಗಳು ಬಂದಿರಬಹುದು. ಇತ್ತೀಚಿನ ದಿನಗಳಲ್ಲಿ ಇಂಥ ಕರೆಗಳ ಸಂಖ್ಯೆ ತುಸು ಹೆಚ್ಚೇ ಆಗಿದೆ. ಇವೆಲ್ಲವೂ ತಂತ್ರಜ್ಞಾನದ ಪ್ರಗತಿಯೊಂದಿಗೆ ಹೆಚ್ಚುತ್ತಿರುವ ವಂಚಕರ ಜಾಲದ ಕರಾಮತ್ತುಗಳ ಫಲಿತಾಂಶ.

ಕರೆ ಮಾಡಿ ಡಿಜಿಟಲ್ ಅರೆಸ್ಟ್‌ಗೆ (ಅಂದ್ರೆ ಕುಳಿತಲ್ಲೇ ಕಾಲ್ಪನಿಕ ಬಂಧನದಲ್ಲಿರಿಸುವುದು) ಒಳಪಡಿಸಿ ಹಣ ಸುಲಿಗೆ ಮಾಡುವ ವಂಚಕರಿಂದಾಗಿ ದೇಶದಾದ್ಯಂತ ವಿದ್ಯಾವಂತರು ಕೂಡ ಕೋಟಿ ಕೋಟಿ ಹಣವನ್ನು ಕಳೆದುಕೊಂಡ ಅದೆಷ್ಟೋ ವರದಿಗಳನ್ನು ನಾವೆಲ್ಲ ಓದಿದ್ದೇವೆ. ನಮ್ಮ ಬ್ಯಾಂಕ್ ಖಾತೆಗಳು ಅಥವಾ ಸೋಷಿಯಲ್ ಮೀಡಿಯಾ (ಆನ್‌ಲೈನ್ ಸಾಮಾಜಿಕ ಮಾಧ್ಯಮ) ಖಾತೆಗಳನ್ನು ವಶಪಡಿಸಿಕೊಂಡು, ಇಲ್ಲವೇ ನಕಲಿ ಪ್ರೊಫೈಲ್ ಸೃಷ್ಟಿಸಿ 'ಫ್ರೆಂಡ್ ರಿಕ್ವೆಸ್ಟ್' ಕಳುಹಿಸಿ, ದುಡ್ಡು ಪೀಕಿಸುವ ತಂತ್ರಗಳೂ ಹೆಚ್ಚಾಗತೊಡಗಿವೆ.

ತಂತ್ರಜ್ಞಾನದ ಬಗೆಗೆ ಅರಿವಿಲ್ಲದಿರುವ ಅಥವಾ ಅವಿದ್ಯಾವಂತರಲ್ಲಿ ಹಿರಿಯರು ಅಥವಾ ಮಕ್ಕಳು ಈ ಜಾಲಕ್ಕೆ ಬಲಿಬೀಳುವುದು ಸಾಮಾನ್ಯ. ಆದರೆ ವಿದ್ಯಾವಂತರೆನಿಸಿಕೊಂಡವರೂ ಹೆಚ್ಚು ಹಣದ ಗಳಿಸುವ ಆಮಿಷಕ್ಕೆ ಒಳಗಾಗಿ ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ.

ಇವೆಲ್ಲದಕ್ಕೆ ಮೂಲಕಾರಣ, ನಮ್ಮ ಕೈಯಲ್ಲಿರುವ ಪುಟ್ಟ ಸಾಧನ ಮೊಬೈಲ್ ಫೋನ್. ಅದರ ಸಿಮ್ ಕಾರ್ಡ್‌ಗೆ ಅಂಟಿಕೊಂಡಿರುವ ಫೋನ್ ಸಂಖ್ಯೆ ಎಲ್ಲ ಕೆಲಸ-ಕಾರ್ಯಗಳಿಗೂ ಅತ್ಯಗತ್ಯವಾಗಿರುವುದರಿಂದ ಮತ್ತು ಅದು ಸುಲಭವಾಗಿಯೇ ಬೇರೆಯವರಿಗೂ ತಿಳಿಯುತ್ತಿರುವುದರಿಂದ (ನಾವೇ ಸೋಷಿಯಲ್ ಮೀಡಿಯಾಗಳಲ್ಲಿ, ಟ್ರೂಕಾಲರ್ ಮೂಲಕ ನಮಗೆ ತಿಳಿಯದಂತೆಯೇ ಹಂಚಿಕೊಂಡಿರುತ್ತೇವೆ) ವಂಚಕರು ಇದನ್ನು ತಮ್ಮ ಕುತಂತ್ರಗಳಿಗೆ 'ಸದ್ಬಳಕೆ' ಮಾಡಿಕೊಳ್ಳುತ್ತಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ, ಮೊಬೈಲ್ ಫೋನ್ ಕರೆಗಳು ಅಥವಾ ಎಸ್‌ಎಂಎಸ್ ಮೂಲಕ ನಾವು ವಂಚನೆಗೀಡಾಗುವುದನ್ನು ತಪ್ಪಿಸುವ ಬಗೆ ಹೇಗೆ? ಒಂದಿಷ್ಟು ಮುನ್ನೆಚ್ಚರಿಕೆಗಳನ್ನು ಪಾಲಿಸಿದರೆ ನಾವು ವಂಚನೆಗೀಡಾಗುವ ಸಾಧ್ಯತೆಗಳು ಕಡಿಮೆಯಾಗಬಹುದು.

ನಮ್ಮ ದೇಶದೊಳಗಿಂದ ಬರುವ ಬಂಧುಮಿತ್ರರ ಕರೆಗಳ ಸಂಖ್ಯೆಯು '+91' ಎಂಬ ಕೋಡ್‌ನಿಂದ ಆರಂಭವಾಗುತ್ತದೆ. ಇದಕ್ಕೆ ಹೊರತಾಗಿದ್ದರೆ ಅದು ವಿದೇಶದಿಂದ ಬಂದ ಕರೆ ಎಂಬುದು ಸ್ಪಷ್ಟ. ಆರಂಭದಲ್ಲಿ +92 ಇದ್ದರೆ ಪಾಕಿಸ್ತಾನ, +234 ಇದ್ದರೆ ನೈಜೀರಿಯಾ, +62 ಇದ್ದರೆ ಇಂಡೋನೇಷ್ಯಾ, +84 ಇದ್ದರೆ ವಿಯೆಟ್ನಾಂ... ಹೀಗೆ.

ಈ ದೇಶಗಳಿಂದ 'ಇ-ಸಿಮ್' (ಎಲೆಕ್ಟ್ರಾನಿಕ್ ಸಿಮ್) ಅನ್ನು ಭಾರತೀಯರು ಕುಳಿತಲ್ಲೇ ಪಡೆದುಕೊಳ್ಳಬಹುದು ಎಂಬುದೇ ಈ ಪರಿಯ ಅಂತರರಾಷ್ಟ್ರೀಯ ಕರೆಗಳು ಹೆಚ್ಚಾಗಲು ಪ್ರಮುಖ ಕಾರಣ. ಆನ್‌ಲೈನ್ ತಾಣಗಳ ಮೂಲಕ ನೋಂದಾಯಿಸಿ ಸಿಮ್ ಖರೀದಿಸಬಹುದು. ಹೀಗಾಗಿ ವಿದೇಶಿಗರಷ್ಟೇ ಅಲ್ಲದೆ, ಭಾರತೀಯರು ಕೂಡ ವಿದೇಶಿ ಸಿಮ್ ಕಾರ್ಡ್ ಮೂಲಕ ಕರೆ ಮಾಡಿ, ಟೆಲಿಕಾಂ ಇಲಾಖೆ, ಬ್ಯಾಂಕು, ಕಸ್ಟಮ್ಸ್ ಇಲಾಖೆ, ಆದಾಯ ತೆರಿಗೆ ಇಲಾಖೆಯ 'ಅಧಿಕಾರಿ' ಮಾತನಾಡುವುದು ಎಂದೆಲ್ಲ ಬೆದರಿಸಿ, ಸುಲಿಗೆಗೆ ತೊಡಗಬಹುದು.

ಹೀಗಾಗಿ ಅಂತರರಾಷ್ಟ್ರೀಯ ಕರೆಗಳನ್ನು ನಿರ್ಲಕ್ಷಿಸಬೇಕು. (ಹೆಸರು ಸೇವ್ ಮಾಡಿಕೊಂಡಿರುವ ಬಂಧು-ಮಿತ್ರರ ಕರೆಗಳ ಹೊರತಾಗಿ).



ಇನ್ನು ಕೆಲವು ವಂಚಕರು 'ಮಿಸ್ಡ್ ಕಾಲ್' ನೀಡಿ, ನಿಮ್ಮ 'ಕುತೂಹಲ'ವನ್ನು ಹೆಚ್ಚಿಸಿ ಆಮಿಷವೊಡ್ಡಬಹುದು. ನಂಬರ್ ಸರಿಯಾಗಿ ನೋಡದೆ ನೀವು ಕರೆ ಮಾಡಿದರೆ, ಅವರು ತಮ್ಮ ಕೆಲಸವನ್ನು ಶುರು ಹಚ್ಚಿಕೊಳ್ಳಬಹುದು. ಕೊರಿಯರ್ ಕಂಪೆನಿಯ ಹೆಸರನ್ನು ಹೇಳಿ ಪಾರ್ಸೆಲ್ ಬಂದಿದೆ ಅಂತಲೋ ಅಥವಾ ಯಾವುದೋ ಕಂಪೆನಿಯ ಹೆಸರು ಹೇಳಿಕೊಂಡು ಉದ್ಯೋಗದ ಆಮಿಷವನ್ನು ಒಡ್ಡಬಹುದು. ಇಂಥ ಸಂದರ್ಭಗಳಲ್ಲಿ, ಕರೆ ಸ್ವೀಕರಿಸದಿರುವುದು ಮತ್ತು ಮರಳಿ ಕರೆ ಮಾಡದಿರುವುದೇ ಸೂಕ್ತ. ವಿದೇಶಕ್ಕೆ ಕರೆ ಮಾಡಿದರೆ ಹೆಚ್ಚುವರಿ ಶುಲ್ಕ ತಗುಲುತ್ತದೆ ಎಂಬುದೂ ಗಮನದಲ್ಲಿರಲಿ.

ಇಂಥ ಕರೆಗಳು ಬಂದರೆ, ಅದೇ ಸಂಖ್ಯೆಯಿಂದ ಮತ್ತೊಮ್ಮೆ ಕರೆ ಬಾರದಂತೆ ಬ್ಲಾಕ್ ಮಾಡಿ, ಟೆಲಿಕಾಂ ಇಲಾಖೆ ಅಥವಾ ಸೈಬರ್ ಕ್ರೈಮ್ ವಿಭಾಗಕ್ಕೆ ವರದಿ ಮಾಡಬೇಕು. ಕೆಲವು ಅಂತರರಾಷ್ಟ್ರೀಯ ಕರೆಗಳು ವಾಟ್ಸ್‌ಆ್ಯಪ್ ಮೂಲಕವೂ ಬಂದಿರಬಹುದು. ಅವುಗಳನ್ನೂ ಬ್ಲಾಕ್ ಮಾಡುವ ಆಯ್ಕೆಯಿದೆ.

ಎಲ್ಲ ಟೆಲಿಕಾಂ ಸೇವಾದಾರರು 'DND', ಎಂದರೆ 'ಡು ನಾಟ್ ಡಿಸ್ಟರ್ಬ್' (ಟೆಲಿಮಾರ್ಕೆಟಿಂಗ್ ಕಂಪನಿಗಳು ತೊಂದರೆ ಕೊಡಬಾರದು) ಎಂಬ ವೈಶಿಷ್ಟ್ಯವನ್ನು ನೀಡಿರುತ್ತಾರೆ. ಅದನ್ನು ಸಕ್ರಿಯಗೊಳಿಸಿಕೊಳ್ಳಿ. ಇದರಿಂದ ಮಾರಾಟ, ಪ್ರಚಾರಕ್ಕೆ ಸಂಬಂಧಿಸಿದ ಬಹುತೇಕ ಸ್ಪ್ಯಾಮ್ ಕರೆಗಳನ್ನು ನಿಯಂತ್ರಿಸಬಹುದು.

ಇದರ ಜೊತೆಗೆ, ಆ್ಯಂಡ್ರಾಯ್ಡ್ ಬಳಕೆದಾರರಿಗೆ ಟ್ರೂಕಾಲರ್, ಹೂಸ್ ಕಾಲ್ (WhosCall), ಶೋಕಾಲರ್, ಹಿಯಾ ಮುಂತಾದ ಕಾಲರ್ ಐಡಿ (ಕರೆ ಮಾಡಿದವರ ಗುರುತನ್ನು ತಿಳಿಸುವ) ಆ್ಯಪ್‌ಗಳನ್ನು ಬಳಸಿದರೆ, ಒಳಬರುವ ಕರೆಗಳನ್ನು ನೋಡಿ, ಬ್ಲಾಕ್ ಮಾಡುವುದು ಸಾಧ್ಯ. ಆದರೆ, ಈ ಆ್ಯಪ್‌ಗಳು ನಿಮ್ಮ ಫೋನ್‌ನಲ್ಲಿರುವ ಕಾಂಟ್ಯಾಕ್ಟ್ ಲಿಸ್ಟ್‌ಗೆ ಪ್ರವೇಶಿಸಲು (ಆ್ಯಕ್ಸೆಸ್) ನೀವು ಅನುಮತಿ ನೀಡುವುದರಿಂದ, ಇತರರ ಸಂಖ್ಯೆಯನ್ನೂ ನೀವು ಈ ಆ್ಯಪ್‌ಗಳಿಗೆ ನೀಡುವಂತಾಗುತ್ತದೆ ಎಂಬುದು ನೆನಪಿರಲಿ. ನಾವು ಟ್ರೂಕಾಲರ್ ಮುಂತಾದ ಆ್ಯಪ್ ಬಳಸದೇ ಇದ್ದರೂ, ಬೇರೆಯವರು ನಮ್ಮ ಫೋನ್ ಸಂಖ್ಯೆಯನ್ನು ಅವರಿಗೆ ಕೊಟ್ಟಿರುವುದರಿಂದ, ನಮ್ಮ ಫೋನ್ ನಂಬರ್ ಕೂಡ ಸುಲಭವಾಗಿ ಅನ್ಯರಿಗೆ ದೊರೆಯುವಂತಾಗುತ್ತದೆ. ಇದು ತಂತ್ರಜ್ಞಾನದ ಮಿತಿಯೂ ಹೌದು.

ಈ ರೀತಿಯ ಕರೆಗಳನ್ನು ತಡೆಯಲು ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಸೂಕ್ತ ಕ್ರಮಗಳನ್ನು ಕೈಗೊಂಡರಷ್ಟೇ ಏನೂ ಅರಿಯದವರು ಸೈಬರ್ ವಂಚನೆಗೆ ಸುಲಭವಾಗಿ ಬಲಿಯಾಗುವುದನ್ನು ತಪ್ಪಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

19) ನರಕೋಶದ ಅಂದವಾದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



20) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:– ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. (i) ಕಡಿಮೆ ಕ್ರಿಯಾಪಟುತ್ವ ಹೊಂದಿರುವ ಲೋಹಗಳು (ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು ಮತ್ತು (iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು.

ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

21) ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯ ಬಗ್ಗೆ ಬರೆಯಿರಿ

ಉತ್ತರ:– ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟುಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು ಎಂಬ ಅರ್ಥವನ್ನು ಇದು ಉಂಟುಮಾಡುತ್ತದೆ.

ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ.

ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟುಮಾಡುತ್ತದೆ. ಹೀಗೆ ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲವೆಂಬುದು ನಿಶ್ಚಿತ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ. ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

22) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಓಮ್‌ನ ನಿಯಮಗಳನ್ನು ನಿರೂಪಿಸಿ (ಜೂನ್ 2019 ಪರೀಕ್ಷೆ)

2) ವಾಹಕ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವಿವರಿಸಿ

ಉತ್ತರ:– (1) ಓಮ್‌ನ ನಿಯಮ ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ. Vಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರಾನುಪಾತದಲ್ಲಿ ಇರುತ್ತದೆ

(2) ವಾಹಕದ ರೋಧವು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿಸಿದೆ

ಅ) ವಾಹಕದ ಉದ್ದ ಬ) ವಸ್ತುವಿನ ಪ್ರಾಕೃತಿಕ ಗುಣ

ಕ) ವಾಹಕದ ಅಡ್ಡ ಕೊಯ್ತ

ವಾಹಕದ ರೋಧವು ಅದರ ಉದ್ದಕ್ಕೆ ನೇರ ಅನುಪಾತದಲ್ಲಿರುತ್ತದೆ. ವಾಹಕದ ರೋಧವು ಅದರ ಅಡ್ಡ ಕೊಯ್ತಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ.

23) ಪ್ರಿಸ್‌ಬಯೋಪಿಯ ಕುರಿತು ಬರೆಯಿರಿ

ಉತ್ತರ:– ವಯಸ್ಸಾದಂತೆ ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ ಸಾಮಾನ್ಯವಾಗಿ ಕಡಿಮೆಯಾಗುತ್ತದೆ. ಹೆಚ್ಚಿನ ಜನರಿಗೆ ಸಮೀಪ ಬಿಂದುವು ಕ್ರಮೇಣ ದೂರ ಸರಿಯುತ್ತದೆ. ಅಂತಹವರು ಹತ್ತಿರದ ವಸ್ತುಗಳನ್ನು ಆರಾಮದಾಯಕವಾಗಿ ಮತ್ತು ಸ್ಪಷ್ಟವಾಗಿ ಸರಿಪಡಿಸುವ ಕನ್ನಡಕವಿಲ್ಲದೆ ನೋಡಲು ಸಾಧ್ಯವಿಲ್ಲ. ಈ ದೋಷವನ್ನು ಪ್ರಿಸ್‌ಬಯೋಪಿಯ ಎನ್ನುತ್ತೇವೆ. ಈ ದೋಷವುಂಟಾಗಲು ಕಾರಣ ಮಸೂರವು ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುವುದು ಅಥವಾ ಕ್ರಮೇಣ ಸಿಲಿಯರಿ ಸ್ನಾಯುಗಳು ದುರ್ಬಲಗೊಳ್ಳುವುದು. ಕೆಲವೊಮ್ಮೆ ಕೆಲವರು ಸಮೀಪದೃಷ್ಟಿ ಮತ್ತು ದೂರದೃಷ್ಟಿ ಎರಡರಿಂದಲೂ ಬಳಲಬಹುದು. ಇಂತಹವರಿಗೆ ದ್ವಿಸಂಗಮ(bifocal) ಮಸೂರಗಳ ಅವಶ್ಯಕತೆಯಿದೆ.

ಸಾಮಾನ್ಯವಾಗಿ ದ್ವಿಸಂಗಮ ಮಸೂರಗಳು ನಿಮ್ನ ಮತ್ತು ಪೀನ ಮಸೂರಗಳೆರಡನ್ನೂ ಹೊಂದಿರುತ್ತವೆ. ಮೇಲ್ಭಾಗದಲ್ಲಿರುವ ನಿಮ್ನ ಮಸೂರವು ದೂರದ ನೋಟವನ್ನು ಹಾಗೂ ಕೆಳಗಿನ ಭಾಗದ ಪೀನ ಮಸೂರವು ಸಮೀಪದ ನೋಟವನ್ನು ಸುಗಮಗೊಳಿಸುತ್ತದೆ. ಈಗಿನ ದಿನಗಳಲ್ಲಿ, ಕಣ್ಣಿನ ವಕ್ರೀಭವನ ದೋಷಗಳನ್ನು ಕಣ್ಣಿನೊಳಗೆ ಅಳವಡಿಸುವ ಮಸೂರದಿಂದ (contact len) ಅಥವಾ ಶಸ್ತ್ರಚಿಕಿತ್ಸೆಗಳಿಂದಲೂ ಸರಿಪಡಿಸಬಹುದು.

24) ಇವುಗಳಿಗೆ ಕಾರಣ ಕೊಡಿ (ಜೂನ್–2020)

1) ಆಹಾರ ಸರಪಣಿಯುಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:– (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC CHEMISTRY

REVISION : MODEL QUESTIONS

12. What is molar conductivity? How is it related to the conductivity of a solution whose concentration is $Cmolm^{-3}$?

Ans:- The conductance due to all the ions in a solution containing one mole of the electrolyte. The relation between the conductivity of a solution whose concentration is $Cmolm^{-3}$ is

$$\ddot{E}_m = \frac{k}{C}$$

13. Define the collision frequency. Given an example for Pseudo-first order reaction.

Ans:- It is the number of collisions per second per unit volume of the reaction mixture Acid hydrolysis of an ester.

14. What is Lanthanoid contraction? Mention one of its consequences.

Ans:- Decrease in atomic radii from lanthanum to Lutetium.

Radii of 3rd row transition series elements are almost similar to that of 2nd row transition series elements.

15. Complete the following reactions:

i) $R-CH_2-OH \xrightarrow[573K]{Cu}$ ....

ii) $CH_3-CH=CH_2+H_2O \xrightleftharpoons{H^+}$ ....

Ans :– i) $R-CHO + H_2$, ii) $CH_3-CH(OH)-CH_3$

16. Explain Rosenmund's reduction of benzoyal chloride.

Ans:- When benzoyl chloride are treated with hydrogen gas through boiling xylene in the presence of palladium catalyst supported over barium sulphate they get reduced to benzaldehyde. This reaction is called Rosenmund's reduction.



17. What are food preservatives? Give an example.

Ans:- Food preservatives are chemicals which prevent spoilage of food due to microbial growth.

18. Mention a drug which can act, both as an analgesic as well as an antipyretic. Name an artificial sweetening agent.

Ans:- The drug which can act both as an analgesic as well as an antipyretic is aspirin. An artificial sweetening agent is saccharin.

III. Answer any five of the following:-

19. Draw labeled diagram of Hall-Heroult Electrolytic cell for the extraction of aluminium. Write anode and cathode reactions.

Ans:-



At Cathode: $Al^{3+}_{(melt)} + 3e^- \rightarrow Al_{(l)}$

At Anode: $C_{(s)} + O^{2-}_{(melt)} \rightarrow CO_{(g)} + 2e^-$

$C_{(s)} + 2O^{2-}_{(melt)} \rightarrow CO_{2(g)} + 4e^-$

20. For the manufacture of Ammonia by Haber's process. Write the equation and optimum conditions for maximum yield of ammonia.

Ans:- In large scale Ammonia is manufactured by Haber's process. It involves the direct combination of nitrogen and hydrogen to form ammonia.

$N_2(g) + 3H_2(g) \rightleftharpoons 2NH_3(g); \Delta = -46.\ kJ\ mol^{-1}$

This reaction is reversible and exothermic.

According to Le Chatelier's principle, the formation of ammonia is favoured by

i) High pressure of about 200 atm.

ii) A moderate temperature of 773K

iii) Iron oxide is used as catalyst with small amounts of K_2O and Al_2O_3 to increase the rate of attainment of equilibrium.

21. Write the equation for

i] The action of SO_2 with chlorine in the presence of charcoal

ii] The action of SO_4 with concentrated sulphuric acid

iii] The action of ozone with lead sulphide.

Ans:- i] $SO_2 + Cl_2 \rightarrow SO_2Cl_2$

ii] $SO_3 + H_2SO_4 \rightarrow H_2S_2O_7$

iii] $PbS + 4O_3 \rightarrow PbSO_4 + 4O_2$

22. Complete the following equation:

i] $2NaOH + Cl_2 \rightarrow$
(Cold and dilute)

ii] $2\ FeSO_4 + H_2SO_4 + Cl_2 \rightarrow$

iii] $Cl_2 + 3F_2 \rightarrow$
Excess

Ans:- i] $2NaOH + Cl_2 \rightarrow NaCl + NaOCl + H_2O$

ii] $2\ FeSO_4 + H_2SO_4 + Cl_2 \rightarrow Fe_2(SO_4)_3 + 2HCl$

iii] $Cl_2 + 3F_2 \rightarrow 2ClF_3$
(Excess)

ನದಿ ನೀರು ಕುಡಿಯಲು ಬಳಸದಂತೆ ಗ್ರಾಮಸ್ಥರಿಗೆ ಜಿಲ್ಲಾಡಳಿತದ ಸೂಚನೆ

‘ತುಂಗಭದ್ರಾ’ ಹಸಿರು; ಪೈರು ಹಳದಿ

● ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಗಂಗಾಪುರದಿಂದ ಕೊರ್ಲಹಳ್ಳಿ ಭಾಗದಲ್ಲಿ ಹರಿದಿರುವ ತುಂಗಭದ್ರಾ ನದಿ ನೀರು ಹಸಿರು ಬಣ್ಣಕ್ಕೆ ತಿರುಗಿದ್ದು, ಜನರಲ್ಲಿ ಆತಂಕ ಮೂಡಿದೆ. ಇದರಿಂದ ಕುಡಿಯುವ ನೀರು ಪೂರೈಕೆ ಮತ್ತು ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ.

ನಿರ್ದಿಷ್ಟವಾಗಿ ಈ ಭಾಗದಲ್ಲಿ ಮಾತ್ರ ನೀರು ಹಸಿರು ಬಣ್ಣಕ್ಕೆ ಯಾಕೆ ತಿರುಗಿದೆ ಎಂಬ ಕಾರಣ ತಿಳಿಯಲು ಜಿಲ್ಲಾಡಳಿತ ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಿದೆ. ವರದಿ ಲಭ್ಯವಾಗಿಲ್ಲ.

ಕೊರ್ಲಹಳ್ಳಿ, ಶೀರನಹಳ್ಳಿ, ಗಂಗಾಪುರ ಸೇರಿ ಸುತ್ತಮುತ್ತಲಿನ ಗ್ರಾಮಗಳ ಪಂಚಾಯಿತಿಯವರು ತುಂಗಭದ್ರಾ ನದಿ ನೀರನ್ನು ನೇರವಾಗಿ ಪಂಪ್ ಮಾಡುವುದನ್ನು ರೂಢಿಸಿಕೊಂಡಿದ್ದರು. ಬಹುಗ್ರಾಮ ಕುಡಿಯುವ

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಗ್ರಾಮದ ಸೇತುವೆ ಬಳಿ ಹಸಿರು ಬಣ್ಣಕ್ಕೆ ತಿರುಗಿರುವ ತುಂಗಭದ್ರಾ ನದಿ ನೀರು

ನೀರು ಪೂರೈಕೆ ಯೋಜನೆಯ ಅಡಿ ಲಭ್ಯವಿರುವ ನೀರು ಸಾಲದು ಎಂಬ ಕಾರಣಕ್ಕೆ ಈ ಕ್ರಮ ಅನುಸರಿಸುತ್ತಿದ್ದರು. ಆದರೆ ಈಗ ‘ನೀರು ಹಸಿರು ಬಣ್ಣಕ್ಕೆ ತಿರುಗಿದೆ. ಕುಡಿಯಲು ಯೋಗ್ಯವಿಲ್ಲ’ ಎಂದು ಜಿಲ್ಲಾಡಳಿತ

> **ನದಿ ನೀರು ಹಸಿರು ಬಣ್ಣಕ್ಕೆ ತಿರುಗಲು ಕಲುಷಿತ ನೀರು, ರಾಸಾಯನಿಕ ಸೇರ್ಪಡೆ ಕಾರಣ ಆಗಿರಬಹುದು. ಜಿಲ್ಲಾಡಳಿತ ತಕ್ಷಣವೇ ಮುಂಜಾಗ್ರತೆ ವಹಿಸಬೇಕು.**
> **ಬಸವರಾಜ ಬೊಮ್ಮಾಯಿ,** ಸಂಸದ

> **ಭತ್ತದ ಪೈರು ಹಳದಿ ಬಣ್ಣಕ್ಕೆ ತಿರುಗಲು ಮಲಿನ ನೀರು ಕಾರಣವಾಗಿರಬಹುದು. ಈ ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು.**
> **ತಾರಾಮಣಿ ಜಿ.ಎಚ್.** ಜಂಟಿ ನಿರ್ದೇಶಕಿ, ಕೃಷಿ ಇಲಾಖೆ

ತಿಳಿಸಿದೆ. ನದಿಗೆ ಅಳವಡಿಸಿದ್ದ ಪಂಪ್‌ಗಳನ್ನೂ ತೆರವುಗೊಳಿಸಿದೆ.

‘ಭತ್ತ ಬೆಳೆಯಲು ಅಲ್ಲದೇ ಒಟ್ಟಾರೆ ಕೃಷಿ ಚಟುವಟಿಕೆಗೆ ತುಂಗಭದ್ರಾ ನದಿ ನೀರನ್ನೇ ಆಶ್ರಯಿಸಿದ್ದೇವೆ. ಭತ್ತದ ಗದ್ದೆಗೆ ಹಲವು ದಿನಗಳಿಂದ ಹಸಿರುಗಟ್ಟಿದ ನೀರನ್ನೇ ಹಾಯಿಸಲಾಗುತ್ತಿದೆ. ಪೈರುಗಳು ಈಗ ಹಳದಿ ಬಣ್ಣಕ್ಕೆ ತಿರುಗಿವೆ. ಪೈರಿನ ಬಣ್ಣ ಬದಲಾಗಲು ಹಸಿರು ಬಣ್ಣದ ನೀರೇ ಕಾರಣ ಆಗಿರಬಹುದು’ ಎಂದು ಶೀರನಹಳ್ಳಿ ರೈತ ಬೂದೇಶ ರಡ್ಡೇರ ತಿಳಿಸಿದರು.

‘ಗಂಗಾಪುರ ಕೊರ್ಲಹಳ್ಳಿ ಮಧ್ಯೆ ಮಾತ್ರ ಯಾಕೆ ನೀರು ಹಸಿರು ಬಣ್ಣಕ್ಕೆ ತಿರುಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಲ್ಲಿ ಸಕ್ಕರೆ ಕಾರ್ಖಾನೆಯಿದ್ದು, ಅದರಿಂದ ಏನಾದರೂ ಸಮಸ್ಯೆ ಆಗಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ಭತ್ತದ ಗದ್ದೆಗೆ ಹಸಿರುಗಟ್ಟಿದ ನೀರು ಹಾಯಿಸಿದ್ದರಿಂದಲೇ ಪೈರು ಹಳದಿ ಬಣ್ಣಕ್ಕೆ ತಿರುಗಿದೆಯೇ ಎಂಬುದನ್ನೂ ಪರೀಕ್ಷಿಸಲಾಗುವುದು’ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ: ಆರೋಪಿ ಸಾವು

ಪ್ರಜಾವಾಣಿ ವಾರ್ತೆ

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರಲ್ಲಿ ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಯ ಶವ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ.

‘ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಕೊಣ್ಣೂರಿನ ಈರಪ್ಪ ಕರಡಿ, ಮನೆ ಬಳಿ ಆಟವಾಡುತ್ತಿದ್ದ ಬಾಲಕಿಗೆ ಮೊಬೈಲ್ ಕೊಡುವುದಾಗಿ ಆಸೆ ತೋರಿಸಿದ. ಆಕೆಯನ್ನು ಮನೆಗೆ ಕರೆದೊಯ್ದು ಅತ್ಯಾಚಾರವೆಸಗಿದ. ಬಾಲಕಿ ಅಳುವುದು ಗಮನಿಸಿದ ಪಾಲಕರು ನಂತರ ವಿಚಾರಿಸಿದಾಗ, ಆತ ವಿಷಯ ತಿಳಿಸಲಿಲ್ಲ. ಪೊಲೀಸ್ ಠಾಣೆಗೆ ಹೋಗುವುದಾಗಿ ಮತ್ತು ವೈದ್ಯಕೀಯ ಪರೀಕ್ಷೆ ಮಾಡಿಸುವುದಾಗಿ ಹೇಳಿದ್ದರಿಂದ, ಆತ ಹೆದರಿ ನೇಣು ಹಾಕಿಕೊಂಡಿರಬಹುದು’ ಎಂದು ಕಟಕೋಳ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಕಲಿ ಔಷಧ ಜಾಲ...

ಒಂದನೇ ಪುಟದಿಂದ...

ಕಳೆದ ಎರಡು ವರ್ಷಗಳಲ್ಲಿ ಔಷಧ ನಿಯಂತ್ರಕರು ನಡೆಸಿದ ತಪಾಸಣೆಯಲ್ಲಿ ಹಲವು ನಕಲಿ ಔಷಧಗಳು ಪತ್ತೆಯಾಗಿವೆ. ಅವುಗಳಲ್ಲಿ ಮೂಗಿಗೆ ಹಾಕುವ ದ್ರಾವಣ, ವಿಟಮಿನ್ ಡಿ 3 ಮಾತ್ರೆಗಳು, ನೋವು ನಿವಾರಕ ಔಷಧ ಹಾಗೂ ಸೋಂಕು ನಿವಾರಕ ದ್ರಾವಣಗಳು (ಸ್ಯಾನಿಟೈಸರ್) ಹೆಚ್ಚಾಗಿ ಸೇರಿವೆ.

ಪ್ರಕರಣ: ಔಷಧಗಳು ಮತ್ತು ಕಾಂತಿವರ್ಧಕ ಕಾಯ್ದೆ 1940ರ ಪರಿಚ್ಛೇದ 27ರ ಅಡಿ ನಕಲಿ ಔಷಧಗಳ ತಯಾರಿಕೆ, ವಿತರಣೆ ಮತ್ತು ಮಾರಾಟ ಶಿಕ್ಷಾರ್ಹ ಅಪರಾಧವಾಗಿದೆ. ಈ ಕಾಯ್ದೆಯಡಿ ತಪ್ಪಿತಸ್ಥರಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶವಿದೆ. ಕಳೆದ 2 ವರ್ಷಗಳಲ್ಲಿ ಗುರುತಿಸಲಾದ ನಕಲಿ ಔಷಧಗಳಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಅವುಗಳ ತನಿಖೆ ಪ್ರಗತಿಯಲ್ಲಿದೆ.

ಪತ್ತೆ ಮಾಡಲಾದ ನಕಲಿ ಔಷಧ ತಯಾರಕ ಕಂಪನಿಗಳಲ್ಲಿ ಹೆಚ್ಚಿನವು ತೆಲಂಗಾಣ, ಹಿಮಾಚಲ ಪ್ರದೇಶ, ಉತ್ತರಾಖಂಡ, ಗುಜರಾತ್‌ಗೆ ಸೇರಿವೆ.

‘ಸಿಪಾನ್ ಡಿ’ ಔಷಧದ ನಿಗದಿತ ಬ್ಯಾಚ್‌ಗೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶದ ಜಿಡಬ್ಲ್ಯುಎಸ್ ಹೆಲ್ತ್‌ಕೇರ್ ಕಂಪನಿಯ ಮುಖ್ಯಸ್ಥರಿಗೆ ಚಾಮರಾಜನಗರದ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಕಳೆದ ವರ್ಷ ಶಿಕ್ಷೆ ಪ್ರಕಟಿಸಿದ್ದು, ಒಂದು ವರ್ಷ ಜೈಲು ಹಾಗೂ ₹20 ಸಾವಿರ ದಂಡ ವಿಧಿಸಲಾಗಿದೆ.

ಇದೇ ರೀತಿ, ಮೈಸೂರು ಹಾಗೂ ಬೆಂಗಳೂರಿನ ನ್ಯಾಯಾಲಯಗಳಲ್ಲಿ ತಲಾ ಒಂದೊಂದು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಕ್ರಮವಾಗಿ ₹40 ಸಾವಿರ ಹಾಗೂ ₹65 ಸಾವಿರ ದಂಡ ವಿಧಿಸಲಾಗಿದೆ.

ಕಾಡಾನೆ ದಾಳಿ: ಕಾರ್ಮಿಕ ಸಾವು

ಹನೂರು: ಇಲ್ಲಿನ ಮಲೆಮಹದೇಶ್ವರ ವನ್ಯಧಾಮದಲ್ಲಿ ಕಾಡಾನೆ ದಾಳಿಗೆ ಕೊಪ್ಪ ಗ್ರಾಮದ ಮುನಿಯಪ್ಪ (40) ಸ್ಥಳದಲ್ಲೇ ಮೃತಪಟ್ಟಿದ್ದು, ಕುಳ್ಳುಚ್ಚೇಗೌಡ ಎಂಬವರು ಗಾಯಗೊಂಡಿದ್ದಾರೆ. ಇಬ್ಬರೂ ಒಡೆಯರಪಾಳ್ಯ ಗ್ರಾಮದಲ್ಲಿ ಕೂಲಿ ಮಾಡುತ್ತಿದ್ದರು. ಪಿ.ಜಿ ಪಾಳ್ಯ ವನ್ಯಜೀವಿ ವಲಯದ ಅಂಡೇಕುರುನದೊಡ್ಡಿ ಕಳ್ಳಬೇಟೆ ತಡೆ ಶಿಬಿರದ ದಾರಿಯಲ್ಲಿ ಹೋಗುವಾಗ ಕಾಡಾನೆ ದಾಳಿ ಮಾಡಿತ್ತು. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

115 ವೈದ್ಯರ ನಿಯೋಜನೆ ರದ್ದು

ಒಂದನೇ ಪುಟದಿಂದ...

ಚರ್ಮ ರೋಗ, ಇಎನ್‌ಟಿ, ಮೂಳೆ, ನೇತ್ರ, ದಂತ, ಅರಿವಳಿಕೆ, ಒಬಿಜಿ, ವಿಕಿರಣಶಾಸ್ತ್ರ, ರೋಗಶಾಸ್ತ್ರ, ಹೃದ್ರೋಗ ಹೀಗೆ ವಿವಿಧ ವಿಷಯಗಳಲ್ಲಿ ಪರಿಣತಿ ಹೊಂದಿದ್ದ ಹಿರಿಯ ವೈದ್ಯರು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದರು. ಅದೇ ರೀತಿ ವಿವಿಧ ಜಿಲ್ಲೆಗಳಲ್ಲಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಲ್ಲಿ ಅಂಕಿತ ಅಧಿಕಾರಿಗಳಾಗಿಯೂ ತಜ್ಞ ವೈದ್ಯರು ಮತ್ತು ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಿದ್ದರು. ಅವರೆಲ್ಲರ ನಿಯೋಜನೆಯನ್ನು ರದ್ದುಪಡಿಸಲಾಗಿದೆ.

‘ಎಲ್ಲರೂ ಕರ್ತವ್ಯದಿಂದ ಸ್ವಯಂ ಬಿಡುಗಡೆಗೊಂಡು, ಮುಂದಿನ ಸ್ಥಳ ನಿಯುಕ್ತಿಗಾಗಿ ಇಲಾಖೆ ಆಯುಕ್ತಾಲಯದಲ್ಲಿ ವರದಿ ಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು. ನಿಯೋಜನೆಯಿಂದ ಬಿಡುಗಡೆಗೊಳ್ಳದ ವೈದ್ಯರ ವೇತನವನ್ನು ತಡೆಹಿಡಿಯುವಂತೆ ಸೂಚನೆ ನೀಡಲಾಗುವುದು. ಆಯುಕ್ತಾಲಯದಲ್ಲಿ ವರದಿ ಮಾಡಿಕೊಳ್ಳುವ ವೈದ್ಯಾಧಿಕಾರಿಗಳು ಮತ್ತು ತಜ್ಞ ವೈದ್ಯರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಇಲಾಖೆಯ ಆಯುಕ್ತರು ಕ್ರಮ ತೆಗೆದುಕೊಳ್ಳಲಿದ್ದಾರೆ’ ಎಂದೂ ಆರೋಗ್ಯ ಇಲಾಖೆ ಆದೇಶದಲ್ಲಿ ವಿವರಿಸಿದೆ.

ಫೈನಾನ್ಸ್ ಕಿರುಕುಳ: ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ರಾಮನಗರ: ಮೈಕ್ರೊ ಫೈನಾನ್ಸ್ ಕಂಪನಿ ಪ್ರತಿನಿಧಿಗಳು ಸಾಲ ಮರುಪಾವತಿಸುವಂತೆ ನೀಡಿದ ಕಿರುಕುಳದಿಂದಾಗಿ ತಾಲ್ಲೂಕಿನ ತಿಮ್ಮಯ್ಯನದೊಡ್ಡಿ ಗ್ರಾಮದ ಯಶೋದಮ್ಮ (60) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಯಶೋದಮ್ಮ

ತನ್ನ ತಾಯಿಯ ಆತ್ಮಹತ್ಯೆಗೆ ಮೈಕ್ರೊ ಫೈನಾನ್ಸ್ ಸಿಬ್ಬಂದಿ ಕಿರುಕುಳ ಕಾರಣ ಎಂದು ಯಶೋದಮ್ಮ ಅವರ ಪುತ್ರ ಕುಮಾರ್ ರಾಮನಗರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಏಳು ಕಂಪನಿಗಳ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಯಶೋದಮ್ಮ ಆತ್ಮಹತ್ಯೆ ವಿಷಯ ಗೊತ್ತಾಗುತ್ತಿದ್ದಂತೆ ಫೈನಾನ್ಸ್ ಕಂಪನಿಗಳ ಹಲವು ನೌಕರರು ತಲೆ ಮರೆಸಿಕೊಂಡಿದ್ದಾರೆ. ಪೊಲೀಸರು ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ವಿವಿಧ ಫೈನಾನ್ಸ್ ಕಂಪನಿಗಳಲ್ಲಿ ಯಶೋದಮ್ಮ ₹4.60 ಲಕ್ಷ ಸಾಲ ಪಡೆದಿದ್ದರು. ಇತ್ತೀಚೆಗೆ ಸಾಲದ ಕಂತು ಪಾವತಿಸಿರಲಿಲ್ಲ. ಕಾಲಾವಕಾಶ ಕೋರಿದ್ದರು.

ಸಾಲ ವಸೂಲಿಗೆ ಮನೆಗೆ ತೆರಳಿದ್ದ ಕಂಪನಿ ಸಿಬ್ಬಂದಿ, ‘ಸಾಲ ತೀರಿಸಲು ಆಗದಿದ್ದರೆ ಎಲ್ಲಾದರೂ ಹೋಗಿ ಸಾಯಿ’ ಎಂದು ನಿಂದಿಸಿದ್ದರು. ಗ್ರಾಮಸ್ಥರ ಎದುರು ಅವಮಾನ ಆಗಿದ್ದರಿಂದ ನೊಂದ ಯಶೋದಮ್ಮ 20ರಂದು ಸಂಜೆ 6ಕ್ಕೆ ಮನೆ ಹಿಂಭಾಗದ ಸ್ನಾನದ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.49, ಖನಿಜ ಭವನ, ಪಶ್ಚಿಮ ವಿಭಾಗ, 2ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001. ದೂರವಾಣಿ: 080–22354737/22354738
ಇ–ಮೇಲ್: kmerc2014@gmail.com

ಸಂಖ್ಯೆ: KMERC/Admn/TOM/110/2024-25/2070 ದಿನಾಂಕ: 20.01.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮಕ್ಕೆ **ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು** ಅರ್ಹ ಸೇವಾ ಪೂರೈಕೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ವೆಬ್‌ಸೈಟ್: https://kppp.karnataka.gov.in) ನಿಂದ ಪಡೆಯಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ: **03.02.2025**. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಮೂಲಕ ಸಂಪರ್ಕಿಸಬಹುದು. (KMERC: 080-22354737/22354738 ಮತ್ತು KPPP Mobile: 8046010000/8068948777)
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕೆ.ಎಂ.ಇ.ಆರ್.ಸಿ.
ವಾಸಾಸಂಇ/ವಾಪ್ರ/4449/ಎಂಎಎ/24-25

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು–575004
ದೂರವಾಣಿ: 0824-2885795, CIN: U40109 KA 2002 SGC 030425
ಕ್ರಮ ಸಂಖ್ಯೆ: MESCOM/IT/7/2024-IT/1249 ದಿನಾಂಕ: 20.01.2025

ಅಲ್ಪಾವಧಿ ಟೆಂಡರು ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಮಂ.ವಿ.ಸ.ಕಂ.ಯು ಅರ್ಹ ಬಿಡ್ಡುದಾರರಿಂದ "ಮೆಸ್ಕಾಂನ RAPDRP/IPDS ಪ್ರದೇಶಗಳಲ್ಲಿ ಸ್ಪಾಟ್ ಬಿಲ್ಲಿಂಗ್‌ಗಾಗಿ ಕನೆಕ್ಟಿವಿಟಿ ಬಿಲ್ಲಿಂಗ್ ಸಾಫ್ಟ್‌ವೇರ್ ಸೊಲ್ಯೂಷನ್ಸ್, ಸ್ಟೇಷನರಿ ಮತ್ತು ಸಂಬಂಧಿತ ಸೇವೆಗಳೊಂದಿಗೆ Android ಆಧಾರಿತ ಸ್ಪಾಟ್ ಬಿಲ್ಲಿಂಗ್ ಸಾಧನಗಳ (SBD) ಪೂರೈಕೆ, ಏಕೀಕರಣ ಮತ್ತು ನಿರ್ವಹಣೆ" ಸೇವೆಗೆ ಟೆಂಡರ್ ವಿಚಾರಣೆ ಸಂಖ್ಯೆ: MESCOM/2024-25/SE0107 ರನ್ವಯ ಟೆಂಡರನ್ನು ಆಹ್ವಾನಿಸುತ್ತಿದೆ.
ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ದಿನಾಂಕ 27.01.2025ರಂದು ಅಥವಾ ನಂತರ https://kppp.karnataka.gov.in/ ಗೆ ಲಾಗ್‌ಆನ್ ಮಾಡಿ ವಿವರಗಳನ್ನು ಪಡೆಯಬಹುದಾಗಿದೆ. kpp ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿಗೆ ಅಥವಾ +91-8046010000/8068948777ಗೆ ಇಮೇಲ್ ವಿಳಾಸ: support@eprochelpdesk.comಗೆ ಸಂಪರ್ಕಿಸಬಹುದಾಗಿದೆ.
DIPR / MNG / 1226/ MPL / 24-25 ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಯೋಜನೆ)
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಭಾರತೀಯ ಸ್ಟೇಟ್ ಬ್ಯಾಂಕ್
SBI
ಪ್ರಾದೇಶಿಕ ವ್ಯಾಪಾರ ಕಛೇರಿ ಪ್ರದೇಶ – 4,AO1, NW 1
4 ನೇ ಮಹಡಿ, ಮೈಸೂರು ಬ್ಯಾಂಕ್ ವೃತ್ತ ಕೆ ಜಿ ರಸ್ತೆ, ಬೆಂಗಳೂರು 560 009

ಕಛೇರಿಗಾಗಿ ಸ್ಥಳಾವಕಾಶ ಬಾಡಿಗೆಗೆ ಬೇಕಾಗಿದೆ

SBI ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, **RBO-4 ಕೋರಮಂಗಲ, AO1,** ಸುಮಾರು **185.806 ಚ.ಮೀ +/– 25% (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ / ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಗಳಿಗೆ ಕಟ್ಟಡದ ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಮುಖ್ಯ ರಸ್ತೆಯ ನೆಲ ಮಹಡಿಯಲ್ಲಿರುವ **ಹೊಂಗಸಂದ್ರ ಶಾಖೆ(12662),81/1/1/-2,2,3,4,5,ಹೋಬಳಿ, ಬೇಗೂರು ರಸ್ತೆ, ಹೊಂಗಸಂದ್ರ, ಬೆಂಗಳೂರು ಶಾಖೆಗೆ** ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.

ತಾಂತ್ರಿಕ ಹರಾಜು ಹಾಗೂ ಸಲ್ಲಿಸಬೇಕಾದ ಅರ್ಜಿ ನಮೂನೆ, ವಿವರವಾದ ಮಾನದಂಡಗಳು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಎಸ್‌ಬಿಐ ವೆಬ್ ಸೈಟ್ **www.sbi.co.in** ನಿಂದ **SBI in the News/Procurement News** ಅಡಿಯಲ್ಲಿ **21.01.2025** ರಿಂದ **03.02.2025** ರವರೆಗೆ ಅರ್ಜಿ ಡೌನ್ ಲೋಡ್ ಮಾಡಬಹುದು.ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 03.02.2025 ಮಧ್ಯಾಹ್ನ 3.00** ಗಂಟೆಯವರೆಗೆ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.
ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು,
ಆರ್‌ಬಿಓ–4 ಕೋರಮಂಗಲ,ಎಓ–1,ಎನ್‌ಡಬ್ಲೂ 1

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಡಿಡಿ/ಸಿ.ಜಿ.ಆರ್.ಎಫ್/1254/2024–25/1356 ದಿನಾಂಕ: 21.01.2025

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾಗೂ ಓಂಬುಡ್ಸ್‌ಮನ್ ವಿನಿಯಮಗಳು, (ಮೂರನೇ ತಿದ್ದುಪಡಿ) 2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಹಾಗೂ ಓಂಬುಡ್ಸ್‌ಮನ್ ವಿನಿಯಮಗಳು (ಮೂರನೇ ತಿದ್ದುಪಡಿ) 2025, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 20.01.2025 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲತಾಣ **https://kerc.karnataka.gov.in** ನಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.
ಆಸಕ್ತರು, ಸದರಿ ಕರಡು ತಿದ್ದುಪಡಿ ಬಗ್ಗೆ ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ **ಆಯೋಗದ ಕಾರ್ಯದರ್ಶಿಯವರಿಗೆ ದಿನಾಂಕ: 10ನೇ ಫೆಬ್ರವರಿ 2025ರೊಳಗೆ** ಲಿಖಿತವಾಗಿ ಸಲ್ಲಿಸಬಹುದು.
ಸಹಿ/– ಕಾರ್ಯದರ್ಶಿ
DIPR/CP/4486/2024-25 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಕರ್ನಾಟಕ ಸರ್ಕಾರ
ಕೆ. ಗುರುಶಾಂತಪ್ಪ, ಸಾರ್ವಜನಿಕ ಆಸ್ಪತ್ರೆ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ
ದೂರವಾಣಿ ಸಂಖ್ಯೆ: 08232–232030
ಇ–ಮೇಲ್ ವಿಳಾಸ : amoghmaddur@gmail.com
ಸಂಖ್ಯೆ:ಸಾಆಮ/ಸರಬ/30/2024–25 ದಿ:18–01–2025

ಟೆಂಡರ್ ಅಧಿಸೂಚನೆ

ವಿಷಯ:–2025–26 ನೇ ಸಾಲಿಗೆ ಕೆ.ಗುರುಶಾಂತಪ್ಪ ಸಾರ್ವಜನಿಕ ಆಸ್ಪತ್ರೆ ಮದ್ದೂರು, ಆಸ್ಪತ್ರೆಗೆ ಅವಶ್ಯವಿರುವ 13 ಗ್ರೂಪ್ 'ಡಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೂಲಕ ಪಡೆಯುವ ಬಗ್ಗೆ.

ಉಲ್ಲೇಖ:– (1) ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ ಬೆಂಗಳೂರು ರವರ ಸುತ್ತೋಲೆ ಪತ್ರಸಂಖ್ಯೆ ಮುಲೆಪಅ(ಆ)ಅಡಿ/ಗ್ರೂಪ್–ಡಿ–ನಿಬಂಧನೆ/61/2019–20 ದಿ:13–01–2020.
(2) ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರು ಕಡತದ ಕಂಡಿಕೆ ಸಂಖ್ಯೆ: 06 ರಲ್ಲಿ ದಿ:07–01–2025 ರಂದು ಅನುಮೋದಿಸಿರುವಂತೆ.
ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನುಸಾರ 2025–26 ನೇ ಸಾಲಿಗೆ ಕೆ.ಗುರುಶಾಂತಪ್ಪ ಸಾರ್ವಜನಿಕ ಆಸ್ಪತ್ರೆ, ಮದ್ದೂರು ಆಸ್ಪತ್ರೆಗೆ ಅವಶ್ಯವಿರುವ 13 ಗ್ರೂಪ್ ಡಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ಪಡೆಯಲು ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಿವರಗಳು ಕೆಳಕಂಡಂತಿವೆ.
(1) ಟೆಂಡರನ್ನು ಇ–ಪೋರ್ಟಲ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 20.01.2025 ರಿಂದ. (2) ಇ–ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 20.02.2025 ಸಂಜೆ 5.00 ರವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24.02.2025 ಬೆಳಿಗ್ಗೆ 11.00 ಗಂಟೆ ನಂತರ. (4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಲಕೋಟೆಯನ್ನು ತೆರೆದ ನಂತರ ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. (5) ಟೆಂಡರಿನ ಅಂದಾಜು ಮೊತ್ತ. : ರೂ.33,00,000–00 (ರೂ. ಮೂವತ್ತ ಮೂರು ಲಕ್ಷ ಮಾತ್ರ). (6) ಟೆಂಡರ್ ನಿಗಧಿಪಡಿಸಿದ ಇ.ಎಂ.ಡಿ. (2.5%) : ರೂ.82,500–00. (ರೂ. ಎಂಭತ್ತೆರಡು ಸಾವಿರದ ಐದು ನೂರು ಮಾತ್ರ) ಹೆಚ್ಚಿನ ವಿವರಗಳನ್ನು **http://eproc.karnataka.gov.in** ಹಾಗೂ ಕಛೇರಿ ವೇಳೆಯಲ್ಲಿ ಕೆ. ಗುರುಶಾಂತಪ್ಪ ಸಾರ್ವಜನಿಕ ಆಸ್ಪತ್ರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ಪಡೆಯಬಹುದು.
ಸಹಿ/–ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮದ್ದೂರು, ಮಂಡ್ಯ ಜಿಲ್ಲೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆವಿಎಂಸಿ&ಎ/568/2024–25

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ, ಸಾಮಾಜಿಕ ಅರಣ್ಯ ವಿಭಾಗ, ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560 015.
E-mail: dcf.buzp@yahoo.in Phone No: 080-29900992.

ಸಂ:ಎ1/ಬಿಯುಡಿ/ಟೆಂಡರ್/ಸಿಆರ್–01/2024–25 ದಿನಾಂಕ: 21.01.2025

ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್ ಕಗ್ಗಲೀಪುರ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 05.02.2025 ಸಂಜೆ 5.00 ಗಂಟೆಗೆ.** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 07.02.2025 ರಂದು ಸಂಜೆ 5.00 ಗಂಟೆ.** ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 10.02.2025 ಸಂಜೆ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ–ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ **ದಿನಾಂಕ: 12.02.2025 ಸಂಜೆ 5.00 ಗಂಟೆಯವರೆಗೂ** ದಾಖಲಾತಿಗಳನ್ನು ಸಲ್ಲಿಸಿ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 14.02.2025 ಸಂಜೆ 5.00 ಗಂಟೆಗೆ** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ **ದಿನಾಂಕ: 17.02.2025 ಸಂಜೆ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೆಟ್ https://kppp.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವಾಸಾಸಂಇ/ವಾಪ್ರ/4478/ಆಕಾರ್/2024–25 ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರವರ ಕಛೇರಿ
ನಂ.1, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: +91–80–22943058, ಈ–ಮೇಲ್: ctrs1co@ksp.gov.in

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಟೆಂಡರ್ ಸಂಖ್ಯೆ: KSP/2024-25/IND0265 ದಿನಾಂಕ: 18/01/2025
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ರವರಿಂದ ಮೈಸೂರು ನಗರದ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯ 50 ಜಂಕ್ಷನ್‌ಗಳಲ್ಲಿ ಹೊಸದಾಗಿ ಸಿಗ್ನಲ್ ಲೈಟ್‌ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. **ಟೆಂಡರ್‌ನ ಅಂದಾಜು ಮೌಲ್ಯ: ರೂ.9.64 ಕೋಟಿಗಳು.** ಟೆಂಡರ್ ಪೂರ್ವಭಾವಿ ಸಭೆಯು ದಿನಾಂಕ: 28/01/2025 ರಂದು ಪೂರ್ವಾಹ್ನ 11.30 ಗಂಟೆಗೆ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17/02/2025 ಸಮಯ ಸಂಜೆ 17:00 ಗಂಟೆ. ಇತರೆ ಮಾಹಿತಿಯನ್ನು http://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4455/ಆಕಾರ್/2024–25

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು–9
ದೂರವಾಣಿ ಸಂ: 080–29710021, 29710022, 29710023, 29710024 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@kar.nic.in, ವೆಬ್ ಸೈಟ್ : http://www.krrda.in

ಸಂಖ್ಯೆ: ಕೆಆರ್‌ಆರ್‌ಡಿಎ/ತಾಂತ್ರಿಕ/11/208/ಟೆಂಡರ್ ನೋ–6/2024–25/3167 ದಿನಾಂಕ: 21.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ–6

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಪ್ಯಾಕೇಜ್ ಕಾಮಗಾರಿಗಳಿಗೆ ಐಟಂ ರೇಟ್ ದರಗಳ ಟೆಂಡರ್‌ನ್ನು ಕರೆದಿದ್ದು, ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಯೋಜನೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷ)		ಇ.ಎಮ್.ಡಿ ಮೊತ್ತ, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ	ಕಾಮಗಾರಿ ಪೂರ್ಣಗೊಳಿಸುವ ಅವಧಿ
		ಕನಿಷ್ಠ	ಗರಿಷ್ಠ		
1.	ಕಲ್ಯಾಣ ಪಥ	800.00	1800.00	• ರೂ.100.00 ಲಕ್ಷದಿಂದ ರೂ. 1000.00 ಲಕ್ಷ ವರೆಗಿನ ಮೊತ್ತದ ಕಾಮಗಾರಿಗಳಿಗೆ – ಶೇ. 1.50%, ಕನಿಷ್ಠ ರೂ.2.00 ಲಕ್ಷ ವರೆಗೆ. • ರೂ.1000.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ – ಶೇ. 1.00%, ಕನಿಷ್ಠ ರೂ.15.00 ಲಕ್ಷ ವರೆಗೆ.	11 ತಿಂಗಳು (ಮಳೆಗಾಲ ಸೇರಿ)
2.	ಪಿ.ಎಂ–ಜನ್‌ಮನ್	50.00	800.00	• ರೂ.20.00 ಲಕ್ಷದಿಂದ ರೂ. 100.00 ಲಕ್ಷ ವರೆಗಿನ ಮೊತ್ತದ ಕಾಮಗಾರಿ–ಗಳಿಗೆ–ಶೇ. 2.00%, ಕನಿಷ್ಠ ರೂ. 0.50 ಲಕ್ಷ. • ರೂ.100.00 ಲಕ್ಷದಿಂದ ರೂ. 1000.00 ಲಕ್ಷ ವರೆಗಿನ ಮೊತ್ತದ ಕಾಮಗಾರಿಗಳಿಗೆ– ಶೇ. 1.50%, ಕನಿಷ್ಠ ರೂ.2.00 ಲಕ್ಷ.	11 ತಿಂಗಳು (ಮಳೆಗಾಲ ಸೇರಿ)

ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು:
I. ಕಲ್ಯಾಣ ಪಥ ಯೋಜನೆಯ
ಅ. **Call-2 : KRRDA/2024-25/RD/WORK_INDENT 177**
ಆ. **Call-3 : KRRDA/2024-25/RD/WORK_INDENT 129,151,130,153**

ಟೆಂಡರ್ ಪ್ರಕಿಯೆಯ ವೇಳಾಪಟ್ಟಿಯ ವಿವರಗಳು ಕೆಳಕಂಡಂತಿವೆ:

1.	ಪ್ರಿ–ಬಿಡ್ ಸಭೆಯ ದಿನಾಂಕ	29–01–2025, ಬುಧವಾರ ಬೆಳಿಗ್ಗೆ 11.00 ಗಂಟೆಗೆ
2.	ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	04–02–2025, ಮಂಗಳವಾರ ಸಂಜೆ 5.30 ರವರೆಗೆ
3.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	05–02–2025, ಬುಧವಾರ ಸಂಜೆ 5.30 ನಂತರ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

II. ಪಿ.ಎಂ.ಜನ್ ಮನ್ ಯೋಜನೆಯ
ಅ. **KRRDA/2024-25/RD/WORK_INDENT 189 & 190**

1.	ಪ್ರಿ–ಬಿಡ್ ಸಭೆಯ ದಿನಾಂಕ	29–01–2025, ಬುಧವಾರ ಮಧ್ಯಾಹ್ನ 3.00 ಗಂಟೆಗೆ
2.	ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	13–02–2025, ಗುರುವಾರ ಸಂಜೆ 5.30 ರವರೆಗೆ
3.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	14–02–2025, ಶುಕ್ರವಾರ ಸಂಜೆ 5.30 ನಂತರ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

(1) ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಒಂದನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಗುತ್ತಿಗೆ ನೀಡುವಿಕೆಯು ಗುತ್ತಿಗೆ ನಿಯಮಗಳಂತೆ, ಗುತ್ತಿಗೆದಾರರ ತಾಂತ್ರಿಕ, ಆರ್ಥಿಕ ಸಂಪನ್ಮೂಲ ಮತ್ತು ಕಾಮಗಾರಿ ನಿರ್ವಹಿಸುವ ಸಾಮರ್ಥ್ಯಗಳ ಮೇಲೆ ಅವಲಂಭಿತವಾಗಿರುತ್ತದೆ. (2) ಕೆ.ಆರ್.ಆರ್.ಡಿ.ಎ ಸಂಸ್ಥೆ ವತಿಯಿಂದ ಪಿ.ಎಂ.ಜಿ. ಎಸ್.ವೈ/ಎನ್.ಜಿ.ಎನ್.ಆರ್.ವೈ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಫಲವಾದ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸದೇ ಟೆಂಡರ್ ರದ್ದುಪಡಿಸಲಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. (3) ಟೆಂಡರ್ ಕರೆಯಲಾದ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು. (4) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ ಟೆಂಡರ್ ನಿರಾಕರಿಸಿರುವ ಹಕ್ಕನ್ನು ಹೊಂದಿರುತ್ತಾರೆ. (5) ಪ್ಯಾಕೇಜ್ ಕಾಮಗಾರಿಗಳ ವಿವರಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/–
ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
DIPR/CP/RO4489/AAPL/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿಪುರಂ, ಮೈಸೂರು–09.
ದೂರವಾಣಿ ಸಂ: 0821– 2545894, ಇ–ಮೇಲ್: kwbcemys2014@gmail.com

ಟೆಂಡರ್ ಅಧಿಸೂಚನೆ

5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ, DBOT ಮಾದರಿಯಲ್ಲಿ ಈ ಕೆಳಗಿನ ಪಟ್ಟಣಗಳ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ (Lumpsum tender – No Variation)

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ ರೂ.ಲಕ್ಷಗಳಲ್ಲಿ	ಇಂಡೆಂಟ್ ಸಂಖ್ಯೆ
1	ಅಮೃತ್–2.0 ಯೋಜನೆಯಡಿ ಕೊಪ್ಪ ಪಟ್ಟಣಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಕಾಮಗಾರಿ	2775.77	KUWSDB/2024-25/WS/WORK_INDENT293
2	ಅಮೃತ್–2.0 ಯೋಜನೆಯಡಿ ಶ್ರೀರಂಗಪಟ್ಟಣಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಕಾಮಗಾರಿ	1833.14	KUWSDB/2024-25/WS/WORK_INDENT294

ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ಸಂಪರ್ಕಿಸುವುದು.
ಸಹಿ/– ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು
DIPR/DDMYS/1135/KSMCA/778/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನವಂತ್ರಿ ರಸ್ತೆ, ಬೆಂಗಳೂರು–560 009.
ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಇ–ಪ್ರೊಕ್/008/2024–25 ದಿನಾಂಕ:21.01.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಏಕಲಕೋಟೆ & ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ವಾರ್ಡ್ ಸಂಖ್ಯೆ	ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ಗಳಲ್ಲಿ)	ಕಾಮಗಾರಿಗಳ ಸಂಖ್ಯೆ	ವರ್ಗೀಕರಣ
	ಪರಿಶಿಷ್ಟ ಜಾತಿಗೆ ಮೀಸಲು (ಏಕಲಕೋಟೆ ಪದ್ಧತಿ)				
1.	125 (2ನೇ ಕರೆ)	15.00	30,000/–	01	ಪರಿಶಿಷ್ಟ ಜಾತಿ
	ಪರಿಶಿಷ್ಟ ಪಂಗಡಕ್ಕೆ ಮೀಸಲು (ಏಕಲಕೋಟೆ ಪದ್ಧತಿ)				
2.	128 (2ನೇ ಕರೆ)	15.00	30,000/–	01	ಪರಿಶಿಷ್ಟ ಪಂಗಡ
3.	127 (2ನೇ ಕರೆ)	30.00	45,000/–	01	ಪರಿಶಿಷ್ಟ ಪಂಗಡ
	ಸಾಮಾನ್ಯರಿಗೆ ಮೀಸಲು (ಏಕಲಕೋಟೆ ಪದ್ಧತಿ)				
4.	125 (2ನೇ ಕರೆ)	30.00	60,000/–	01	ಸಾಮಾನ್ಯರಿಗೆ
5.	126 (2ನೇ ಕರೆ)	30.00	60,000/–	01	ಸಾಮಾನ್ಯರಿಗೆ
6.	126 (2ನೇ ಕರೆ)	25.00	50,000/–	01	ಸಾಮಾನ್ಯರಿಗೆ
7.	128	25.00	50,000/–	01	ಸಾಮಾನ್ಯರಿಗೆ
	ಪರಿಶಿಷ್ಟ ಜಾತಿಗೆ ಮೀಸಲು (ದ್ವಿಲಕೋಟೆ ಪದ್ಧತಿ)				
8.	123	100.00	1,50,000/–	01	ಪರಿಶಿಷ್ಟ ಜಾತಿ
	ಪರಿಶಿಷ್ಟ ಪಂಗಡಕ್ಕೆ ಮೀಸಲು (ದ್ವಿಲಕೋಟೆ ಪದ್ಧತಿ)				
9.	125	100.00	1,50,000/–	01	ಪರಿಶಿಷ್ಟ ಪಂಗಡ
	ವರ್ಗ–1ಕ್ಕೆ ಮೀಸಲು (ದ್ವಿಲಕೋಟೆ ಪದ್ಧತಿ)				
10.	123	100.00	1,50,000/–	01	ವರ್ಗ–1
	ಸಾಮಾನ್ಯರಿಗೆ ಮೀಸಲು (ದ್ವಿಲಕೋಟೆ ಪದ್ಧತಿ)				
11.	122 (2ನೇ ಕರೆ)	50.00	1,00,000/–	01	ಸಾಮಾನ್ಯರಿಗೆ
12.	122	50.00	1,00,000/–	01	ಸಾಮಾನ್ಯರಿಗೆ
13.	123	50.00	1,00,000/–	01	ಸಾಮಾನ್ಯರಿಗೆ
14.	127	50.00	1,00,000/–	01	ಸಾಮಾನ್ಯರಿಗೆ
15.	123 (2ನೇ ಕರೆ)	100.00	2,00,000/–	01	ಸಾಮಾನ್ಯರಿಗೆ
16.	126 (4ನೇ ಕರೆ)	100.00	2,00,000/–	01	ಸಾಮಾನ್ಯರಿಗೆ
17.	124	150.00	2,25,000/–	01	ಸಾಮಾನ್ಯರಿಗೆ
18.	126	150.00	2,25,000/–	01	ಸಾಮಾನ್ಯರಿಗೆ
19.	127	150.00	2,25,000/–	01	ಸಾಮಾನ್ಯರಿಗೆ
20.	128	150.00	2,25,000/–	01	ಸಾಮಾನ್ಯರಿಗೆ
21.	125	180.00	1,60,000/–	01	ಸಾಮಾನ್ಯರಿಗೆ
22.	ವಾರ್ಡ್ ಸಂಖ್ಯೆ–123 ಗಾಂಧಿನಗರದ ಬೃ.ಬೆಂ.ಮ.ಪಾಲಿಕೆ ವಿಭಾಗೀಯ ಕಚೇರಿ ನಿರ್ಮಾಣ ಮತ್ತು ವಲಯ ಕಚೇರಿ ಕಟ್ಟಡಗಳಿಗೆ ಸುಧಾರಣೆಗಳನ್ನು ಮಾಡುವುದು. (ಪ್ಯಾಕೇಜ್–1) ಅಂದಾಜು ಮೊತ್ತ: ₹.500.00 ಲಕ್ಷಗಳು, ಇಎಂಡಿ:₹.1,00,000+ (4,00,000 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)				
23.	ಗಾಂಧಿನಗರ ಉಪ ವಿಭಾಗದಲ್ಲಿ ಬೃ.ಬೆಂ.ಮ.ಪಾಲಿಕೆ ಉದ್ಯಾನವನಗಳು, ಸಮುದಾಯ ಭವನ, ಶೌಚಾಲಯಯಗಳು ಮತ್ತು ಸ್ಮಶಾನಗಳಲ್ಲಿ ದುರಸ್ತಿಗಳು ಮತ್ತು ಸುಧಾರಣೆಗಳನ್ನು ಮಾಡುವುದು. (ಪ್ಯಾಕೇಜ್–4) ಅಂದಾಜು ಮೊತ್ತ: ₹.500.00 ಲಕ್ಷಗಳು, ಇಎಂಡಿ :₹.1,00,000+ (4,00,000 ಲಕ್ಷಗಳು ಬ್ಯಾಂಕ್ ಗ್ಯಾರಂಟಿ)				

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **13.02.2025**ರ ಸಂಜೆ **4:00** ಗಂಟೆಯವರೆಗೆ. (2) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **15.02.2025**ರ ಮಧ್ಯಾಹ್ನ **12:30** ಗಂಟೆಗೆ ತೆರೆಯಲಾಗುವುದು. (3) ಆರ್ಥಿಕ ಬಿಡ್ ತೆರಯುವ ದಿನಾಂಕ ಮತ್ತು ಸಮಯ (ಕೆಪಿಪಿಪಿ ಮೂಲಕ ತಿಳಿಸಲಾಗುವುದು)
ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.
ಸಂಖ್ಯೆ : ಕಗೃಮಂ/ಕಾ/ಹಂಚಿಕೆ/ಸತ್ತೂರು–ಹುಬ್ಬಳ್ಳಿ/2024–25 ದಿನಾಂಕ: 21–01–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಧಾರವಾಡ ಜಿಲ್ಲೆ ಸತ್ತೂರು 3ನೇ ಹಂತ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ವರ್ಗದ ನಿವೇಶನಗಳನ್ನು ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಜಿದಾರರು **e-payment** ಮೂಲಕ ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ ದಿನಾಂಕ : 22–01–2025 ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 07–02–2025 ಆಗಿರುತ್ತದೆ.

ಕ್ರಮ ಸಂಖ್ಯೆ	ಸ್ವತ್ತಿನ ವರ್ಗ	ಅಂದಾಜು ಲಭ್ಯವಿರುವ ನಿವೇಶನಗಳು	ನೊಂದಣಿ ಶುಲ್ಕ (ರೂ)	ಆರಂಭಿಕ ಠೇವಣಿ (ರೂ)	ಮಂಡಳಿಯ ದರ (ಪ್ರತಿ ಚ.ಮೀ/ ಚ.ಅ ಗೆ ರೂ ಗಳಲ್ಲಿ)
1.	EWS	38	300/-	25,000/-	ರೂ. 6081.66 ಚ.ಮೀ.ಗೆ ರೂ. 565.00 ಚ.ಅ.ಗೆ
2.	LIG	25	500/-	50,000/-	ರೂ. 12,109.50 ಚ.ಮೀ.ಗೆ ರೂ. 1,125.00 ಚ.ಅ.ಗೆ
3.	MIG	35	1000/-	75,000/-	
4.	HIG	11	1500/-	1,00,000/-	

ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣವನ್ನು **e-payment** ಮೂಲಕ ಪಾವತಿಸಿ ಅರ್ಜಿ ನೋಂದಣಿ ಮಾಡಿಕೊಳ್ಳಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು.
ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/4466/Zen/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸಮಸ್ಯೆಗಳಿಗೆ ಪರಿಹಾರ ಹುಡುಕದೆ, ಆ ಬಗ್ಗೆ ನಿರಂತರವಾಗಿ ಕೊರಗುತ್ತಾ, ದೂರುತ್ತಾ ಕೂತರೆ ಬದುಕು ಶೋಚನೀಯವಾಗುತ್ತದೆ. –ಗುರುರಾಜ ಕರಜಗಿ

ಅತ್ಯಾಚಾರ ಅಪರಾಧಿಗೆ ಶಿಕ್ಷೆ ತ್ವರಿತ ನ್ಯಾಯದಾನಕ್ಕೆ ನಿದರ್ಶನ

ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ಕರ್ತವ್ಯದಲ್ಲಿದ್ದ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಆಕೆಯನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಸಂಜಯ್ ರಾಯ್ ಅಪರಾಧಿ ಎಂದು ಘೋಷಿಸಿ, ಆತ ಕೊನೆಯುಸಿರು ಇರುವವರೆಗೂ ಜೈಲಿನಲ್ಲಿರಬೇಕು ಎಂದು ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಇದರಿಂದಾಗಿ, ಇಡೀ ದೇಶದ ಗಮನಸೆಳೆದ, ವೈದ್ಯರು ಮತ್ತು ನಾಗರಿಕ ಸಮಾಜದ ಆಕ್ರೋಶಕ್ಕೆ ಕಾರಣವಾದ, ತೀವ್ರ ಪ್ರತಿಭಟನೆಗಳಿಗೆ ದಾರಿ ಮಾಡಿಕೊಟ್ಟ ಪ್ರಕರಣವೊಂದಕ್ಕೆ ತಾರ್ಕಿಕ ಅಂತ್ಯ ಕಾಣಿಸಿದಂತಾಗಿದೆ. ಅಪರಾಧಿ ರಾಯ್ ಕೋಲ್ಕತ್ತ ಪೊಲೀಸ್ ಇಲಾಖೆಯಲ್ಲಿ ನಾಗರಿಕ ಸ್ವಯಂಸೇವಕನಾಗಿ ಕೆಲಸ ಮಾಡುತ್ತಿದ್ದ. ಪ್ರಕರಣದ ತನಿಖೆಯನ್ನು ಆರಂಭದಲ್ಲಿ ಕೋಲ್ಕತ್ತ ಪೊಲೀಸರು ನಡೆಸಿದ್ದರು. ನಂತರ ಇದನ್ನು ಸಿಬಿಐಗೆ ವಹಿಸಲಾಯಿತು. ತನಿಖೆಯನ್ನು ತ್ವರಿತವಾಗಿ ನಡೆಸಿದ್ದನ್ನು ಹಾಗೂ ವಿಚಾರಣೆಯನ್ನು ನ್ಯಾಯಾಲಯವು ವಿಳಂಬವಿಲ್ಲದೆ ಪೂರ್ಣಗೊಳಿಸಿದ್ದನ್ನು ಮೆಚ್ಚಬೇಕು. ಅಪರಾಧಿಯನ್ನು ಜೀವನಪೂರ್ತಿ ಜೈಲುವಾಸಕ್ಕೆ ಗುರಿಪಡಿಸುವುದು ಮರಣದಂಡನೆಯನ್ನು ಹೊರತುಪಡಿಸಿದ ಅತ್ಯಂತ ಕಠಿಣವಾದ ಶಿಕ್ಷೆಯೆಂದು ಪರಿಗಣಿಸಬಹುದು. ರಾಯ್‌ಗೆ ಮರಣದಂಡನೆ ವಿಧಿಸಬೇಕು ಎಂದು ಸಿಬಿಐ ಕೋರಿತ್ತಾದರೂ ಈ ಪ್ರಕರಣವು ಅತ್ಯಂತ ಅಪರೂಪದಲ್ಲಿ ಅಪರೂಪದ್ದಲ್ಲ ಎಂದು ನ್ಯಾಯಾಧೀಶ ಅನಿರ್ಬನ್ ದಾಸ್ ಹೇಳಿದ್ದಾರೆ. ಈ ಕಾರಣದಿಂದಾಗಿಯೇ ರಾಯ್‌ಗೆ ಅವರು ಮರಣದಂಡನೆ ವಿಧಿಸಿಲ್ಲ. ರಾಯ್‌ಗೆ ಗಲ್ಲು ಶಿಕ್ಷೆಯನ್ನೇ ವಿಧಿಸಬೇಕು ಎಂಬ ಆಗ್ರಹವು ಸಂತ್ರಸ್ತೆಯ ಪಾಲಕರಿಂದ, ವೈದ್ಯ ಸಮೂಹದಿಂದ ಹಾಗೂ ಇತರ ಕೆಲವು ವರ್ಗಗಳಿಂದ ಬಂದಿತ್ತು. ಈತನಿಗೆ ಗಲ್ಲು ಶಿಕ್ಷೆ ವಿಧಿಸದೇ ಇದ್ದುದಕ್ಕೆ ಕೆಲವರು ನಿರಾಸೆ ವ್ಯಕ್ತಪಡಿಸಿದ್ದಾರೆ.

ಶಿಕ್ಷೆಯು ಎಷ್ಟು ಕಠಿಣ ಎಂಬುದಕ್ಕಿಂತಲೂ ಶಿಕ್ಷೆ ಆಗುವುದು ಖಚಿತ ಎನ್ನುವ ವಾತಾವರಣ ಮೂಡಿಸಬೇಕು

ಮರಣದಂಡನೆ ವಿಧಿಸಲಾಗುವ ಅಥವಾ ಮರಣದಂಡನೆ ವಿಧಿಸಬೇಕು ಎಂದು ಕೋರಲಾಗುವ ಪ್ರತಿ ಪ್ರಕರಣವೂ ನ್ಯಾಯದಾನ ವ್ಯವಸ್ಥೆಯ ಮೂಲ ತತ್ವಗಳನ್ನು ಮತ್ತೊಮ್ಮೆ ಹೇಳುವುದಕ್ಕೆ ಒಂದು ಸಂದರ್ಭವಾಗಿ ಒದಗಿಬರುತ್ತದೆ. ಅಪರಾಧಿಗೆ ಮರಣ ದಂಡನೆ ವಿಧಿಸುವುದು ಅಂದರೆ, ಪ್ರಭುತ್ವವು ವ್ಯಕ್ತಿಯೊಬ್ಬನನ್ನು ಕೊಲ್ಲುವುದು. ಈ ರೀತಿ ಮಾಡುವುದರಿಂದ ನ್ಯಾಯದಾನದ ಆಶಯವನ್ನೇ ಮರೆತಂತೆ ಆಗುತ್ತದೆ. ಕೇರಳದ ನ್ಯಾಯಾಲಯವೊಂದು 24 ವರ್ಷ ವಯಸ್ಸಿನ ಯುವತಿಯೊಬ್ಬಳಿಗೆ ಗಲ್ಲು ಶಿಕ್ಷೆ ವಿಧಿಸಿದೆ. ಈ ಯುವತಿಯು ತನ್ನ ಪ್ರಿಯಕರನಿಗೆ ಕಷಾಯದಲ್ಲಿ ವಿಷ ಬೆರೆಸಿ ಕೊಟ್ಟು, ಆತನನ್ನು ಕೊಂದಿದ್ದಳು. ಯುವತಿಗೆ ಮರಣದಂಡನೆ ವಿಧಿಸಿದ್ದರಿಂದಾಗಿ ಸಂತ್ರಸ್ತ ವ್ಯಕ್ತಿ ಹಾಗೂ ಆತನ ಕುಟುಂಬಕ್ಕೆ ನ್ಯಾಯ ಸಿಕ್ಕಂತೆ ಆಗಿದೆ ಎಂದು ಹಲವರು ಪ್ರಶಂಸಿಸಿದ್ದಾರೆ. ಆದರೆ, ಅಪರಾಧಿ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಗೆ ತನ್ನ ವ್ಯಕ್ತಿತ್ವದಲ್ಲಿ ಸುಧಾರಣೆ ತಂದುಕೊಳ್ಳಲು ಅವಕಾಶವನ್ನೇ ಕೊಡದೆ, ಆ ವ್ಯಕ್ತಿಯ ಜೀವ ತೆಗೆಯುವುದರಿಂದ ಆಗುವ ಅನ್ಯಾಯದ ಬಗ್ಗೆ ಹೆಚ್ಚಿನವರು ಮಾತನಾಡುತ್ತಿಲ್ಲ. ನಿಜವಾದ ನ್ಯಾಯದಾನ ವ್ಯವಸ್ಥೆಯು ಅಪರಾಧಿಯಲ್ಲಿ ಸುಧಾರಣೆ ತರುವ ಉದ್ದೇಶವನ್ನು ಹೊಂದಿರುತ್ತದೆಯೇ ವಿನಾ ಅಪರಾಧಿಯ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ಉದ್ದೇಶವನ್ನು ಹೊಂದಿರುವುದಿಲ್ಲ. ಅಪರಾಧಿಯನ್ನು ಕೊಂದು, ನ್ಯಾಯದಾನ ಆಗಿದೆ ಎಂದು ಭಾವಿಸುವುದು ಆದಿಯುಗದ ನ್ಯಾಯದಾನದ ಪರಿಕಲ್ಪನೆ. ಅದು, ಹತ್ಯೆಗೆ ಹತ್ಯೆಯ ಮೂಲಕ ಸೇಡು ತೀರಿಸಿಕೊಂಡು, ನ್ಯಾಯದಾನ ಆಯಿತು ಎಂದು ಭಾವಿಸುವ ಆಲೋಚನೆ. ಈ ವಿಚಾರಗಳನ್ನು ಕೋಲ್ಕತ್ತದ ನ್ಯಾಯಾಧೀಶರು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧಿಯು ಜೀವ ಇರುವವರೆಗೆ ಜೈಲಿನಲ್ಲೇ ಇರಬೇಕು ಎಂಬ ಆದೇಶ ಕೂಡ ಆ ವ್ಯಕ್ತಿಗೆ ತನ್ನಲ್ಲಿ ಸುಧಾರಣೆ ತಂದುಕೊಳ್ಳುವ ಹಾಗೂ ಸಮಾಜದಲ್ಲಿ ಮತ್ತೆ ಒಂದಾಗುವ ಅವಕಾಶವನ್ನು ನಿರಾಕರಿಸುತ್ತದೆ. ಶಿಕ್ಷೆಯು ಎಷ್ಟು ಕಠಿಣ ಎಂಬುದಕ್ಕಿಂತಲೂ ಶಿಕ್ಷೆ ಆಗುವುದು ಖಚಿತ ಎನ್ನುವ ವಾತಾವರಣವು ಅಪರಾಧ ಕೃತ್ಯ ಆಗುವುದನ್ನು ತಡೆಯುವ ಕೆಲಸ ಮಾಡುತ್ತದೆ ಎಂಬ ಮಾತು ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿ ಇದೆ. ಕೋಲ್ಕತ್ತದಲ್ಲಿ ನಡೆದ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಜೊತೆ ಮಹಿಳೆಯರ ಸುರಕ್ಷತೆ, ಕೆಲಸದ ಸ್ಥಳಗಳಲ್ಲಿನ ಸುರಕ್ಷತೆ, ಪೊಲೀಸರು ಮತ್ತು ಇತರ ಕೆಲವು ಅಧಿಕಾರಿಗಳ ನಡತೆಯಂತಹ ವಿಚಾರಗಳು ಬೆಸೆದುಕೊಂಡಿವೆ. ಅಪರಾಧಿಗೆ ಮರಣದಂಡನೆ ವಿಧಿಸುವುದರಿಂದ ಈ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ವೈಯಕ್ತಿಕ ಜೀವನ ಅಥವಾ ಸಮಾಜ ಜೀವನದಲ್ಲಿ ಕೊಲ್ಲುವುದರಿಂದ ಯಾವ ಸಮಸ್ಯೆಗೂ ಪರಿಹಾರ ಸಿಗದು.

ದಿನದ ಟ್ವೀಟ್

ಬೇಕಾಗಿದೆ ಸೂಚನಾ ಫಲಕ

ತುಮಕೂರು– ಬೆಂಗಳೂರು ರಸ್ತೆಯಲ್ಲಿ ಅಪಾಯದ ಮುನ್ಸೂಚನೆ ನೀಡುವ ಮತ್ತು ಸುರಕ್ಷತೆಗೆ ಸಂಬಂಧಿಸಿದ ಬಹಳಷ್ಟು ಸೂಚನಾ ಫಲಕಗಳನ್ನು ಅಳವಡಿಸಬೇಕಾದ ಅಗತ್ಯ ಇದೆ. ಎಲ್ಲ ಚಾಲಕರಿಗೂ ಸವಾಲೆನಿಸುವ ರಸ್ತೆ ಇದು. ದಯಮಾಡಿ ಈ ಬಗ್ಗೆ ಗಮನಹರಿಸಿ. ಬೆಂಗಳೂರು– ಮೈಸೂರಿಗೆ ಇರುವಂತೆ ನಿಶ್ಚಿತವಾಗಿಯೂ ಇಲ್ಲಿ ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಿಸಬೇಕಾಗಿದೆ.

ಮಲ್ಲಿಕಾರ್ಜುನ್, ಎಂಜಿನಿಯರ್

ಕಿಡಿನುಡಿ

ವಿರೋಧ ಪಕ್ಷದಲ್ಲಿ ಆಂತರಿಕ ಭಿನ್ನಮತ ಇದ್ದರೆ ಪಕ್ಷದ ಮೇಲಷ್ಟೇ ಪರಿಣಾಮ ಬೀರುತ್ತದೆ. ಆಡಳಿತ ಪಕ್ಷದಲ್ಲಿ ಹಗ್ಗ ಜಗ್ಗಾಟ ಇದ್ದರೆ ಸರ್ಕಾರದ ಯೋಜನೆಗಳು ಜನರಿಗೆ ತಲುಪುವುದಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಮಂತ್ರಿಯೇ ಅಧಿಕಾರದ ಹಗ್ಗ ಜಗ್ಗಾಟದಲ್ಲಿ ಇದ್ದರೆ ಆಡಳಿತ ಹಿಡಿತ ತಪ್ಪುತ್ತದೆ. ದರೋಡೆ ಮಾಡುವವರು ರಾಜಾರೋಷವಾಗಿ ಮಾಡುತ್ತಾರೆ.

ಕೋಟ ಶ್ರೀನಿವಾಸ ಪೂಜಾರಿ, ಸಂಸದ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 22-1-2000

- **ಸ್ನಾತಕೋತ್ತರ ಪದವಿ: ಕಂಪ್ಯೂಟರ್ ವಿಷಯ ಕಡ್ಡಾಯ**

ಬೆಂಗಳೂರು, ಜ. 21– ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ಪದವಿ ತರಗತಿಗಳಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ‘ಕಂಪ್ಯೂಟರ್ ಅಪ್ಲಿಕೇಶನ್’ ವಿಷಯವನ್ನು ಕಡ್ಡಾಯವಾಗಿ ಅಳವಡಿಸುವ ಕಾರ್ಯ ವಿಶ್ವವಿದ್ಯಾಲಯದಲ್ಲಿ ಭರದಿಂದ ಸಾಗಿದೆ.

ಈ ವರ್ಷದ ಜುಲೈ ತಿಂಗಳಲ್ಲಿ ಸ್ನಾತಕೋತ್ತರ ಪದವಿಗೆ ಹೊಸದಾಗಿ ನೋಂದಾಯಿಸುವ ಯಾವುದೇ ವಿಷಯದ ವಿದ್ಯಾರ್ಥಿಗಳು ಕಂಪ್ಯೂಟರ್ ಅಪ್ಲಿಕೇಶನ್ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಆದರೆ ಪಠ್ಯಕ್ರಮವು ವಿಜ್ಞಾನ ಹಾಗೂ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿರುತ್ತದೆ.

- **ದೋಣಿ ದುರಂತ: 5 ಮಕ್ಕಳ ಸಾವು**

ಮಂಗಳೂರು, ಜ. 21– ದೋಣಿ ವಿಹಾರಕ್ಕೆಂದು ತೆರಳಿದ್ದ ನಗರದ ಐವರು ಶಾಲಾ ಬಾಲಕಿಯರು ಇಲ್ಲಿಗೆ ಸಮೀಪದ ಪಿಲಿಕುಳ ನಿಸರ್ಗಧಾಮದಲ್ಲಿ ನೀರಿನಲ್ಲಿ ಮುಳುಗಿ ಸತ್ತಿದ್ದು, ಅವರನ್ನು ರಕ್ಷಿಸಲು ಶ್ರಮಿಸಿದ ಸ್ಥಳೀಯರೊಬ್ಬರೂ ಸತ್ತ ದಾರುಣ ಘಟನೆ ಇಂದು ಬೆಳಿಗ್ಗೆ ನಡೆದಿದೆ.

ಇಲ್ಲಿಂದ ಸುಮಾರು 15 ಕಿ.ಮೀ. ದೂರದ ನಿಸರ್ಗಧಾಮದ ವೀಕ್ಷಣೆಗೆ ತೆರಳಿದ ಇಲ್ಲಿನ ಸೇಂಟ್ ಆ್ಯನ್ಸ್ ಪ್ರೌಢಶಾಲೆಯ ಹೆಣ್ಣುಮಕ್ಕಳು ಅಲ್ಲಿನ ಸರೋವರದಲ್ಲಿ ದೋಣಿ ವಿಹಾರ ನಡೆಸುವಾಗ, ಯಾಂತ್ರಿಕ ದೋಣಿ ಮಗುಚಿ ಐವರು ಸತ್ತಿದ್ದಾರೆ. ಇವರನ್ನು ರಕ್ಷಿಸಲು ಹೋದ ಸ್ಥಳೀಯ ವ್ಯಕ್ತಿ ಸುರೇಶ (40) ಎಂಬುವರೂ ಸತ್ತಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 22-1-1975

- **‘ಮುಗ್ಧ’ ವಿದ್ಯಾರ್ಥಿಗಳಲ್ಲದೆ ಬೇರೆ ಯಾರದಾದರೂ ಕೈವಾಡ**

ಬೆಂಗಳೂರು, ಜ. 21– ತಮ್ಮ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು ಈಗ ನಡೆಸುತ್ತಿರುವ ಚಳವಳಿಯಲ್ಲಿ ‘ಮುಗ್ಧ’ ವಿದ್ಯಾರ್ಥಿಗಳಲ್ಲದೆ ಬೇರೆ ಯಾರದಾದರೂ ಕೈವಾಡವಿರಬಹುದೆಂದು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗೆ ‘ಬಲವಾದ ಸಂಶಯ’.

ವಿಶ್ವವಿದ್ಯಾಲಯಕ್ಕೆ ‘ಸಂಬಂಧವೇ ಇಲ್ಲದ’ ವಿಷಯದಲ್ಲಿ ಚಳವಳಿ ನಡೆಯುತ್ತಿರುವುದನ್ನು ನೋಡಿದರೆ ‘ಇದರಲ್ಲಿರುವುದು ವಿದ್ಯಾರ್ಥಿಗಳಷ್ಟೇನೋ ಅಥವಾ ಸ್ವಾರ್ಥದ ಹಿತಕ್ಕಾಗಿ ವಿದ್ಯಾರ್ಥಿಗಳನ್ನು ಬೇರೆ ಯಾರಾದರೂ ಉಪಯೋಗಿಸಿಕೊಳ್ಳುತ್ತಿದ್ದಾರೋ’ ಅಂತ ತಮಗೆ ಬಲವಾದ ಸಂಶಯ ಉಂಟಾಗಿದೆ ಎಂದು ಡಾ. ಎಚ್. ನರಸಿಂಹಯ್ಯನವರು ಸಂಜೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಒಳ್ಳೆಯ ವಿದ್ಯಾರ್ಥಿಗಳಿಗೆ ಈಗಿನ ಚಳವಳಿಯಿಂದ ತೊಂದರೆಯಾಗುತ್ತಿದೆ ಎಂಬುದು ಉಪಕುಲಪತಿಯ ‘ಸಂಕಟ’.

‘ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಏಕೆ ಈ ಕರ್ಮ? ಎರಡು ವರ್ಷ, ಮೂರು ವರ್ಷಕ್ಕೊಂದು ಬಾರಿಯಂತೆ ಏಕೆ ಈ ಗತಿ ಬರುತ್ತಿದೆ? ಈ ವಿಶ್ವವಿದ್ಯಾಲಯವನ್ನು ಬೆಳೆಸಬೇಕೆಂದು ಆಸೆ ಇಟ್ಟುಕೊಂಡಿರುವವರಿಗೆ ಈ ಸ್ಥಿತಿ ಕಂಡು ಸಂಕಟವಾಗುತ್ತಿದೆ’ ಎಂದು ದುಃಖ ತೋಡಿಕೊಂಡು, ‘ಬಹು ಸಂಖ್ಯೆಯ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಕೆಲವೇ ಮಂದಿ ವಿದ್ಯಾರ್ಥಿಗಳು ಅಡ್ಡಿಯಾಗುತ್ತಾ ಹೋಗುವುದು ಯಾವ ನ್ಯಾಯ?’ ಎಂದರು.

ಬಹೂಪಯೋಗಿ ಆಕಾಶವಾಣಿ, ದೂರದರ್ಶನವನ್ನು ಬದುಕಿಸಿ ಭವಿಷ್ಯಕ್ಕೆ ಕರೆದೊಯ್ಯಬೇಕಿದೆ

ಜನಸ್ನೇಹಿ ಮಾಧ್ಯಮದ ಮೇಲೆ ಕರಿಛಾಯೆ

ವಿಶ್ಲೇಷಣೆ

ಬಸವರಾಜ ಸಾದರ

ಸಂವಹನ, ವಾರ್ತಾ ಮತ್ತು ತಂತ್ರಜ್ಞಾನ ಕುರಿತ ಸಂಸದೀಯ ಸಮಿತಿಯು, ‘ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ವರ್ಷದಿಂದ ವರ್ಷಕ್ಕೆ ಉದ್ಯೋಗಿಗಳು ಕಡಿಮೆಯಾಗುತ್ತಲೇ ಬರುತ್ತಿದ್ದಾರೆ. ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯೂ ನಡೆಯುತ್ತಿಲ್ಲ’ ಎಂಬ ಆಕ್ಷೇಪಣಾ ವರದಿಯನ್ನು 2024ರ ಡಿಸೆಂಬರ್ 18ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅದಕ್ಕೆ ಉತ್ತರವಾಗಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು, ‘ಭಾರತದ ಯುವಕರಲ್ಲಿ ಪ್ರತಿಭೆಯ ಕೊರತೆ ಇದೆ. ಆದ್ದರಿಂದ ಹುದ್ದೆಗಳು ಭರ್ತಿಯಾಗಿಲ್ಲ’ ಎಂಬ ಅಚ್ಚರಿಯ ಹೇಳಿಕೆ ಕೊಟ್ಟಿದೆ. ‘ಮಾಡ್ಲಾರ್ದೇ ಮನೀ ಹಾಳಾತಂತ, ಹೂಡ್ಲಾರ್ದೇ ಹೊಲಾ ಹಾಳಾತಂತ’ ಎಂಬ ಗಾದೆ ಮಾತಿಗೆ ಸರಿಹೊಂದುವ ಶುದ್ಧ ಸಬೂಬಿನ ಹೇಳಿಕೆಯಿದು.

ವಿವಿಧ ಕ್ಷೇತ್ರಗಳ ಪ್ರತಿಭಾವಂತರನ್ನು ಹುಡುಕಿ, ಬೆಳೆಸಿ, ಪ್ರೋತ್ಸಾಹಿಸುವ ಆಕಾಶವಾಣಿ, ದೂರದರ್ಶನ ಕೇಂದ್ರಗಳನ್ನು ಮುಚ್ಚುವ ಹಂತಕ್ಕೆ ತಂದಿರುವ ಸಚಿವಾಲಯವೇ ಇಂಥ ಬೇಜವಾಬ್ದಾರಿ ಹೇಳಿಕೆ ಕೊಟ್ಟಿರುವುದು ಹಾಸ್ಯಾಸ್ಪದವಷ್ಟೇ ಅಲ್ಲ, ದೇಶದ ಕ್ರಿಯಾಶೀಲ ಹಾಗೂ ಸೃಜನಶೀಲ ಪ್ರತಿಭೆಯ ಯುವಕರನ್ನು ನಿಕೃಷ್ಟವಾಗಿ ಪರಿಗಣಿಸುವ ಸಣ್ಣತನವೂ ಹೌದು. ಪ್ರಜಾಪ್ರಭುತ್ವದಲ್ಲಿ ಜನಸ್ನೇಹಿ ಹಾಗೂ ಬಹೂಪಯೋಗಿಯಾಗಿರುವ ಈ ಮಾಧ್ಯಮಗಳನ್ನು ಬದುಕಿಸಲು ಬೇಕಾಗಿರುವ ಕ್ರಮ-ಶ್ರಮ-ಕರ್ತವ್ಯಗಳನ್ನು ನಿಭಾಯಿಸದೆ, ಇಂಥ ಹೇಳಿಕೆಗಳನ್ನು ಕೊಟ್ಟು ಜನರ ಗಮನವನ್ನು ಬೇರೆಡೆ ಹರಿಸುತ್ತಿರುವುದು ಇಡೀ ದೇಶಕ್ಕೆ ಮಾಡುತ್ತಿರುವ ಬಹುದೊಡ್ಡ ಅವಮಾನ.

ನಮ್ಮ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ‘ಸಮೂಹ ಮಾಧ್ಯಮ ಅಧ್ಯಯನ ವಿಭಾಗ’ಗಳಿವೆ. ವಿವಿಧ ಮಾಧ್ಯಮಗಳ ಕುರಿತಾಗಿ ಕೂಲಂಕಷ ಅಧ್ಯಯನ ಮಾಡಿ, ಪರಿಣತಿ ಪಡೆದು, ಇಂದಿನ ಮಾಧ್ಯಮ ಜಗತ್ತಿನ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಗಳಿಸಿಕೊಂಡ ಸಾವಿರಾರು ವಿದ್ಯಾರ್ಥಿಗಳು ಈ ವಿಭಾಗಗಳಿಂದ ಪ್ರತಿವರ್ಷವೂ ಹೊರಬರುತ್ತಾರೆ. ಅದರಲ್ಲೂ ವಿದ್ಯುನ್ಮಾನ (ಧ್ವನಿ ಮತ್ತು ದೃಶ್ಯ) ಮಾಧ್ಯಮ ವಿಷಯವನ್ನು ಪ್ರತ್ಯೇಕವಾಗಿಯೇ ಓದುವ ಅಸಂಖ್ಯ ವಿದ್ಯಾರ್ಥಿಗಳೂ ಇದ್ದಾರೆ. ದೃಶ್ಯಮಾಧ್ಯಮದ ಕಾರ್ಯಕ್ರಮ ನಿರ್ಮಾಣದ ತರಬೇತಿ ಕೊಡುವ ಸಂಸ್ಥೆಗಳೂ ಇಲ್ಲಿವೆ. ಇಂಥಲ್ಲಿ ಮಾರ್ಗದರ್ಶನ ಪಡೆದು ಹೊರಬರುವ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಉದ್ಯೋಗ ಕಲ್ಪಿಸುವ ಜವಾಬ್ದಾರಿಯನ್ನು ನಿಭಾಯಿಸದೆ, ಸುಳ್ಳು ಕಾರಣ ಕೊಟ್ಟು ಕೈ ತೊಳೆದುಕೊಳ್ಳುತ್ತಿರುವುದು ಪ್ರಸಾರ ಸಚಿವಾಲಯದ ಪಲಾಯನ ತಂತ್ರವೇ ಆಗಿದೆ.

ಈ ಹೇಳಿಕೆಯಲ್ಲಿ, ನಮ್ಮ ಎಲ್ಲ ವಿಶ್ವವಿದ್ಯಾಲಯಗಳೂ ವಿದ್ಯುನ್ಮಾನ ಮಾಧ್ಯಮದ ತರಬೇತಿ ಕೇಂದ್ರಗಳೂ ಪ್ರತಿಭಾವಂತರನ್ನು ಸೃಷ್ಟಿಸುವಲ್ಲಿ ಸಂಪೂರ್ಣ ಸೋತು ಹೋಗಿವೆಯೆಂಬ ಅರ್ಥವೂ ಇದೆ. ನಮ್ಮ ಎಲ್ಲ ವಿಶ್ವ-ವಿದ್ಯಾಲಯಗಳೂ ಇಂಥ ಹೇಳಿಕೆಯನ್ನು ಕೇಳಿಯೂ ಮೌನದಿಂದಿರುವುದು ಬಹುದೊಡ್ಡ ಚೋದ್ಯ. ಅಚ್ಚರಿಯ ಮಾತೆಂದರೆ, ಈ ಸಂಸ್ಥೆಗಳಲ್ಲಿ ಕೆಲವನ್ನು ಕೇಂದ್ರ ಸರ್ಕಾರವೇ ನಿರ್ವಹಿಸುತ್ತಿದೆ. ಹಾಗಾದರೆ, ಪ್ರತಿಭೆಗಳನ್ನು ಸೃಷ್ಟಿಸಬೇಕಾದ ಈ ಸಂಸ್ಥೆಗಳು ಹಾಳು ಬಿದ್ದಿವೆಯೇ? ಹಾಳು ಬಿದ್ದಿದ್ದರೆ ಅದಕ್ಕೆ ಕಾರಣರಾರು?

ಇನ್ನೊಂದು ಮಾತೆಂದರೆ, ಪ್ರತಿಭಾವಂತರು ವಿಶ್ವವಿದ್ಯಾಲಯಗಳಲ್ಲಿ ಅಥವಾ ಸರ್ಕಾರಿ ಸಂಸ್ಥೆಗಳಲ್ಲಿ ಮಾತ್ರ ನಿರ್ಮಾಣವಾಗುವುದಿಲ್ಲ. ನೂರಾರು ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಪ್ರತಿಭೆ ಹೊಂದಿರುವ ಅಸಂಖ್ಯ ಜನ ಈ ದೇಶದಲ್ಲಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳು ಬಯಸುವ ಕಾರ್ಯಕ್ಷಮತೆಯನ್ನು ಹೊಂದಿರುವ ಬುದ್ಧಿವಂತರೂ ಇಲ್ಲಿ ಬಹಳಷ್ಟು ಜನರಿದ್ದಾರೆ. ಅಂಥವರ ಪ್ರತಿಭೆಯನ್ನು ಗುರುತಿಸುವ ಕೆಲಸವನ್ನು ಈ ಸಚಿವಾಲಯ ಮಾಡಬಹುದಲ್ಲವೆ? ಅದು ಆಗುತ್ತಿಲ್ಲವೆಂದರೆ, ಪ್ರತಿಭೆಯನ್ನು ಗುರುತಿಸಬೇಕಾದ ಸಚಿವಾಲಯದಲ್ಲೇ ಏನೋ ದೋಷವಿದೆ ಮತ್ತು ಅಲ್ಲಿ ‘ಶುದ್ಧ ಮನಸ್ಸುಗಳ’ ಕೊರತೆ ಇದೆಯೆಂದೇ ಅರ್ಥವಲ್ಲವೆ?

ಆಕಾಶವಾಣಿ ಹಾಗೂ ದೂರದರ್ಶನ ಸಂಸ್ಥೆಗಳ ಮೇಲೆ 1997ರಲ್ಲಿ ‘ಪ್ರಸಾರ ಭಾರತಿ’ ದಾಳಿ ಮಾಡಿದ ಹಂತದಿಂದಲೇ ಅವುಗಳ ಮೇಲೆ ಕರಿಛಾಯೆ ಆವರಿಸತೊಡಗಿತು. ಅವರೆಗೆ ಈ ಎರಡೂ ಸಂಸ್ಥೆಗಳು ಮಹಾನಿರ್ದೇಶನಾಲಯಗಳ ಮೂಲಕವೇ ತಮ್ಮ ತಮ್ಮ ಆಡಳಿತ, ಕಾರ್ಯಕ್ರಮ ಹಾಗೂ ತಾಂತ್ರಿಕ ವಿಭಾಗಗಳ ಕಾರ್ಯಕ್ಷಮತೆಯನ್ನು ತುಂಬ ಅಚ್ಚುಕಟ್ಟಾಗಿಯೇ ನಿರ್ವಹಿಸಿಕೊಂಡು ಬಂದಿದ್ದವು. ಪ್ರಸಾರ ಭಾರತಿ ಬಂದ ಲಾಗಾಯ್ತಿನಿಂದಲೇ ಈ ಸಂಸ್ಥೆಗಳಲ್ಲಿ ಸಿಬ್ಬಂದಿಯ ಕೊರತೆ ಕಾಣತೊಡಗಿತು. ಸರ್ಕಾರವೇ ಹೇಳುವ ಅಧಿಕೃತ ಅಂಕಿ-ಸಂಖ್ಯೆಗಳ ಪ್ರಕಾರ, ನಿಗದಿತ 46 ಸಾವಿರ ಹುದ್ದೆಗಳ ಪೈಕಿ, ಮೂರನೆಯ ಎರಡರಷ್ಟು ಹುದ್ದೆಗಳು ಈಗ ಖಾಲಿ ಇವೆಯೆಂದರೆ ಅದಕ್ಕೆ ಪ್ರಸಾರ ಭಾರತಿಯೇ ಕಾರಣವಲ್ಲವೆ? ಹೀಗಿರುವಾಗ, ಬರೀ ಸಬೂಬುಗಳನ್ನು ಹೇಳಿ ಈ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸಾಧ್ಯವೆ?

ಪ್ರಸಾರ ಭಾರತಿ ಮಾಡಿದ ಮತ್ತೊಂದು ಅನಾಹುತವೆಂದರೆ, ಶುದ್ಧ ಸೃಜನಶೀಲ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಾಗಿದ್ದ ಆಕಾಶವಾಣಿ ಮತ್ತು ದೂರದರ್ಶನವನ್ನು ಸರ್ಕಾರಕ್ಕೆ ಆದಾಯ ತಂದುಕೊಡುವ ಕಂದಾಯ ಇಲಾಖೆಯಂತೆ ಪರಿಗಣಿಸಿದ್ದು ಮತ್ತು ಹಣ ಗಳಿಸಿಕೊಡಲು ಒತ್ತಡ ಹೇರಿದ್ದು. ಆ ಕೆಲಸವನ್ನೂ ಅವು ಸವಾಲಾಗಿಯೇ ಸ್ವೀಕರಿಸಿ ಸಾವಿರಾರು ಕೋಟಿ ರೂಪಾಯಿ ಆದಾಯವನ್ನು ತಂದುಕೊಟ್ಟವು. ಹಾಗೆ ಬಂದ ಹಣವು ಪ್ರಸಾರ ಭಾರತಿಯ ನಿರ್ವಹಣೆಗೆ ಹೋಯಿತೇ ವಿನಾ ಅಗತ್ಯವಿರುವ ಹುದ್ದೆಗಳನ್ನು ತುಂಬಲು ಮತ್ತು ಹೊಸ ಕಾರ್ಯಯೋಜನೆಗಳನ್ನು ಹಾಕಿಕೊಳ್ಳಲು ಬಳಕೆಯಾಗಲಿಲ್ಲ. ದುಡಿಯುವ ಪರಿಣತ ಕೈಗಳ ಸಂಖ್ಯೆಯೇ ಕಡಿಮೆಯಾಗುತ್ತಾ ಬಂದಂತೆ ಈ ಸಂಸ್ಥೆಗಳ ಪ್ರಸಾರ ಕಾರ್ಯದಲ್ಲಿ ಮೊದಲಿನ ಗುಣಮಟ್ಟ ಹಾಗೂ ಕಾರ್ಯಕ್ಷಮತೆಯೂ ಉಳಿಯಲಿಲ್ಲ. ಹಿಂದಿನ 27 ವರ್ಷಗಳಿಂದ ಇಲ್ಲಿ ಅಗತ್ಯವಿರುವ ಸಿಬ್ಬಂದಿಯನ್ನೇ ಭರ್ತಿ ಮಾಡಿಲ್ಲವೆಂದರೆ, ಅಲ್ಲಿ ಎಂಥ ಸೃಜನಶೀಲ ಕೆಲಸಗಳಾಗಲು ಸಾಧ್ಯ, ಮಾಡುವವರಾದರೂ ಯಾರು?

ಇದೆಲ್ಲದರ ಪರಿಣಾಮವಾಗಿ, ದೇಶದ ಬಹುತೇಕ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಲ್ಲಿ ಈಗ ಅಳಿದುಳಿದ ಬೆರಳೆಣಿಕೆಯ ಉದ್ಯೋಗಿಗಳು ಮಾತ್ರ ಇದ್ದಾರೆ. ಕರ್ನಾಟಕದ ಎಲ್ಲ ಆಕಾಶವಾಣಿ ಕೇಂದ್ರಗಳಲ್ಲಿ ಈಗ ಒಬ್ಬರು ಅಥವಾ ಇಬ್ಬರು ಕಾರ್ಯಕ್ರಮ ಅಧಿಕಾರಿಗಳು ಉಳಿದಿದ್ದಾರೆ. ಅವರೂ 2025- 26ರಲ್ಲಿ ನಿವೃತ್ತಿ ಹೊಂದುವವರೇ. ವಾಸ್ತವ ಸ್ಥಿತಿ ಹೀಗಿರುವಾಗ, ಅಗತ್ಯವಿರುವ ಹುದ್ದೆಗಳನ್ನು ತುಂಬಲು ಪ್ರಯತ್ನಿಸದೆ, ‘ಭಾರತದ ಯುವಕರಲ್ಲಿ ಪ್ರತಿಭೆಯ ಕೊರತೆ ಇದೆ. ಆದ್ದರಿಂದ ಹುದ್ದೆಗಳು ಭರ್ತಿಯಾಗಿಲ್ಲ’ ಎಂಬಂಥ ಬೀಸು ಹಾಗೂ ಉಡಾಫೆಯ ಹೇಳಿಕೆಗಳನ್ನು ಸಚಿವಾಲಯ ಕೊಡುತ್ತಿದೆ. ಇಂಥ ಸುಳ್ಳನ್ನು ಜನ ನಂಬಬಹುದೆ?

ಇನ್ನೂ ಒಂದು ಕುತೂಹಲಕಾರಿ ಅಂಶವೆಂದರೆ, ಸಿಬ್ಬಂದಿ ಕೊರತೆಯ ಈ ಸಮಸ್ಯೆ ಕಾರ್ಯಕ್ರಮ ವಿಭಾಗದಲ್ಲಿದೆಯೇ ವಿನಾ, ತಾಂತ್ರಿಕ ವಿಭಾಗದಲ್ಲಿ ಅಷ್ಟಾಗಿಲ್ಲ. ಒಟ್ಟಾರೆ ಸತ್ಯವೆಂದರೆ, ಹೀಗೆ ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಹೋಗಿ, ‘ಅದು ತಾನಾಗಿಯೇ ಸತ್ತುಹೋಯಿತು, ಅದಕ್ಕೆ ನಾವು ಕಾರಣರಲ್ಲ’ ಎಂದು ಕೈ ತೊಳೆದುಕೊಳ್ಳುವ ಗೋಪ್ಯ ಹುನ್ನಾರ ಇಲ್ಲಿ ಇದ್ದಂತಿದೆ.

ಕೆಲವೇ ವರ್ಷಗಳ ಹಿಂದೆ ಸುವರ್ಣಯುಗವನ್ನು ಕಂಡಿದ್ದ ಈ ವಿದ್ಯುನ್ಮಾನ ಮಾಧ್ಯಮಗಳು ಈಗ ಅವನತಿಯ ಹಾದಿ ಹಿಡಿದಿರುವುದನ್ನು ನೋಡಿದಾಗ ಕರುಳು ಚುರ್ರ್ ಎನ್ನುತ್ತದೆ. ‘ಬಹುಜನ ಹಿತಾಯ: ಬಹುಜನ ಸುಖಾಯ’, ಮತ್ತು ‘ಸತ್ಯಂ ಶಿವಂ ಸುಂದರಂ’ ಎಂಬ ಧ್ಯೇಯವಾಕ್ಯಗಳನ್ನು ಇಟ್ಟುಕೊಂಡು ಜನಮನ ಗೆದ್ದಿರುವ ಈ ಸಂಸ್ಥೆಗಳು ಸಾಯದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ದೇಶದ ಜನರ ಮೇಲೂ ಇದೆಯಲ್ಲವೆ?

ನಮ್ಮ ಪ್ರಧಾನಿಯವರು ಪ್ರತಿ ತಿಂಗಳು ತಮ್ಮ ‘ಮನ್ ಕಿ ಬಾತ್’ ಭಾಷಣವನ್ನು ಪ್ರಸಾರ ಮಾಡಲು ಇವೇ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅವರೇ ಈಗ ಇವನ್ನು ಉಳಿಸುವ ಮತ್ತು ಬೆಳೆಸುವ ಕೆಲಸಕ್ಕೆ ಮನಸ್ಸು ಮಾಡಬೇಕು. ಇಲ್ಲವಾದರೆ ಆಕಾಶವಾಣಿ ಮತ್ತು ದೂರದರ್ಶನವು ಪುರಾಣ ಕಾಲದಲ್ಲಿದ್ದ ‘ಆಕಾಶವಾಣಿ’ಯಂತಾಗಿ (ಪರಿಕಲ್ಪನೆಯಾಗಿ) ಹೋಗುವ ಕಾಲ ದೂರವಿಲ್ಲ. ಅದಕ್ಕಾಗಿ, ವಾಸ್ತವವನ್ನು ಮುಚ್ಚಿಡದೆ, ಸಚಿವಾಲಯ ಈಗಲಾದರೂ ಎಚ್ಚೆತ್ತು, ಅಗತ್ಯ ಸಿಬ್ಬಂದಿಯನ್ನು ಭರ್ತಿ ಮಾಡಬೇಕು ಹಾಗೂ ಈ ಸಂಸ್ಥೆಗಳಿಗೆ ಅಗತ್ಯವಿರುವ ಪೋಷಕಾಂಶವನ್ನು ಒದಗಿಸಬೇಕು. ಈ ಸಂಸ್ಥೆಗಳನ್ನು ವರ್ತಮಾನದಲ್ಲಿ ಬದುಕಿಸಿ, ಭವಿಷ್ಯಕ್ಕೆ ಕರೆದೊಯ್ಯುವ ಜವಾಬ್ದಾರಿಯನ್ನೂ ಸಚಿವಾಲಯವೇ ನಿರ್ವಹಿಸಬೇಕು.

ಚುರುಮುರಿ



ದರ್ಪಭೂಷಣರು

• ಡಿ.ಎಸ್.ಲಿಂಗರಾಜು

‘ನಿಮ್ಮನೆ ತಾಕೆ ಬಂದುದ್ದೆ. ಬೀಗಹಾಕ್ಯಂದು ಎತ್ತಗೋಗಿದ್ರಿ? ಮರೆತು ಮನಗಿದ್ರೆ ಕಳ್ಳರು ಅದುನ್ನೇ ಕದ್ದುಕೋಯ್ತರೆ ಸಾ’ ತುರೇಮಣೆಗೆ ಎಚ್ಚರಿಸಿದೆ. ‘ಊರಿಗೆ ಕಾರಬ್ಬಕ್ಕೆ ಹೋಗಿದ್ದೆ ಕಲಾ. ದನಿಗೆ ಅಲಂಕಾರ ಮಾಡಿ ಕಿಚ್ಚಾಯಿಸಿದೊ. ಚಿಕ್ಕುಡುಗರಾಗಿದ್ದಾಗ ವರ್ಸಕ್ಕೊಂದು ದಪ ಕಾರುಹಬ್ಬದೇಲಿ ಮಾತ್ರ ಇಡ್ಲಿ ಮಾಡುತ್ತುದ್ರು’ ಅಂತ ಹಳೇ ನೆನಪಿಗೆ ಜಾರಿದ್ರು.

‘ಸಿಎಂ ಆಗಬಕು, ಡಿಸಿಎಂ ಆಗಬಕು, ಅಧ್ಯಕ್ಷಾಗುವಾಗ ಡಿಕಾವಾಗಿ ಕಾಣಿಸಿಗ್ಯಬಕು ಅಂತ ಕೋಡಿಗೆಲ್ಲಾ ಗುನ್ನಂಪಟ್ಟೆ ಅಲಂಕಾರ ಮಾಡಿಕ್ಯಂದು, ಸುಣ್ಣ-ಕೆಮ್ಮಣ್ಣು ಬಳಕಂದು ಹೈಕಮಾಂಡ್ ಕಿಚ್ಚು ಹಾಯಕ್ಕೆ ರಾಜಕೀಯದವು ಕಾಯ್ತಾ ಕೂತವೆ. ನೀವು ನೋಡಿದರೆ ಇಡ್ಲಿ ನೆನೆಸಿಗ್ಯಂದು ಕೂತುದ್ದರಿ’ ಆಕ್ಷೇಪಣೆ ಮಾಡಿದೆ.

‘ರಾಜಕೀಯದವುಕ್ಕೆ ಮನೇಲಿ ಹೆಂಡ್ರು ‘ಬಲ್ರೀ ಜಾಲಿಯಾಗಿ ಸುತ್ತಾಡಿಕ್ಯಂದು ಬರಮು’ ಅಂತ ದರ್ಪದೇಲಿ ಮಕ್ಕುಗಿದು ಕರಕೋಗಕುಲ್ಲ ಕನೋ. ಅದುಕ್ಕೇ ಇವು ಬೀದೀಲಿ ಡೀಲಿಂಗ್ ಮಾಡಿಕ್ಯಂದು ತಿರುಗ್ತವೆ’ ಅಂತ ಸಿಡಿದರು.

‘ಸಾ, ಸುತ್ತಾಡಿಸಿಕ್ಯಂದು ಬರೋದೇ ಈಗ ಸುದ್ದಿಯಾಗ್ಯದೆ. ‘ಮ್ಯಾಚು ನಡಿವಾಗ ಯಾರೂ ಪಾರಿನ್ನಿಗೆ ಹೆಂಡ್ರುನ್ನ ಹೆಚ್ಚು ದಿನ ಜೊತೆಗೆ ಕರಕೋಂಗಂಗುಲ್ಲ’ ಅಂತ ಕ್ರಿಕೆಟ್ ಕಲಿಗಳಿಗೆ ಬಿಸಿಸಿಐ ಎಚ್ಚರಿಕೆ ಕೊಟ್ಟದೆ’ ಅಂತಂದೆ.

‘ಮ್ಯಾಚಲ್ಲಿ ರನ್ ಹೊಡಿಯದು ಬುಟ್ಟು ವಿಕೆಟ್ ಕೆಡವಿಕ್ಯಂದು ಕಡದು ವಾಪಸ್ ಬತ್ತವೆ. ಇವುಕ್ಕಿಂತ ಕ್ರಿಕೆಟ್, ಚೆಸ್, ಕೊಕ್ಕೊ ಆಡೋ ಹೆಣ್ಣೈಕ್ಳೆ ಭೇಸು ಕನೋ. ವರ್ಲ್ಡ್ ಕಪ್ ತಕ್ಕಬಂದು ದೇಸದ ಮಾನ-ಮರ್ವಾದೆನಾರೂ ಉಳಿಸ್ತವೆ’ ಅಂತ ತೀರ್ಪು ಕೊಟ್ಟರು.

‘ಉಳ್ಳಾಲದೇಲಿ ಬ್ಯಾಂಕು ದರೋಡೆ ಆಗ್ಯದಂತೆ. ಪೋಲೀಸರೆಲ್ಲಾ ಪಾಪ ಸಿಎಂಗೆ ರಕ್ಷಣೆ ಕೊಡಕ್ಕೋಗಿದ್ರಂತೆ’ ಅಂದೆ.

‘ನಾಯಕರು ದರ್ಪಭೂಷಣಕ್ಕೆ ಅಂತ್ಲೆ ಪೋಲೀಸರನ್ನ ಜೊತೆಗಿಟ್ಕತರೆ ಕನೋ. ಆಮೇಲೆ ‘ನೀವೆಲ್ಲಾ ಏನು ಮಾಡ್ತಿದ್ದರಿ? ಟೋಲುಗಳಲ್ಲಿ ಯಾಕೆ ಪತಾಸಣೆ ಮಾಡ್ಲಿಲ್ಲ? ಶೀಘ್ರವಾಗಿ ಆರೋಪಿಗಳನ್ನ ಬಂಧಿಸಬೇಕು’ ಅಂತ ಖಾರಖಾರವಾಗಿ ಹೇಳಿದರಂತೆ’ ಅನ್ನೋ ರಹಸ್ಯ ಸ್ಫೋಟಿಸಿದಾಗ ನಗು ತಡೆಯಲಾಗಲಿಲ್ಲ.

ಸಂಗತ

ಮರೆತರೇಕೆ ಸಾಮೂಹಿಕ ಹೊಣೆ?

ಸಮಾಜಘಾತುಕ ಪ್ರಕರಣಗಳನ್ನು ನಿಗ್ರಹಿಸಲು ಒಂದು ಜಾಗರೂಕ ವ್ಯವಸ್ಥೆ ಬೇಕಾಗಿದೆ

• ನಾ.ದಿವಾಕರ

ರಾಜ್ಯದಲ್ಲಿ 2025ರ ಆರಂಭದಲ್ಲಿ ನಡೆಯುತ್ತಿರುವ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇಲ್ಲೊಂದು ಸುಸ್ಥಿರ, ಪರಿಣಾಮಕಾರಿ ಆಡಳಿತ ವ್ಯವಸ್ಥೆ ಇದೆಯೇ ಎಂಬ ಅನುಮಾನ ಸಹಜವಾಗಿ ಮೂಡುತ್ತದೆ. ಪಕ್ಷ ರಾಜಕಾರಣವನ್ನು ಹೊರಗಿಟ್ಟು ನೋಡಿದಾಗ, ಶಾಸನಸಭೆಗೆ ಆಯ್ಕೆಯಾಗುವ ಜನಪ್ರತಿನಿಧಿಗಳಿಗೆ ಒಂದು ಸಾಮೂಹಿಕ ಜವಾಬ್ದಾರಿ ಇರುತ್ತದೆ ಎಂಬ ಕನಿಷ್ಠ ಪರಿವೆಯೂ ಇಲ್ಲದಂತಹ ಒಂದು ರಾಜಕೀಯ ವ್ಯವಸ್ಥೆಯನ್ನು ನಾವು ರೂಢಿಸಿಕೊಂಡಿರುವುದು ತಿಳಿಯುತ್ತದೆ. ಇದರ ದುಷ್ಪರಿಣಾಮವನ್ನು ರಾಜ್ಯದಲ್ಲಿನ ಪ್ರಕರಣಗಳು ಬಿಂಬಿಸುತ್ತಿವೆ. ಸಮಾಜದಲ್ಲಿ ಹೆಚ್ಚುತ್ತಿರುವ ಕೊಲೆ, ದರೋಡೆ, ಸುಲಿಗೆ, ಅತ್ಯಾಚಾರ, ದೌರ್ಜನ್ಯದಂತಹ ಸಮಾಜಘಾತುಕ ಕೃತ್ಯಗಳನ್ನು ನಿಯಂತ್ರಿಸುವುದು ಅಥವಾ ನಿಗ್ರಹಿಸುವುದು ಆಡಳಿತಾರೂಢರ ಆದ್ಯ ಕರ್ತವ್ಯ.

ಇದಕ್ಕಾಗಿಯೇ ನಮ್ಮಲ್ಲಿ ಗುಪ್ತಚರ ಇಲಾಖೆ, ಪೊಲೀಸ್ ಇಲಾಖೆ ಇವೆ. ಆದರೆ ರಾಜ್ಯದ ಮೂಲೆ ಮೂಲೆಯನ್ನೂ ಹಗಲಿರುಳೂ ಗಮನಿಸುತ್ತಿರು-ವಂತಹ ಕಣ್ಗಾವಲು ವ್ಯವಸ್ಥೆಯನ್ನು ಅಳವಡಿಸಲು ಸಾಧ್ಯವೇ? ಇದು ವಾಸ್ತವಿಕ ನೆಲೆಯಲ್ಲಿ ಅಸಾಧ್ಯದ ಮಾತು. ಆದಾಗ್ಯೂ ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸುವ ಇಲಾಖೆಗಳು ಸದಾ ಜಾಗರೂಕವಾಗಿ ಇರುವುದು ಅಪೇಕ್ಷಣೀಯ. ಈ ನಿರೀಕ್ಷೆಗಳ ಹೊರಗೆ ನಿಂತು ನೋಡಿದಾಗ, ರಾಜ್ಯದಲ್ಲಿ ನಡೆಯುತ್ತಿರುವ ಸರಣಿ ದರೋಡೆಗಳು, ದಲಿತ ಮಹಿಳೆಯರ ಮೇಲಿನ ದೌರ್ಜನ್ಯದಂತಹ ಸಮಾಜಘಾತುಕ ಕೃತ್ಯಗಳನ್ನು ಯಾವ ನೆಲೆಯಲ್ಲಿ ನಿಂತು ನೋಡಬೇಕು ಎಂಬ ಪ್ರಶ್ನೆ ಮೂಡುತ್ತದೆ. ಆಡಳಿತಾರೂಢ ಪಕ್ಷಗಳನ್ನು ಚಕಿತಗೊಳಿಸುವ ರೀತಿಯಲ್ಲಿ ನಡೆಯುವ ಇಂತಹ ದುಷ್ಕೃತ್ಯಗಳು ಏಕಾಏಕಿ ಸಂಭವಿಸುವುದಿಲ್ಲ ಎಂಬ ವಾಸ್ತವವನ್ನು ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಅರಿತಿರಬೇಕು.

ಬೀದರ್‌ನಲ್ಲಿ ನಡೆದ ಬ್ಯಾಂಕ್ ದರೋಡೆ ಮತ್ತು ಭದ್ರತಾ ಸಿಬ್ಬಂದಿಯ ಹತ್ಯೆ, ಮಂಗಳೂರಿನ ಬ್ಯಾಂಕಿನಲ್ಲಿ ನಡೆದ ಹಗಲು ದರೋಡೆ, ಹುಬ್ಬಳ್ಳಿಯ ಬ್ಯಾಂಕ್‌ನಲ್ಲಿ ನಡೆದ ದರೋಡೆ ಪ್ರಯತ್ನ, ನಂಜನಗೂಡಿನ ಬಳಿ ನಡೆದಿರುವ ಕಾರು ಅಪಹರಣ ಈ ಎಲ್ಲ ಪ್ರಕರಣಗಳಿಗೂ ಸಮಾಜದಲ್ಲಿ ಸೃಷ್ಟಿಯಾಗುತ್ತಿರುವ ಅರಾಜಕತೆಗೂ ನೇರ ಸಂಬಂಧ ಇರುತ್ತದೆ. ಸಣ್ಣಪುಟ್ಟ ಕಳ್ಳತನಗಳಿಂದ ಹಿಡಿದು ಬ್ಯಾಂಕ್ ದರೋಡೆಯವರೆಗೆ ನಡೆಯುವ ಪಾತಕ ಕೃತ್ಯಗಳಿಗೆ ನಮ್ಮ ಸಮಾಜ ಮತ್ತು ಆರ್ಥಿಕತೆ ಸೃಷ್ಟಿಸಿರುವ ಸಾಮಾಜಿಕ ಅಭದ್ರತೆ ಮತ್ತು ಆರ್ಥಿಕ ಅನಿಶ್ಚಿತತೆ ಮೂಲ ಕಾರಣವಾಗಿರುತ್ತವೆ. ಅಪರಾಧ ಎಸಗುವವರು ಹೊರ ರಾಜ್ಯದವರೋ ಒಳಗಿನವರೋ ಎಂಬ ಪ್ರಶ್ನೆಗಿಂತಲೂ ಸರ್ಕಾರವನ್ನು, ಸಾರ್ವಜನಿಕರನ್ನು ಕಾಡಬೇಕಿರುವುದು ಈ ಕೃತ್ಯಗಳ ಹಿಂದಿನ ಕಾರಣಗಳು.

ಇಂತಹ ಅಪರಾಧಗಳಿಲ್ಲದ ಸಮಾಜವನ್ನು ಯಾವ ಕಾಲಘಟ್ಟದಲ್ಲೂ ಕಂಡಿಲ್ಲ, ಊಹಿಸಲೂ ಸಾಧ್ಯವಿಲ್ಲ. ಆದರೆ ಯಾವುದೇ ಅಪರಾಧವು ಶೂನ್ಯದಲ್ಲಿ ಸಂಭವಿಸುವುದಿಲ್ಲ ಎಂಬ ಸಮಾಜಶಾಸ್ತ್ರೀಯ ಸೂತ್ರದ ನೆಲೆಯಲ್ಲಿ ನಿಂತು ನೋಡಿದರೆ, ಇಂತಹ ವಾತಾವರಣದ ಸೃಷ್ಟಿಗೆ ಕಾರಣಗಳನ್ನು ಶೋಧಿಸಬಹುದು. ಇದು ಬರೀ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಆಗಲಾರದು. ನಾಗರಿಕ ಸಮಾಜ, ಶಾಸನಸಭೆಯ ಚುನಾಯಿತ ಜನಪ್ರತಿನಿಧಿಗಳು, ಪರಾಜಿತ ರಾಜಕೀಯ ನಾಯಕರು, ಸಾಮಾಜಿಕ-ಸಾಂಸ್ಕೃತಿಕ ಸಂಘಟನೆಗಳು ಈ ಎಲ್ಲಾ ಭೌತಿಕ ನೆಲೆಗಳಲ್ಲಿ ಈ ಜವಾಬ್ದಾರಿಯನ್ನು ಗುರುತಿಸಬೇಕಿದೆ. ಬಡತನ, ನಿರುದ್ಯೋಗ, ನಿರ್ವಸತಿ-ಯಂತಹ ಜೀವನಾವಶ್ಯ ಸಮಸ್ಯೆಗಳಷ್ಟೇ ಅಲ್ಲದೆ, ನಮ್ಮ ಸಾಮಾಜಿಕ- ಸಾಂಸ್ಕೃತಿಕ ಪರಿಸರ ಸೃಷ್ಟಿಸುವಂತಹ ದುಷ್ಟ ಮನಸ್ಥಿತಿಯೂ ಇಂತಹ ಅಪರಾಧಗಳಿಗೆ ಕಾರಣವಾಗಿರುತ್ತದೆ. ಇದನ್ನು ಅರಿತು ಬಗೆಹರಿಸುವ ವ್ಯವಧಾನವನ್ನು ಸಮಾಜ ಮತ್ತು ಸರ್ಕಾರ ರೂಢಿಸಿಕೊಳ್ಳಬೇಕಿದೆ.

ಈ ಕೃತ್ಯಗಳಿಂದಾಚೆಗೆ ಸದಾಕಾಲ ನಮ್ಮ ಸಮಾಜವನ್ನು ಕಾಡುತ್ತಿರುವುದು ಜಾತಿ ಹೆಸರಿನಲ್ಲಿ ನಡೆಯುವ ದೌರ್ಜನ್ಯ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು. ವಿಜಯಪುರದ ಬಳಿ ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮೂವರು ಕಾರ್ಮಿಕರು ಅನುಮತಿ ಇಲ್ಲದೆ ಕರ್ತವ್ಯಕ್ಕೆ ಗೈರು-ಹಾಜರಾದದ್ದಕ್ಕೆ, ಈ ಮೂವರ ಮೇಲೆ ಮಾಲೀಕರು ನಡೆಸಿರುವ ಅಮಾನುಷ ಹಲ್ಲೆ ಎಂತಹ ನಿರ್ದಯಿಗಳನ್ನೂ ವಿಚಲಿತಗೊಳಿಸುತ್ತದೆ. ಈ ಕಾರ್ಮಿಕರು ದಲಿತ ಸಮುದಾಯಕ್ಕೆ ಸೇರಿರುವುದು ಕಾಕತಾಳೀಯವೇನಲ್ಲ. ದಲಿತರು ಎಂಬ ಕಾರಣಕ್ಕಾಗಿ ಅವರ ಮೇಲಿನ ಹಲ್ಲೆ ಮತ್ತಷ್ಟು ಕ್ರೂರವೂ ಅಮಾನುಷವೂ ಆಗುತ್ತದೆ. ಏಕೆಂದರೆ ಭಾರತದ ಜಾತಿ ವ್ಯವಸ್ಥೆ ಮೇಲ್ವರ್ಗದವರಿಗೆ ಮತ್ತು ಊಳಿಗಮಾನ್ಯ ಯಜಮಾನಿಕೆಯ ಶಕ್ತಿಗಳಿಗೆ ಆ ಹಕ್ಕನ್ನು ಕೊಟ್ಟುಬಿಟ್ಟಿದೆ.

ಈ ಎಲ್ಲ ಪ್ರಕರಣಗಳನ್ನು ಒಂದು ಕೋಶದಲ್ಲಿಟ್ಟು ನೋಡಿದಾಗ, ರಾಜ್ಯದ ಕಾನೂನು ಸುವ್ಯವಸ್ಥೆಯ ಬಗ್ಗೆ ವಿಷಾದ ಉಂಟಾಗುತ್ತದೆ. ಆಡಳಿತಾರೂಢ ಮತ್ತು ವಿರೋಧ ಪಕ್ಷಗಳು ತಮ್ಮ ಸ್ವಪ್ರತಿಷ್ಠೆ ಹಾಗೂ ನಾಯಕತ್ವದ ಸುತ್ತಲಿನ ವಿವಾದಗಳಲ್ಲೇ ಮುಳುಗಿರುವಾಗ, ಇಂತಹ ಸಮಾಜಘಾತುಕ ಶಕ್ತಿಗಳಿಗೆ ಮುಕ್ತ ಪರವಾನಗಿ ಕೊಟ್ಟಂತೆ ಆಗುತ್ತದೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುವಿನ ಕೆಚ್ಚಲು ಕೊಯ್ದದ್ದನ್ನೂ ಒಳಗೊಂಡಂತೆ ರಾಜ್ಯದಲ್ಲಿ ನಡೆದಿರುವ ಈ ಪ್ರಕರಣಗಳು ನಾಗರಿಕರು ತಲೆತಗ್ಗಿಸುವಂತೆ ಮಾಡಿವೆ. ಜನಪ್ರತಿನಿಧಿಗಳು ಹಾಗೂ ಪರಾಜಿತ ಅಭ್ಯರ್ಥಿಗಳು ಪಕ್ಷಭೇದ ಮರೆತು, ಈ ವಾತಾವರಣವನ್ನು ಸರಿಪಡಿಸುವ ದಿಸೆಯಲ್ಲಿ ಕ್ರಿಯಾಶೀಲವಾಗಬೇಕಿದೆ. ಇದನ್ನೇ ‘ಆಡಳಿತ’ ಎನ್ನುವುದು ಅಲ್ಲವೇ?

ವಾಚಕರ ವಾಣಿ

ಮೆಟ್ರೊ ಸುರಕ್ಷತೆ: ಚೆನ್ನೈ ಮಾದರಿಯಾಗಲಿ

ಬೆಂಗಳೂರಿನಲ್ಲಿ ಮೆಟ್ರೊ ರೈಲಿನ ಹಳಿ ಮೇಲೆ ಹಾರಿ ಜೀವ ಕಳೆದುಕೊಳ್ಳಲು ಪ್ರಯತ್ನಿಸುವ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಇನ್ನು ಕೆಲವರು ಎದುರಿನ ಪ್ಲ್ಯಾಟ್‌ಫಾರಂಗೆ ಹೋಗಲು ಅರಿವಿಲ್ಲದೆ ಮೆಟ್ರೊ ಹಳಿಯ ಮೇಲೆ ಇಳಿದಿರುವ ಉದಾಹರಣೆಗಳೂ ಇವೆ. ಇದರಿಂದ ಕೆಲ ಅಮೂಲ್ಯ ಜೀವಗಳು ಹೋದರೂ ಅಲ್ಲಿನ ಕೆಲಸಗಾರರ ಸಮಯಪ್ರಜ್ಞೆಯಿಂದ ಹಲವರ ಜೀವಗಳು ಉಳಿದಿವೆ. ಬೆಳೆಯುತ್ತಿರುವ ನಗರದ ಜನದಟ್ಟಣೆಯ ಜತೆಗೆ ಕೆಲವು ನಿಲ್ದಾಣಗಳಲ್ಲಿ ಪ್ರತಿನಿತ್ಯ ಮೆಟ್ರೊ ಹತ್ತಿಳಿಯಲು ಉಂಟಾಗುವ ನೂಕುನುಗ್ಗಲು ಕೂಡ ಪ್ಲ್ಯಾಟ್‌ಫಾರಂನಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿಸುತ್ತಿದೆ.

ಬೆಂಗಳೂರಿನ ಬಹುಪಾಲು ಮೆಟ್ರೊ ನಿಲ್ದಾಣಗಳಲ್ಲಿ ತೆರೆದ ಪ್ಲ್ಯಾಟ್‌ಫಾರಂಗಳಿವೆ. ಮೆಜೆಸ್ಟಿಕ್‌ನಲ್ಲಿ ಹಳಿಗಳತ್ತ ಹೋಗದಂತೆ ಸ್ಟೀಲ್ ಕಂಬಿಗಳ ತಡೆಯನ್ನು ಹಾಕಿದ್ದರೂ ಅದು ದಾಟಲಾಗದಷ್ಟು ಎತ್ತರಕ್ಕೇನೂ ಇಲ್ಲ. ಮಿಕ್ಕ ಕಡೆ ಅಡೆತಡೆಯಿಲ್ಲದ ಕಾರಣ ಕಾವಲುಗಾರರು ಜನರನ್ನು ಹಿಂದಕ್ಕೆ ಕಳಿಸಲು ಕಿರುಚುತ್ತಲೋ ಸೀಟಿ ಊದುತ್ತಲೋ ಇರಬೇಕಾಗುತ್ತದೆ. ಇದೆಲ್ಲಕ್ಕೂ ನಮ್ಮ ಪಕ್ಕದಲ್ಲಿರುವ ಚೆನ್ನೈ ಮೆಟ್ರೊ ಅನುಸರಿಸಿರುವ ಮಾರ್ಗಗಳು ಪರಿಹಾರ ಆಗಬಲ್ಲವು. ಅಲ್ಲಿನ ಮೆಟ್ರೊ ಪ್ಲ್ಯಾಟ್‌ಫಾರಂಗಳು ತೆರೆಯುವ ಗಾಜಿನ ಬಾಗಿಲುಗಳಿಂದ ಮುಚ್ಚಿದ್ದು, ರೈಲು ಬಂದು ನಿಂತಾಗ ಅದರ ಬಾಗಿಲಿನೊಂದಿಗೆ ಮಾತ್ರ ತೆರೆದುಕೊಳ್ಳುತ್ತವೆ. ರೈಲಿನ ಓಡಾಟ ಇಲ್ಲದ ಸಮಯದಲ್ಲಿ ಹಳಿಗಳ ಹತ್ತಿರ ಹೋಗುವ, ಹಳಿಗಳ ಮೇಲೆ ಜಿಗಿಯುವ ಅಥವಾ ದಾಟುವ ಅವಕಾಶವೇ ಇಲ್ಲವಾಗಿದೆ. ಮೆಟ್ರೊ ಅಧಿಕಾರಿಗಳು ಮತ್ತು ಸರ್ಕಾರ ಇತ್ತ ಗಮನಹರಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ.

ಹೇಮಂತ್ ಲಿಂಗಪ್ಪ, ತುಮಕೂರು

ಊಳಿಗಮಾನ್ಯ ಮನಃಸ್ಥಿತಿ ನೆನಪಿಸಿದ ಅಮಾನುಷ ಶಿಕ್ಷೆ

ವಿಜಯಪುರದ ಗಾಂಧಿನಗರ ಸರಹದ್ದಿಗೆ ಸೇರಿದ ಇಟ್ಟಿಗೆ ಭಟ್ಟಿಯೊಂದರಲ್ಲಿ ಕಾರ್ಮಿಕರ ಮೇಲೆ ನಡೆದಿರುವ ಕ್ರೂರ ಹಲ್ಲೆ ಮಾನವೀಯತೆಗೆ ಎಸೆದ ಸವಾಲಾಗಿದೆ. ಬಡ ಹಾಗೂ ಶೋಷಿತ ಸಮುದಾಯಕ್ಕೆ ಸೇರಿದ ಈ ಕಾರ್ಮಿಕರ ಮೇಲಿನ ದಬ್ಬಾಳಿಕೆ ಮತ್ತು ಅವರಿಗೆ ಮಾಲೀಕರು ಕೊಟ್ಟ ಅಮಾನುಷವಾದ ಶಿಕ್ಷೆಯು ಮಧ್ಯಕಾಲೀನ ಯುಗದ ಊಳಿಗಮಾನ್ಯ ಪದ್ಧತಿಯನ್ನು ನೆನಪಿಸುತ್ತದೆ. ಇದು, ಇಡೀ ನಾಡಿನ ಸಾಕ್ಷಿಪ್ರಜ್ಞೆಗೆ ಮಾಡಿದ ಅವಮಾನ. ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾದ ಈ ಕ್ರೂರ ಹಿಂಸೆಯ ದೃಶ್ಯಗಳನ್ನು ನೋಡಿದವರು ಮಮ್ಮಲಮರುಗಿ ತಲೆತಗ್ಗಿಸಿದ್ದಾರೆ.

ಈ ಮಾಲೀಕರಿಗೆ ರಾಜಕೀಯ ಮುಖಂಡರ ಬೆಂಬಲವಿರುವ ಸಾಧ್ಯತೆಯಿದೆ. ಸರ್ಕಾರ ಯಾರ ಮುಲಾಜಿಗೂ ಒಳಗಾಗದೆ ನಿಷ್ಪಕ್ಷಪಾತವಾದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು. ವಿಜಯಪುರ ಪೊಲೀಸರ ಮೇಲೆ ಯಾವುದೇ ಒತ್ತಡ ಬರದಂತೆ ನೋಡಿಕೊಂಡು, ತಾನು ಬಡವರು ಮತ್ತು ಶೋಷಿತರ ಪರವಾಗಿ ಇರುವುದನ್ನು ರುಜುವಾತು ಮಾಡಬೇಕು. ಈ ಮೂಲಕ ರಾಜ್ಯದ ಬೇರಾವ ಪ್ರದೇಶದಲ್ಲೂ ಇಂತಹ ರಾಕ್ಷಸೀ ಕೃತ್ಯಗಳು ನಡೆಯದಂತೆ ನೋಡಿಕೊಳ್ಳಬೇಕು. ಗಾಂಧಿನಗರ ಪ್ರದೇಶದಲ್ಲೇ ಈ ಹೀನಾತಿಹೀನ ಪ್ರಕರಣ ನಡೆದಿರುವುದು ಎಂತಹ ವ್ಯಂಗ್ಯ?

ಮೋದೂರು ಮಹೇಶಾರಾಧ್ಯ, ಹುಣಸೂರು

ಮಕ್ಕಳಿಂದ ವಾಹನ ಚಾಲನೆ: ಗಂಭೀರವಾಗಿ ಪರಿಗಣಿಸಿ

ಇತ್ತೀಚಿನ ದಿನಗಳಲ್ಲಿ ಮಹಾನಗರಗಳಲ್ಲಷ್ಟೇ ಅಲ್ಲದೆ ಸಣ್ಣ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಚಿಕ್ಕ ಮಕ್ಕಳು ವಾಹನ ಚಾಲನೆ ಮಾಡುವುದು ಹೆಚ್ಚಾಗುತ್ತಿದೆ. ಬೈಕ್, ಸ್ಕೂಟರ್‌ಗಳಷ್ಟೇ ಅಲ್ಲದೆ ಕಾರು, ಟ್ರ್ಯಾಕ್ಟರ್‌ಗಳನ್ನೂ ಅತಿ ವೇಗವಾಗಿ ಓಡಿಸಿಕೊಂಡು ಹೋಗುವುದು ಮತ್ತು ಸಂಚಾರ ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸುವಂತಹ ಪ್ರವೃತ್ತಿ ಮಕ್ಕಳಲ್ಲಿ ಹೆಚ್ಚಾಗುತ್ತಿದೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಯಾಕೆಂದರೆ ಇದು ಬರೀ ಅಪಘಾತಗಳಿಂದ ಆಗಬಹುದಾದ ಸಾವು ನೋವಿಗೆ ಸಂಬಂಧಪಟ್ಟ ವಿಷಯವಷ್ಟೇ ಅಲ್ಲ. ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ಹೇಳುವುದಾದರೆ, ಭಾವಿ ನಾಗರಿಕರು ಬಾಲ್ಯದಲ್ಲಿಯೇ ಕಾನೂನು ಉಲ್ಲಂಘನೆ ಪ್ರವೃತ್ತಿ ಬೆಳೆಸಿಕೊಂಡರೆ, ಮುಂದಿನ ಜೀವನದಲ್ಲಿ ಅಪರಾಧಿಗಳಾಗಿಯೋ ಸಮಾಜಘಾತುಕ ಶಕ್ತಿಗಳಾಗಿಯೋ ಬೆಳೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹೀಗಾಗಿ, ಸರ್ಕಾರ ಈ ಪ್ರವೃತ್ತಿಯನ್ನು ತಡೆಯುವ ದಿಸೆಯಲ್ಲಿ ಮಕ್ಕಳಿಗಷ್ಟೇ ಅಲ್ಲದೆ ಅವರ ಪಾಲಕರಿಗೂ ಸ್ಥಳದಲ್ಲಿಯೇ ದಂಡ ವಿಧಿಸುವ ಹಾಗೂ ಅವರ ಚಾಲನಾ ಪರವಾನಗಿಯನ್ನು ರದ್ದುಗೊಳಿಸುವ ಕ್ರಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳಬೇಕಿದೆ.

ಭೀಮನಗೌಡ ಕಾಶಿರೆಡ್ಡಿ, ಬೆಂಗಳೂರು

ಚರ್ಚೆ ಆಗಬೇಕಿರುವುದು ಯಾವ ಕೊಲೆ ಬಗ್ಗೆ?!

‘ಮಹಾತ್ಮ ಗಾಂಧಿ ಹತ್ಯೆಯಲ್ಲಿ ಜವಾಹರಲಾಲ್ ನೆಹರೂ ಅವರ ಕೈವಾಡವಿತ್ತು ಎಂಬ ಅನುಮಾನವಿದೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿರುವುದಾಗಿ ವರದಿಯಾಗಿದೆ. ಗಾಂಧಿಯವರನ್ನು ಯಾರು ಕೊಂದರೆಂಬುದು ಇಡೀ ಜಗತ್ತಿಗೇ ಗೊತ್ತಿದೆ. ಆ ಚರ್ಚೆ ಈಗ ಅಪ್ರಸ್ತುತ. ಈಗ ಚರ್ಚೆ ಆಗಬೇಕಾಗಿರುವು-ದು ಗಾಂಧಿಯವರ ತತ್ವ, ಸಿದ್ಧಾಂತಗಳ ಕೊಲೆಯಾಗುತ್ತಿರುವ ಬಗ್ಗೆ! ಅವರ ದೈಹಿಕ ಅಂತ್ಯಕ್ಕಿಂತ ಅವರ ಸಿದ್ಧಾಂತಗಳ ಮೇಲೆ ನಡೆಯುತ್ತಿರುವ ದಾಳಿ ತುಂಬಾ ಅಪಾಯಕಾರಿ.

ಭ್ರಷ್ಟಾಚಾರ, ಅಧಿಕಾರಕ್ಕಾಗಿ ಕಚ್ಚಾಟ, ಮಹಿಳೆಯರು, ದೀನ ದಲಿತರು, ಅಲ್ಪಸಂಖ್ಯಾತರಂತಹವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಇಂದು ಮೇಲುಗೈ ಸಾಧಿಸುತ್ತಿರುವುದು ನಿಜಕ್ಕೂ ಗಾಂಧಿಯವರನ್ನು ದಿನಾಲೂ ಕೊಲ್ಲುವ ಪ್ರಕ್ರಿಯೆಯಾಗಿದೆ. ಇದಕ್ಕೆ ಯಾವ ರಾಜಕೀಯ ಪಕ್ಷವೂ ಹೊರತಾಗಿಲ್ಲ. ಈ ಬಗ್ಗೆ ಇಂದು ವ್ಯಾಪಕವಾಗಿ ಪ್ರಾಮಾಣಿಕವಾದ ಚರ್ಚೆಯಾಗಬೇಕಾಗಿದೆ. ಗಾಂಧೀಜಿ ಏನಾದರೂ ಇಂದು ಬದುಕಿದ್ದರೆ ಇಂತಹ ಅಮಾನವೀಯ ಪ್ರಕರಣಗಳನ್ನು ನೋಡಲಾರದೆ ಅವರಾಗಿಯೇ ತಮ್ಮ ಬದುಕಿನ ಅಂತ್ಯವನ್ನು ಕಂಡುಕೊಳ್ಳುತ್ತಿದ್ದರೇನೊ. ಸರಿದಾರಿಗೆ ಬರಲಾಗದಷ್ಟು ದೂರ ನಾವು ಅಡ್ಡದಾರಿಯಲ್ಲಿ ಸಾಗಿದ್ದೇವೆ. ಈ ಬಗ್ಗೆ ಚಿಂತನೆಗಳು ನಡೆಯಬೇಕಾದ ತುರ್ತಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಕ್ಕಿ ಜ್ವರ: ಬೇಕಿದೆ ಎಚ್ಚರ

2023–24ರಲ್ಲಿ ಅಮೆರಿಕ ಸೇರಿದಂತೆ ವಿಶ್ವದ 108 ದೇಶಗಳಲ್ಲಿ ಹಕ್ಕಿಜ್ವರ ಅವಾಂತರ ಸೃಷ್ಟಿಸಿತ್ತು. ಕೋಟ್ಯಂತರ ಜೀವಿಗಳು ಸೋಂಕಿಗೆ ಬಲಿಯಾಗಿವೆ; ತೀರಾ ಇತ್ತೀಚೆಗೆ ವ್ಯಕ್ತಿಯೊಬ್ಬರೂ ಸತ್ತಿದ್ದಾರೆ. ಭಾರತದಲ್ಲಿಯೂ ಸೋಂಕು ಕಾಣಿಸಿಕೊಂಡಿದ್ದು, ಮಹಾರಾಷ್ಟ್ರ, ರಾಜಸ್ಥಾನದಲ್ಲಿ ಹಲವು ಪ್ರಾಣಿ–ಪಕ್ಷಿಗಳು ಸಾವಿಗೀಡಾಗಿವೆ. ಹಕ್ಕಿಜ್ವರದಿಂದ ಮನುಷ್ಯರಲ್ಲಿ ಸಾಂಕ್ರಾಮಿಕ ಹರಡುವ ಅಪಾಯ ಇಲ್ಲ. ಆದರೆ, ಅದು 2025ರಲ್ಲಿ ಜೀವಜಗತ್ತಿಗೆ ಅತಿ ದೊಡ್ಡ ಬೆದರಿಕೆ ಒಡ್ಡಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಉದಗೀರ್‌ನಲ್ಲಿ ಜನವರಿ 13ರಂದು 28 ಕಾಗೆಗಳು ಸತ್ತುಬಿದ್ದವು. 15ರಂದು ಮತ್ತೆ ಐದು ಕಾಗೆಗಳು ಸತ್ತವು. ನೋಡನೋಡುತ್ತಲೇ ಕೆಲವೇ ದಿನಗಳ ಅಂತರದಲ್ಲಿ ಅಲ್ಲಿ ಒಟ್ಟು 51 ಕಾಗೆಗಳು ಸತ್ತವು. ತಕ್ಷಣವೇ ಎಚ್ಚೆತ್ತುಕೊಂಡ ಅಧಿಕಾರಿಗಳು, ಕಾಗೆಗಳ ದೇಹದ ಮಾದರಿಗಳನ್ನು ಪುಣೆಯ ಪ್ರಾದೇಶಿಕ ರೋಗ ಪತ್ತೆ ಪ್ರಯೋಗಾಲಯ ಮತ್ತು ಭೋಪಾಲ್‌ನ ಐಸಿಎಆರ್–ರಾಷ್ಟ್ರೀಯ ಅಧಿಕ ಸುರಕ್ಷತೆಯ ಪ್ರಾಣಿ ರೋಗಗಳ ಸಂಸ್ಥೆಗೆ (ಎನ್‌ಐಎಚ್‌ಎಸ್‌ಎಡಿ) ಕಳುಹಿಸಿದರು. ಜನವರಿ 18ರಂದು ವರದಿ ಬಂತು; ಹಕ್ಕಿಜ್ವರ (ಎಚ್‌5ಎನ್‌1) ತಗುಲಿದ್ದರಿಂದ ಕಾಗೆಗಳು ಮೃತಪಟ್ಟಿದ್ದವು ಎಂದು ವರದಿ ತಿಳಿಸಿತು.

ಭಾರತದಲ್ಲಿ ಕಾಗೆಗಳಿಗೆ 2021ರಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿತ್ತು. ನಾಲ್ಕು ವರ್ಷಗಳ ನಂತರ ಈಗ ಮತ್ತೆ ಎಚ್‌5ಎನ್‌1 ಕಾಣಿಸಿಕೊಂಡಿದೆ. ದೇಶದ ಹಲವು ರಾಜ್ಯಗಳಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿರುವ ಬಗ್ಗೆ ವರದಿಯಾಗಿದೆ. ಕಳೆದ ತಿಂಗಳು ನಾಗ್ಪುರದ ಬಾಳಾಸಾಹೇಬ್ ಠಾಕ್ರೆ ಅಂತರರಾಷ್ಟ್ರೀಯ ಮೃಗಾಲಯದಲ್ಲಿ ಮೂರು ಹುಲಿ ಮತ್ತು ಒಂದು ಚಿರತೆ ಮೃತಪಟ್ಟಿದ್ದವು. ಅದಕ್ಕೆ ಹಕ್ಕಿಜ್ವರವೇ ಕಾರಣ ಎಂದು ಈ ತಿಂಗಳ ಮೊದಲ ವಾರದಲ್ಲಿ ವರದಿ ಬಂದಿದೆ. ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಕೊಕ್ಕರೆ ಜಾತಿಗೆ ಸೇರಿದ 28 ವಲಸೆ ಪಕ್ಷಿಗಳು ಸಾವಿಗೀಡಾಗಿದ್ದವು. ತಕ್ಷಣವೇ ಹೆಬ್ಬಕ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಸಂರಕ್ಷಿತ ಪ್ರದೇಶಕ್ಕೆ ಹಕ್ಕಿ ಜ್ವರವು ಹರಡದಂತೆ ತಡೆಯಲು ರಾಜಸ್ಥಾನ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ.

ಭಾರತದಲ್ಲಿ ಹಕ್ಕಿಜ್ವರದಿಂದಾಗಿ ಹಕ್ಕಿಗಳು, ಪ್ರಾಣಿಗಳ ಸಾವಿನ ಸುದ್ದಿಗಳು ಈಗ ವಿಸ್ತರವಾಗುತ್ತಿವೆ. ಅಮೆರಿಕವು ಸೇರಿದಂತೆ ಹಲವು ದೇಶಗಳಲ್ಲಿ 2023–24ರಲ್ಲಿ ಅಪಾರ ಪ್ರಮಾಣದ ಪ್ರಾಣಿ–ಪಕ್ಷಿಗಳು ಎಚ್‌5ಎನ್‌1ಗೆ ಬಲಿಯಾಗಿವೆ. ಪ್ರಪಂಚದ ಐದು ಖಂಡಗಳ 108 ದೇಶಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಫಿಲಿಪ್ಪೀನ್ಸ್‌ನಲ್ಲಿ ಬಾತುಕೋಳಿಗಳಲ್ಲಿ, ಜಪಾನ್‌ನ ಕೋಳಿಗಳಲ್ಲಿ ಕಾಣಿಸಿಕೊಂಡಿತ್ತು, ನಂತರ ವಿಯೆಟ್ನಾಂನಲ್ಲಿ ಹುಲಿಗಳಲ್ಲಿಯೂ ಕಾಣಿಸಿಕೊಂಡಿತು. ಹಕ್ಕಿಜ್ವರವು ಭಾರಿ ಅವಾಂತರ ಸೃಷ್ಟಿಸಿರುವುದು ಅಮೆರಿಕದಲ್ಲಿ. ಅಲ್ಲಿ 70 ಸಸ್ತನಿ ವರ್ಗಗಳು ಸೇರಿದಂತೆ ಸುಮಾರು 500 ಪ್ರಭೇದಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಈ ಸೋಂಕು ಕಾಣಿಸಿಕೊಂಡ ಬಹುತೇಕ ದೇಶಗಳಲ್ಲಿ ಅದು ಮತ್ತಷ್ಟು ಹರಡುವುದನ್ನು ತಡೆಯಲು ದೊಡ್ಡ ಸಂಖ್ಯೆಯಲ್ಲಿ ಪ್ರಾಣಿ–ಪಕ್ಷಿಗಳನ್ನು ನಾಶಪಡಿಸಲಾಗುತ್ತಿದೆ.

2024ರ ಡಿಸೆಂಬರ್ ಹೊತ್ತಿಗೆ ವಿಶ್ವದ ವಿವಿಧೆಡೆ 30 ಸಾವಿರ ಕೋಟಿ ಪ್ರಾಣಿ–ಪಕ್ಷಿಗಳು ಎಚ್‌5ಎನ್‌1ನಿಂದ ಸತ್ತಿವೆ ಎಂದು ವಿಶ್ಲೇಷಣೆ ತಿಳಿಸಿದೆ. ವಾತಾವರಣದಲ್ಲಿನ ಬದಲಾವಣೆಗಳಿಗೆ ತಕ್ಕಂತೆ ವೈರಸ್ ರೂಪಾಂತರ ಹೊಂದುತ್ತಿದ್ದು, ವೇಗವಾಗಿ ಹರಡುತ್ತಿದೆ. ಕಾಡಿನ ಪ್ರಾಣಿ–ಪಕ್ಷಿಗಳು, ಹಸು, ಕುದುರೆ, ಹಸುಗಳಂತಹ ಸಾಕು ಪ್ರಾಣಿಗಳಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿದೆ. ಪ್ರಾಣಿ–ಪಕ್ಷಿಗಳ ನಡುವೆ ಅಷ್ಟೇ ಅಲ್ಲ, ಹಕ್ಕಿಜ್ವರವು ಪಕ್ಷಿಗಳಿಂದ ಮನುಷ್ಯರಿಗೂ ಹರಡುತ್ತಿರುವ ವರದಿಯಾಗಿದೆ. 2024ರ ಮಾರ್ಚ್‌ನಲ್ಲಿ ಅಮೆರಿಕದಲ್ಲಿ 66 ಮಂದಿಯಲ್ಲಿ ಹಕ್ಕಿಜ್ವರ ಕಂಡುಬಂದಿದೆ. ಅವರ ಪೈಕಿ ಇದೇ ಜನವರಿ 7ರಂದು ಒಬ್ಬರು ಮೃತಪಟ್ಟಿದ್ದಾರೆ. ಲೂಸಿಯಾನದ ಮೃತ ವ್ಯಕ್ತಿಯು 65 ವರ್ಷದವರಾಗಿದ್ದು, ಅವರಿಗೆ ಹಲವು ಆರೋಗ್ಯ ಸಮಸ್ಯೆಗಳೂ ಇದ್ದವು ಎಂದು ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರ (ಸಿಡಿಸಿ) ಹೇಳಿದೆ.

ಎರಡು ದಶಕಗಳಲ್ಲಿ ಹಕ್ಕಿಜ್ವರದಿಂದ ಪ್ರಪಂಚದಾದ್ಯಂತ ಸುಮಾರು 500 ಜನರು ಸಾವಿಗೀಡಾಗಿದ್ದು, ಅವರ ಪೈಕಿ ಬಹುತೇಕರು ಆಗ್ನೇಯ ಏಷ್ಯಾಕ್ಕೆ ಸೇರಿದವರು ಎಂದು ಪಿಟಿಐ ವರದಿ ಮಾಡಿದೆ. ಆದರೆ, ಹಕ್ಕಿಜ್ವರದ ಸೋಂಕಿನ ತೀವ್ರತೆ ಕಡಿಮೆ ಇರುತ್ತದೆ ಮತ್ತು ಮನುಷ್ಯರಿಂದ ಮನುಷ್ಯರಿಗೆ ಇದು ಹರಡುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ ನೀಡಿದೆ.

ಹಕ್ಕಿಜ್ವರದಿಂದ ಕೋವಿಡ್ ರೀತಿಯ ಸಾಂಕ್ರಾಮಿಕ ಉಂಟಾಗುವ ಅಪಾಯ ಇಲ್ಲವಾದರೂ, 2025ರಲ್ಲಿ ಇದು ಜೀವಜಗತ್ತಿನ ಪಾಲಿಗೆ ಬಹುದೊಡ್ಡ ಬೆದರಿಕೆಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಈ ದಿಸೆಯಲ್ಲಿ ಲಸಿಕೆ ತಯಾರಿಸುವುದನ್ನು ತ್ವರಿತಗೊಳಿಸಬೇಕು ಎನ್ನುವ ಒತ್ತಾಯವೂ ಕೇಳಿಬಂದಿದೆ.

ಹಕ್ಕಿಜ್ವರವು ಪ್ರಾಣಿ ಪಕ್ಷಿಗಳು, ಮನುಷ್ಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದು ಒಂದೆಡೆಯಾದರೆ, ಮತ್ತೊಂದೆಡೆ, ಜನರ ಆಹಾರದ ಮೇಲೂ ಪರಿಣಾಮ ಬೀರುತ್ತಿದೆ. ವಿಶ್ವದ ಕೋಟ್ಯಂತರ ಮಂದಿ ತಮ್ಮ ಪ್ರೊಟೀನ್ ಅಗತ್ಯಗಳಿಗಾಗಿ ಪ್ರಾಣಿ–ಪಕ್ಷಿ ಮಾಂಸವನ್ನು ಅವಲಂಬಿಸಿದ್ದು, ಅಂಥವರ ಮೇಲೆ ಇದು ಪರಿಣಾಮ ಬೀರುತ್ತಿದೆ ಎಂದು ಅಮೆರಿಕದ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) ತಿಳಿಸಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಡೌನ್ ಟು ಅರ್ಥ್, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್, ಡಬ್ಲ್ಯುಎಚ್‌ಒ

ಎಚ್‌5ಎನ್‌1: 1996ರಿಂದ 2025ರವರೆಗೆ

- **1996** ಚೀನಾದ ಗ್ವಾಂಗ್‌ಡಾಂಗ್‌ನ ಕೋಳಿಫಾರ್ಮ್‌ನಲ್ಲಿ ಮೊದಲ ಬಾರಿಗೆ ವೈರಸ್ ಪತ್ತೆ
- **1997** ಹಾಂಗ್‌ಕಾಂಗ್‌ನಲ್ಲಿ ಸೋಂಕಿನಿಂದ ಮೊದಲ ಬಾರಿಗೆ ವ್ಯಕ್ತಿ ಸಾವು
- **2005** ಕಾಡಿನ ಪಕ್ಷಿಗಳಿಗೂ ಹರಡಿದ ಜ್ವರ. ವೈರಸ್‌ನ ಹೊಸ ತಳಿಗಳ ಪತ್ತೆ
- **2020** ವರ್ಷ ಪೂರ್ತಿ ವನ್ಯ ಪಕ್ಷಿಗಳ ದೇಹದಲ್ಲಿ ಉಳಿದುಕೊಳ್ಳುವ ಸಾಮರ್ಥ್ಯದ ತಳಿ ಪತ್ತೆ
- **2020-22** ನಿರ್ದಿಷ್ಟ ಪ್ರದೇಶದ ಕಾಡಿನ ಪಕ್ಷಿಗಳಲ್ಲಿ ಕಾಣಿಸಿಕೊಳ್ಳಲು ಆರಂಭ
- **2021** ಉತ್ತರ ಅಮೆರಿಕದಲ್ಲಿ ಕಾಣಿಸಿಕೊಂಡ ಸೋಂಕು
- **2022** ದಕ್ಷಿಣ ಅಮೆರಿಕದಲ್ಲಿ ಮೊದಲ ಬಾರಿಗೆ ಪತ್ತೆ
- **2024** ಹಿಮಖಂಡ ಅಂಟಾರ್ಕ್ಟಿಕಾದಲ್ಲೂ ದೃಢಪಟ್ಟ ವೈರಸ್
- **2024** ಅಕ್ಟೋಬರ್: ಅಮೆರಿಕದ ಒರೆಗಾನ್‌ನಲ್ಲಿ ಹಂದಿಗಳಲ್ಲಿ ವೈರಸ್ ಪತ್ತೆ
- **2024,** ಡಿಸೆಂಬರ್: ಅಮೆರಿಕದಲ್ಲಿ ತೀವ್ರಗೊಂಡ ಸೋಂಕು. ಮನುಷ್ಯರಲ್ಲೂ ಕಾಣಿಸಿಕೊಂಡ ಹಕ್ಕಿ ಜ್ವರ
- **2025,** ಜನವರಿ: ಅಮೆರಿಕದಲ್ಲಿ 65 ವರ್ಷದ ವೃದ್ಧ ಸಾವು

ಲಸಿಕೆ ಅಭಿವೃದ್ಧಿಗೆ ಅಮೆರಿಕ ನೆರವು

ಸದ್ಯ ಹಕ್ಕಿಜ್ವರಕ್ಕೆ ಲಸಿಕೆ ಇಲ್ಲ. ವಿವಿಧ ಕಂಪನಿಗಳು ಲಸಿಕೆಯ ತಯಾರಿಕೆಯಲ್ಲಿ ತೊಡಗಿವೆ. ಲಸಿಕೆ ಅಭಿವೃದ್ಧಿಗೆ ಇನ್ನಷ್ಟು ವೇಗ ನೀಡುವುದಕ್ಕಾಗಿ ಅಮೆರಿಕವು ಕಂಪನಿಗಳಿಗೆ ಆರ್ಥಿಕವಾಗಿ ನೆರವು ನೀಡಲು ಮುಂದಾಗಿದೆ.

ಅಮೆರಿಕದ ಆರೋಗ್ಯ ಇಲಾಖೆಯು ಹಕ್ಕಿ ಜ್ವರಕ್ಕೆ ಎಂಆರ್‌ಎನ್‌ಎ ಲಸಿಕೆ ತಯಾರಿಸುವುದಕ್ಕಾಗಿ ಔಷಧ ತಯಾರಿಕಾ ಕಂಪನಿ ಮಾಡರ್ನಾಗೆ 59 ಕೋಟಿ ಡಾಲರ್‌ಗಳಷ್ಟು (₹5,109 ಕೋಟಿ) ನೆರವು ನೀಡಲು ನಿರ್ಧರಿಸಿದೆ. ಮಾಡರ್ನಾ ಕಂಪನಿಯು ಅಭಿವೃದ್ಧಿ ಪಡಿಸುತ್ತಿರುವ ಲಸಿಕೆಯು ಈಗ ಅಮೆರಿಕದಲ್ಲಿ ಪಕ್ಷಿಗಳು ಮತ್ತು ಹಸುಗಳಲ್ಲಿ ಕಾಣಿಸಿಕೊಂಡಿರುವ ವೈರಸ್‌ನ ರೂಪಾಂತರ ತಳಿಯ ವಿರುದ್ಧ ಪರಿಣಾಮಕಾರಿಯಾಗಿ ಕೆಲಸ ಮಾಡಲಿದೆ ಎಂದು ಹೇಳಲಾಗುತ್ತಿದೆ.

ಅಮೆರಿಕದಲ್ಲಿ ಮೃತಪಟ್ಟಿದ್ದ 65 ವರ್ಷದ ಸೋಂಕಿತ ವ್ಯಕ್ತಿಯಲ್ಲಿ ಎಚ್‌5ಎನ್‌1ನ ಡಿ1.1 ರೂಪಾಂತರ ತಳಿ ಪತ್ತೆಯಾಗಿತ್ತು. ಕೋಳಿಗಳಲ್ಲಿ ಮತ್ತು ಪಕ್ಷಿಗಳಲ್ಲೂ ಇದೇ ವೈರಸ್ ಕಾಣಿಸಿಕೊಂಡಿದೆ. ಸೋಂಕಿತ ಹಸುಗಳಲ್ಲಿ ಬಿ3.13 ತಳಿ ಕಂಡು ಬಂದಿದೆ ಎಂದು ಅಮೆರಿಕದ ರೋಗ ನಿಯಂತ್ರಣ ಮತ್ತು ತಡೆ ಕೇಂದ್ರ ಹೇಳಿದೆ.

ಕೋಳಿ ಮೊಟ್ಟೆ ಸುರಕ್ಷಿತವೇ?

ಕೋಳಿ ಮೊಟ್ಟೆ ತಿನ್ನುವುದರಿಂದ ಹಕ್ಕಿ ಜ್ವರ ಬರುವುದೇ ಎಂಬ ಗೊಂದಲ ಹಲವರಲ್ಲಿದೆ. ಸೋಂಕಿತ ಕೋಳಿಯ ಮೊಟ್ಟೆಯನ್ನು ಬೇಯಿಸಿ ತಿಂದರೆ ಯಾವ ಸಮಸ್ಯೆ ಇಲ್ಲ. ಬೇಯಿಸಿದಾಗ, ಅದರಲ್ಲಿನ ವೈರಸ್ ಸಾಯುತ್ತದೆ ಎಂದು ಹೇಳುತ್ತಾರೆ ತಜ್ಞರು. ಆದರೆ, ಯಾವುದೇ ಕಾರಣಕ್ಕೂ ಹಸಿ ಮೊಟ್ಟೆ ತಿನ್ನಬಾರದು ಎನ್ನುವುದು ಅವರ ಸಲಹೆ. ಹಕ್ಕಿ ಜ್ವರ ಸೋಂಕಿತ ಹಸುವಿನ ಹಾಲಿನಲ್ಲಿ ಎಚ್‌5ಎನ್‌1 ವೈರಸ್‌ಗಳು ಭಾರಿ ಪ್ರಮಾಣದಲ್ಲಿ ಇರುತ್ತವೆ. ಆದರೆ, ಆ ಹಾಲನ್ನು ಕುದಿಸಿದರೆ, ಯಾವುದೇ ಭಯವಿಲ್ಲದೇ ಹಾಲನ್ನು ಕುಡಿಯಬಹುದು.

ಹಕ್ಕಿ ಜ್ವರ ಎಂದರೇನು?

ಇದು ಹಕ್ಕಿಗಳನ್ನು ಬಾಧಿಸುವ ಮತ್ತು ಬಹುಬೇಗ ಹರಡುವ ಜ್ವರ. ಇದಕ್ಕೆ ಎಚ್‌5ಎನ್‌1 ವೈರಸ್ ಕಾರಣ. ಮನುಷ್ಯರು ಮತ್ತು ಪ್ರಾಣಿಗಳಲ್ಲಿ ಈ ಸೋಂಕು ಕಾಣಿಸಿಕೊಳ್ಳುವುದು ಅಪರೂಪ. ಸೋಂಕಿತ ಹಕ್ಕಿಗಳ ಎಂಜಲು, ಲೋಳೆ, ಹಿಕ್ಕೆಯಲ್ಲಿ ವೈರಸ್‌ಗಳಿರುತ್ತವೆ. ಹೆಬ್ಬಾತು, ಬಾತುಕೋಳಿಯಂತಹ ಕಾಡಿನ ಕೆಲವು ಪಕ್ಷಿಗಳಿಗೆ ಸೋಂಕು ತಗುಲಿದರೂ ಅವುಗಳ ಆರೋಗ್ಯದ ಮೇಲೆ ಹೆಚ್ಚು ಪರಿಣಾಮವಾಗುವುದಿಲ್ಲ. ಆದರೆ, ಕೋಳಿಗಳಿಗೆ ಈ ಸೋಂಕು ಕಂಟಕವಾಗಿದ್ದು, ತೀವ್ರ ಅನಾರೋಗ್ಯದ ಜೊತೆಗೆ ಅವುಗಳ ಪ್ರಾಣಕ್ಕೂ ಕುತ್ತು ತರುತ್ತದೆ.

1996ರಲ್ಲಿ ಚೀನಾದಲ್ಲಿ ಮೊದಲು ಹಕ್ಕಿ ಜ್ವರ ಕಾಣಿಸಿಕೊಂಡಿತ್ತು. 2021ರವರೆಗೂ ಇದು ಗಂಭೀರ ಕಾಯಿಲೆಯಾಗಿರಲಿಲ್ಲ. ಆ ಬಳಿಕ ವೈರಸ್ ರೂಪಾಂತರಗೊಂಡು ಪಕ್ಷಿ, ಪ್ರಾಣಿಗಳನ್ನು ತೀವ್ರವಾಗಿ ಕಾಡಲು ಆರಂಭಿಸಿದೆ.

ಹರಡುವಿಕೆ ಹೇಗೆ?

ಎಚ್‌5ಎನ್‌1 ವೈರಸ್ ಹಕ್ಕಿಗಳಿಂದ ಹಕ್ಕಿಗಳಿಗೆ ಬಹುಬೇಗ ಹರಡುತ್ತದೆ. ಹಕ್ಕಿಗಳು ವಲಸೆ ಹೋದಾಗ, ಗುಂಪಿನಲ್ಲಿ ಸೋಂಕಿತ ಹಕ್ಕಿ ಇದ್ದರೆ ಹೋದ ಸ್ಥಳದಲ್ಲಿರುವ ಹಕ್ಕಿಗಳಿಗೂ ಸುಲಭವಾಗಿ ಹರಡುತ್ತದೆ. ಸೋಂಕಿತ ಕೋಳಿ ಅಥವಾ ಹಕ್ಕಿಗಳೊಂದಿಗೆ ನೇರ ಸಂಪರ್ಕಕ್ಕೆ ಬಂದ ಮನುಷ್ಯರು ಮತ್ತು ಪ್ರಾಣಿಗಳಿಗೂ ಸೋಂಕು ಹರಡಬಹುದು. ತೇವ ಅಥವಾ ಒಣಗಿದ ಗೊಬ್ಬರದಲ್ಲಿ ಎಂಟು ವಾರಗಳವರೆಗೂ ಜೀವಿಸುವ ಸಾಮರ್ಥ್ಯ ಈ ವೈರಸ್‌ಗೆ ಇದೆ.

ಸೋಂಕಿತ ಪಕ್ಷಿ, ಪ್ರಾಣಿಗಳ ನೇರ ಸಂಪರ್ಕಕ್ಕೆ ಬಾರದೇ ಇರುವುದು, ಒಂದು ವೇಳೆ ಬಂದರೆ, ಕೈಯನ್ನು ಸಾಬೂನಿನಿಂದ ತೊಳೆದು ಸ್ವಚ್ಛಗೊಳಿಸುವುದರ ಮೂಲಕ ಈ ವೈರಸ್ ಮನುಷ್ಯನಿಗೆ ಹರಡುವುದನ್ನು ತಡೆಯಬಹುದು.

ರೋಗ ಲಕ್ಷಣ ಏನೇನು?

ಮನುಷ್ಯರಲ್ಲಿ ಸಾಮಾನ್ಯ ಜ್ವರದ ಲಕ್ಷಣಗಳೇ ಕಾಣಿಸಿಕೊಳ್ಳುತ್ತವೆ. ತೀವ್ರ ಜ್ವರ, ಚಳಿಯ ಅನುಭವ, ತಲೆ ನೋವು, ಮೈಕೈ ನೋವು, ಕೆಮ್ಮು, ಉಸಿರಾಟ ತೊಂದರೆ, ಗಂಟಲು ನೋವು, ಭೇದಿ, ಹೊಟ್ಟೆನೋವು, ಮೂಗು/ಒಸಡಿನಲ್ಲಿ ರಕ್ತ ಸ್ರಾವ, ಕೆಂಗಣ್ಣು ಬಾಧಿಸುತ್ತದೆ. ಕೋಳಿಗಳಲ್ಲಿ ಸೋಂಕಿನ ಲಕ್ಷಣಗಳು ತಕ್ಷಣಕ್ಕೆ ಕಾಣಿಸಿಕೊಳ್ಳುವುದಿಲ್ಲ. ಅವು ಬಹುಬೇಗ ಹರಡುವುದರಿಂದ ರೋಗ ಪತ್ತೆ ಕಷ್ಟ. ಸಾಮಾನ್ಯವಾಗಿ ಸೋಂಕಿತ ಕೋಳಿಗಳು ಆಹಾರ ತಿನ್ನುವುದಿಲ್ಲ. ಮೊಟ್ಟೆ ಉತ್ಪಾದನೆ ಕಡಿಮೆಯಾಗುತ್ತದೆ. ಹೆಚ್ಚು ಓಡಾಡುವುದಿಲ್ಲ. ಕಣ್ಣುಗಳು ತೇವಗೊಂಡಿರುತ್ತವೆ. ರೆಕ್ಕೆಗಳು ಕೆದರಿರುತ್ತವೆ. ನೆತ್ತಿ ಮತ್ತು ಜೋಲು ದೊಗಲುವಿನಲ್ಲಿ (ಕುತ್ತಿಗೆಯಲ್ಲಿ ಜೋಲಾಡುವ ಭಾಗ) ದ್ರವ ಸಂಗ್ರಹವಾಗುತ್ತದೆ. ಕೆಮ್ಮೂ ಕಾಡಬಹುದು. ತಲೆ ಭಾಗ ಊದಿಕೊಳ್ಳುತ್ತದೆ. ಕಾಲಿನ ಚರ್ಮದ ಅಡಿಯಲ್ಲಿ ರಕ್ತಸ್ರಾವವೂ ಕಾಣಿಸಿಕೊಳ್ಳಬಹುದು. ದಿಢೀರ್ ಸಾವು ಕೂಡ ಸಂಭವಿಸುತ್ತದೆ.

ಮನುಷ್ಯರಿಂದ ಮನುಷ್ಯರಿಗೆ ಹರಡದು

ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಂಡ ಐದು ವರ್ಷಗಳ ಬಳಿಕ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಪಕ್ಷಿಗಳು ಮತ್ತು ಜಾನುವಾರುಗಳಲ್ಲಿ ಹಕ್ಕಿ ಜ್ವರ ತೀವ್ರವಾಗಿ ಕಾಣಿಸಿಕೊಳ್ಳುತ್ತಿದೆ. ಅಮೆರಿಕದ ಕ್ಯಾಲಿಫೋರ್ನಿಯಾದ ಹೈನೋದ್ಯಮದ ಮೇಲೆ ಈ ಕಾಯಿಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಅಲ್ಲಿನವರು ಇದನ್ನು 'ಹಸುಗಳ ಕೋವಿಡ್' ಎಂದು ಕರೆದಿದ್ದಾರೆ. ಹೀಗೆಯೇ ಮುಂದುವರಿದರೆ, ಇದು ಕೋವಿಡ್ ಮಾದರಿಯ ಮತ್ತೊಂದು ಸಾಂಕ್ರಾಮಿಕ ರೋಗ ಆಗುವ ಸಾಧ್ಯತೆ ಇದೆ ಎಂಬ ಚರ್ಚೆಗಳು ನಡೆಯುತ್ತಿದ್ದರೂ ಮನುಷ್ಯರಲ್ಲಿ ಅಷ್ಟೊಂದು ಪ್ರಮಾಣದಲ್ಲಿ ಈ ಕಾಯಿಲೆ ಹರಡುವ ಅಪಾಯ ಕಡಿಮೆ ಎಂದು ಹೇಳಲಾಗುತ್ತಿದೆ. ಏಕೆಂದರೆ, ಈ ವೈರಸ್ ಮನುಷ್ಯರಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಹಕ್ಕಿಗಳು ಇಲ್ಲವೇ ಪ್ರಾಣಿಗಳ ನೇರ ಸಂಪರ್ಕಕ್ಕೆ ಬಂದವರಲ್ಲಷ್ಟೇ ಈವರೆಗೆ ಕಾಣಿಸಿಕೊಂಡಿದೆ.

ಸಿನಿ ಬಿಟ್ಸ್

ಸಚಿನ್ ಶೆಟ್ಟಿ ಹೊಸ ಪ್ರಾಜೆಕ್ಟ್ 'ಸಮುದ್ರ ಮಂಥನ'

ಮಂದಾರ ಬಟ್ಟಲಹಳ್ಳಿ

ಪ್ರಮೋದ್ ಶೆಟ್ಟಿ ನಟನೆಯ 'ಒಂದು ಶಿಕಾರಿಯ ಕಥೆ' ಸಿನಿಮಾ ನಿರ್ದೇಶಿಸಿದ್ದ ಸಚಿನ್ ಶೆಟ್ಟಿ ಹೊಸ ಪ್ರಾಜೆಕ್ಟ್ ಘೋಷಿಸಿದ್ದಾರೆ. ಯಶವಂತ್ ಕುಮಾರ್ ಹಾಗೂ ಮಂದಾರ ಬಟ್ಟಲಹಳ್ಳಿ ನಟನೆಯ ಈ ಸಿನಿಮಾಗೆ 'ಸಮುದ್ರ ಮಂಥನ' ಎಂಬ ಶೀರ್ಷಿಕೆ ಇಡಲಾಗಿದೆ.

ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥೆಯಾಗಿದೆ. ಚಿತ್ರ ಸದ್ಯ ಪ್ರಿಪ್ರೊಡಕ್ಷನ್ ಹಂತದಲ್ಲಿದ್ದು ಶೀಘ್ರದಲ್ಲೇ ಚಿತ್ರೀಕರಣಕ್ಕೆ ಇಳಿಯಲಿದೆ. ಯಶವಂತ್ ಈ ಹಿಂದೆ 'ವಿಕಿಪೀಡಿಯ' ಎಂಬ ಸಿನಿಮಾದಲ್ಲಿ ನಟಿಸಿದ್ದರು. ಮಂದಾರ 'ಬ್ಲಿಂಕ್', 'ಆಚಾರ್ ಆ್ಯಂಡ್ ಕೋ.', 'ಓಲ್ಡ್ ಮಾಂಕ್' ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. 'ಕಥೆಯು ಕರಾವಳಿ ಪ್ರದೇಶದ ಹಿನ್ನೆಲೆಯಲ್ಲಿ ನಡೆಯಲಿದ್ದು, ಭಿನ್ನ ನಿರೂಪಣೆಯಲ್ಲಿ ಮೂಡಿ ಬರಲಿದೆ. ಇಂದಿನ ಯುಗದಲ್ಲಿ ಪ್ರೇಕ್ಷಕರು ಗಾಢವಾದ ಕಥೆಯನ್ನು ಚಿತ್ರದಿಂದ ಅಪೇಕ್ಷಿಸುತ್ತಾರೆ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಕಥೆ, ಚಿತ್ರಕಥೆಗಾಗಿ ವರ್ಷಗಳ ಕಾಲ ಶ್ರಮಿಸಿದ್ದೇವೆ' ಎನ್ನುತ್ತಾರೆ ಸಚಿನ್ ಶೆಟ್ಟಿ. ರಫ್ ಕಟ್ ಪ್ರೊಡಕ್ಷನ್ಸ್ ಈ ಚಿತ್ರವನ್ನು ಎ ಸ್ಕ್ವೇರ್ ಪಿಕ್ಚರ್ಸ್ ಮತ್ತು ಆರುಷ್ ಪಿಕ್ಚರ್ಸ್ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡುತ್ತಿದೆ. ❖

'..ಸಿಹಿ ಸುದ್ದಿ' ನೀಡಿದ ಹೊಸಬರು

ಚಿತ್ರತಂಡ

ಯುವಕನೊಬ್ಬ ಗರ್ಭ ಧರಿಸಿ ಜಗತ್ತಿನಲ್ಲಿ ಅಚ್ಚರಿ ಮೂಡಿಸಿದ ಕಥೆಯ ಸುತ್ತ ಸಾಗುವ 'ನಿಮಗೊಂದು ಸಿಹಿ ಸುದ್ದಿ' ಚಿತ್ರದ ಮೋಷನ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚಿತ್ರರಂಗದಲ್ಲಿ ಹಲವು ವಿಭಾಗಗಳಲ್ಲಿ ಕೆಲಸ ಮಾಡಿರುವ ನಟ, ನಿರ್ದೇಶಕ ರಘು ಭಟ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಮಹಾಭಾರತ ನನ್ನ ಕಥೆಗೆ ಸ್ಫೂರ್ತಿ. ಅದರಲ್ಲಿ ಅರ್ಜುನ ಬೃಹನ್ನಳೆಯಾದ ಸನ್ನಿವೇಶವನ್ನೇ ಆಧಾರವಾಗಿಟ್ಟುಕೊಂಡು ಈ ಕಥೆ ಮಾಡಲಾಗಿದೆ. ನಾಯಕನ ಹೆಸರು ಅರ್ಜುನ್. ಆತ ಗರ್ಭಧರಿಸುತ್ತಾನೆ. ಅದು ಹೇಗೆ ಎಂಬುದೇ ಚಿತ್ರದಲ್ಲಿನ ಕುತೂಹಲಕಾರಿ ಅಂಶ. ಮನೋರಂಜನೆ ಅಂಶಗಳನ್ನು ಇಟ್ಟುಕೊಂಡು ಮಾಡಿದ ಚಿತ್ರವಿದು. ಎಲ್ಲ ಕೆಲಸಗಳನ್ನು ಮುಗಿಸಿ ಚಿತ್ರ ಬಿಡುಗಡೆಗೆ ಸಿದ್ಧವಿದೆ' ಎಂದರು ನಿರ್ದೇಶಕರು.

ಅವ್ಯಕ್ತ ಸಿನಿಮಾಸ್ ಸಂಸ್ಥೆಯ ಹರೀಶ್ ಎನ್ ಗೌಡ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಕಾವ್ಯ ಶೆಟ್ಟಿ, ಹರಿಣಿ ಶ್ರೀಕಾಂತ್, ಪದ್ಮಿನಿ ನರಸಿಂಹನ್, ಸುಜಯ್ ಶಾಸ್ತ್ರಿ ಮುಂತಾದವರು ಚಿತ್ರದಲ್ಲಿದ್ದಾರೆ. ಅಶ್ವಿನ್ ಹೇಮಂತ್ ಸಂಗೀತ, ಆನಂದ್ ಸುಂದ್ರೇಶ್ ಛಾಯಾಚಿತ್ರಗ್ರಹಣ, ನವೀನ್ ತೇಜ್ ಮತ್ತು ರಘುನಾಥ್ ಎಲ್ ಸಂಕಲನ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಅಮೆರಿಕದ ಲಾಸ್ ಏಂಜಲೀಸ್ ಮತ್ತು ಕ್ಯಾಲಿಫೋರ್ನಿಯಾದಲ್ಲಿ ಕಾಣಿಸಿಕೊಂಡಿರುವ ಭಾರಿ ಕಾಳ್ಗಿಚ್ಚು ಬಗ್ಗೆ ವಿಡಿಯೊ ಕೊಲಾಜ್ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದನ್ನು ಹಂಚಿಕೊಳ್ಳುತ್ತಿರುವವರು ಅಗ್ನಿ ಅವಘಡಕ್ಕೆ ಕಾರಣರಾಗಿರುವ ವೆಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ಸ್ ಕಂಪನಿಯ ಸಿಇಒ ರಿಚರ್ಡ್ ಗ್ರೇವ್ಸ್ ಅವರನ್ನು ಎಫ್‌ಬಿಐ ಬಂಧಿಸಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ವ್ಯಕ್ತಿಯೊಬ್ಬರ ಬಂಧನದ ದೃಶ್ಯ ಕೂಡ ಆ ವಿಡಿಯೊ ಕೊಲಾಜ್‌ನಲ್ಲಿದೆ. ಆದರೆ, ಅದು ಸುಳ್ಳು ಸುದ್ದಿ.

ರಿಚರ್ಡ್ ಗ್ರೇವ್ಸ್ ಅವರನ್ನು ಎಫ್‌ಬಿಐ ಬಂಧಿಸಿರುವ ಬಗ್ಗೆ ಕೀ ವರ್ಡ್ ಸರ್ಚ್ ಮಾಡಿದಾಗ, ಬಂಧನವನ್ನು ದೃಢಪಡಿಸುವ ಯಾವ ವರದಿಯೂ ಕಂಡುಬರಲಿಲ್ಲ. ಎಫ್‌ಬಿಐನ ಅಪರಾಧ ವಿಭಾಗದಲ್ಲಿ ಪರಿಶೀಲಿಸಿದಾಗಲೂ ಈ ಕುರಿತ ಯಾವುದೇ ಮಾಹಿತಿ ಸಿಗಲಿಲ್ಲ. ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಮಾಧ್ಯಮವೊಂದರಲ್ಲಿ 2023ರ ಏಪ್ರಿಲ್ 14ರಂದು ಪ್ರಕಟವಾಗಿರುವ ಸುದ್ದಿ ಮತ್ತು ಅದಕ್ಕೆ ಸಂಬಂಧಿಸಿದ ವಿಡಿಯೊ ಸಿಕ್ಕಿತು. ಮೆಸಾಚುಸೆಟ್ಸ್ ಏರ್ ನ್ಯಾಷನಲ್ ಗಾರ್ಡ್‌ನ ಸಿಬ್ಬಂದಿಯೊಬ್ಬರನ್ನು ಎಫ್‌ಬಿಐ ಬಂಧಿಸಿದ ಸುದ್ದಿ ಅದು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಅದೇ ವಿಡಿಯೊ. ಅಮೆರಿಕದ ಅಗ್ನಿ ಅವಘಡಕ್ಕೂ ವೆಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ ಸಿಇಒಗೂ ಸಂಬಂಧವಿಲ್ಲ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಮನುಷ್ಯನಿಗೆ ವೈರಾಗ್ಯ ಬೇಕು!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

115

ಮನುಷ್ಯ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಹವ್ಯಾಸಗಳು ನಡವಳಿಕೆ ರೂಪಿಸುತ್ತವೆ. ನಡವಳಿಕೆಗಳು ಮನುಷ್ಯನನ್ನು ರೂಪಿಸುತ್ತವೆ. ಒಳ್ಳೆಯ ಹವ್ಯಾಸ ಇದ್ದರೆ ಮನುಷ್ಯ ಒಳ್ಳೆಯವನಾಗುತ್ತಾನೆ. ಕೆಟ್ಟ ಹವ್ಯಾಸ ಇದ್ದರೆ ಕೆಟ್ಟವನಾಗುತ್ತಾನೆ. ಕೆಟ್ಟವನಾಗಲಿಕ್ಕೆ 60 ವರ್ಷ ಬೇಕಾಗಬಹುದು. ಆದರೆ, ನಾನು ಒಳ್ಳೆಯವನಾಗುತ್ತೇನೆ ಎಂದು ಸಂಕಲ್ಪ ಮಾಡಿ ಅದರಂತೆ ನಡೆದುಕೊಂಡರೆ ನೀವೂ ಸಂತರಾಗಬಹುದು. ಅದಕ್ಕೆ ಮನುಷ್ಯನಿಗೆ ಅಭ್ಯಾಸದ ಬಲ ಬೇಕು. ಮನುಷ್ಯನಿಗೆ ಇನ್ನೊಂದು ಮುಖ್ಯವಾದದ್ದು ವೈರಾಗ್ಯ. ವೈರಾಗ್ಯ ಅಂದರೆ ನಾವು, ಮನೆ ಮಠ, ಹೆಂಡ್ರು, ಗಂಡ, ಮಕ್ಕಳು, ಆಸ್ತಿಪಾಸ್ತಿ ಬಿಟ್ಟು ಹಿಮಾಲಯಕ್ಕೆ ಹೋಗೋದು ಅಂದುಕೊಂಡೇವಿ. ಅದು ವೈರಾಗ್ಯ ಅಲ್ಲ. ಇಲ್ಲಿಯೇ ಇದ್ದು ಸಾಧಿಸೋದು ವೈರಾಗ್ಯ. ಆಲಯ ಬಿಟ್ಟು ಹಿಮಾಲಯಕ್ಕೆ ಹೋದರೂ ಹಿಮಾಲಯದಲ್ಲಿಯೂ ಒಂದು ಆಲಯ ಐತಲ್ಲ, ಅದನ್ನು ತಿಳ್ಕೋಬೇಕು. ಈ ಬಗ್ಗೆ ಶರಣರು ಸಂಶೋಧನೆ ಮಾಡಿದರು. ಅದಕ್ಕೆ ಮಸಣಯ್ಯಗಳ ಪುಣ್ಯಸ್ತ್ರಿ ಒಂದು ವಚನದಲ್ಲಿ 'ಹೊನ್ನು ಬಿಟ್ಟು ಲಿಂಗವ ಒಲಿಸಬೇಕೆಂಬರು, ಹೊನ್ನಿಗೂ ಲಿಂಗಕ್ಕೂ ವಿರೋಧವೇ? ಹೆಣ್ಣು ಬಿಟ್ಟು ಲಿಂಗವ ಒಲಿಸಬೇಕೆಂಬರು ಹೆಣ್ಣಿಗೂ ಲಿಂಗಕ್ಕೂ ವಿರುದ್ಧವೇ? ಮಣ್ಣುಬಿಟ್ಟು ಲಿಂಗವ ಒಲಿಸಬೇಕೆಂಬರು ಮಣ್ಣಿಗೂ ಲಿಂಗಕ್ಕೂ ವಿರುದ್ಧವೇ? ಅಂಗ ಬಿಟ್ಟು ಲಿಂಗವನೊಲಿಸಬೇಕೆಂಬರು, ಇಂದ್ರಿಯಗಳನ್ನು ಬಿಟ್ಟು ಲಿಂಗವನೊಲಿಸಬೇಕೆಂಬರು ಇಂದ್ರಿಯಕ್ಕೂ ಲಿಂಗಕ್ಕೂ ವಿರೋಧವೇ? ಜಗವ ಬಿಟ್ಟು ಲಿಂಗವನೊಲಿಸಬೇಕೆಂಬರು. ಅಂಗ, ಇಂದ್ರಿಯ, ಜಗತ್ತು ಎಲ್ಲದಕ್ಕೂ ಲಿಂಗ ವಿರುದ್ಧವೇ' ಎಂದು ಪ್ರಶ್ನೆ ಮಾಡಿದರು. ದೇವರ ಸಾಕ್ಷಾತ್ಕಾರ ಆಗಬೇಕಾದರೆ ಸಂಪತ್ತು ಬಿಡಬೇಕು ಅನ್ನುತ್ತಾರಲ್ಲ. ಸಂಪತ್ತಿಗೂ ದೇವರ ಒಲುಮೆಗೂ ಏನು ಸಂಬಂಧ? ರೊಕ್ಕ ಇದ್ದರೆ ದೇವರು ಒಲಿಯುವುದಿಲ್ಲವೇ? ರೊಕ್ಕಕ್ಕೂ ದೇವರ ಒಲುಮೆಗೂ ಏನು ಸಂಬಂಧ? ರೊಕ್ಕ ಬಿಟ್ಟರೆ, ಸಂಪತ್ತು ಬಿಟ್ಟರೆ, ಜಗತ್ತು ಬಿಟ್ಟರೆ ದೇವರ ಸಾಕ್ಷಾತ್ಕಾರ ಆಗತೈತಿ ಅಂತ ಎಲ್ಲೈತಿ? ವೈರಾಗ್ಯ ಎಂದರೆ ಏನು ಅಂತ ಅವರು ಸುಂದರವಾಗಿ ಹೇಳಿದ್ದಾರೆ. 'ಪರಂಜ್ಯೋತಿ, ಪರಮ ಕರುಣಿ, ಪರಮಶಾಂತ ಲಿಂಗವು ಕೋಪದ ಮುನಿಸದರಿದೊಡೆ ಕಾಣುವುದು, ಮರೆದಡೆ ಕಾಣದು. ಅರಿವಿನಿಂದ ಸುಖವು. ನಮ್ಮ ಮಸಣಯ್ಯ ಪ್ರಿಯ ಗಜೇಶ್ವರಲಿಂಗ' ಎಂದರು. ಅವರು ಎಷ್ಟು ಚೆಂದ ವಿಮರ್ಶೆ ಮಾಡ್ತಾರೆ ನೋಡಿ. ಹೊನ್ನು ಬಿಡುವುದು ವೈರಾಗ್ಯ ಅಲ್ಲ. ಇನ್ನೊಬ್ಬರ ಹಣಕ್ಕೆ ಆಸೆ ಮಾಡದ ಹಾಗೆ ಇದ್ದರೆ ಅದೇ ವೈರಾಗ್ಯ. ಹೆಣ್ಣು ಬಿಡುವುದು ವೈರಾಗ್ಯ ಅಲ್ಲ. ನಿನ್ನ ಕೈ ಹಿಡಿದ ಹೆಣ್ಣಿಗೆ ಮೋಸ ಮಾಡದ ಹಾಗೆ ಬದುಕುವುದು ವೈರಾಗ್ಯ.

ಒಂದು ಕೈಯಲ್ಲಿ ಮೊಬೈಲ್, ಇನ್ನೊಂದರಲ್ಲಿ ಪುಸ್ತಕ ಹಿಡಕೊಂಡು ಕುಳಿತ ಹುಡುಗನಿಗೆ ಇವರೆಡರ ನಡುವೆ ಏನು ವ್ಯತ್ಯಾಸ ಅನ್ನೋದನ್ನು ತಿಳಿಸಿಕೊಡಬೇಕು. ಮೊಬೈಲ್ ಹಿಡಕೊಂಡರೆ ತಲೆ ತಗ್ಗಿಸಿ ನಡೆಯಬೇಕು. ಅದು ನಮ್ಮನ್ನು ತಲೆ ಎತ್ತದಂತೆ ಮಾಡುತ್ತದೆ. ಪುಸ್ತಕ ಹಿಡಕೊಂಡರೆ ತಲೆ ಎತ್ತಿ ನಡೆಯುವಂತೆ ಮಾಡುತ್ತದೆ ಎನ್ನೋದನ್ನು ಅರ್ಥ ಮಾಡಿಸಬೇಕು. ಎಷ್ಟು ಪುಸ್ತಕ ಓದೋದು? ಪುರಾಣಗಳಿವೆ, ಭಗವದ್ಗೀತೆ, ವೇದ ಉಪನಿಷತ್, ವಚನ, ಅಭಂಗ ಎಲ್ಲವೂ ಇವೆ. ಎಲ್ಲವನ್ನೂ ಓದಲು ನಮ್ಮ ಆಯುಷ್ಯ ಸಾಲೋದಿಲ್ಲ. ಹಾಗಂತ ಓದೋದು ಬಿಡಬಾರದು. ಜೀವನದಲ್ಲಿ ಅಭ್ಯಾಸ ಮತ್ತು ವೈರಾಗ್ಯ ಎರಡೂ ಬಹಳ ಮುಖ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜನವರಿ 22, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಅಷ್ಟಮಿ ಗಂ. 15-19 ನಕ್ಷತ್ರ: ಸ್ವಾತಿ ಗಂ. 26-34 ಯೋಗ: ಶೂಲ ಗಂ. 28-38 ಕರಣ: ಕೌಲವ ಗಂ. 15-19, ಮಕರ ಮಾಸದ 08 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 07-01 ಸೂರ್ಯಾಸ್ತ: 06-23

ಮುಸ್ಲಿಂ ದಿನಾಂಕ: 21 ರಜಬ್

ಅದೃಷ್ಟ ಸಂಖ್ಯೆ: 7, 3

ಮೇಷ: ಯೋಜನೆಯ ಬೆಳವಣಿಗೆಗೆ ಸಂಬಂಧಿಸಿದವರ ಜತೆ ಚರ್ಚೆ ನಡೆಸಿ ಬಾಕಿ ಇದ್ದ ಯೋಜನೆ ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ. ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರ ಮರೆಯದಿರಿ.

ವೃಷಭ: ಕಷ್ಟ ಪರಿಸ್ಥಿತಿಯಲ್ಲಿ ಜನಬಲದ ಕೊರತೆಯಾದರೂ, ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ನಟನೆ ವೃತ್ತಿಯವರಿಗೆ ಜನಪ್ರಿಯತೆ ಇರುವುದು. ವಿದ್ಯಾರ್ಥಿ ಸಮೂಹಕ್ಕೆ ಅವಕಾಶಗಳು ಲಭಿಸಲಿವೆ.

ಮಿಥುನ: ಕೇವಲ ವ್ಯವಹಾರಿಕವಾಗಿ ಅಲ್ಲದೆ ಪಾರಮಾರ್ಥಿಕ ದೃಷ್ಟಿಯಲ್ಲಿಯೂ ವಿಷಯಗಳನ್ನು ಯೋಚನೆ ಮಾಡುವುದು ಉತ್ತಮ. ಹಿಂದಿನ ಪ್ರಯತ್ನಗಳು ವ್ಯರ್ಥವಾಗಿಲ್ಲ ಎಂಬುದು ಅರಿವಾಗುವುದು.

ಕರ್ಕಾಟಕ: ಲೆಕ್ಕಚಾರದ ಜವಾಬ್ದಾರಿ ಹೊತ್ತಿರುವವರು ಗಮನದಿಂದ ಕೆಲಸ ನಿರ್ವಹಿಸಿ, ಇಲ್ಲವಾದಲ್ಲಿ ಸಮಸ್ಯೆಗೆ ಸಿಲುಕುವಂತಾಗುವುದು. ಬಂಧನದ ಭೀತಿ ಅಥವಾ ಮಾನ ಹಾನಿಯಾಗುವ ಲಕ್ಷಣಗಳಿವೆ. ಜಾಗ್ರತರಾಗಿರಿ.

ಸಿಂಹ: ಶುದ್ಧಹಸ್ತದ ಗುಣದಿಂದ ಹಿರಿಯ ವ್ಯಕ್ತಿಯೊಬ್ಬರ ಜತೆ ಕೆಲಸ ಮಾಡುವ ಅವಕಾಶ ಸಿಗುತ್ತದೆ. ಒಳಾಂಗಣ ವಿನ್ಯಾಸ ಬೇಡಿಕೆ ಇರುವುದು. ಉದರ ಸಂಬಂಧ ಅನಾರೋಗ್ಯ ಎದುರಾಗಬಹುದು.

ಕನ್ಯಾ: ಬಿಡುವಿಲ್ಲದ ಕೆಲಸದಲ್ಲೂ ಮನಸ್ಸಿಗೆ ಒಂದು ತರಹದ ನೆಮ್ಮದಿ ಇರುವುದು ಆಶ್ಚರ್ಯವೆನಿಸಲಿದೆ. ಶ್ರೀರಾಮ ನಾಮ ಭಜನೆಯಿಂದ ಕಾರ್ಯಗಳ ಅಭಿವೃದ್ಧಿ. ಹಠದಿಂದ ಸೋಲು ಉಂಟಾಗಬಹುದು.

ತುಲಾ: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರುವುದು ಮೂಲಮಂತ್ರವಾಗಿದೆ. ಧರ್ಮಕಾರ್ಯದಲ್ಲಿ ಆಸಕ್ತಿ ಹೆಚ್ಚಿ, ಅದರಿಂದ ಉತ್ತಮ ಶುಭ ಫಲ ಕಾಣುವಿರಿ. ಹಣಕಾಸಿನಲ್ಲಿ ಹಿಡಿತವಿರಲಿ.

ವೃಶ್ಚಿಕ: ಹೂವಿನ ಬೆಳೆಗಾರರಿಗೆ, ಹೈನು ಉದ್ಯಮಿಗಳಿಗೆ ಲಾಭವಿದ್ದರೂ, ಮಧ್ಯವರ್ತಿಗಳ ಕಿರಿಕಿರಿ ಆತಂಕವನ್ನು ಸೃಷ್ಟಿಸಲಿದೆ. ಬಹುದಿನಗಳಿಂದ ಕಾಯುತ್ತಿದ್ದ ಫಲಿತಾಂಶವು ಬರಲಿದೆ. ಸುಖ ಭೋಜನ ಪ್ರಾಪ್ತಿಯಾಗಲಿದೆ.

ಧನು: ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಗಮನಹರಿಸ ಬೇಕಾಗುವುದು. ಪ್ರಯತ್ನಕ್ಕಿಂತ ಮಿಗಿಲಾದ ಧನಾದಾಯವಿರಲಿದೆ. ಮಿತ್ರರಲ್ಲಿ ಕಿರು ಪ್ರವಾಸದ ಮಾತು ಬರಲಿದೆ.

ಮಕರ: ದೊಡ್ಡ ವ್ಯವಹಾರವನ್ನು ಗಮನದಲ್ಲಿಟ್ಟುಕೊಂಡು ಸಾಲ ಮಾಡುವುದು ಸರಿಯಲ್ಲ. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಂಡವಾಳ ಹೂಡಬಹುದು. ವೃತ್ತಿಗೆ ಹೊರತಾದ ಕೆಲಸ ಮಾಡುವುದರಲ್ಲಿ ಆಸಕ್ತಿ ಹೆಚ್ಚಲಿದೆ.

ಕುಂಭ: ವೃತ್ತಿಯಲ್ಲಿ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ಕೆಲಸದಲ್ಲಿ ಹೊಸ ಪ್ರಯತ್ನಗಳನ್ನು ಪ್ರಯೋಗಿಸಿ. ದಾಂಪತ್ಯದಲ್ಲಿ ಸಣ್ಣಪುಟ್ಟ ವಿಚಾರಗಳಿಂದ ಮಾನಸಿಕ ಅಸಮಾಧಾನ ಕಾಡಲಿದೆ.

ಮೀನ: ಮಾರ್ಗದರ್ಶಕರ ವಾಕ್ಯವನ್ನು ಅನುಸರಿಸಿದರೆ ಜೀವನ ರೂಪಿಸಿಕೊಳ್ಳಲು ಸುಲಭವಾಗುತ್ತದೆ. ವ್ಯಥಾ ಕಾಲಹರಣ ಮಾಡಿದರೆ ನಷ್ಟವನ್ನು ಅನುಭವಿಸುವಿರಿ. ಸೌಜನ್ಯ, ಸರಳತೆ ಹುದ್ದೆಗೆ ಮೆರುಗು ತರುವುದು.

ಪದಬಂಧ 5930

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಪೂರ್ವಕಥೆ ಅಥವಾ ಚರಿತ್ರೆ (4)
3.ಬಹು ಕಾಲ ಇರುವಂಥದ್ದು (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪೂರ್ವವೂ ಆಗಿರುವ ವಿರಳತೆ (4)
7.ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (4)
9.ವೀಳೆದೆಲೆಯ ಕಟ್ಟು (4)
10.ಒಪ್ಪವಾಗಿ ಯೋಗ್ಯವಾದವನು ಕಾಣುತ್ತಿದ್ದಾನೆ (4)
11.ಹೊನ್ನಿನ ಬಣ್ಣದ ಬಿಸಿಲು (4)
13.ವೃಕ್ಷದ ಬಳಿಯಿರುವ ಪಚ್ಚೆ (4)
14.ಆಕಾಶ ಇಲಿ ಕಾಣುತ್ತಿದೆ (3)
15.ಅವಗಾಹನೆಯಲ್ಲಿ ಮುಳುಗುವುದು! (4)
16.ವಿದ್ವಾಂಸನಲ್ಲ! ಈತ ನಾಶ ಮಾಡುವವನು! (4)

ಮೇಲಿಂದ ಕೆಳಕ್ಕೆ

2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಬಾಗಿಲನ್ನು ಭದ್ರ ಪಡಿಸುವ ಕೊಂಡಿ (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ಛಂದೋಬದ್ಧ ಹಾಡುಗಳಲ್ಲಿ ಸಂಭಾಷಣೆಯುಳ್ಳ ದೃಶ್ಯ ಕಾವ್ಯ (5)
12.ಸೂರ್ಯ ಹುಟ್ಟಿದ ಕಾಲದಿಂದ ಮುಳುಗುವವರೆಗಿನ ಕಾಲವು ಉಲ್ಟಾ ಆಗಿದೆ (3)
13.ಮನದಿಂದ ಮಾಡಿಕೊಂಡಿರುವ ಅರಿಕೆ (3)



5929ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಷಮ 3.ಇಬ್ಬಂದಿ 5.ಜನಾನುರಾಗಿ 6.ಗವಿ 8.ಗುರಿ 9.ವರ 10.ಕಸು 14.ಮರ್ಮಭೇದಕ 15.ರವಾನೆ 16.ವಜೀರ

ಮೇಲಿಂದ ಕೆಳಕ್ಕೆ:
1.ವಿನಿಯೋಗ 2.ಮಜಲು 3.ಇಂಗಿತ 4.ದಿನಚರಿ 7.ವಿಧುರ 8.ಗುಣಕ 9.ವನಚರ 11.ಸುಕುಮಾರ 12.ಕಾಮನೆ 13.ಕಕವ

ಸುಡೊಕು 6315

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6314 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ವನ್ಯಜೀವಿ ಅನುಮೋದನೆಗೆ ಶಿಫಾರಸು ಮಾಡಿ ಡಿಸಿಎಫ್‌ಗಳ 'ಕೊಕ್ಕೆ'; ಭೂಕುಸಿತ, ವಾಯು, ಶಬ್ದಮಾಲಿನ್ಯದ ಆತಂಕ

ಶರಾವತಿ ಯೋಜನೆ: ಪಶ್ಚಿಮ ಘಟ್ಟಕ್ಕೆ ಆಪತ್ತು

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಅನುಷ್ಠಾನಗೊಳಿಸುತ್ತಿರುವ ₹8,005 ಕೋಟಿ ವೆಚ್ಚದ 'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆಗೆ 134 ಎಕರೆ ಕಾಡು ಬಳಸುವ ಪ್ರಸ್ತಾವವನ್ನು ಶರಾವತಿ ವನ್ಯಜೀವಿಧಾಮದ ವ್ಯಾಪ್ತಿಯ ಮೂವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಡಿಸಿಎಫ್) ಶಿಫಾರಸು ಮಾಡಿದ್ದಾರೆ. ಆದರೆ, ಈ ಯೋಜನೆಯ ಅನುಷ್ಠಾನದಿಂದ ಪಶ್ಚಿಮ ಘಟ್ಟಕ್ಕೆ ಆಪತ್ತು ಕಟ್ಟಿಟ್ಟ ಬುತ್ತಿ ಎಂದೂ ಎಚ್ಚರಿಸಿದ್ದಾರೆ.

ಶಿವಮೊಗ್ಗ, ಸಾಗರ ಹಾಗೂ ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಯೋಜನಾ ಸ್ಥಳ ಪರಿಶೀಲನೆ ನಡೆಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ (ಪಿಸಿಸಿಎಫ್) ಜನವರಿ ಮೂರನೇ ವಾರದಲ್ಲಿ ವಿಸ್ತೃತ ವರದಿ ಸಲ್ಲಿಸಿದ್ದಾರೆ. ಪಿಸಿಸಿಎಫ್ ಅನುಮೋದನೆಯ ಬಳಿಕ ಈ ಪ್ರಸ್ತಾವ ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಚರ್ಚೆಯಾಗಲಿದೆ.

ಈ ಯೋಜನೆ ಕಾರ್ಯಸಾಧುವಲ್ಲ ಎಂದು ಮೂವರು ಡಿಸಿಎಫ್‌ಗಳು ಈ ಹಿಂದೆ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರು. ಆ ನಂತರ, ಈ ಯೋಜನೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಇದೀಗ, ಡಿಸಿಎಫ್‌ಗಳು ಯೋಜನೆಯ ಪರವಾಗಿ ಶಿಫಾರಸು ಮಾಡಿದ್ದಾರೆ. ಜತೆಗೆ, ಯೋಜನೆಯಿಂದ ಪಶ್ಚಿಮ ಘಟ್ಟದ ಮೇಲಾಗುವ ಪರಿಣಾಮಗಳ ಬಗ್ಗೆ ಸುದೀರ್ಘ ಟಿಪ್ಪಣಿ ಬರೆದಿದ್ದಾರೆ.

'ಈ ಯೋಜನೆಗಾಗಿ ಹೊಸ ಅಣೆಕಟ್ಟೆ ನಿರ್ಮಿಸುವುದಿಲ್ಲ ಎಂದು ಕೆಪಿಸಿ ಸ್ಪಷ್ಟಪಡಿಸಿದೆ. ಇದೊಂದು ನಿಯಮಿತ ಜಲವಿದ್ಯುತ್ ಯೋಜನೆ ಅಲ್ಲ ಎಂದೂ ತಿಳಿಸಿದೆ. ಆದರೆ, ನಿಗಮವು ನೀಡಿರುವ ಸ್ಪಷ್ಟೀಕರಣ ತೃಪ್ತಿಕರವಾಗಿಲ್ಲ. ಈ ಬಗ್ಗೆ ಇನ್ನಷ್ಟು ವಿವರಣೆ ಕೇಳುವುದು ಸೂಕ್ತ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜಲವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳುವಂತಿಲ್ಲ ಎಂದು ಕೇಂದ್ರ ಪರಿಸರ ಸಚಿವಾಲಯ 2011ರಲ್ಲಿ ಸುತ್ತೋಲೆ ಹೊರಡಿಸಿದೆ. ಈ ಯೋಜನೆಯು ಶರಾವತಿ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲೇ ಕಾರ್ಯಗತಗೊಳ್ಳುತ್ತಿದೆ. ಇದಕ್ಕೂ ಸ್ಪಷ್ಟನೆ ಪಡೆಯುವುದು ಉತ್ತಮ. ಈಗಿರುವ ವಿದ್ಯುತ್ ವಿತರಣಾ ಮಾರ್ಗಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತದೆ ಎಂದು ಕರ್ನಾಟಕ ವಿದ್ಯುತ್ ನಿಗಮ ಹೇಳಿಕೊಂಡಿದೆ. ಇದಕ್ಕಾಗಿ ಹೊಸ ಟವರ್‌ಗಳನ್ನು ನಿರ್ಮಿಸಬೇಕಾಗುತ್ತದೆ. ಹೆಚ್ಚುವರಿ ಕಾಡುಗಳ ಬಳಕೆಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ. ಪ್ರಸ್ತಾವವನ್ನು ಶಿಫಾರಸು ಮಾಡುವ ಸಂದರ್ಭದಲ್ಲಿ ಉನ್ನತ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುವುದು ಸೂಕ್ತ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಅಂಕಿ ಅಂಶಗಳು

54.15 ಹೆಕ್ಟೇರ್ ಯೋಜನೆಗೆ ಬೇಕಿರುವ ಅರಣ್ಯ

88.68 ಹೆಕ್ಟೇರ್ ಅರಣ್ಯೇತರ ಪ್ರದೇಶ

142.76 ಹೆಕ್ಟೇರ್ ಯೋಜನೆಗೆ ಬಳಕೆಯಾಗುವ ಭೂಮಿ



ಯೋಜನೆಗೆ ಬೇಕಿರುವ ಜಾಗ (ಹೆಕ್ಟೇರ್)

ವಿಭಾಗ	ಅರಣ್ಯ	ಅರಣ್ಯೇತರ	ಒಟ್ಟು
ಶಿವಮೊಗ್ಗ	14.58	0	14.58
ಸಾಗರ	11.64	28.07	39.71
ಹೊನ್ನಾವರ	27.92	60.53	88.46

ಯೋಜನೆಯಿಂದ ಸಂಭವನೀಯ ಪ್ರತಿಕೂಲ ಪರಿಣಾಮಗಳು

- ಅಭಯಾರಣ್ಯದೊಳಗೆ ಹೊಸ ರಸ್ತೆಗಳ ನಿರ್ಮಾಣ, ಈಗಿರುವ ರಸ್ತೆಗಳ ದುರಸ್ತಿ ಹಾಗೂ ಸುರಂಗಗಳನ್ನು ನಿರ್ಮಿಸಬೇಕಿದೆ. ಇದರಿಂದಾಗಿ, ಕಾಡುಪ್ರಾಣಿಗಳ ಆವಾಸಸ್ಥಾನ ಛಿದ್ರವಾಗಲಿದೆ. ಈ ಯೋಜನೆ ಜಾರಿಯಿಂದಾಗಿ ಸಿಂಹ ಬಾಲದ ಸಿಂಗಳೀಕ ಸೇರಿದಂತೆ ಅಪರೂಪದ ಸಸ್ತನಿಗಳ ಚಲನವಲನಕ್ಕೆ ಅಡ್ಡಿಯಾಗಲಿದೆ. ಅವುಗಳ ವರ್ತನೆಯಲ್ಲಿ ಬದಲಾವಣೆಯಾಗುವ ಸಂಭವ ಇದೆ
- ಯೋಜನೆಯ ಕಾಮಗಾರಿ, ಕಾರ್ಯಾಚರಣೆ ಹಾಗೂ ನಿರ್ವಹಣೆ ಸಂದರ್ಭದಲ್ಲಿ ಸಿಬ್ಬಂದಿ ಹಾಗೂ ವಾಹನಗಳ ನಿರಂತರ ಓಡಾಟದಿಂದಾಗಿ ಆವಾಸಸ್ಥಾನಕ್ಕೆ ತೊಂದರೆ ಆಗಲಿದೆ ಹಾಗೂ ಮಾಲಿನ್ಯ ಉಂಟಾಗಲಿದೆ
- ಯೋಜನೆಯ ಕಾಮಗಾರಿಗೆ ಐದು ವರ್ಷಗಳು ಬೇಕಾಗಲಿವೆ ಎಂದು ಅಂದಾಜಿಸಲಾಗಿದೆ. ಸುದೀರ್ಘ ಅವಧಿಯ ಕಾಮಗಾರಿಯಿಂದಾಗಿ ಕಾಡು, ವನ್ಯಜೀವಿ ಆವಾಸಸ್ಥಾನದ ಸ್ವರೂಪದಲ್ಲಿ ಬದಲಾವಣೆ ಆಗಲಿದೆ. ಭೂಕುಸಿತಕ್ಕೆ ಕಾರಣವಾಗಲಿದೆ. ವಾಯುಮಾಲಿನ್ಯ ಹಾಗೂ ಶಬ್ದ ಮಾಲಿನ್ಯ ಆಗಲಿದೆ
- ಸುರಂಗ ನಿರ್ಮಾಣದ ಸಂದರ್ಭದಲ್ಲಿ ಕೊರೆಯುವಿಕೆ, ಸ್ಫೋಟಕಗಳ ಬಳಕೆಯಿಂದಾಗಿ ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಕಂಪನದ ಅಪಾಯಗಳು ಎದುರಾಗಬಹುದು
- ಅಳಿವಿನಂಚಿನಲ್ಲಿರುವ ಹಾಗೂ ಅಪರೂಪದ 15,000 ಮರಗಳನ್ನು ಯೋಜನೆಗಾಗಿ ಹನನ ಮಾಡಲಾಗುತ್ತದೆ. ಇದರಿಂದಾಗಿ, ಜೀವವೈವಿಧ್ಯಕ್ಕೆ ಭಾರಿ ಹಾನಿ ಆಗಲಿದೆ
- ಅರಣ್ಯ ಇಲಾಖೆ ನಡೆಸಿರುವ ಅಧ್ಯಯನದ ಪ್ರಕಾರ, ಈ ಅಭಯಾರಣ್ಯದಲ್ಲಿ ಸಿಂಹ ಬಾಲದ ಸಿಂಗಳೀಕಗಳ ಸಂಖ್ಯೆ 730 ಇದೆ. ಈ ಯೋಜನೆಯಿಂದ ಇವುಗಳ ಆವಾಸಸ್ಥಾನಕ್ಕೆ ಕುತ್ತು ಉಂಟಾಗಿ ಅವುಗಳ ಸಂಖ್ಯೆ ಕಡಿಮೆಯಾಗುವ ಸಂಭವ ಇದೆ
- ಜಲವಿದ್ಯುತ್ ಯೋಜನೆಗೆ ಕಾಡು ಬಳಕೆಗೆ ಬಿಡಿ ಬಿಡಿಯಾಗಿ ಪ್ರಸ್ತಾವನೆ ಸಲ್ಲಿಸುವಂತಿಲ್ಲ ಎಂದು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯ ಈ ಹಿಂದೆ ಸುತ್ತೋಲೆ ಹೊರಡಿಸಿದೆ. ಈಗಿನ ಪ್ರಸ್ತಾವದಲ್ಲಿ, ವಿದ್ಯುತ್ ಮಾರ್ಗ ನಿರ್ಮಾಣದ ಬಗ್ಗೆ ಸ್ಪಷ್ಟ ಚಿತ್ರಣ ಇಲ್ಲ. ವಿದ್ಯುತ್ ಮಾರ್ಗ ನಿರ್ಮಾಣಕ್ಕೆ ಇನ್ನಷ್ಟು ಕಾಡು ಕಡಿಯಬೇಕಾಗುತ್ತದೆ. ಆಗ ವನ್ಯಜೀವಿಗಳು ಹಾಗೂ ಜೀವವೈವಿಧ್ಯಕ್ಕೆ ಮತ್ತಷ್ಟು ಹಾನಿ ಆಗಲಿದೆ

(*ಶಿವಮೊಗ್ಗ, ಸಾಗರ ಹಾಗೂ ಹೊನ್ನಾವರ ಡಿಸಿಎಫ್ ವರದಿಯಲ್ಲಿನ ಟಿಪ್ಪಣಿಯ ಸಾರ)

'ವನ್ಯಜೀವಿ ಕಾರ್ಯಕರ್ತರ ವಿರೋಧ'

ಅಭಿವೃದ್ಧಿ ಯೋಜನೆಗಳಿಂದಾಗಿ ಪಶ್ಚಿಮ ಘಟ್ಟದ ಮೇಲೆ ಈಗಾಗಲೇ ಅಪಾರ ಹಾನಿ ಆಗಿದೆ. ಘಟ್ಟ ವ್ಯಾಪ್ತಿಯಲ್ಲಿ ಭೂಕುಸಿತ ಹೆಚ್ಚಳಕ್ಕೆ ಇದೂ ಒಂದು ಕಾರಣ. ಪರಿಸರಕ್ಕೆ ಅಪಾರ ಹಾನಿ ಉಂಟು ಮಾಡುವ ಈ ಯೋಜನೆಯ ವಿರುದ್ಧ ಮೂಲೆಗದ್ದೆ ಸ್ವಾಮೀಜಿ ನೇತೃತ್ವದಲ್ಲಿ ಜನಾಂದೋಲನ ರೂಪಿಸಲಾಗುವುದು. ಫೆಬ್ರುವರಿ ಮೊದಲ ವಾರದಲ್ಲಿ ಸಭೆ ಸೇರಿ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು.

ಸುಬ್ರಹ್ಮಣ್ಯ, 'ಹಸಿರು ಸಾಗರ' ಸಂಘಟನೆ

'ಸುಳ್ಳನ್ನು ಸತ್ಯ ಮಾಡುವ ಯತ್ನ'

ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಜಲ ವಿದ್ಯುತ್ ಯೋಜನೆಯಲ್ಲ ಎಂದು ವಾದಿಸುವ ಮೂಲಕ ರಾಜ್ಯ ಸರ್ಕಾರವು ಸುಳ್ಳನ್ನು ಸತ್ಯ ಮಾಡಲು ಹೊರಟಿದೆ. ನೀರಿನಿಂದಲೇ ವಿದ್ಯುತ್ ಉತ್ಪಾದಿಸಲು ಉದ್ದೇಶಿಸಿರುವಾಗ ಜಲ ವಿದ್ಯುತ್ ಯೋಜನೆ ಹೇಗಾಗುವುದಿಲ್ಲ? ಶರಾವತಿ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆ ಪ್ರಕಾರ ಜಲ ವಿದ್ಯುತ್ ಯೋಜನೆಗಳನ್ನು ನಿಷೇಧಿತ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದರಿಂದ ಪಾರಾಗಲು ಈ ರೀತಿಯ ಕಥೆ ಕಟ್ಟಲಾಗಿದೆ.

ರಾಘವೇಂದ್ರ, ಸಾಮಾಜಿಕ ಕಾರ್ಯಕರ್ತ

'ಸಿಂಗಳೀಕಗಳಿಗೆ ಮರಣಶಾಸನ'

ಈ ಯೋಜನೆ ಅನುಷ್ಠಾನಗೊಂಡರೆ ಶರಾವತಿ ಕಣಿವೆಗೆ ಭರಿಸಲಾಗದ ಹಾನಿ ಉಂಟಾಗಲಿದೆ. ಪಶ್ಚಿಮ ಘಟ್ಟಗಳಲ್ಲಿ ಮಾತ್ರವೇ ಕಂಡುಬರುವ ಸಿಂಹ ಬಾಲದ ಸಿಂಗಳೀಕಗಳಿಗೆ ಮರಣ ಶಾಸನವಾಗಲಿದೆ. ಅತೀ ಸೂಕ್ಷ್ಮ ಪರಿಸರ ವ್ಯವಸ್ಥೆಯಾಗಿರುವ ಮಿರಿಸ್ಟಿಕಾ ಜೌಗುಗಳ ಕೊನೆಯ ಉಳಿದ ಆವಾಸಸ್ಥಾನಗಳು ಶಾಶ್ವತವಾಗಿ ನಾಶವಾಗುವ ಭೀತಿಯಿದೆ. ಈ ಪರಿಸರ ವಿನಾಶಕಾರಿ ಯೋಜನೆಯನ್ನು ರಾಜ್ಯ ವನ್ಯಜೀವಿ ಮಂಡಳಿ ಶಿಫಾರಸು ಮಾಡುವುದಿಲ್ಲ ಎಂಬ ಆಶಾವಾದವಿದೆ.

ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಸುದ್ದಿ 2 ನಿಮಿಷ

ಎಬಿ–ಎಆರ್‌ಕೆ: ಅಸ್ಥಿಮಜ್ಜೆ ಕಸಿ ಸೇರ್ಪಡೆ

ಬೆಂಗಳೂರು: ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಡಿ ಅಸ್ಥಿಮಜ್ಜೆ ಕಸಿಯನ್ನು ಸೇರ್ಪಡೆ ಮಾಡಲಾಗಿದ್ದು, ಬಿಪಿಎಲ್ ಕುಟುಂಬದ ಸದಸ್ಯರಿಗೆ ಯೋಜನೆಯಡಿ ಉಚಿತವಾಗಿ ಕಸಿ ಚಿಕಿತ್ಸೆ ದೊರೆಯಲಿದೆ.

ಜೀವಸಾರ್ಥಕತೆ ಸಂಸ್ಥೆಯಡಿ ಹೆಸರು ನೋಂದಾಯಿಸಿಕೊಂಡವರಿಗೆ ಅಸ್ಥಿಮಜ್ಜೆ ಕಸಿಯನ್ನು ಒದಗಿಸಲಾಗುತ್ತದೆ. ಮೂಳೆ ಕ್ಯಾನ್ಸರ್, ಥಲಸ್ಸೇಮಿಯಾ ಮೊದಲಾದ ಸಮಸ್ಯೆ ಹೊಂದಿರುವವರಿಗೆ ಅಸ್ಥಿಮಜ್ಜೆ ಕಸಿ ಚೇತರಿಕೆಗೆ ಸಹಕಾರಿಯಾಗಲಿದೆ. ಖಾಸಗಿ ಆಸ್ಪತ್ರೆ ಗಳಲ್ಲಿ ಈ ಕಸಿಗೆ ₹ 40 ಲಕ್ಷದವರೆಗೂ ವೆಚ್ಚವಾಗಲಿದೆ. ಈಗ ಈ ಕಸಿಯನ್ನು 'ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಿರುವುದರಿಂದ ಜೀವಸಾರ್ಥಕತೆ ಸಂಸ್ಥೆಯಡಿ ನೋಂದಾಯಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಕಸಿ ಉಚಿತವಾಗಿ ದೊರೆಯಲಿದೆ.

ಯೋಜನೆಯಡಿ ಅಸ್ಥಿಮಜ್ಜೆ ಕಸಿ ಸೇರ್ಪಡೆ ಮಾಡುವಂತೆ ಸಂಸದ ಡಾ.ಸಿ.ಎನ್. ಮಂಜುನಾಥ್ ಅವರು 2024ರ ಅ.10ರಂದು ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಪತ್ರ ಬರೆದು, ಮನವಿ ಮಾಡಿದ್ದರು. ಈ ತಿಂಗಳು ನಡೆದ ಸಚಿವ ಸಂಪುಟ ಸಭೆಯಲ್ಲಿ ಅಂಗಾಂಗ ಕಸಿ ಯೋಜನೆ ವಿಸ್ತರಣೆಗೆ ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ 'ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ' ಯೋಜನೆಯಡಿ ಅಸ್ಥಿಮಜ್ಜೆ ಕಸಿಯನ್ನೂ ಸೇರಿಸಲಾಗಿದೆ.

'ಎಬಿ–ಎಆರ್‌ಕೆ ಅಡಿಅಸ್ಥಿಮಜ್ಜೆ ಕಸಿ ಜತೆಗೆ ಹೃದಯ, ಶ್ವಾಸಕೋಶ, ಅಂಗಾಂಶ ಕಸಿಗಳನ್ನೂ ಸೇರ್ಪಡೆ ಮಾಡಲಾಗಿದೆ. ನಮ್ಮ ಸರ್ಕಾರದ ಈ ನಿರ್ಧಾರವು ದುಬಾರಿ ಚಿಕಿತ್ಸಾ ವೆಚ್ಚ ಭರಿಸಲು ಸಾಧ್ಯವಾಗದವರಿಗೆ ಆಶಾಕಿರಣವಾಗಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ 'ಎಕ್ಸ್' ಮಾಡಿದ್ದಾರೆ.

'ಮಾಧುಸ್ವಾಮಿ ವರದಿ ಪರಿಗಣಿಸಿ'

ಬೆಂಗಳೂರು: 'ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ನೀಡುವ ಸಂಬಂಧ ಸರ್ಕಾರಕ್ಕೆ ಸಲಹೆ ನೀಡುವಾಗ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಮತ್ತು ಜೆ.ಸಿ.ಮಾಧುಸ್ವಾಮಿ ಸಮಿತಿಯ ವರದಿಗಳ ದತ್ತಾಂಶಗಳನ್ನು ಪರಿಗಣಿಸಬೇಕು' ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯು ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ಮನವಿ ಸಲ್ಲಿಸಿದೆ.

'ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ನೀಡುವಲ್ಲಿ ವೈಜ್ಞಾನಿಕ ದತ್ತಾಂಶಗಳನ್ನು ಅವಲಂಬಿಸಿರಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಸದಾಶಿವ ಆಯೋಗದ ವರದಿಯು ದತ್ತಾಂಶಗಳನ್ನು ಆಧರಿಸಿಯೇ ಶಿಫಾರಸು ಮಾಡಿತ್ತು. ಆ ವರದಿಯನ್ನು ಹಿಂದಿನ ಬಿಜೆಪಿ ಸರ್ಕಾರ ಮತ್ತು ಈಗಿನ ಕಾಂಗ್ರೆಸ್ ಸರ್ಕಾರ ಎರಡೂ ಅಂಗೀಕರಿಸಿವೆ. ಹೀಗಾಗಿ ಪರಿಶಿಷ್ಟ ಜಾತಿಯಲ್ಲಿನ ವಿವಿಧ ಸಮುದಾಯಗಳ ಜನಸಂಖ್ಯೆಯನ್ನು ತಿಳಿಯಲು ಈ ವರದಿಯನ್ನೇ ಬಳಸಬಹುದು' ಎಂದು ವೇದಿಕೆಯ ಅಧ್ಯಕ್ಷ ಎಸ್.ಅರುಣ್ ಕುಮಾರ್ ಕೋರಿದ್ದಾರೆ.

ಪೊಲೀಸ್ ಕಮಿಷನರ್ ಸೂಚನೆಯಂತೆ ಕ್ರಮ

ಮಂಗಳವಾರ ದರ್ಶನ್ ಮನೆಗೆ ತೆರಳಿದ ಪೊಲೀಸರು, ಪರವಾನಗಿ ರದ್ದು ಆದೇಶ ಪತ್ರ ತೋರಿಸಿ ಪಿಸ್ತೂಲ್, ಐದು ಜೀವಂತ ಗುಂಡುಗಳನ್ನು ವಶಕ್ಕೆ ಪಡೆದರು ಎಂದು ಮೂಲಗಳು ತಿಳಿಸಿವೆ.

ಪಿಸ್ತೂಲ್ ಪರವಾನಗಿ ರದ್ದು

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಹೊಂದಿದ್ದ ಪಿಸ್ತೂಲ್ ಪರವಾನಗಿಯನ್ನು ಪೊಲೀಸರು ತಾತ್ಕಾಲಿಕವಾಗಿ ರದ್ದುಗೊಳಿಸಿದ್ದಾರೆ.

ಪಿಸ್ತೂಲ್ ಪರವಾನಗಿ ರದ್ದುಗೊಳಿಸುವ ಸಂಬಂಧ ದರ್ಶನ್‌ಗೆ ಜನವರಿ ಮೊದಲ ವಾರದಲ್ಲಿ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು.

'ನಾನು ಸೆಲೆಬ್ರಿಟಿ. ಹೋದ ಕಡೆ ಹೆಚ್ಚಿನ ಜನ ಸೇರುತ್ತಾರೆ. ಆತ್ಮರಕ್ಷಣೆ ಮುಖ್ಯ. ಖಾಸಗಿ ಭದ್ರತಾ ಸಿಬ್ಬಂದಿ ಇದ್ದರೂ ಪಿಸ್ತೂಲ್ ಪರವಾನಗಿ ಬೇಕು' ಎಂದು ಪೊಲೀಸರ ನೋಟಿಸ್‌ಗೆ ದರ್ಶನ್ ಪ್ರತಿಕ್ರಿಯಿಸಿದ್ದರು.

'ನನ್ನ ವಿರುದ್ಧ ದಾಖಲಾದ ಪ್ರಕರಣದ ಸಾಕ್ಷಿಗಳಿಗೆ ಯಾವುದೇ ಬೆದರಿಕೆ ಹಾಕಿಲ್ಲ. ಅಂತಹ ಘಟನೆಗಳು ನಡೆದರೆ ಕ್ರಮ ಜರುಗಿಸಬಹುದು' ಎಂದೂ ಉಲ್ಲೇಖಿಸಿದ್ದರು.

'ಕೊಲೆ ಪ್ರಕರಣ ಇನ್ನೂ ವಿಚಾರಣೆ ಹಂತದಲ್ಲಿದೆ. ಸುಪ್ರೀಂ ಕೋರ್ಟ್‌ಗೂ ಮೇಲ್ಮನವಿ ಸಲ್ಲಿಸಲಾಗಿದೆ. ಸಾಕ್ಷಿಗಳಿಗೆ ಬೆದರಿಕೆ ಹಾಕುವ ಸಾಧ್ಯತೆ, ಇತರೆ ಅಂಶಗಳನ್ನು ಆಧರಿಸಿ ನಗರ ಪೊಲೀಸ್ ಕಮಿಷನರ್ ಸೂಚನೆಯಂತೆ ಪರವಾನಗಿ ರದ್ದುಗೊಳಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಸಜೀವ ಗುಂಡು ವಶಕ್ಕೆ: ಪಿಸ್ತೂಲ್ ಅನ್ನು ವಶಕ್ಕೆ ಪಡೆಯುವಂತೆ ಆರ್.ಆರ್. ನಗರ ಪೊಲೀಸರಿಗೆ ನಗರ ಆಡಳಿತ ವಿಭಾಗದ ಡಿಸಿಪಿ ಪದ್ಮಿನಿ ಸಾಹು ಅವರು ಸೂಚಿಸಿ ಪತ್ರ ಬರೆದಿದ್ದರು.

ಸಾಲಗಾರರ ಭೀತಿ: ತೋಟದಲ್ಲಿ ನೆಲೆ

ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳ • ಊರು ಬಿಟ್ಟ ಹತ್ತಾರು ಕುಟುಂಬ

• ರಘು ಹೆಬ್ಬಾಲೆ

ಕುಶಾಲನಗರ: ಖಾಸಗಿ ಹಣಕಾಸು ಸಂಸ್ಥೆಗಳ ಸಾಲ ವಸೂಲಾತಿ ಕಾಟವನ್ನು ತಪ್ಪಿಸಿಕೊಳ್ಳಲು ಮಹಿಳೆಯರು ಸಂಜೆ ಕೆಲಸ ಮುಗಿದರೂ, ಕಾಫಿ ತೋಟದಲ್ಲಿಯೇ ಸಮಯ ಕಳೆದು ರಾತ್ರಿ 10 ಗಂಟೆಗೆ ಮನೆಗೆ ಬರುತ್ತಿದ್ದಾರೆ.

ಇದು, ಇಲ್ಲಿಗೆ ಸಮೀಪದ ಮೀನುಕೊಲ್ಲಿ ಹಾಡಿ, ದಾಸವಾಳ ಪೈಸಾರಿ, ಬೆಳ್ಳಿ ಕಾಲೋನಿ, ಮಾವಿನಹಳ್ಳ, ಕಟ್ಟೆಹಾಡಿಯ ಮಹಿಳೆಯರ ನಿತ್ಯದ ವ್ಯಥೆ. ಇವರೆಲ್ಲ ತಾಲ್ಲೂಕಿನ ನಂಜರಾಯಪಟ್ಟಣ ಗ್ರಾಮ ಪಂಚಾಯತಿಗೆ ಸೇರಿದವರು. ಇದೇ ಹಾಡಿಗಳ ಕೆಲವರು ಊರು ತೊರೆದಿದ್ದಾರೆ. ಇಲ್ಲಿರುವ ಗಿರಿಜನರು ಹಾಗೂ ಕೂಲಿ ಕಾರ್ಮಿಕರಿಗೆ ಕೂಲಿ ಹಾಗೂ ಪಡಿತರ ಅಕ್ಕಿಯೇ ಜೀವನಾಧಾರ.

'ಬೆಳಿಗ್ಗೆ–ಸಂಜೆ ಬರುವ ಪ್ರತಿನಿಧಿಗಳು ಹಣ ಕಟ್ಟುವವರೆಗೂ ಬಿಡುವುದಿಲ್ಲ. ಪ್ರತಿ ವಾರ ಕೈಲಾದಷ್ಟು ಕಂತು ಕಟ್ಟುತ್ತೇವೆಂದರೂ ಬೈಯ್ಯುತ್ತಾರೆ. ಮನೆಯಲ್ಲಿ ಮಕ್ಕಳಿಗೆ ಸರಿಯಾಗಿ ಅಡುಗೆ ಮಾಡಿಕೊಡಲೂ ಸಾಧ್ಯವಾಗುತ್ತಿಲ್ಲ' ಎಂದು ನಿವಾಸಿಗಳಾದ ಮಣಿ ಹಾಗೂ ಸಾವಿತ್ರಿ 'ಪ್ರಜಾವಾಣಿ'ಯೊಂದಿಗೆ ಅಳಲು ತೋಡಿಕೊಂಡರು.

ಖಾಸಗಿ ಹಣಕಾಸು ಸಂಸ್ಥೆಗಳ ಕಿರುಕುಳದಿಂದ ಕಾರ್ಮಿಕರನ್ನು ರಕ್ಷಿಸುವಂತೆ ತಹಶೀಲ್ದಾರ್ ಕಿರಣ್ ಗೌರಯ್ಯ ಅವರಿಗೆ ನಂಜರಾಯಪಟ್ಟಣ ಅಧ್ಯಕ್ಷ ವಿಶ್ವ ಹಾಗೂ ಸದಸ್ಯರು ಮಂಗಳವಾರ ಮನವಿ ಪತ್ರ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ಕಷ್ಟಗಳಿಗೆ ನೆರವಾಗುತ್ತೇವೆ. ಮಹಿಳೆಯರ ಗುಂಪು ರಚಿಸಿಕೊಂಡರೆ ಎಲ್ಲರಿಗೂ ಸಾಲ ನೀಡುತ್ತೇವೆ. ಆಧಾರ್ ಕಾರ್ಡ್, ಗುರುತಿನ ಚೀಟಿ ಹಾಗೂ ಫೋಟೊ ಕೊಟ್ಟರೆ ಸಾಕು. ಪ್ರತಿ ವಾರ ಕಂತು ಕಟ್ಟಿ ಎನ್ನುತ್ತಾರೆ. ನಂತರ ಕಿರುಕುಳ ಕೊಡುತ್ತಾರೆ' ಎಂದು ಮಹಿಳೆಯೊಬ್ಬರು ದೂರಿದರು.

'ಗುಂಪಿನಲ್ಲಿ ಒಬ್ಬ ಮಹಿಳೆ ಕಂತು ಕಟ್ಟದಿದ್ದರೆ, ಅದನ್ನು ಉಳಿದವರು ಕೊಡಬೇಕೆಂದು ಒತ್ತಡ ಹೇರುತ್ತಾರೆ. ಆಗ ಕಂತು ಹೆಚ್ಚಾಗುತ್ತದೆ. ಸ್ವಲ್ಪ ಹಣ ಕಡಿಮೆಯಾದರೂ ತೆಗೆದುಕೊಳ್ಳುವುದಿಲ್ಲ. ಒಬ್ಬರು ಕಟ್ಟದಿದ್ದರೆ ಉಳಿದವರೆಲ್ಲರೂ ಊರು ಬಿಡಬೇಕಾಗಿದೆ' ಎಂದು ಅಲವತ್ತುಕೊಂಡರು.

> **ರಾತ್ರಿ ಬರುವ ಸಂಸ್ಥೆಯ ಪ್ರತಿನಿಧಿಗಳಿಂದ ತಪ್ಪಿಸಿಕೊಳ್ಳಲು ಮಹಿಳೆಯರು ತೋಟದಲ್ಲಿಯೆ ಇದ್ದು, ಅವರು ಹೋದ ಬಳಿಕ ಮನೆಗೆ ಬರುತ್ತಾರೆ. ಅವರ ಗೋಳು ಕೇಳುವವರು ಯಾರೂ ಇಲ್ಲ**
>
> **ಜಾಜಿ,** ಗ್ರಾಮ ಪಂಚಾಯಿತಿ ಸದಸ್ಯೆ, ನಂಜರಾಯಪಟ್ಟಣ

'ಸಾಲಗಾರರ ಕಾಟದಿಂದ ತಪ್ಪಿಸಿಕೊಳ್ಳಲು ಮನೆ, ಊರು ಬಿಟ್ಟು ದೂರದ ಕಾಫಿ ತೋಟಗಳಿಗೆ ವಲಸೆ ಹೋಗಿ ನೆಲೆಸುತ್ತಿದ್ದಾರೆ. ಅವರಿಗೆ ರಕ್ಷಣೆ ನೀಡಬೇಕು. ಹಣಕಾಸು ಸಂಸ್ಥೆಗಳಿಗೆ ಕಡಿವಾಣ ಹಾಕಬೇಕು' ಎಂದು ಗಿರಿಜನ ಮುಖಂಡ ಆರ್.ಕೆ.ಚಂದ್ರು, ಟಿ.ಜೆ.ಕಾಳಿಂಗ ಆಗ್ರಹಿಸಿದರು. ಪಂಚಾಯ್ತಿ ಅಧ್ಯಕ್ಷ ಸಿ.ಎಲ್.ವಿಶ್ವ ಮಂಗಳವಾರ ಹಾಡಿಗಳಿಗೆ ಭೇಟಿ ನೀಡಿದ್ದರು. ನಂತರ ತಹಶೀಲ್ದಾರ್ ಕಿರಣ್ ಗೌರಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ: ಆರೋಪಿ ಅತೀಕ್ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಬಿಜೆಪಿ ಯುವಮೋರ್ಚಾ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತೊಬ್ಬ ಆರೋಪಿಯನ್ನು ಬಂಧಿಸಿದೆ.

ಅತೀಕ್ ಅಹಮದ್ ಬಂಧಿತ ಆರೋಪಿ. ಈ ಪ್ರಕರಣದಲ್ಲಿ ಬಂಧನಕ್ಕೊಳಗಾದ 21ನೇ ಆರೋಪಿ ಈತ ಎಂದು ಎನ್‌ಐಎ ತಿಳಿಸಿದೆ.

'ಅತೀಕ್ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಸದಸ್ಯ. ಜನರಲ್ಲಿ ಕೋಮುದ್ವೇಷ ಸೃಷ್ಟಿಸುವ ಪಿಎಫ್‌ಐ ಕಾರ್ಯಸೂಚಿಯಂತೆ ಈ ಹತ್ಯೆಗೆ ಸಂಚು ರೂಪಿಸಿದ್ದ ಮುಖ್ಯ ಆರೋಪಿ ಮುಸ್ತಾಫ ಪೈಚಾರ್‌ಗೆ ಅತೀಕ್ ಆಶ್ರಯ ನೀಡಿದ್ದ. ಕೃತ್ಯ ನಡೆಸಿದ ಬಳಿ ಮುಸ್ತಾಫ ಚೆನ್ನೈ ತಲುಪುವುದಕ್ಕೆ ನೆರವಾಗಿದ್ದ. 2024ರಲ್ಲಿ ಮುಸ್ತಾಫನ ಬಂಧನ ಆಗುವವರೆಗೂ, ಆತ ತಲೆ ಮರೆಸಿಕೊಳ್ಳುವುದಕ್ಕೆ ಸಹಾಯ ಮಾಡಿದ್ದ' ಎಂದು ಎನ್‌ಐಎ ತಿಳಿಸಿದೆ.

ಬೆಳ್ಳಾರೆಯಲ್ಲಿ 2022ರ ಜುಲೈನಲ್ಲಿ ಪ್ರವೀಣ್ ನೆಟ್ಟಾರು ಹತ್ಯ ನಡೆದಿತ್ತು. ಈ ಪ್ರಕರಣದ ತನಿಖೆಯನ್ನು 2022ರ ಆಗಸ್ಟ್‌ನಲ್ಲಿ ಎನ್‌ಐಎಗೆ ಹಸ್ತಾಂತರಿಸಲಾಗಿತ್ತು. ಈ ಪ್ರಕರಣದಲ್ಲಿ ಇನ್ನೂ ಆರು ಆರೋಪಿಗಳ ಬಂಧನವಾಗಬೇಕಿದೆ. ಅವರ ಬಗ್ಗೆ ಸುಳಿವು ನೀಡಿದವರಿಗೆ ಎನ್‌ಐಎ ಬಹುಮಾನ ಘೋಷಿಸಿದೆ. ಈ ವಿವರಗಳನ್ನು ಎನ್‌ಐಎ ತನ್ನ 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದೆ.

'ಅನರ್ಹತೆ'ಯಿಂದ ರಕ್ಷಣೆ, ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರು ಇತರ ಲಾಭದಾಯಕ ಹುದ್ದೆ ಹೊಂದಿದ ಕಾರಣಕ್ಕೆ ಶಾಸಕ ಸ್ಥಾನದಿಂದ ಅನರ್ಹರಾಗುವುದನ್ನು ತಡೆಯುವ ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ. ಈ ಸಂಬಂಧ ಕಾನೂನು ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಸಲಹೆಗಾರರು, ಯಾವುದೇ ಆಯೋಗದ ಅಧ್ಯಕ್ಷರು ಹಾಗೂ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷರಾಗಿ ನೇಮಕಗೊಂಡರೆ ಅವರನ್ನು ಅನರ್ಹಗೊಳಿಸಲು ಕರ್ನಾಟಕ ವಿಧಾನಮಂಡಲ ಕಾಯ್ದೆಯಲ್ಲಿ ಅವಕಾಶವಿತ್ತು.

ವಿಧಾನಸಭಾ ಸದಸ್ಯರಾಗಿರುವ ಬಸವರಾಜ ರಾಯರಡ್ಡಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿ, ಬಿ.ಆರ್. ಪಾಟೀಲ ಮುಖ್ಯ ಮಂತ್ರಿಯವರ ಸಲಹೆಗಾರರಾಗಿ ಮತ್ತು ಆರ್.ವಿ. ದೇಶಪಾಂಡೆ ಅವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಈ ಮೂವರನ್ನೂ ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಹೊರಗಿಟ್ಟು, ರಕ್ಷಿಸುವುದಕ್ಕೆ ತಿದ್ದುಪಡಿ ಮಸೂದೆ ರೂಪಿಸಲಾಗಿತ್ತು.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ವಿಧಾನಸಭೆಯಲ್ಲಿ 'ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ' ಮಂಡಿಸಿದಾಗ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

2024ರ ಫೆಬ್ರುವರಿಯಲ್ಲಿ ವಿಧಾನ ಮಂಡಲದ ಅನುಮೋದನೆ ಪಡೆದ ಮಸೂದೆಯನ್ನು ರಾಜ್ಯಪಾಲರಿಗೆ ಕಳುಹಿಸಲಾಗಿತ್ತಾದರೂ, ರಾಜ್ಯಪಾಲರು ಸಹಿ ಹಾಕಿರಲಿಲ್ಲ. ಈಗ ರಾಜ್ಯಪಾಲರ ಅಂಕಿತ ದೊರೆತಿದ್ದು ಬಿ.ಆರ್.ಪಾಟೀಲ, ಬಸವರಾಜ ರಾಯರಡ್ಡಿ ಮತ್ತು ಆರ್.ವಿ.ದೇಶಪಾಂಡೆ ಅವರು ಅನರ್ಹತೆ ತೂಗುಗತ್ತಿಯಿಂದ ಪಾರಾಗಿದ್ದಾರೆ.

ಮುಖ್ಯಾಂಶಗಳು

- ವಿಧಾನ ಮಂಡಲ ಅನರ್ಹತೆ ನಿವಾರಣಾ ಮಸೂದೆಗೆ ರಾಜ್ಯಪಾಲ ಅಂಕಿತ
- ಸಿ.ಎಂ. ರಾಜಕೀಯ ಕಾರ್ಯದರ್ಶಿ (1 ಮತ್ತು 2), ಸಲಹೆಗಾರರ ಹುದ್ದೆಗೆ ಅನ್ವಯ
- ನೀತಿ ಮತ್ತು ಯೋಜನೆ ಆಯೋಗದ ಉಪಾಧ್ಯಕ್ಷ ಹುದ್ದೆಗೂ ವಿನಾಯಿತಿ

ಕದ್ರಿ ಜಾತ್ರೆ ಸಂಭ್ರಮ...

ಮಂಗಳೂರಿನ ಕದ್ರಿ ಮಂಜುನಾಥೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಜರುಗಿದ ರಥೋತ್ಸವದಲ್ಲಿ ಅಪಾರ ಭಕ್ತರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್.

ಬಾಣಂತಿ ಸಾವು

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಇಲ್ಲಿನ ಮಹೆಬೂಬಿಯಾ ಕಾಲೊನಿಯಲ್ಲಿ ಹೆರಿಗೆಯಾದ ಎರಡು ತಿಂಗಳ ನಂತರ ಬಾಣಂತಿ ಅಂಬಿಕಾ ಸಂತೋಷ (30) ಅನಾರೋಗ್ಯದಿಂದ ಮೃತಪಟ್ಟಿದ್ದಾರೆ.

ಅಂಬಿಕಾ

ಇಲ್ಲಿನ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಇವರಿಗೆ ಸಹಜ ಹೆರಿಗೆಯಾಗಿತ್ತು. ಎರಡು ತಿಂಗಳುಗಳಿಂದ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ, ಭಾನುವಾರ ಆರೋಗ್ಯದಲ್ಲಿ ಏರುಪೇರಾದ ಕಾರಣ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿತ್ತು.

ಪುನಃ ಆರೋಗ್ಯ ಸರಿಯಿಲ್ಲದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ, ರಕ್ತದೊತ್ತಡ ಕಡಿಮೆಯಾಗಿದ್ದರಿಂದ ಸರ್ಕಾರಿ ಆಸ್ಪತ್ರೆಗೆ ಮತ್ತೆ ಕರೆದುಕೊಂಡು ಹೋಗುವಾಗ ಮಾರ್ಗ ಮಧ್ಯೆ ಬಾಣಂತಿ ಮೃತಪಟ್ಟಿದ್ದಾರೆ.

ಗೋಪ್ಯತೆ ಹಕ್ಕು ಉಲ್ಲಂಘನೆ ಆರೋಪ: ಪಿಐಎಲ್ ವಜಾ

ಬೆಂಗಳೂರು: 'ನಮ್ಮ ಡಿಜಿಟಲ್ ಗೋಪ್ಯತೆಯನ್ನು ಒಪ್ಪಿಸುವಂತೆ ಒತ್ತಡ ಹೇರುತ್ತಿದ್ದು, ಇದನ್ನು ತಡೆ ಹಿಡಿಯಬೇಕು' ಎಂದು, 'ನೋ ಬ್ರೋಕರ್ ಟೆಕ್ನಾಲಜೀಸ್ ಸಲ್ಯೂಷನ್ಸ್ ಪ್ರೈವೆಟ್ ಲಿಮಿಟೆಡ್' ಸಿಬ್ಬಂದಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಎಂ.ಡಿ.ಇಮ್ರಾನ್ ರೇಜಾ ಸಲ್ಲಿಸಿದ್ದ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, 'ಅರ್ಜಿ ಪುರಸ್ಕರಿಸಲಾಗದು' ಎಂದು ಹೇಳಿತು.

'ಕೇವಲ ಆರೋಪಗಳ ಆಧಾರದಲ್ಲಿ ಅರ್ಜಿ ಸಲ್ಲಿಸಲಾಗಿದೆ. ಇದಕ್ಕೆ ನಿರ್ದಿಷ್ಟ ಉದಾಹರಣೆಗಳಿಲ್ಲ. ಸಂವಿಧಾನದ ಕಲಂ 226ರ ಅಡಿ ಈ ನ್ಯಾಯಾಲಯ ಅರ್ಜಿಗೆ ಸಂಬಂಧಿಸಿ ಯಾವುದೇ ಆದೇಶ ನೀಡಲಾಗದು. ಅಷ್ಟಕ್ಕೂ ಅರ್ಜಿದಾರರು ನಿರ್ದಿಷ್ಟ ಪರಿಹಾರ ಕೋರಿಲ್ಲ' ಎಂದು ಪೀಠ ಹೇಳಿತು.

'ಒಂದು ವೇಳೆ ವ್ಯಕ್ತಿಯ ಗೋಪ್ಯತೆಯ ಹಕ್ಕು ಉಲ್ಲಂಘನೆಯಾಗಿದೆ ಎಂದಾದರೆ ಅದಕ್ಕೆ ಕಾನೂನು ಪ್ರಕಾರ ಕ್ರಮ ಜರುಗಿಸುವಂತೆ ಕೋರಲು ಸ್ವತಂತ್ರರು' ಎಂದು ಆದೇಶಿಸಿತು.

ಸಹೋದರರಿಗೆ ಕಠಿಣ, ತಂದೆಗೆ ಸಾದಾ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಾಲಕಿಯ ಮೇಲೆ ಹಲ್ಲೆ ಮಾಡಿ, ಲೈಂಗಿಕ ದೌರ್ಜನ್ಯ ಎಸಗಿದ್ದ ಯುವಕನೊಬ್ಬನಿಗೆ ಜೀವಾವಧಿ ಶಿಕ್ಷೆ ಹಾಗೂ ಆತನ ಸಹೋದರನಿಗೆ 10 ವರ್ಷ ಶಿಕ್ಷೆಯನ್ನು ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯ ವಿಧಿಸಿದೆ. ಕೃತ್ಯಕ್ಕೆ ಸಹಕಾರ ನೀಡಿದ ತಂದೆಗೆ 6 ತಿಂಗಳ ಸಾದಾ ಶಿಕ್ಷೆ ನೀಡಿದೆ.

ಕಲಬುರಗಿ ತಾಲ್ಲೂಕಿನ ಫರಹತಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ತಾಂಡಾವೊಂದರ ನಿವಾಸಿ ರವಿ ಭಾವುರಾಯ (21), ಸಹೋದರ ಶಿವರಾಜ ಭಾವುರಾಯ (23) ಹಾಗೂ ಇವರ ತಂದೆ ಭಾವುರಾಯ ರಾಠೋಡ (50) ಶಿಕ್ಷೆಗೆ ಒಳಗಾದ ಅಪರಾಧಿಗಳು.

15 ವರ್ಷದ ಬಾಲಕಿಯನ್ನು ಮದುವೆ ಆಗುವಂತೆ ರವಿ ಪೀಡಿಸುತ್ತಿದ್ದ. ಹೀಗಾಗಿ ಬಾಲಕಿಯ ಕುಟುಂಬಸ್ಥರು ಬುದ್ಧಿ ಹೇಳಲು ರವಿಯ ಮನೆಗೆ ಹೋಗಿದ್ದರು. ಈ ವೇಳೆ ಗಲಾಟೆ ಮಾಡಿದ ಮೂವರು ಅಪರಾಧಿಗಳು, ಅವಾಚ್ಯ ಪದಗಳಿಂದ ನಿಂದಿಸಿದರು. ರವಿ ಮತ್ತು ಶಿವರಾಜ ಅವರು ಕೊಡಲಿಯಿಂದ ಬಾಲಕಿಯ ತಂದೆ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ್ದರು. ಈ ಸಂಬಂಧ ಫರಹತಾಬಾದ್ ಠಾಣೆಯಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ (ಪೋಕ್ಸೊ), ಕೊಲೆ ಬೆದರಿಕೆ ಆರೋಪದಡಿ ಪ್ರಕರಣ ದಾಖಲಾಗಿತ್ತು.

ಲೈಂಗಿಕ ದೌರ್ಜನ್ಯ ಪ್ರಕರಣ

ಪೊಲೀಸ್ ಇನ್‌ಸ್ಪೆಕ್ಟರ್ ರಾಘವೇಂದ್ರ ಅವರು ತನಿಖೆ ನಡೆಸಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಾದ–ಪ್ರತಿವಾದ ಆಲಿಸಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ (ವಿಶೇಷ ಪೋಕ್ಸೊ) ಎಫ್‌ಟಿಎಸ್‌ಸಿ-1 ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು, ರವಿಗೆ ಕಠಿಣ ಜೀವಾವಧಿ ಶಿಕ್ಷೆ, ₹63 ಸಾವಿರ ದಂಡ, ಶಿವರಾಜನಿಗೆ 10 ವರ್ಷ ಜೈಲು ಶಿಕ್ಷೆ, ₹60 ಸಾವಿರ ದಂಡ ಹಾಗೂ ಭಾವುರಾಯಗೆ 6 ತಿಂಗಳ ಸಾದಾ ಜೈಲು ಶಿಕ್ಷೆ ಮತ್ತು ₹500 ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ.ತುಪ್ಪದ ವಾದ ಮಂಡಿಸಿದ್ದರು.

ಗ್ರಂಥಪಾಲಕರ ವೇತನ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಅನುದಾನಿತ ಕಾಲೇಜುಗಳ ಗ್ರಂಥಪಾಲಕರಿಗೆ ನೀಡಲಾಗುವ ವೇತನಕ್ಕೆ ಸರಿಸಮನಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಗ್ರಂಥಪಾಲಕರಿಗೂ ವೇತನ ಪಾವತಿಸಬೇಕು ಎಂಬ ವಿಚಾರ ಕುರಿತಂತೆ ನ್ಯಾಯಾಲಯದ ಆದೇಶ ಪಾಲನೆ ಮಾಡಲಾಗಿಲ್ಲ' ಎಂದು ಆಕ್ಷೇಪಿಸಲಾದ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜು ಗ್ರಂಥ ಪಾಲಕರ ಸಂಘ'ದ ಅಧ್ಯಕ್ಷರೂ ಆದ ಕೋಲಾರ ಜಿಲ್ಲೆ ಶ್ರೀನಿವಾಸಪುರದ ಸರ್ಕಾರಿ ಪಿಯು ಕಾಲೇಜಿನ ಗ್ರಂಥಪಾಲಕ ಸೀತಾರೆಡ್ಡಿ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಕೆಲ ಕಾಲ ವಿಚಾರಣೆ ಆಲಿಸಿದ ನ್ಯಾಯಪೀಠ, ಶಿಕ್ಷಣ ಇಲಾಖೆ ಕಾರ್ಯದರ್ಶಿ ಹಾಗೂ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆಬ್ರುವರಿ 28ಕ್ಕೆ ಮುಂದೂಡಿತು.

₹200 ಕೋಟಿ ವೆಚ್ಚದಲ್ಲಿ ವಸತಿ ಸಂಕೀರ್ಣ, ಕಲ್ಯಾಣ ಮಂಟಪ ನಿರ್ಮಾಣ

ತಿರುಮಲ: ಐಹೊಳೆ ಬ್ಲಾಕ್ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿರುಮಲದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕರ್ನಾಟಕ ರಾಜ್ಯ ಛತ್ರದ 'ಐಹೊಳೆ ಬ್ಲಾಕ್' ಅನ್ನು ರಾಜ್ಯ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಲೋಕಾರ್ಪಣೆ ಮಾಡಿದರು.

ವಸತಿ ಸಂಕೀರ್ಣವನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ರಾಮಲಿಂಗಾರೆಡ್ಡಿ, 'ವೆಂಕಟೇಶ್ವರಸ್ವಾಮಿಯ ದರ್ಶನಕ್ಕಾಗಿ ತಿರುಮಲಕ್ಕೆ ಭೇಟಿ ನೀಡುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ರಾಜ್ಯ ಸರ್ಕಾರವು ₹200 ಕೋಟಿ ವೆಚ್ಚದಲ್ಲಿ ಮೂರು ವಸತಿ ಸಂಕೀರ್ಣ, ಸುಸಜ್ಜಿತ ಕಲ್ಯಾಣ ಮಂಟಪ ಮತ್ತು ಹಾಲಿ ಪ್ರವಾಸಿಸೌಧದ ನವೀಕರಣ ಕಾಮಗಾರಿ ಕೈಗೆತ್ತಿಕೊಂಡಿದೆ' ಎಂದು ಮಾಹಿತಿ ನೀಡಿದರು.

ತಿರುಮಲದಲ್ಲಿನ ಕರ್ನಾಟಕ ಛತ್ರದ 'ಐಹೊಳೆ ಬ್ಲಾಕ್'

'ಕರ್ನಾಟಕ ಛತ್ರದ ಹಂಪಿ ಬ್ಲಾಕ್ ಈಗಾಗಲೇ ಲೋಕಾರ್ಪಣೆಯಾಗಿದ್ದು, 110 ಹವಾನಿಯಂತ್ರಿತ ಕೊಠಡಿಗಳನ್ನು ಹೊಂದಿದೆ. ಈಗ 132 ಹವಾನಿಯಂತ್ರಿತ ಕೊಠಡಿ ಹೊಂದಿರುವ ಐಹೊಳೆ ಬ್ಲಾಕ್ ಸಹ ರಾಜ್ಯದ ಜನರ ಸೇವೆಗೆ ಸನ್ನದ್ಧವಾಗಿದೆ' ಎಂದರು.

'36 ಸೂಟ್‌ಗಳನ್ನು ಹೊಂದಿರುವ ಶ್ರೀಕೃಷ್ಣದೇವರಾಯ ಬ್ಲಾಕ್ ಮತ್ತು 500 ಆಸನಗಳ ಸಾಮರ್ಥ್ಯ ಸುಸಜ್ಜಿತ ಕಲ್ಯಾಣ ಮಂಟಪ– ಶ್ರೀ ಕೃಷ್ಣರಾಜ ಒಡೆಯರ್ ಬ್ಲಾಕ್‌ಗಳ ನಿರ್ಮಾಣ ಕಾಮಗಾರಿ ಮುಗಿದಿದ್ದು, ಅಂತಿಮ ಸ್ಪರ್ಶದ ಕೆಲಸಗಳು ನಡೆಯುತ್ತಿವೆ. ಏಪ್ರಿಲ್ ಅಥವಾ ಮೇ ವೇಳೆಗೆ ಸಿದ್ಧವಾಗಲಿವೆ' ಎಂದು ಅವರು ತಿಳಿಸಿದರು.

ವಿಶೇಷ ಏನು ?

- ಐಹೊಳೆ ಬ್ಲಾಕ್‌ನಲ್ಲಿನ ಪ್ರತಿ ಕೊಠಡಿಗೆ 24 ಗಂಟೆಗಳ ಅವಧಿಗೆ ₹1,350 ಮತ್ತು ಜಿಎಸ್‌ಟಿ ನಿರ್ವಹಣಾ ಶುಲ್ಕ ನಿಗದಿ
- Karnatakatemples accommodation.com ಜಾಲತಾಣದ ಮೂಲಕ ವಸತಿ ಕಾಯ್ದಿರಿಸಬಹುದಾಗಿದೆ
- ಆನ್‌ಲೈನ್‌ನಲ್ಲಿ ಶೇ 60ರಷ್ಟು ಮತ್ತು ಆಫ್ ಲೈನ್‌ನಲ್ಲಿ ಶೇ 40ರಷ್ಟು ಕೊಠಡಿಗಳನ್ನು ಕಾಯ್ದಿರಿಸಲು ಮಿತಿ ಇದೆ

ಬೀಗ ಹಾಕಿಕೊಂಡು ಹೋಗಿದ್ದ ಅಧಿಕಾರಿಗಳಿಗೆ ತರಾಟೆ • ಬೀಗ ಒಡೆದು ಕಚೇರಿ ಪರಿಶೀಲನೆ

ಮಾಪನ ಸೌಧ: ಲೋಕಾಯುಕ್ತ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಲಿ ಅಸ್ಕರ್ ರಸ್ತೆಯ ಮಾಪನ ಸೌಧದಲ್ಲಿರುವ ರಾಜ್ಯ ಕಾನೂನು ಮಾಪನ ಶಾಸ್ತ್ರ ಇಲಾಖೆಯ 13 ಕಚೇರಿಗಳಿಗೆ ಸೋಮವಾರ ಹಾಕಿದ್ದ ಮುದ್ರೆಯನ್ನು ಒಡೆದು, ಲೋಕಾಯುಕ್ತ ಅಧಿಕಾರಿಗಳು ಮತ್ತು ಪೊಲೀಸರು ಮಂಗಳವಾರ ಶೋಧಕಾರ್ಯ ನಡೆಸಿದ್ದಾರೆ. ಈ ವೇಳೆ ಪೆಟ್ರೋಲ್ ಬಂಕ್ ಒಂದರಿಂದ ಬಂದಿದ್ದ ಲಕೋಟೆಯಲ್ಲಿ ₹21,000 ನಗದು ಪತ್ತೆಯಾಗಿದೆ.

'ಮಾಪನ ಸೌಧದಲ್ಲಿರುವ ಸಹಾಯಕ ನಿಯಂತ್ರಕಿ-1ನೇ ವೃತ್ತ ಕೆ.ಸೀಮಾ ಮಗಿ ಅವರ ಡ್ರಾಯರ್‌ನಲ್ಲಿ ಲಕೋಟೆಯೊಂದು ಪತ್ತೆಯಾಯಿತು. ಅದರ ಮೇಲೆ 'ವೈಆರ್‌ಎಸ್ ಫ್ಯೂಯಲ್ ಪಾರ್ಕ್, (ಹೆಚ್.ಪಿ. ಪೆಟ್ರೋಲ್ ಪಂಪ್) ಹೆಣ್ಣೂರು-ಬಾಗಲೂರು ರಸ್ತೆ, ಹೆಣ್ಣೂರು' ಎಂದು ಬರೆದಿತ್ತು. ಲಕೋಟೆಯಲ್ಲಿ ₹ 21 ಸಾವಿರ ನಗದು ಇದ್ದು, ಅದನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

'ಲಕೋಟೆ ಮತ್ತು ಅದರಲ್ಲಿದ್ದ ನಗದಿನ ಬಗ್ಗೆ ಸೀಮಾ ಅವರನ್ನು ಕೇಳಿದಾಗ, ಸಮಂಜಸವಾದ ವಿವರಣೆ ನೀಡಿಲ್ಲ. ಹೀಗಾಗಿ ಈ ಸಂಬಂಧ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದು ಮಾಹಿತಿ ನೀಡಿದೆ.

ಕಾನೂನು ಮತ್ತು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿಗಳನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್‌.ಪಾಟೀಲ ತರಾಟೆಗೆ ತೆಗೆದುಕೊಂಡರು

ಬೀಗ ಹಾಕಿಕೊಂಡು ಓಡಿಹೋಗಿದ್ದ ಅಧಿಕಾರಿಗಳು: ಕಾನೂನು ಮತ್ತು ಮಾಪನ ಶಾಸ್ತ್ರದ ಕಚೇರಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಬಗ್ಗೆ ಬಂದಿದ್ದ ದೂರಿನ ಅನ್ವಯ ಶೋಧನೆಗೆ ಲೋಕಾಯುಕ್ತ ಪೊಲೀಸರು ವಾರಂಟ್ ನೀಡಿದ್ದರು. ಅದರಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸೋಮವಾರ ಮಧ್ಯಾಹ್ನ ಕಚೇರಿಗೆ ಭೇಟಿ ನೀಡಿದಾಗ, ಅಧಿಕಾರಿಗಳು ಕಚೇರಿಗೆ ಬೀಗ ಹಾಕಿಕೊಡು ಹೋಗಿದ್ದರು.

ಫೋನ್ ಕರೆ ಮಾಡಿದರೂ ಸ್ವೀಕರಿಸದೆ, ನಂತರ ಸ್ವಿಚ್‌ಆಫ್ ಮಾಡಿಕೊಂಡಿದ್ದರು. ಮಾಪನ ಸೌಧದಲ್ಲಿದ್ದ ಜಂಟಿ ನಿಯಂತ್ರಕ, 6 ಸಹಾಯಕ ನಿಯಂತ್ರಕರು ಮತ್ತು 6 ನಿರೀಕ್ಷಕರ ಕಚೇರಿ ಸೇರಿ 13 ಕಚೇರಿಗಳಿಗೆ ಲೋಕಾಯುಕ್ತರು ಬೀಗ ಹಾಕಿಸಿ, ಮುದ್ರೆ ಹಾಕಿಸಿದ್ದರು. ಜತೆಗೆ ಸಂಬಂಧಿತ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದರು.

'ನೋಟಿಸ್ ನೀಡಲಾಗಿದ್ದ ಅಧಿಕಾರಿಗಳು ಮಂಗಳವಾರ ಬೆಳಿಗ್ಗೆ ಲೋಕಾಯುಕ್ತರ ಎದುರು ಹಾಜರಾಗಿದ್ದರು. ಶೋಧಕ್ಕಾಗಿ ಭೇಟಿ ನೀಡುವ ವೇಳೆ ಬೀಗ ಹಾಕಿಕೊಂಡು ಪರಾರಿಯಾಗಿದ್ದರ ಬಗ್ಗೆ ಲೋಕಾಯುಕ್ತರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು ಮತ್ತು ಅಧಿಕಾರಿಗಳ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. ಆನಂತರ ಕಚೇರಿ ತೆರೆದು, ಶೋಧ ನಡೆಸಲಾಯಿತು' ಎಂದು ಮಾಹಿತಿ ನೀಡಿದೆ.

'ಅಧಿಕಾರಿಗಳು ಕಚೇರಿಗೆ ಬರದೇ ಇರುವುದು, ಹಾಜರಾತಿ, ನಗದು ವಹಿ ಮತ್ತು ಸಿಬ್ಬಂದಿ ಚಲನ-ವಲನ ವಹಿ ನಿರ್ವಹಣೆ ಮಾಡದೇ ಇರುವುದು ಶೋಧನೆ ವೇಳೆ ಪತ್ತೆಯಾಯಿತು' ಎಂದು ತಿಳಿಸಿದೆ.

ವರದಿ ನೀಡಲು ಸೂಚನೆ

- ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ಮೂರು ತಿಂಗಳಲ್ಲಿ ನಡೆಸಿದ ತಪಾಸಣೆ, ನ್ಯೂನತೆ ಪತ್ತೆ ಮತ್ತು ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವಿವರ ನೀಡಲು ಸೂಚನೆ
- ಪೆಟ್ರೋಲ್ ಪಂಪ್, ವೇ-ಬ್ರಿಡ್ಜ್‌ಗಳಲ್ಲಿನ ಮಾಪನ ಸಲಕರಣೆಗ ಬಗ್ಗೆ ತಪಾಸಣೆ ಕೈಗೊಂಡ ವಿವರ ಮತ್ತು ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿ ನೀಡಲು ಸೂಚನೆ
- ಸಿನಿಮಾ ಹಾಲ್, ಪಬ್, ಮಾಲ್, ಹೋಟೆಲ್‌ಗಳಲ್ಲಿ ಪ್ಯಾಕ್ಡ್ ಆಹಾರ ಮತ್ತು ಪಾನೀಯಗಳನ್ನು ಎಂಆರ್‌ಪಿಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಬಗ್ಗೆ ತನಿಖೆ ನಡೆಸಿದ ವಿವರಗಳು ಹಾಗೂ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿಗೆ ತಾಕೀತು

ಡಿಕೆಶಿ ಸಿ.ಎಂ ಆಗುತ್ತಾರೆ: ವರೂರು ಶ್ರೀ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಡಿ.ಕೆ. ಶಿವಕುಮಾರ್ ಅವರು ಎಷ್ಟೇ ಸಂಕಷ್ಟ, ಸವಾಲುಗಳಿದ್ದರೂ ಕರ್ನಾಟಕದ ಮುಖ್ಯಮಂತ್ರಿ ಆಗುವರು, ಇದು ಭವಿಷ್ಯವಾಣಿ' ಎಂದು ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜರು ಹೇಳಿದರು.

ವರೂರಿನ ನವಗ್ರಹ ತೀರ್ಥ ಕ್ಷೇತ್ರದಲ್ಲಿ ತೀರ್ಥಂಕರರ ಮಹಾ ಮಸ್ತಕಾಭಿಷೇಕ ಮತ್ತು ಪಂಚಕಲ್ಯಾಣಕ ಮಹೋತ್ಸವದ ಪ್ರಯುಕ್ತ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷಕ್ಕಾಗಿ



ಶಿವಕುಮಾರ್ ಅವರು ತುಂಬಾ ಶ್ರಮಿಸಿದ್ದಾರೆ. ಇದನ್ನು ಜನ ಮರೆಯಲ್ಲ. ಅವರು ಮುಖ್ಯಮಂತ್ರಿ ಆಗಬೇಕೆಂಬುದು ನಮ್ಮ ಕನಸೂ ಆಗಿದೆ' ಎಂದರು 'ಜೈನ ಸಮಾಜದ ಅಭಿವೃದ್ಧಿಗೆ ನಿಗಮ ಸ್ಥಾಪನೆಯ ಕಡತ ಜೀವಂತವಿದೆ. ಇದು ಸಮಾಜದ ಕೆಲಸವೆಂದು ಮುಖ್ಯಮಂತ್ರಿ ಶೀಘ್ರ ಕ್ರಮ ವಹಿಸಬೇಕು' ಎಂದರು.

ಕುಂತುಸಾಗರ ಮಹಾರಾಜರು ಸಹ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿಯೆಂದು ಆಶೀರ್ವದಿಸಿದರು.

ಭರವಸೆ: 'ಜೈನರ ಅಭಿವೃದ್ಧಿ ನಿಗಮ ಸ್ಥಾಪನೆ ಸಂಬಂಧ ಮುಖ್ಯಮಂತ್ರಿ ಜತೆ ಚರ್ಚಿಸಿ, ಈ ಬಜೆಟ್‌ನಲ್ಲೇ ಘೋಷಿಸಲು ಕೋರಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಸಿಎಂ ಆಗಲಿಯೆಂದು ಧರ್ಮಗುರುಗಳು ಆಶೀರ್ವಾದ ಮಾಡುವಾಗ ನಾವು ಏನು ಹೇಳಲು ಸಾಧ್ಯ? ಅದು ಅವರ ಇಚ್ಛೆ. ಪಕ್ಷ ಏನು ತೀರ್ಮಾನಿಸುವುದೋ, ನಾನು ಅದನ್ನೇ ಮಾಡುವೆ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅಂಬೇಡ್ಕರ್‌ಗೆ ಅವಮಾನ ಸಹಿಸಲ್ಲ: ಪ್ರಿಯಾಂಕಾ

ಒಂದನೇ ಪುಟದಿಂದ...

'ರಾಹುಲ್ ಗಾಂಧಿ ಅವರಿಗೆ ಆರೋಗ್ಯ ಸರಿ ಇಲ್ಲದ್ದಕ್ಕೆ ಸಮಾವೇಶಕ್ಕೆ ಬಂದಿಲ್ಲ. ಆದರೆ, ಅವರು ಯಾವತ್ತೂ ಸಂವಿಧಾನ ರಕ್ಷಣೆಗೆ ನಿಂತ ಯೋಧ. ರಾಹುಲ್ ಅವರನ್ನು ಕಂಡರೆ ಕೇಂದ್ರ ಸರ್ಕಾರ ಭಯದಿಂದ ನಡುಗುತ್ತದೆ. ಅವರ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಸಂಸತ್ ಅಧಿವೇಶನಗಳನ್ನೇ ರದ್ದು ಮಾಡುತ್ತಾರೆ. ಅವರ ಮೇಲೆ ಹತ್ತಾರು ಸುಳ್ಳು ಪ್ರಕರಣ ದಾಖಲಿಸಿದ್ದಾರೆ' ಎಂದು ಆರೋಪಿಸಿದರು.

'ಸಂವಿಧಾನ ಕೇವಲ ಪುಸ್ತಕ ಅಲ್ಲ. ನಿಮ್ಮ ರಕ್ಷಾ ಕವಚ. ಈ ವೇದಿಕೆಯಿಂದಲೇ ನೀವು ಸಂಕಲ್ಪ ಮಾಡಿ; ಸಂವಿಧಾನ ರಕ್ಷಣೆಗೆ ನಾವೆಲ್ಲ ಪ್ರಾಣ ಬಿಡಲೂ ಸಿದ್ಧ ಎಂದು ನಿರ್ಧರಿಸಿ ಮುನ್ನುಗ್ಗಿ. 2024ರ ಲೋಕಸಭೆ ಚುನಾವಣೆಯಲ್ಲಿ ಜನ ಬಿಜೆಪಿ-ಆರ್‌ಎಸ್‌ಎಸ್ ವಿರುದ್ಧ ಮತ ಹಾಕಿ ಬುದ್ಧಿ ಕಲಿಸಿದರು. ಇದರಿಂದ ಬೆಚ್ಚಿಬಿದ್ದ ಪ್ರಧಾನಿ ನರೇಂದ್ರ ಮೋದಿ ಸಂವಿಧಾನ ಪುಸ್ತಕಕ್ಕೆ ತಲೆಬಾಗಿ ನಮಸ್ಕರಿಸಿ ಸಂಸತ್ ಪ್ರವೇಶಿಸಿದರು. ನಿಮ್ಮ ಸಾಮರ್ಥ್ಯ ಏನೆಂದು ಅರಿಯಲು ಈ ಒಂದೇ ಉದಾಹರಣೆ ಸಾಕು' ಎಂದರು.

'ಕೃಷಿ ಕಾಯ್ದೆಗಳ ತಿದ್ದುಪಡಿ ವಿರೋಧಿ ಹೋರಾಟದಲ್ಲಿ 700 ರೈತರು ಸತ್ತರೂ ಕಣ್ಣೆತ್ತಿ ನೋಡದ ಮೋದಿ, ಚುನಾವಣೆ ಬರುತ್ತಿದ್ದಂತೆಯೇ ಕಾಯ್ದೆಗಳನ್ನು ಹಿಂಪಡೆದರು. ಈ ಕುಟಿಲತೆ ಅರ್ಥ ಮಾಡಿಕೊಳ್ಳಬೇಕು. ಮೋದಿ ಅವರು ಬಂಡವಾಳಶಾಹಿಗಳ ₹17 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ' ಎಂದು ಆರೋಪಿಸಿದರು.

ಸಂವಿಧಾನದ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡೇ ಪ್ರಿಯಾಂಕಾ ಭಾಷಣ ಮಾಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿ ಹಲವು ನಾಯಕರು ಇದ್ದರು.

'ಶೇಕಡ 60ರ ಕಮಿಷನ್ ಜಾತ್ರೆ'

ಬೆಂಗಳೂರು: 'ಶೇ 60ರಷ್ಟು ಕಮಿಷನ್ ವಸೂಲಿ ಮಾಡಿದ ನೆನಪಿನಲ್ಲಿ ಬೆಳಗಾವಿಯಲ್ಲಿ ಜಾತ್ರೆ ನಡೆಸಲಾಗಿದೆಯೇ ಹೊರತು, ಅದು ಕಾಂಗ್ರೆಸ್ ಸಮಾವೇಶ ಅಲ್ಲ' ಎಂದು ವಿಧಾನಸಭೆ ವಿಕ್ಷದ ನಾಯಕ ಆರ್.ಅಶೋಕ ಹೇಳಿದರು.

'ಗಾಂಧೀಜಿ ಬಗ್ಗೆ ಅಷ್ಟೊಂದು ಪ್ರೀತಿ ಇದ್ದರೆ, ಕಾಂಗ್ರೆಸ್ ಭವನಕ್ಕೆ ಗಾಂಧೀಜಿ ಅಥವಾ ಸರ್ದಾರ್ ವಲ್ಲಭಭಾಯಿ ಪಟೇಲ್ ಹೆಸರಿಡಬೇಕಿತ್ತು. ಇವರಿಗೆ ಗಾಂಧೀಜಿಯ ಹೆಸರು ಹೇಳುವ ನೈತಿಕತೆ ಇಲ್ಲ' ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ತಿದ್ದುಪಡಿ

ಕಲಬುರಗಿಯಲ್ಲಿ ಭಾನುವಾರ ನಡೆದ 'ಬಹುತ್ವ ಸಂಸ್ಕೃತಿ ಭಾರತೋತ್ಸವ'ದಲ್ಲಿ ಸಾಹಿತಿ ಜೆ.ಎಸ್. ಪಾಟೀಲ ಅವರು, 'ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಬಸವ ಪರಂಪರೆಯ ಮಠಾಧೀಶರು ಹೋಗಬಾರದು; ಹಾಗೆ ಹೋಗುವುದಾದರೆ ಬಸವಣ್ಣ ಕೊಟ್ಟ ಇಷ್ಟಲಿಂಗವನ್ನು ಕಳಚಿಟ್ಟು ಹೋಗಬಹುದು...' ಎಂದು ಹೇಳಿಕೆ ನೀಡಿದ್ದರು. 'ಪ್ರಜಾವಾಣಿ'ಯ ಜನವರಿ 20ರ ಸಂಚಿಕೆಯ ಜಾಕೆಟ್ ಪುಟ-IIರಲ್ಲಿ ಪ್ರಕಟಗೊಂಡಿದ್ದ 'ಶರಣರ ಎಚ್ಚರ, ಸೂಫಿಗಳ ಪ್ರೀತಿ ಅಗತ್ಯ' ಶೀರ್ಷಿಕೆಯ ಸುದ್ದಿಯಲ್ಲಿ ಈ ಕುರಿತ ಹೇಳಿಕೆಯನ್ನು ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ನೀಡಿದ್ದಾರೆ ಎಂದು ತಪ್ಪಾಗಿ ಪ್ರಕಟಗೊಂಡಿತ್ತು.

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ • ಸುವರ್ಣ ಸೌಧ ಅಂಗಳದಲ್ಲಿ ಗಾಂಧಿ ಪ್ರತಿಮೆ ಅನಾವರಣ

ಬಾಪುವಿನ ತ್ಯಾಗ, ಹೋರಾಟ ಸ್ಮರಣೆ

• ಇಮಾಮ್ ಹುಸೇನ್ ಗೂಡುನವರ

ಬೆಳಗಾವಿ: ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಪ್ರತಿಷ್ಠಾಪಿಸಿದ ಮಹಾತ್ಮ ಗಾಂಧೀಜಿ ಪ್ರತಿಮೆ ಅನಾವರಣದ ಐತಿಹಾಸಿಕ ಕ್ಷಣಕ್ಕೆ ಇಲ್ಲಿನ ಸುವರ್ಣ ವಿಧಾನಸೌಧ ಅಂಗಳ ಮಂಗಳವಾರ ಸಾಕ್ಷಿಯಾಯಿತು.

ಒಟ್ಟು 20 ಟನ್ ತೂಕದ ಮತ್ತು 25 ಅಡಿ ಎತ್ತರದ (ನೆಲಮಟ್ಟದಿಂದ 37 ಅಡಿ ಎತ್ತರ) ಕಂಚಿನ ಪ್ರತಿಮೆಯನ್ನು ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನಾವರಣ ಮಾಡಿದರು. ಮರುಕ್ಷಣವೇ ಬಾನಂಗಳದಲ್ಲಿ ಸಿಡಿಮದ್ದುಗಳ ಮೂಲಕ ಬಣ್ಣಬಣ್ಣದ ಚಿತ್ತಾರ ಮೂಡಿತು.

ಸೌಧದ ಎದುರು ರಾಣಿ ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಬಿ.ಆರ್.ಅಂಬೇಡ್ಕರ್ ಪ್ರತಿಮೆಗಳಿವೆ. ಈಗ ಸೌಧದ ಉತ್ತರ ದ್ವಾರದ ಬಳಿ ಬಾಪೂಜಿ ಪ್ರತಿಮೆ ಪ್ರತಿಷ್ಠಾಪನೆಯಾಗಿದೆ.

'1924ರಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಿದ್ದ ಸ್ಥಳವಾದ ಟಿಳಕವಾಡಿಯ ವೀರಸೌಧದಲ್ಲಿ ಕಳೆದ ವರ್ಷ ಡಿಸೆಂಬರ್ 26ರಂದು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆ ಮಾಡಿದ್ದೆವು. ಈಗ ಬೆಳಗಾವಿ ನೆಲದಲ್ಲೇ ಗಾಂಧಿ ಪ್ರತಿಮೆ ಅನಾವರಣ ಮಾಡುತ್ತಿರುವುದು ನನ್ನ ಸೌಭಾಗ್ಯ' ಎಂದು ಖರ್ಗೆ ಸಂತಸ ವ್ಯಕ್ತಪಡಿಸಿದರು.

'ಇಬ್ಬರು ಮಕ್ಕಳೊಂದಿಗೆ ಮಹಾತ್ಮ ಗಾಂಧಿ ನಿಂತಿರುವ ಚಿತ್ರವನ್ನು ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಇಷ್ಟಪಟ್ಟಿದ್ದಾರೆ. ಉತ್ತರ ಪ್ರದೇಶದ ನೋಯ್ಡಾದಲ್ಲಿ ಆ ಚಿತ್ರ ಹೋಲುವ ಪ್ರತಿಮೆ ಪ್ರತಿಷ್ಠಾಪಿಸಲು ಒಲವು ತೋರಿದ್ದಾರೆ. ಅಂಥದ್ದೇ ಪ್ರತಿಮೆಯನ್ನು ಕಲಬುರಗಿಯಲ್ಲೂ ಪ್ರತಿಷ್ಠಾಪಿಸುತ್ತೇವೆ. ಅದರ ಕೆಳಗೆ, 'ನನ್ನ ಜೀವನವೇ ನನ್ನ ಸಂದೇಶ' ಎಂದು ಬರೆಯಿಸುತ್ತೇವೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಗಾಂಧೀಜಿಯವರು ರಾಮನನ್ನು ಸದಾ ಸ್ಮರಿಸುತ್ತಿದ್ದರು. ನಾಥೂರಾಮ್ ಗೋಡ್ಸೆ ಎಂಬಾತ ಗಾಂಧಿ ಹತ್ಯೆ ಮಾಡಿದಾಗ, 'ಹೇ ರಾಮ್' ಎನ್ನುತ್ತಲೇ ಜೀವಬಿಟ್ಟರು. ಅವರು ಅಪ್ಪಟ ಹಿಂದೂ ಎಂಬುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕಿಲ್ಲ' ಎಂದರು.

'ಇದು ಸರ್ಕಾರಿ ಕಾರ್ಯಕ್ರಮ. ಪಕ್ಷಾತೀತವಾಗಿ ಎಲ್ಲ ಜನಪ್ರತಿನಿಧಿಗಳನ್ನು ಆಹ್ವಾನಿಸಿದ್ದೇವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದರು. ಆದರೆ, ಬಿಜೆಪಿಯ ಜನಪ್ರತಿನಿಧಿಗಳು ಕಾರ್ಯಕ್ರಮದಿಂದ ದೂರವುಳಿದರು.

ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಉಪಸ್ಥಿತರಿದ್ದರು. ಹಲವರು 'ಗಾಂಧಿ ಟೋಪಿ' ಧರಿಸಿದ್ದರು. ಶಕ್ತಿಸೌಧದ ಅಂಗಳದಲ್ಲಿ 'ಗಾಂಧೀಜಿ ಗುಣಗಾನ' ನಡೆಯಿತು. ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಗಾಂಧಿಪ್ರೇಮಿಗಳು ಪ್ರತಿಮೆ ಎದುರು, ಚಿತ್ರಗಳನ್ನು ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

'ಗಾಂಧಿ ಭಾರತ' ಹೆಸರಿನಲ್ಲಿ ಹೊರತಂದಿರುವ ವಿಶೇಷ ಅಂಚೆ ಲಕೋಟೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊರತಂದ 'ಗಾಂಧಿ ಭಾರತ- ಮರುನಿರ್ಮಾಣ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಬೆಳಗಾವಿಯ ಸುವರ್ಣ ವಿಧಾನಸೌಧ ಆವರಣದಲ್ಲಿ ಮಹಾತ್ಮ ಗಾಂಧೀಜಿ ಪ್ರತಿಮೆ ಎದುರು ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ ಚರಕ ತಿರುಗಿಸಿದರು. ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಉಪಸ್ಥಿತರಿದ್ದರು

ಗಾಂಧೀಜಿ ಹಿಂದೂ ವಿರೋಧಿ ಆಗಿದ್ದರು ಎಂದು ಬಿಜೆಪಿ ಬಿಂಬಿಸುತ್ತದೆ. ಅದು ಸತ್ಯಕ್ಕೆ ದೂರದ ಮಾತು. ಗಾಂಧಿ ಎಲ್ಲರ ಒಳಿತನ್ನು ಬಯಸಿ, ಅಹಿಂಸೆ ಪ್ರತಿಪಾದಿಸಿದರು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಗಾಂಧೀಜಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು ಬೆಳಗಾವಿಯಲ್ಲಿ ಮಾತ್ರ. ಗಾಂಧೀಜಿ ಪ್ರತಿಮೆ ಪ್ರತಿಷ್ಠಾಪನೆ ರಾಜ್ಯಕ್ಕೆ ಗೌರವ ತರುವ ಕೆಲಸ

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಮುಖ್ಯಾಂಶಗಳು

- ವಿವಿಧೆಡೆಯಿಂದ ಬಂದಿದ್ದ ಗಾಂಧಿ ಪ್ರೇಮಿಗಳು
- ಪ್ರತಿಮೆ ಎದುರು ಫೋಟೊ ಕ್ಲಿಕ್ಕಿಸಿಕೊಳ್ಳುವ ಸಂಭ್ರಮ

ವಿಶ್ವವಿದ್ಯಾಲಯಕ್ಕೆ ಗಾಂಧಿ ಹೆಸರು

ಗದಗದಲ್ಲಿ ಇರುವ 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ'ದ ಹೆಸರನ್ನು 'ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ' ಎಂದು ಮರುನಾಮಕರಣ ಮಾಡಿ, ಲಾಂಛನ ಬಿಡುಗಡೆ ಮಾಡಲಾಯಿತು.

'ನವ ಸತ್ಯಾಗ್ರಹ ಸಂಕಲ್ಪ ಮಾಡಿ'

'2024ರ ಡಿಸೆಂಬರ್ 26ಕ್ಕೆ ಕಾಂಗ್ರೆಸ್ ಅಧಿವೇಶನಕ್ಕೆ ನೂರು ವರ್ಷ ತುಂಬಿದೆ. ಎಐಸಿಸಿ ವತಿಯಿಂದ ಐತಿಹಾಸಿಕ ಬೈಠಕ್ ಮಾಡಿದ್ದೇವೆ. ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾದಿಂದ ದೇಶವನ್ನು ರಕ್ಷಿಸಲು 'ನವ ಸತ್ಯಾಗ್ರಹ' ಆರಂಭವಾಗಿದೆ. ದೇಶದ ಜನ ಒಂದಾಗಿ ನಿಲ್ಲಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.

'ಗಾಂಧಿ ಭಾರತ' ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ಬೆಳಗಾವಿಯು ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ ಗೆದ್ದ ನೆಲ. ಪ್ರಿಯಾಂಕಾ ಗಾಂಧಿ ಅವರೇ ನಮ್ಮ ರಾಣಿ ಚನ್ನಮ್ಮ. ಬಿಜೆಪಿ, ಆರ್‌ಎಸ್‌ಎಸ್‌ನ ಕೆಟ್ಟ ಸರ್ಕಾರ ಕೀಳುವ ಹೋರಾಟದಲ್ಲಿ ಅವರು ಗೆಲ್ಲಲಿದ್ದಾರೆ' ಎಂದರು.

'ನಾನು ಬದುಕಿದರೂ ಭಾರತಕ್ಕಾಗಿ, ಸತ್ತರೂ ಭಾರತಕ್ಕಾಗಿ' ಎಂದು ಗಾಂಧೀಜಿ ಬೆಳಗಾವಿ ನೆಲದಲ್ಲೇ ಘೋಷಣೆ ಮೊಳಗಿಸಿದ್ದರು. ಇಂದು ಬಿಜೆಪಿಯವರು ಅದೇ ಗಾಂಧೀಜಿ ಅವರನ್ನು ಬೈದುಕೊಂಡು ಓಡಾಡುತ್ತಿದ್ದಾರೆ. ಗಾಂಧಿ, ಅಂಬೇಡ್ಕರ್, ನೆಹರೂ, ಸರ್ದಾರ್ ಪಟೇಲ್ ಅವರಂಥ ರಾಷ್ಟ್ರೀಯ ನಾಯಕರ ಮಧ್ಯೆ ಜಗಳ ಇದ್ದವು ಎಂದು ಪ್ರಚಾರ ನಡೆಸಿದ್ದಾರೆ. ಸತ್ಯಕ್ಕಾಗಿಯೇ ಬದುಕಿ ಬಾಳಿದ ಗಾಂಧಿ ವಿರುದ್ಧವೇ ಸುಳ್ಳು ಹೇಳುತ್ತಿದ್ದಾರೆ' ಎಂದರು.

'ಕಾಂಗ್ರೆಸ್‌ನವರು ಅಂಬೇಡ್ಕರ್‌ಗೆ ಅವಮಾನ ಮಾಡಿದರು ಎಂದು ಬಿಜೆಪಿ ಪ್ರಚಾರ ನಡೆಸಿದೆ. ಎರಡು ಬಾರಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದು ಕಾಂಗ್ರೆಸ್. ಸಂಸತ್ತಿನ ಮುಖ್ಯದ್ವಾರದ ಮುಂದೆ ಅವರ ಪ್ರತಿಮೆ ನಿರ್ಮಿಸಿದ್ದು ಇಂದಿರಾ ಗಾಂಧಿ. ಆದರೆ, ಮೋದಿ ಹೊಸ ಸಂಸತ್ ಭವನದ ಮೂಲೆಯಲ್ಲಿ ಅಂಬೇಡ್ಕರ್ ಪ್ರತಿಮೆ ಕಾಣದಂತೆ ಮಾಡಿದ್ದಾರೆ. ಅಂಬೇಡ್ಕರ್‌ಗೆ ಅವಮಾನ ಮಾಡುತ್ತಿರುವುದು ಯಾರೆಂದು ದೇಶವೇ ಯೋಚಿಸಬೇಕು' ಎಂದರು.

'ದೇಶಕ್ಕಾಗಿ ಬಿಜೆಪಿ ಆರ್‌ಎಸ್‌ಎಸ್ ಎಂದೂ ಹೋರಾಡಲಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ತ್ರಿವರ್ಣ ಧ್ವಜ ಹಾರಿಸಲಿಲ್ಲ. ಇಂಥವರು ಆಡಳಿತಕ್ಕೆ ಬಂದರೆ ಸಂವಿಧಾನ ಹೇಗೆ ಉಳಿಯಲು ಸಾಧ್ಯ' ಎಂದು ಅವರು ಪ್ರಶ್ನಿಸಿದರು. 'ಪ್ರತಿಯೊಂದು ಮಸೀದಿಯ ಕೆಳಗೂ ಶಿವಲಿಂಗ ಹುಡುಕಬೇಡಿ ಎಂದು ಆರ್‌ಎಸ್‌ಎಸ್ ನಾಯಕ ಮೋಹನ ಭಾಗವತ್ ಹೇಳಿದ್ದಾರೆ. ಆದರೂ ಮೋದಿ ಮತ್ತು ತಂಡ ದೇಶವನ್ನು ಒಡೆದಾಳಲು ಈ ತಂತ್ರ ಮುಂದುವರಿಸಿಯೇ ಇದೆ' ಎಂದೂ ದೂರಿದರು.

ಸ್ಥಳ ಮಹಜರಿಗೆ ಕರೆದೊಯ್ದಾಗ ಪೊಲೀಸರ ಮೇಲೆ ಹಲ್ಲೆ ನಡೆಸಿ, ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿ?

ಬ್ಯಾಂಕ್ ದರೋಡೆ ಪ್ರಕರಣ: ಆರೋಪಿ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ತಾಲ್ಲೂಕಿನ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಯಲ್ಲಿ ಈಚೆಗೆ ನಡೆದ ದರೋಡೆ ಪ್ರಕರಣದ ಆರೋಪಿಯೊಬ್ಬ ಸ್ಥಳ ಮಹಜರಿನ ಸಂದರ್ಭದಲ್ಲಿ ಪೊಲೀಸರ ಮೇಲೆ ಹಲ್ಲೆ ನಡೆಸಿ ತಪ್ಪಿಸಿ ಕೊಳ್ಳಲು ಯತ್ನಿಸಿದ್ದು, ಪೊಲೀಸರು ಆತನ ಕಾಲಿಗೆ ಗುಂಡು ಹಾರಿಸಿದ್ದಾರೆ.

ಮುಂಬೈ ಚೆಂಬೂರ್ ತಿಲಕ ನಗರದ ಕಣ್ಣನ್ ಮಣಿ (36) ಗುಂಡೇಟು ತಗುಲಿದ ಆರೋಪಿ. ಬಲಗಾಲಿಗೆ ಗುಂಡೇಟು ತಗುಲಿರುವ ಆತನನ್ನು ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

'ಆರೋಪಿಗಳು ದರೋಡೆ ಬಗ್ಗೆ ಕೇರಳ-ಕರ್ನಾಟಕ ಗಡಿಭಾಗದಲ್ಲಿರುವ ತಲಪಾಡಿಯ ಅಲಂಕಾರುಗುಡ್ಡೆಯ ನಿರ್ಜನ ಪ್ರದೇಶದಲ್ಲಿ ಸಂಚು ರೂಪಿಸಿದ್ದರು. ಆ ಜಾಗದ ಮಹಜರಿಗಾಗಿ ಆರೋಪಿ ಕಣ್ಣನ್ ಮಣಿಯನ್ನು ಉಳ್ಳಾಲ ಠಾಣೆಯ ಇನ್‌ಸ್ಪೆಕ್ಟರ್ ಬಾಲಕೃಷ್ಣ ಎಚ್.ಎನ್ ಅವರು ಇತರ ಸಿಬ್ಬಂದಿ ಜೊತೆ ಸ್ಥಳಕ್ಕೆ ಕರೆದೊಯ್ದಿದ್ದರು. ಆರೋಪಿಯು ಈ ವೇಳೆ ಉಳ್ಳಾಲ ಠಾಣೆಯ ಪೊಲೀಸ್ ಸಿಬ್ಬಂದಿ ನಿತಿನ್ ಹಾಗೂ ಸಿಸಿಬಿ ಸಿಬ್ಬಂದಿ ಆಂಜನಪ್ಪ ಅವರಿಗೆ ಸ್ಥಳದಲ್ಲಿದ್ದ ಬಿಯರ್ ಬಾಟಲಿಯೊಂದರಿಂದ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ. ಇನ್‌ಸ್ಪೆಕ್ಟರ್ ಬಾಲಕೃಷ್ಣ ಅವರಿಗೆ ತುಂಡಾದ ಬಾಟಲಿಯಿಂದ ಇರಿಯಲು ಮುಂದಾಗಿದ್ದ. ಮಹಜರಿಗೆ ಉಳ್ಳಾಲ ಪೊಲೀಸರ ಜೊತೆಗೆ ತೆರಳಿದ್ದ ಸಿಸಿಬಿ ತಂಡ ಇನ್‌ಸ್ಪೆಕ್ಟರ್ ರಫೀಕ್ ಅವರು ಎಚ್ಚರಿಕೆ ನೀಡಿದರೂ, ಆರೋಪಿ ಕೇಳಲಿಲ್ಲ. ಆಗ ರಫೀಕ್ ಅವರು ಆರೋಪಿಯ ಕಾಲಿಗೆ ಗುಂಡು ಹಾರಿಸಿದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಣ್ಣನ್ ಮಣಿ

'ಘಟನೆಯಿಂದ ಇನ್‌ಸ್ಪೆಕ್ಟರ್ ಬಾಲಕೃಷ್ಣ, ಸಿಬ್ಬಂದಿ ನಿತಿನ್ ಹಾಗೂ ಆಂಜನಪ್ಪ ಅವರು ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಯೆನೆಪೋಯ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಜಂಕ್ಷನ್ ಶಾಖೆಯಲ್ಲಿ ಜ.17ರಂದು ದರೋಡೆ ನಡೆದಿತ್ತು. ಈ ಪ್ರಕರಣ ಸಂಬಂಧ ತಮಿಳುನಾಡಿನ ತಿರುನೆಲ್ವೇಲಿ ಜಿಲ್ಲೆಯ ಪದ್ಮನೇರಿ ಗ್ರಾಮದಲ್ಲಿ ಮುಂಬೈನ ಚೆಂಬೂರ್ ತಿಲಕ ನಗರದ ಕಣ್ಣನ್ ಮಣಿ (36), ಪದ್ಮನೇರಿ ಗ್ರಾಮದ ಮುರುಗುಂಡಿ ಥೇವರ್ (36), ಮುಂಬೈನ ದೊಂಬಿವಲಿ ವೆಸ್ಟ್‌ನ ಯೊಸುವಾ ರಾಜೇಂದ್ರನ್ (35) ಎಂಬುವರನ್ನು ಬಂಧಿಸಿದ್ದರು. ಬಂಧಿತರಿಂದ ಎರಡು ಪಿಸ್ತೂಲ್, ಮೂರು ಜೀವಂತ ಗುಂಡುಗಳು, ಮಾರಕಾಸ್ತ್ರ, ಚಿನ್ನಾಭರಣ ಮತ್ತು ನಗದು, ಕೃತ್ಯಕ್ಕೆ ಬಳಸಿದ್ದ ಮಹಾರಾಷ್ಟ್ರ ನೋಂದಣಿಯ ಫಿಯೆಟ್ ಕಾರನ್ನು ವಶಕ್ಕೆ ಪಡೆದಿದ್ದರು.

ಬೈಕ್‌ನಲ್ಲಿ ಲಿಫ್ಟ್: ರೈಲಿನ ಮಾಹಿತಿ ಕೇಳಿದ್ದ ಆರೋಪಿ

ದರೋಡೆ ಕೃತ್ಯದಲ್ಲಿ ಭಾಗಿಯಾಗಿದ್ದ ಆರೋಪಿಯಲ್ಲಿ ಒಬ್ಬಾತ ರಾಷ್ಟ್ರೀಯ ಹೆದ್ದಾರಿ ಬಳಿ ಕಾರಿನಿಂದ ಇಳಿದು, ಬೈಕಿನಲ್ಲಿ ಸಾಗಿದ್ದು ಪೊಲೀಸರಿಗೆ ತನಿಖೆ ವೇಳೆ ಗೊತ್ತಾಗಿತ್ತು. ಆತನಿಗೆ ಲಿಫ್ಟ್ ನೀಡಿದ್ದ ವ್ಯಕ್ತಿಯಲ್ಲಿ ವಿಚಾರಿಸಿದಾಗ 'ಆರೋಪಿ ರೈಲು ನಿಲ್ದಾಣ ಬಗ್ಗೆ ಹಿಂದಿ ಭಾಷೆಯಲ್ಲಿ ವಿಚಾರಿಸಿದ್ದ ಅಂಶ ಗೊತ್ತಾಗಿತ್ತು. ಪ್ರಕರಣದ ಒಬ್ಬ ಆರೋಪಿ ರೈಲಿನಲ್ಲಿ ಮುಂಬೈ ತಲುಪಿದ್ದು ಖಚಿತವಾಗಿತ್ತು. ಪ್ರಕರಣಕ್ಕೆ ಮುಂಬೈ ಗ್ಯಾಂಗಿನ ನಂಟಿರುವುದು ಆತನಿಂದಾಗಿಯೇ ತಿಳಿದುಬಂದಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹತ್ತು ಮಂದಿಯ ತಂಡದಿಂದ ಕೃತ್ಯ?

'ಈ ದರೋಡೆಯ ಬಗ್ಗೆ ಕೆ.ಸಿ.ರೋಡ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾದ ದೃಶ್ಯಗಳಲ್ಲಿ ಐದು ಮಂದಿ ಇರುವುದು ಮಾತ್ರ ಸೆರೆಯಾಗಿದೆ. ಆದರೆ ಒಟ್ಟು 10 ಮಂದಿ ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂಬ ಅಂಶ ತನಿಖೆ ವೇಳೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇನ್ನುಳಿದ ಆರೋಪಿಗಳಿಗಾಗಿ ಪೊಲೀಸರಿಂದ ಪತ್ತೆ ಕಾರ್ಯ ಮುಂದುವರಿದಿದೆ. ಆರೋಪಿಗಳು ದರೋಡೆ ಮಾಡಿದ ಎಲ್ಲ ಚಿನ್ನಾಭರಣಗಳು ಪೂರ್ಣಪ್ರಮಾಣದಲ್ಲಿ ಪತ್ತೆಯಾಗಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ವಿವಿಧ ಜಾನಪದ ಕಲಾ ತಂಡಗಳು, ವಾದ್ಯ ಮೇಳಗಳ ಮೆರುಗು

ಮಹಾದಾಸೋಹಿ ಶಿವಕುಮಾರ ಸ್ವಾಮೀಜಿ ಸ್ಮರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ 6ನೇ ಪುಣ್ಯ ಸ್ಮರಣೋತ್ಸವ ಮಂಗಳವಾರ ಧಾರ್ಮಿಕ ವಿಧಿ ವಿಧಾನ ಮತ್ತು ಭಕ್ತಿ, ಭಾವಗಳೊಂದಿಗೆ ನೆರವೇರಿತು.

ನಾಡಿನ ವಿವಿಧೆಡೆಗಳಿಂದ ಬಂದಿದ್ದ ಭಕ್ತ ಸಮೂಹ ಸ್ಮರಣೋತ್ಸವಕ್ಕೆ ಸಾಕ್ಷಿಯಾಯಿತು. ರಾಜಕೀಯ ಮುಖಂಡರು, ಪ್ರಮುಖರು ಗದ್ದುಗೆ ದರ್ಶನ ಪಡೆದರು.

ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾಗಿರುವ ಶಿವಯೋಗಿ ಮಂದಿರದಲ್ಲಿ ಸಿದ್ಧಲಿಂಗ ಸ್ವಾಮೀಜಿ ಬೆಳಗಿನ ಜಾವ ಇಷ್ಟಲಿಂಗ ಪೂಜೆ, ಗದ್ದುಗೆಗೆ ಪೂಜೆ ಸಲ್ಲಿಸುವುದರೊಂದಿಗೆ ಧಾರ್ಮಿಕ ವಿಧಿವಿಧಾನಗಳಿಗೆ ಚಾಲನೆ ನೀಡಿದರು.

ಮಹಾರುದ್ರಾಭಿಷೇಕ, ರಾಜೋಪಚಾರ, ಬಿಲ್ವಾರ್ಚನೆ ನೆರವೇರಿತು. ನಂತರ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಪೂಜೆ ಸಲ್ಲಿಸಿದರು.

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಮಂಗಳವಾರ ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವ ಪ್ರಯುಕ್ತ ಮೆರವಣಿಗೆ ನಡೆಯಿತು

ಶಿವಕುಮಾರ ಸ್ವಾಮೀಜಿ ಭಾವಚಿತ್ರವನ್ನು ರುದ್ರಾಕ್ಷಿ ಮಂಟಪದಲ್ಲಿಟ್ಟು ಮಠದ ಆವರಣದಲ್ಲಿ ಮೆರವಣಿಗೆ ಮಾಡಲಾಯಿತು. 108 ಕಳಸ ಹೊತ್ತ ಸುಮಂಗಲಿಯರು ಮೆರವಣಿಗೆಯಲ್ಲಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.

ಕರಡಿ ವಾದ್ಯ, ನಂದಿಧ್ವಜ ಕುಣಿತ, ಡೋಲು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು, ವಾದ್ಯ ಮೇಳಗಳು ಮೆರುಗು ತಂದವು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರಿಗೆ 'ಸಿದ್ಧಗಂಗಾಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಇತರರು ಭಾಗವಹಿಸಿದ್ದರು.

ದಾಸೋಹ ದಿನಾಚರಣೆಗೆ ಆಗ್ರಹ

ತುಮಕೂರು: ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾದ ದಿನವನ್ನು ದಾಸೋಹ ದಿನವನ್ನಾಗಿ ಆಚರಣೆ ಮಾಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದ್ದರೂ ಈವರೆಗೂ ಜಾರಿಗೆ ತಂದಿಲ್ಲ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಈ ಬಗ್ಗೆ ಘೋಷಣೆ ಮಾಡಿದ್ದರು. ಆದರೆ ಅದು ದಾಖಲೆಗೆ ಸೀಮಿತವಾಗಿದ್ದು, ಆಚರಣೆಗೆ ಬಂದಿಲ್ಲ. ಈ ಘೋಷಣೆಯನ್ನು ಜಾರಿಗೆ ತಂದು ಸ್ವಾಮೀಜಿಗೆ ಗೌರವ ಸಮರ್ಪಿಸಬೇಕು ಎಂದು ಒತ್ತಾಯಿಸಿದರು.

'ಅರ್ಜುನ ಸ್ಮಾರಕ: ಸೌಕರ್ಯ ಕಲ್ಪಿಸದೇ ಉದ್ಘಾಟಿಸಲು ಬಿಡಲ್ಲ'

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ ಜಿಲ್ಲೆ): 'ಮೂಲಸೌಕರ್ಯ ಕಲ್ಪಿಸದೇ ಅಂಬಾರಿ ಆನೆ ಅರ್ಜುನನ ಸ್ಮಾರಕದ ಉದ್ಘಾಟನೆಗೆ ಅವಕಾಶ ನೀಡುವುದಿಲ್ಲ' ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಯಸಳೂರು ಸಮೀಪದ ದಬ್ಬಳ್ಳಿ ಅರಣ್ಯ ಪ್ರದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಮಾರಕ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಸರ್ಕಾರ ಕೇವಲ ₹ 16 ಲಕ್ಷ ಬಿಡುಗಡೆ ಮಾಡಿದ್ದು, ಕಂಚಿನ ಬದಲು ಫೈಬರ್ ಪ್ರತಿಮೆ ನಿರ್ಮಿಸಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಯಾವುದೇ ಮೂಲಸೌಕರ್ಯ ಒದಗಿಸದೇ ಜ. 23ರಂದು ಉದ್ಘಾಟನೆಗೆ ಸಿದ್ಧತೆ ನಡೆದಿದೆ' ಎಂದು ಆರೋಪಿಸಿದರು. ಇದೇ ವೇಳೆ, ಸಚಿವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಉದ್ಘಾಟನೆ ಮುಂದೂಡುವಂತೆ ಕೋರಿದರು. ಯಸಳೂರು ವಲಯ ಅರಣ್ಯಾಧಿಕಾರಿ ಕೃಷ್ಣ, ಲೋಕೋಪಯೋಗಿ ಇಲಾಖೆ ಎಂಜಿನಿಯರ್ ಮುರುಗೇಶ್ ಇದ್ದರು.

ಕಂದಾಯ ಆಯುಕ್ತಾಲಯ, ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೇ ಮಹಡಿ, ಎಸ್.ಎಸ್.ಎಲ್.ಆರ್.ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂ: 080–22113255
No: BMC/2024-25/IND0015 Date: 20.01.2025
ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ
ಭೂಮಿ ಉಸ್ತುವಾರಿ ಕೋಶದ ಕಛೇರಿಯಿಂದ 1020 Desktop Computers ಗಳನ್ನು ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಿಗೆ ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: **31.01.2025, ಸಂಜೆ 5.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
ವಾಸಾಸಂಇ/ವಾಪ್ರ/4471/2024–25

ಕರ್ನಾಟಕ ರಾಜ್ಯ ಉಗ್ರಾಣ ನಿಗಮ
ಉಗ್ರಾಣ ಭವನ, ನಂ.43, ಪ್ರಿಂರೋಸ್ ರಸ್ತೆ, ಬೆಂಗಳೂರು – 560 025.
ದೂರವಾಣಿ: 080–29533679 ಫ್ಯಾಕ್ಸ್: 080–29533673
ಇ–ಮೇಲ್ : mdkswc2018@gmail.com ವೆಬ್‌ಸೈಟ್: www.kswc.karnataka.gov.in
ಸಂಖ್ಯೆ: ಕರಾಉನಿ/ಆಡಳಿತ/ಟೆಂಡರ್/2024–25 ದಿನಾಂಕ: 21.01.2025
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಕೆ.ಪಿ.ಪಿ ಪೋರ್ಟಲ್ ಮೂಲಕ ನಿಗಮದ ಹುಬ್ಬಳ್ಳಿ ವಿಭಾಗದ ಪ್ರಾದೇಶಿಕ ವ್ಯವಸ್ಥಾಪಕರ ಕಛೇರಿ ಹಾಗೂ ಉಗ್ರಾಣ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲಗಳನ್ನು ನೇಮಿಸಿಕೊಳ್ಳಲು ಅರ್ಹ ಏಜೆನ್ಸಿಗಳಿಂದ ಅಲ್ಪಾವಧಿಯ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದೆ, ವಿವರ ಈ ಕೆಳಕಂಡಂತಿದೆ.
1) ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ: **22.01.2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆಯ **ದಿನಾಂಕ: 24.01.2025ರ ಬೆಳಿಗ್ಗೆ 11.30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಅಂತಿಮ **ದಿನಾಂಕ: 31.01.2025ರ ಮಧ್ಯಾಹ್ನ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ: 01.02.2025ರ ಮಧ್ಯಾಹ್ನ 4:30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 05.02.2025ರ ಮಧ್ಯಾಹ್ನ 3:30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ಅಥವಾ ಸಹಾಯವಾಣಿ: 8046010000 / 8068948777 ಸಂಪರ್ಕಿಸಬಹುದು.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/4482/2024–25

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ Karnataka One State. Many worlds
(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿಎಂಟಿಸಿ, ಯಶವಂತಪುರ,
ಟಿಟಿಎಂಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು –560022.
ದೂರವಾಣಿ: 080–43344334 ಫ್ಯಾಕ್ಸ್:(080)43344376, ವೆಬ್‌ಸೈಟ್: **www.kstdc.co**
ಸಂಖ್ಯೆ:ಕರಾಪ್ರಅನಿ/ಪ್ರೊ/21(ಎ)/2020–21/2024–25 ದಿನಾಂಕ: 21.01.2025
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ನಿರ್ವಹಣೆ ಮಾಡಲಾಗುತ್ತಿರುವ ಹೊಸ ಕುಮಾರಕೃಪ ಅತಿಥಿ ಗೃಹ, ಬೆಂಗಳೂರು ಘಟಕದಲ್ಲಿ ಅಳವಡಿಸಲಾಗಿರುವ ಹವಾನಿಯಂತ್ರಣ ವ್ಯವಸ್ಥೆಗೆ ಸಂಬಂಧಿಸಿದಂತೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.
ಟೆಂಡರ್ ಸಂಖ್ಯೆ: KSTDC/2023-24/SE0016/Call-3. ವಿವರಣೆ: **ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ನಿರ್ವಹಣೆ ಮಾಡಲಾಗುತ್ತಿರುವ ಹೊಸ ಕುಮಾರಕೃಪ ಅತಿಥಿ ಗೃಹ, ಬೆಂಗಳೂರು ಘಟಕದಲ್ಲಿ ಅಳವಡಿಸಲಾಗಿರುವ ಹವಾನಿಯಂತ್ರಣ ವ್ಯವಸ್ಥೆಯ ಅಲ್ಪಾವಧಿ ಟೆಂಡರ್‌ಗೆ ಸಂಬಂಧಿಸಿದಂತೆ ಅರ್ಹ/ಆಸಕ್ತ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಕುರಿತು.** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **29.01.2025 ರಂದು 14.00 ಗಂಟೆವರೆಗೆ.**
ಆಸಕ್ತ / ಅರ್ಹ ಸೇವಾ ಪೂರೈಕೆದಾರರು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ: **http://kppp.karnataka.gov.in** ನ್ನು ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **+ 91 80 23010900/01** ಇ–ಮೇಲ್: **hphelpdesk.blr@intarvo.com** ನ್ನು ಸಂಪರ್ಕಿಸುವುದು.
ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕೆ.ಎಸ್.ಟಿ.ಡಿ.ಸಿ.

ಇ-ವಿಟಾರಾ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯಲ್ಲಿ ನಡೆಯುತ್ತಿರುವ ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋ–2025ರಲ್ಲಿ ಮಾರುತಿ ಸುಜುಕಿ ಕಂಪನಿಯು, ವಿದ್ಯುತ್‌ಚಾಲಿತ ವಿಟಾರಾ ಕಾರನ್ನು ಅನಾವರಣ ಮಾಡಿದೆ.

ಕಂಪನಿಯ ಎಸ್‌ಯುವಿ ವಿಭಾಗದಲ್ಲಿನ ಪ್ರಥಮ ವಿದ್ಯುತ್‌ಚಾಲಿತ ಕಾರು ಇದಾಗಿದೆ. ದೇಶೀಯ ಗ್ರಾಹಕರಿಗೆ ಇ–ವಾಹನಗಳ ಸೇವೆ ಒದಗಿಸುವ ನಿಟ್ಟಿನಲ್ಲಿ 'ಇ ಫಾರ್ ಮೀ' ಎಂಬ ಗ್ರಾಹಕ ಕೇಂದ್ರಿತ ಕಾರ್ಯಕ್ರಮಕ್ಕೂ ಚಾಲನೆ ನೀಡಿದೆ. ಇದರಡಿ ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿಯ ಜೊತೆಗೆ ಹೊಸ ತಂತ್ರಜ್ಞಾನದೊಟ್ಟಿಗೆ ದೇಶದ ವಿದ್ಯುತ್‌ಚಾಲಿತ ವಾಹನಗಳ ಮಾರುಕಟ್ಟೆಯನ್ನು ಸದೃಢಗೊಳಿಸುವ ಆಶಯ ಹೊಂದಲಾಗಿದೆ ಎಂದು ಕಂಪನಿ ತಿಳಿಸಿದೆ.

ಪಾರ್ಥೋ ಬ್ಯಾನರ್ಜಿ

'ಇ–ವಿಟಾರಾವು 7 ಏರ್‌ಬ್ಯಾಗ್‌ಗಳನ್ನು ಹೊಂದಿದೆ. ಅತಿ ವೇಗವಾಗಿ ಚಾರ್ಜಿಂಗ್ ಆಗುವ ಸೌಲಭ್ಯ ಇದರಲ್ಲಿದೆ. ಗ್ರಾಹಕ ಸ್ನೇಹಿಯಾದ 60 ವೈಶಿಷ್ಟ್ಯಗಳನ್ನು ಒಳಗೊಂಡಿದೆ' ಎಂದು ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯ ನಿರ್ವಾಹಕ ಅಧಿಕಾರಿ ಪಾರ್ಥೋ ಬ್ಯಾನರ್ಜಿ ತಿಳಿಸಿದ್ದಾರೆ.

ಈ ವಾಹನವು ಕಂಪನಿಯ ಹೊಸ ತಂತ್ರಜ್ಞಾನಕ್ಕೆ ಹಾಗೂ ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ಆಶಯಕ್ಕೆ ಬದ್ಧವಾಗಿದೆ. ಭಾರತದಲ್ಲಿಯೇ ಈ ಕಾರನ್ನು ತಯಾರಿಸಿ, 100ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡುವ ಗುರಿ ಹೊಂದಲಾಗಿದೆ ಎಂದು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,344
ಇಂದಿನ ಅಂತ್ಯ	23,024
▼	320
ದಿನದ ಕನಿಷ್ಠ	22,976

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹310-658

ದ್ವಿತಳಿ (ಬಿ.ವಿ) ₹360-805

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹187.50

ಆರ್‌ಎಸ್‌ಎಸ್-5 ₹182.50

ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹177

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹22750
ಎಸಿ	₹12930
ಆರ್‌ಪಿ	₹19650
ಆರ್‌ಸಿ	₹11880

ಹೂಡಿಕೆದಾರರ ₹7.52 ಲಕ್ಷ ಕೋಟಿ ಸಂಪತ್ತು ನಷ್ಟ

ಸುಂಕ ನೀತಿ: ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕದ ನೀತಿಯು ದೇಶೀಯ ಷೇರುಪೇಟೆ ಮೇಲೂ ಪರಿಣಾಮ ಬೀರಿದೆ. ಮಂಗಳವಾರ ನಡೆದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್, ಏಳು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಒಂದೇ ದಿನ ಹೂಡಿಕೆದಾರರ ಸಂಪತ್ತು ₹7.52 ಲಕ್ಷ ಕೋಟಿ ಕರಗಿದೆ.

ಸೆನ್ಸೆಕ್ಸ್ 1,235 ಅಂಶ ಇಳಿಕೆ ಕಂಡು (ಶೇ 1.60ರಷ್ಟು) 75,838 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,431 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 320 ಅಂಶ ಇಳಿಕೆ ಕಂಡು (ಶೇ 1.37ರಷ್ಟು), 23,024 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

'ಅಧಿಕಾರವಹಿಸಿಕೊಂಡ ಮೊದಲ ದಿನವೇ ನೆರೆಯ ದೇಶಗಳ ಮೇಲೆ ಸುಂಕ ಹೆಚ್ಚಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಇದು ಜಾಗತಿಕ ಷೇರುಪೇಟೆಗಳ ಮೇಲೂ ಪರಿಣಾಮ ಬೀರಿದೆ. ಅಲ್ಲದೆ, ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ನಿವ್ವಳ ಲಾಭದಲ್ಲಿ ಕಡಿಮೆಯಾಗಿದೆ. ರೂಪಾಯಿ ಮೌಲ್ಯದ ಕುಸಿತ ಮುಂದುವರಿದಿದೆ. ದೇಶದ ಷೇರುಪೇಟೆಯಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂಪಡೆಯುವುದನ್ನು ಮುಂದುವರಿಸುವ ಸಾಧ್ಯತೆಯಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ, ಎನ್‌ಟಿಪಿಸಿ, ಅದಾನಿ ಪೋರ್ಟ್ಸ್, ಐಸಿಐಸಿಐ ಬ್ಯಾಂಕ್, ಎಸ್‌ಬಿಐ, ರಿಲಯನ್ಸ್ ಇಂಡಸ್ಟ್ರೀಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫೈನಾನ್ಸ್, ಟೆಕ್ ಮಹೀಂದ್ರ ಮತ್ತು ಎಕ್ಸಿಸ್ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿಕೆಯಾಗಿದೆ. ಅಲ್ಟ್ರಾ ಟೆಕ್ ಸಿಮೆಂಟ್, ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯ ಷೇರಿನ ಮೌಲ್ಯ ಏರಿಕೆಯಾಗಿದೆ.

ರೂಪಾಯಿ ಮೌಲ್ಯ 13 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ರೂಪಾಯಿ ಮೌಲ್ಯವು, ವಹಿವಾಟಿನ ಅಂತ್ಯಕ್ಕೆ 13 ಪೈಸೆ ಇಳಿಕೆಯಾಗಿದೆ.

ಪ್ರತೀ ಡಾಲರ್ ಮೌಲ್ಯ ₹86.58 ಆಗಿದೆ. ದೇಶೀಯ ಷೇರುಪೇಟೆಯಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿದ್ದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕೆನಡಾ ಮತ್ತು ಮೆಕ್ಸಿಕೊದಿಂದ ಪೂರೈಕೆಯಾಗುವ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇದರಿಂದ ಡಾಲರ್ ಸೂಚ್ಯಂಕ ಏರಿಕೆ ಕಂಡಿದೆ ಎಂದು ಹೇಳಿದ್ದಾರೆ.

'ಜನವರಿ ತಿಂಗಳು ಮುಕ್ತಾಯದ ಹಂತದಲ್ಲಿದೆ. ಈ ವೇಳೆ ಆಮದುದಾರರು ತಮ್ಮ ಪಾವತಿಯ ಜವಾಬ್ದಾರಿ ಪೂರೈಸಬೇಕಿದೆ. ಇದರಿಂದ ಡಾಲರ್‌ಗೆ ಹೆಚ್ಚಿನ ಬೇಡಿಕೆ ಕಂಡುಬರಲಿದೆ. ಅಲ್ಲದೆ, ದೇಶೀಯ ಷೇರುಪೇಟೆ ಕುಸಿತ ದಾಖಲಿಸಿದೆ. ಇದರಿಂದ ರೂಪಾಯಿ ಮತ್ತಷ್ಟು ಒತ್ತಡಕ್ಕೆ ಸಿಲುಕಲಿದೆ' ಎಂದು ಮಿರೇ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

1,500 ಜನರಿಗೆ ಕ್ಷಮಾದಾನ

ಟಿಕ್–ಟಾಕ್ ಕಾರ್ಯಾಚರಣೆ ಅಬಾಧಿತ: ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಕ್ಯಾಪಿಟಲ್ ಹಿಲ್' ಮೇಲೆ 2021ರ ಜನವರಿ 6ರಂದು ನಡೆದಿದ್ದ ದಾಳಿಯಲ್ಲಿ ಭಾಗಿಯಾಗಿದ್ದವರ ಪೈಕಿ 1,500 ಜನರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ಷಮಾದಾನ ನೀಡಿದ್ದಾರೆ.

ಅಮೆರಿಕದ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಟ್ರಂಪ್ ಅವರು, ಮೊದಲ ದಿನವೇ ಈ ಬಗ್ಗೆ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದಾರೆ.

2020ರ ಚುನಾವಣೆಯಲ್ಲಿ ಜೋ ಬೈಡನ್ ಅವರು ಗೆದ್ದ ನಂತರ, ಅಧಿಕೃತ ಘೋಷಣೆಗಾಗಿ ಅಮೆರಿಕದ 'ಕ್ಯಾಪಿಟಲ್ ಹಿಲ್'ನಲ್ಲಿ ಸಂಸತ್ ಸಭೆ ನಡೆದಿತ್ತು. ಈ ವೇಳೆ, 'ಕ್ಯಾಪಿಟಲ್ ಹಿಲ್' ಮೇಲೆ ದಾಳಿ ನಡೆಸಿದ್ದ ಜನರ ಪೈಕಿ, ಹಲವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿತ್ತು. ಚುನಾವಣೆ ಪ್ರಚಾರ ವೇಳೆ ನೀಡಿದ್ದ ಭರವಸೆಯಂತೆ, ಟ್ರಂಪ್ ಅವರು, ಈ ಪ್ರಕರಣಕ್ಕೆ ಸಂಬಂಧಿಸಿ 1,500 ಜನರಿಗೆ ಕ್ಷಮಾದಾನ ನೀಡಿದ್ದಾರೆ. ತಮ್ಮ ಬೆಂಬಲಿಗರ ವಿರುದ್ಧ ಬೈಡನ್ ಆಡಳಿತ ಹೂಡಿದ್ದ ಪ್ರಕರಣಗಳನ್ನು ಮುಕ್ತಾಯಗೊಳಿಸುವಂತೆ ಆದೇಶಿಸಿದ್ದಾರೆ.

ಇತರ ಪ್ರಮುಖ ನಿರ್ಧಾರಗಳು:

- ಹಣದುಬ್ಬರ ನಿಯಂತ್ರಣಕ್ಕೆ ಸಂಬಂಧಿಸಿ ಸರ್ಕಾರದ ಎಲ್ಲ ಸಂಸ್ಥೆಗಳು ಕ್ರಮ ಕೈಗೊಳ್ಳುವಂತೆ ನಿರ್ದೇಶನ. ಸಾಮಾಜಿಕ ಮಾಧ್ಯಮ ಟಿಕ್ ಟಾಕ್ ಮೇಲೆ ವಿಧಿಸಿದ್ದ ನಿರ್ಬಂಧ ತೆಗೆದು ಹಾಕುವ ಆದೇಶಕ್ಕೆ ಸಹಿ
- ಫೆ.1ರಿಂದ ಅನ್ವಯವಾಗುವಂತೆ, ಕೆನಡಾ ಮತ್ತು ಮೆಕ್ಸಿಕೊದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಲು ನಿರ್ಧಾರ. ಚೀನಾದಿಂದ ಆಮದಾಗುವ ಸರಕುಗಳ ಮೇಲಿನ ಸುಂಕ ಕಡಿತಕ್ಕೆ ನಕಾರ
- ಅಮೆರಿಕ–ಮೆಕ್ಸಿಕೊ ಗಡಿಯಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಣೆ. ನಿರಾಶ್ರಿತರು ಹಾಗೂ ಆಶ್ರಯ ಕೋರಿ ಬರುವವರ ಮೇಲೆ ನಿರ್ಬಂಧ ಹೇರುವಲ್ಲಿ ವಲಸೆ ಏಜೆಂಟರಿಗೆ ನೆರವಾಗುವುದಕ್ಕಾಗಿ ಸೇನೆ ನಿಯೋಜನೆಗೆ ನಿರ್ಧಾರ. 'ಅಮೆರಿಕ ನಿರಾಶ್ರಿತರ ಪ್ರವೇಶ ಕಾರ್ಯಕ್ರಮ' ತಾತ್ಕಾಲಿಕ ಸ್ಥಗಿತ
- 'ಜನ್ಮದಿಂದಾಗಿ ಸಿಗುವ ಅಮೆರಿಕ ಪೌರತ್ವದ ಹಕ್ಕು' ನೀತಿಯನ್ನು ತೆಗೆದು ಹಾಕಲು ಟ್ರಂಪ್ ಯೋಜಿಸಿದ್ದಾರೆ. ಆದರೆ ಈ ಹಕ್ಕು, ಅಮೆರಿಕ ಸಂವಿಧಾನದಲ್ಲಿಯೇ ಅಡಕವಾಗಿರುವ ಕಾರಣ ಇದನ್ನು ರದ್ದುಪಡಿಸುವ ಆದೇಶ ಊರ್ಜಿತವಾಗುವುದು ಅನುಮಾನ

ಶೇ 100ರಷ್ಟು ಸುಂಕ–ಎಚ್ಚರಿಕೆ

ಬ್ರಿಕ್ಸ್ ರಾಷ್ಟ್ರಗಳು, ಡಾಲರ್‌ಗೆ ಪರ್ಯಾಯ ಕರೆನ್ಸಿಯನ್ನು ಚಲಾವಣೆಗೆ ತರುವ ಪ್ರಯತ್ನ ಮಾಡಿದಲ್ಲಿ, ಅವುಗಳ ಮೇಲೆ ಶೇ 100ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ.

ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾತನಾಡಿದ ಅವರು, 'ಪರ್ಯಾಯ ವ್ಯವಸ್ಥೆ ತರಲು ಬ್ರಿಕ್ಸ್ ರಾಷ್ಟ್ರಗಳು ಮುಂದಾದಲ್ಲಿ, ಆಕ್ಷೇಪವೇನಿಲ್ಲ. ಆದರೆ, ಆ ರಾಷ್ಟ್ರಗಳು ಅಮೆರಿಕದೊಂದಿಗೆ ನಡೆಸುವ ವ್ಯವಹಾರಗಳ ಮೇಲೆ ಕನಿಷ್ಠ ಶೇ100ರಷ್ಟು ಸುಂಕ ವಿಧಿಸಲಾಗುವುದು' ಎಂದು ಹೇಳಿದ್ದಾರೆ.

ಭಾರತ, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್ ಹಾಗೂ ಯುಎಇ, ಬ್ರಿಕ್ಸ್‌ನ ಸದಸ್ಯ ರಾಷ್ಟ್ರಗಳು.

ವ್ಯಾನ್ಸ್ ಪತ್ನಿ ಉಷಾರನ್ನು ಹೊಗಳಿದ ಟ್ರಂಪ್

ಜೆ.ಡಿ.ವ್ಯಾನ್ಸ್ ಪತ್ನಿ, ಭಾರತ ಮೂಲದ ಉಷಾ ಚಿಲಕೂರಿ ವ್ಯಾನ್ಸ್ ಅವರನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಗಳಿಸಿದ್ದಾರೆ.

'ಉಷಾ ಬುದ್ಧಿವಂತೆ. ಆಕೆಯನ್ನೇ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿಕೊಳ್ಳಬಹುದಿತ್ತು. ಆದರೆ, ಪರಂಪರೆ ಇದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ. ಉಷಾ ಪಾಲಕರು ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ವಡ್ಲೂರಿನವರು. ನಂತರ ಅಮೆರಿಕಕ್ಕೆ ವಲಸೆ ಹೋಗಿ, ಅಲ್ಲಿಯೇ ನೆಲಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಶ್ರೀಹರಿ ಬೋರೇಗೌಡ

೧೯.೬೨-೨೦.೨೫

ಕ್ಯಾನರೀಸ್ ಸಂಸ್ಥೆಯ ಮಾಜಿ ನಿರ್ದೇಶಕರು ಮತ್ತು ಸಿಟಿಒ

ಕ್ಯಾನರೀಸ್ ಸಂಸ್ಥೆಯ ಮಾಜಿ ನಿರ್ದೇಶಕರು ಮತ್ತು ಸಿಟಿಒ ಮಾನ್ಯ ಶ್ರೀ ಶ್ರೀಹರಿ ಬೋರೇಗೌಡ ಅವರು ೧೯. ೧. ೨೦೨೫ ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅವರ ನಿಧನಕ್ಕೆ ಕ್ಯಾನರೀಸ್ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗವು ಮೃತರ ಕುಟುಂಬ ಮತ್ತು ಸ್ನೇಹಿತರಿಗೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

11TH DEATH ANNIVERSARY

M. Ramachandra Rao Sindhya

Rtd. Inspector of Police

Dads holds our hands for a little while and holds our heart forever. We love every moment spent with you.

from: Sindhya Brothers, Gubbi, Tumkur Dist. Ph: 7019912316

1ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಗೋಪಮ್ಮ

ಕೀರ್ತಿಶೇಷ ಹನುಮಂತಪ್ಪನವರ ಧರ್ಮಪತ್ನಿ

ಜನನ: 10.01.1947 ನಿಧನ: 22.01.2024

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾಯಿತು, ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚಹಸಿರಾಗುಳಿದಿದೆ, ಅನುದಿನವೂ, ಅನುಕ್ಷಣವೂ ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ.

ಸದಾ ನಿಮ್ಮ ಸ್ಮರಿಸುವ:

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಬಂಧು–ಮಿತ್ರರು.

ಕಮ್ಮಸಂದ್ರ, ಆನೇಕಲ್ ತಾಲ್ಲೂಕು.

ಮೌಲ್ಯಯುತ ಐ.ಟಿ ಬ್ರ್ಯಾಂಡ್: ಆಕ್ಸೆಂಚರ್ ಪ್ರಥಮ

ಟಿಸಿಎಸ್‌ಗೆ ಎರಡನೇ ಸ್ಥಾನ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಟ್ಟದಲ್ಲಿ ಐ.ಟಿ ಸೇವಾ ವಲಯದ ಅತ್ಯಂತ ಮೌಲ್ಯಯುತ ಬ್ರ್ಯಾಂಡ್‌ಗಳಲ್ಲಿ ದೇಶದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಇನ್ಫೊಸಿಸ್, ಎಚ್‌ಸಿಎಲ್ ಟೆಕ್ನಾಲಜೀಸ್, ವಿಪ್ರೊ ಮತ್ತು ಟೆಕ್ ಮಹೀಂದ್ರ ಕಂಪನಿಗಳು ಸ್ಥಾನ ಪಡೆದಿವೆ.

ಈ ಕುರಿತು ಬ್ರ್ಯಾಂಡ್ ಮೌಲ್ಯಮಾಪನ ಸಲಹಾ ಸಂಸ್ಥೆಯಾದ ಬ್ರ್ಯಾಂಡ್ ಫೈನಾನ್ಸ್ ಮಂಗಳವಾರ ವರದಿಯನ್ನು ಬಿಡುಗಡೆ ಮಾಡಿದೆ.

ವಿಶ್ವದ ಅತ್ಯಂತ ಮೌಲ್ಯಯುತ ಬ್ರ್ಯಾಂಡ್‌ಗಳ ಪಟ್ಟಿಯಲ್ಲಿ ಸತತ ಏಳನೇ ಬಾರಿಗೆ ಆಕ್ಸೆಂಚರ್ ಕಂಪನಿಯು ಅಗ್ರಸ್ಥಾನ ಕಾಯ್ದುಕೊಂಡಿದೆ. ಟಿಸಿಎಸ್ ಕಂಪನಿಯು ಸತತ ನಾಲ್ಕನೇ ವರ್ಷವೂ ದ್ವಿತೀಯ ಸ್ಥಾನವನ್ನು ಉಳಿಸಿಕೊಂಡಿದೆ.

ಎಚ್‌ಸಿಎಲ್ ಟೆಕ್ನಾಲಜೀಸ್ ಕಂಪನಿಯು 2025ರಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಐ.ಟಿ ಕಂಪನಿಯಾಗಿ ಹೊರಹೊಮ್ಮಿದೆ. ಕಳೆದ ಐದು ವರ್ಷಗಳಲ್ಲಿ ಅತಿಹೆಚ್ಚು ವಾರ್ಷಿಕ ಬೆಳವಣಿಗೆ ದರ ದಾಖಲಿಸಿದ ಕಂಪನಿಗಳ ಪೈಕಿ ಇನ್ಫೊಸಿಸ್ ಮೊದಲ ಸ್ಥಾನ ಪಡೆದಿದೆ.

ಅತಿಹೆಚ್ಚು ಬ್ರ್ಯಾಂಡ್ ಮೌಲ್ಯ ಹೊಂದಿದ ರಾಷ್ಟ್ರಗಳ ಪಟ್ಟಿಯಲ್ಲಿ ಅಮೆರಿಕ ಅಗ್ರಸ್ಥಾನ ಪಡೆದಿದೆ. ಒಟ್ಟು ಬ್ರ್ಯಾಂಡ್ ಮೌಲ್ಯದ ಪಾಲು ಶೇ 40ರಷ್ಟಿದೆ. ಶೇ 36ರಷ್ಟು ಪಾಲು ಹೊಂದಿರುವ ಭಾರತವು ದ್ವಿತೀಯ ಸ್ಥಾನ ಪಡೆದಿದೆ.

ಹೆಕ್ಸಾವೇರ್ ಟೆಕ್ನಾಲಜೀಸ್ ಕಂಪನಿಯು ವಿಶ್ವದ ಪ್ರಮುಖ 25 ಐ.ಟಿ ಸೇವಾ ಕಂಪನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಕಳೆದ ಎರಡು ವರ್ಷಗಳಲ್ಲಿ ಹಣದುಬ್ಬರ, ಅತಿಹೆಚ್ಚು ಬಡ್ಡಿದರದಿಂದಾಗಿ ಕಾರ್ಪೊರೇಟ್ ವೆಚ್ಚ ಪ್ರಮಾಣವು ಮಂದಗತಿಯಲ್ಲಿತ್ತು. ಕೃತಕ ಬುದ್ಧಿಮತ್ತೆ ಮಾರುಕಟ್ಟೆಯ ವಿಸ್ತರಣೆಯಾಗಿದೆ. ಇದರಿಂದ ಎ.ಐ ಸಂಬಂಧಿತ ಸೇವೆಗಳನ್ನು ಪಡೆಯಲು ಐ.ಟಿ ಕಂಪನಿಗಳಿಗೆ ನೆರವಾಗಿದೆ ಎಂದು ವರದಿ ಹೇಳಿದೆ.

ಐ.ಟಿ ಕಂಪನಿಗಳ ಬ್ರ್ಯಾಂಡ್ ಮೌಲ್ಯ



ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45000-49000
ಶಿವಮೊಗ್ಗ	
ಬೆಟ್ಟೆ	47514-56399
ಗೊರಬಲು	18011-32089
ರಾಶಿ	30009-51199
ಸರಕು	42009-86210
ಶಿರಸಿ	
ಬೆಟ್ಟೆ	28199-39199
ಬಿಳಿಗೋಟು	20009-30399
ಚಾಲಿ	34199-39469
ಕೆಂಪುಗೋಟು	10709-23508
ರಾಶಿ	42010-48699
ಯಲ್ಲಾಪುರ	
ಅಪಿ	58919-71399
ಬಿಳಿಗೋಟು	11899-27911
ಚಾಲಿ	28469-40051
ಕೋಕ	4800-16899
ಕೆಂಪುಗೋಟು	12899-27766

ಮಸ್ಕ್ ಹಾವಭಾವ: ಚರ್ಚೆಗೆ ಗ್ರಾಸ

ವಾಷಿಂಗ್ಟನ್ (ಎಎಫ್‌ಪಿ): ಡೊನಾಲ್ಡ್ ಟ್ರಂಪ್ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ, ಉದ್ಯಮಿ ಇಲಾನ್ ಮಸ್ಕ್ ತೋರಿದ ಹಾವಭಾವ ಈಗ ವಿವಾದಕ್ಕೆ ಎಡೆಯಾಗಿದೆ. 'ನಾಜಿ' ಎಂದು ಕೆಲವರು, ಪ್ರತಿಗಾಮಿ ನಡೆ ಎಂದು ಇನ್ನೂ ಕೆಲವರು ಮಸ್ಕ್ ಅವರ ವರ್ತನೆಯನ್ನು ಟೀಕಿಸಿದ್ದಾರೆ.

'ಎಕ್ಸ್', 'ಸ್ಪೇಸ್ ಎಕ್ಸ್', 'ಟೆಸ್ಲಾ' ಸಿಇಒ ಆದ ಮಸ್ಕ್, ಅಧಿಕಾರ ಸ್ವೀಕಾರ ನಿಮಿತ್ತ ಇಲ್ಲಿನ ಕ್ಯಾಪಿಟಲ್ ಒನ್ ಅರೆನಾದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಸಂಭ್ರಮಿಸಿ ಹಾವಭಾವ ತೋರಿದ್ದರು.

ಟ್ರಂಪ್ ಅವರು ಮರಳಿ ಶ್ವೇತಭವನ ಪ್ರವೇಶಿಸುವ ಸಂದರ್ಭಕ್ಕಾಗಿ ಜನಸ್ತೋಮಕ್ಕೆ ಕೃತಜ್ಞತೆ ಸಲ್ಲಿಸುವಾಗ, ಎದೆಯ ಬಲಭಾಗಕ್ಕೆ ಬಲಗೈನಿಂದ ತಟ್ಟಿ, ಕೈ ಎತ್ತಿ ಹಸ್ತ ತೋರಿದ್ದರು. ಮತ್ತೆ ತಿರುಗಿ, ವೇದಿಕೆಯ ಹಿಂಭಾಗ ಕುಳಿತಿದ್ದ ಸಭಿಕರತ್ತ ತಿರುಗಿ ಇದನ್ನು ಪುನರಾವರ್ತಿಸಿದ್ದರು.

ನಾಜಿ ಸಿದ್ಧಾಂತ ಕುರಿತು ಅಧ್ಯಯನ ನಡೆಸಿರುವ ಇತಿಹಾಸಕಾರ ಕ್ಲೇರ್ ಔಬಿನ್ ಅವರು, ಇದನ್ನು 'ನಾಜಿ ಶೈಲಿಯ ನಮಸ್ಕಾರ' ಎಂದು ವ್ಯಾಖ್ಯಾನಿಸಿದರು.

'ನನ್ನ ವೃತ್ತಿ ಅನುಭವದ ಪ್ರಕಾರ, ನಿಮ್ಮ ಎಲ್ಲರ ಅಭಿಪ್ರಾಯ ಸರಿ. ನೀವು ನಿಮ್ಮ ಕಣ್ಣುಗಳನ್ನು ಮಾತ್ರ ನಂಬಬೇಕು' ಎಂದು ಔಬಿನ್ ಪ್ರತಿಕ್ರಿಯಿಸಿದ್ದಾರೆ.

ಇದಕ್ಕೆ 'ಎಕ್ಸ್'ನಲ್ಲಿ ಮಸ್ಕ್ ಪ್ರತಿಕ್ರಿಯಿಸಿದ್ದಾರೆ. 'ನನ್ನ ವಿರೋಧಿಗಳಿಗೆ ಇನ್ನಷ್ಟು ಕೆಟ್ಟ ತಂತ್ರಗಳ ಅಗತ್ಯವಿದೆ. 'ಎಲ್ಲರೂ ಹಿಟ್ಲರ್‌ಗಳು' ಎಂದಿದ್ದಾರೆ.

ಸಂಸದ ಜಿಮ್ಮಿ ಗೊಮೆಜ್ ಅವರು, ಇದು ತುಂಬ ದಿನ ನಡೆಯದು ಎಂದು ಹೇಳಿದ್ದರೆ, ಸಂಭ್ರಮಾಚರಣೆ ರ‍್ಯಾಲಿ ಭಾಗವಹಿಸಿದ್ದವರು 'ಅದೊಂದು ಹಾಸ್ಯದ ನಡೆ' ಎಂದಿದ್ದಾರೆ.

ವಾಷಿಂಗ್ಟನ್‌ನಲ್ಲಿ ನಡೆದ ಸಮಾರಂಭದಲ್ಲಿ ಇಲಾನ್ ಮಸ್ಕ್ ಅವರ ಹಾವಭಾವ– ಎಎಫ್‌ಪಿ ಚಿತ್ರ

'ಅಮೆರಿಕದ ಸರಕಿಗೂ ಅಧಿಕ ಸುಂಕ ವಿಧಿಸಿ'

ನವದೆಹಲಿ (ಪಿಟಿಐ): ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರವು ಅಧಿಕ ಸುಂಕ ವಿಧಿಸಿದರೆ, ಇದಕ್ಕೆ ಪ್ರತೀಕಾರವಾಗಿ ಅಲ್ಲಿಂದ ದೇಶಕ್ಕೆ ಪೂರೈಕೆಯಾಗುವ ಸರಕುಗಳ ಮೇಲೂ ಕೇಂದ್ರ ಸರ್ಕಾರವು ಹೆಚ್ಚಿನ ಸುಂಕ ವಿಧಿಸಬೇಕು ಎಂದು ವ್ಯಾಪಾರ ವಲಯದ ತಜ್ಞರು ಒತ್ತಾಯಿಸಿದ್ದಾರೆ.

2018ರಲ್ಲಿ ಅಮೆರಿಕವು ಭಾರತದಿಂದ ರಫ್ತು ಮಾಡಿದ ಉಕ್ಕು ಮತ್ತು ಅಲ್ಯೂಮಿನಿಯಂನ ಕೆಲವು ಉತ್ಪನ್ನಗಳ ಮೇಲೆ ಸುಂಕ ವಿಧಿಸಿತ್ತು. ಇದಕ್ಕೆ ಪ್ರತೀಕಾರ ಎಂಬಂತೆ ಭಾರತವು, ಅಮೆರಿಕದ 29 ಸರಕುಗಳ ಮೇಲೆ ಸುಂಕ ವಿಧಿಸಿತ್ತು.

ಸುಂಕ ಎಷ್ಟು?: ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) 2023ರ ವಿಶ್ವ ಸುಂಕ ವಿವರದ ಪ್ರಕಾರ, ಅಮೆರಿಕವು ವಿದೇಶಿ ಉತ್ಪನ್ನಗಳ ಮೇಲೆ ಹೆಚ್ಚು ಸುಂಕ ವಿಧಿಸಿದೆ.

ಹೈನುಗಾರಿಕೆ ಉತ್ಪನ್ನಗಳ ಮೇಲೆ ಶೇ 188ರಷ್ಟು ಸುಂಕ ಹೇರಿತ್ತು.

ಹಣ್ಣು ಮತ್ತು ತರಕಾರಿಗಳು (ಶೇ 132), ಕಾಫಿ, ಟೀ, ಕೋಕಾ ಮತ್ತು ಮಸಾಲೆ ಪದಾರ್ಥಗಳು (ಶೇ 53), ಧಾನ್ಯಗಳು ಮತ್ತು ಆಹಾರ ಪದಾರ್ಥಗಳು (ಶೇ 193), ಎಣ್ಣೆಕಾಳು, ಕೊಬ್ಬು ಮತ್ತು ಎಣ್ಣೆ (ಶೇ 164), ಬ್ರಿವರೇಜಸ್ ಮತ್ತು ತಂಬಾಕು (ಶೇ 150), ಮೀನು ಮತ್ತು ಮೀನಿನ ಉತ್ಪನ್ನಗಳು (ಶೇ 35), ಖನಿಜ ಮತ್ತು ಲೋಹಗಳು (ಶೇ 187) ಮತ್ತು ರಾಸಾಯನಿಕ ವಸ್ತುಗಳ ಮೇಲೆ (ಶೇ 56ರಷ್ಟು) ಅಧಿಕ ಸುಂಕ ವಿಧಿಸಿತ್ತು.

ಟರ್ಕಿ: ಹೋಟೆಲ್‌ನಲ್ಲಿ ಬೆಂಕಿ–66 ಸಾವು

ಅಂಕಾರಾ (ಎಪಿ): ವಾಯವ್ಯ ಟರ್ಕಿಯ ಪ್ರಸಿದ್ಧ ಸ್ಕಿ ರೆಸಾರ್ಟ್‌ನ ಹೋಟೆಲ್‌ನಲ್ಲಿ ಮಂಗಳವಾರ ಅಗ್ನಿ ಅವಘಡ ಸಂಭವಿಸಿದ್ದು, ಕನಿಷ್ಠ 66 ಮಂದಿ ಮೃತಪಟ್ಟಿದ್ದಾರೆ.

ದುರಂತದಲ್ಲಿ ಕನಿಷ್ಠ 51 ಮಂದಿ ಗಾಯಗೊಂಡಿದ್ದಾರೆ ಎಂದು ಗೃಹ ಸಚಿವ ಆಲಿ ಎರ್ಲಿಕಯಾ ತಿಳಿಸಿದ್ದಾರೆ.

'ರೆಸ್ಟೋರೆಂಟ್‌ನ 12ನೇ ಮಹಡಿಯಲ್ಲಿರುವ ಗ್ರಾಂಡ್ ಕರ್ತಾಲ್ ಹೋಟೆಲ್‌ನಲ್ಲಿ ಮುಂಜಾನೆ 3.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ಘಟನೆ ಸಂದರ್ಭದಲ್ಲಿ 234 ಅತಿಥಿಗಳು ಹೋಟೆಲ್‌ನಲ್ಲಿ ಇದ್ದರು. ಗಾಬರಿಗೊಂಡು ಕಟ್ಟಡದಿಂದ ಜಿಗಿದಿದ್ದರಿಂದ ಇಬ್ಬರು ಸಾವಿಗೀಡಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

ಅಗ್ನಿ ಅವಘಡಕ್ಕೆ ಕಾರಣ ಏನೆಂಬ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆಗಾಗಿ ಆರು ಪ್ರಾಸಿಕ್ಯೂಟರ್‌ಗಳನ್ನು ಸರ್ಕಾರ ನೇಮಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಬೇಕಾಗಿದ್ದಾರೆ

ಕರ್ನಾಟಕ ಸರ್ಕಾರಿ ಸ್ವಾಮ್ಯದ ಇಲಾಖೆಯಲ್ಲಿ ಬೆಂಗಳೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು, ಜಿಲ್ಲೆಗಳಲ್ಲಿ ಕೋಷ್ಠಕದಲ್ಲಿ ನಮೂದಿಸಿರುವ ವಿವಿಧ ಹುದ್ದೆಗಳಿಗೆ ಸಂಪೂರ್ಣವಾಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅಭ್ಯರ್ಥಿಗಳು ಬೇಕಾಗಿದ್ದಾರೆ.

Designation	No of Post	Qualification	Experience	Salary
IT Cum Mis Expert	01	BE-IT/CS/IS, MCA	3 years IT-MIS Handling	75000
Livelihood Expert Cum IEC Co Ordinator	01	MSC (AGRI) in Agriculture Economics/Agriculture Marketing	3 years (Implementation of livelihood activities)	75000
Gis & Rs Consultant	01	MSC Geology or applied Geology or Diploma in GIS	3 years (GIS & RS related field)	65000
Meld and Documentation Coordinator	01	MSC in Agril.Extension/Agri Economics with Computer Knowledge	5 years (RD and other related field)	75000
Account Cum Deo	16	BCOM	3 YEARS (Computer Knowledge)	22000-25000
Deo	14	ANY DEGREE	CERTIFICATE WITH BASIC COMPUTER	18425-20000
D Group	02	7thSTANDARD		15912
Cepmiz Coordinator	15	BSC (AGRI)/BSC (HORTI)/MSW/ANY OTHER DEGREE	3 years (WATERSHED/Natural Resource Management works)	35000
Watershed Assistant (1for 2000 Ha(+/-), In Plain Areas) (As Per TDPR)	123	Diploma in Agriculture	3years (watershed Programmers/Agriculture Department Programmers)	15000

E-mail:ksf9hr2@gmail.com
Whatsapp: 9980061341/9916033352
ಕಛೇರಿ : 080–23185599

ಆಸಕ್ತಿವುಳ್ಳವರು ಸ್ವವಿವರವನ್ನು ಈ ಕೆಳಗಿನ email or whatsapp ಗೆ ಕಳುಹಿಸಿ
MR ಗ್ರೂಪ್, "MR ಮ್ಯಾನ್ಸನ್", ಸಂಖ್ಯೆ :26–34/4, 3 ನೇ ಮುಖ್ಯರಸ್ತೆ ಕಲಾಗ್ರಾಮದ ಎದುರು, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಬೆಂಗಳೂರು–560056

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್

ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

@ 2244/-* FOR 15 WORDS

www.dhclassifieds.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9845114560 9901641752

*Conditions apply

General

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, TVSಗಳಿಗೆ SSLC, PUC,Degree, ITI,Diplomaದವರು. 18,000/- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9902643405

ಬೇಕಾಗಿದ್ದಾರೆ: ಬೆಂಗಳೂರಿನ ಜಯನಗರದಲ್ಲಿ Office Attender (ಪುರುಷ) ಕೆಲಸಕ್ಕೆ ವಿದ್ಯಾರ್ಹತೆ SSLC, 25-30 ವರ್ಷಗಳ ಒಳಗಿರುವವರು, ಉಚಿತ ವಸತಿ ಸಂಬಳ: 15,000/- ಸಂಪರ್ಕಿಸಿ: 9900839393 / 9844889394.

HIRING O&M staff for Airtel Salary: 20-25k. Relevant experience required. Call 9008199996

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ ಬೇಕಾಗಿದ್ದಾರೆ. ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ: 17-25 ಸಾವಿರ. ಊಟ+ವಸತಿ ಸೌಲಭ್ಯ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ರಾತ್ರಿ8. ಸಂ: 8050666007/ 9880266007

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಪ್ರವಾಸ

Travel

ಮಹಾಕುಂಭಮೇಳ ಸ್ಪೆಷಲ್: ವಿಮಾನದಲ್ಲಿ 14.2.2025 20.2.2025 ರಿಂದ 6ದಿನಗಳು ಪ್ರಯಾಗ್ ರಾಜ್,ಕಾಶಿ ಅಯೋಧ್ಯ,ಗಯಾ. ಚಾರ್ ಧಾಮ್ ಸ್ಪೆಷಲ್ ಯಾತ್ರೆ : 24.4.2025, 13.5.2025 ರಿಂದ 14ದಿನಗಳು,ಕೇದಾರನಾಥ್ ಬದರಿನಾಥ್(ಪುಷ್ಕರ ಸರಸ್ವತಿ ನದಿಸ್ನಾನ)ಯಮುನೋತ್ರಿ ಗಂಗೋತ್ರಿ,ಇತ್ಯಾದಿ. ಸಂಪರ್ಕಿಸಿ: ಕೆಪಿ.ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು.9741024122 9740311411.

Travel Agencies

ಕಮಾಕ್ಯ ಶಕ್ತಿಪೀಠ ಪ್ರವಾಸ 8 ದಿನಗಳು 11/2/25, ಮಧ್ಯಪ್ರದೇಶ 4 ದಿನಗಳು 6/2/25, ಗುಜರಾತ್ 8 ದಿನಗಳು 12/2/25 ಸುವರ್ಣಯಾತ್ರ 9019462508/ 6360146483

EDUCATION

To Place your Classified Ads Contact: 9845114560

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದನ್, ಊರು ತಿಳಿಸಿಲ್ಲ.

- **ಪ್ರಶ್ನೆ:** ನಾನು ಸರ್ಕಾರಿ ಉದ್ಯೋಗಿಯಾಗಿದ್ದು, ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದೇ? ನಿಯಮಗಳ ಬಗ್ಗೆ ಮಾಹಿತಿ ನೀಡಿ.

ಉತ್ತರ: ಸರ್ಕಾರಿ ಉದ್ಯೋಗದಲ್ಲಿರುವ ವ್ಯಕ್ತಿಗಳು ಷೇರುಪೇಟೆಯಲ್ಲಿ ಹೂಡಿಕೆ ಮಾಡಲು ಕೆಲವು ನಿರ್ಬಂಧಗಳಿವೆ. ಈ ನಿರ್ಬಂಧ ಸರ್ಕಾರಿ ಉದ್ಯೋಗಿಯ ಪತಿ, ಪತ್ನಿ, ಮಕ್ಕಳಿಗೂ ಇದೆ ಎನ್ನುವುದು ಗಮನಾರ್ಹ ವಿಚಾರ. ಕರ್ನಾಟಕ ನಾಗರಿಕ ಸೇವಾ ನಿಯಮಗಳು–1966) ಅಥವಾ ಕೇಂದ್ರ ನಾಗರಿಕ ಸೇವಾ ನಿಯಮಗಳು–1964ರ ಅನ್ವಯ ಈ ನಿಷೇಧ ಹೇರಲಾಗಿದೆ. ಇದರಂತೆ ಯಾವುದೇ ಸರ್ಕಾರಿ ಉದ್ಯೋಗಿಗಳು ಷೇರು ಅಥವಾ ಇತರೆ ಹೂಡಿಕೆ ಉತ್ಪನ್ನದಲ್ಲಿ ಸ್ಪೆಕ್ಯುಲೇಟಿವ್ (ತ್ವರಿತ ದರ ಏರಿಳಿತ) ರೂಪದಲ್ಲಿರುವ ವ್ಯವಹಾರಗಳಲ್ಲಿ ತೊಡಗಿಸುವುದನ್ನು ನಿರ್ಬಂಧಿಸಲಾಗಿದೆ. ಈ ನಿಯಮವು ಕೇಂದ್ರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶದ ಅಡಿ ಬರುವ ಇಲಾಖೆಗಳಲ್ಲಿ ಉದ್ಯೋಗ ಮಾಡುವ ಎಲ್ಲಾ ನೌಕರರಿಗೂ ಆಯಾ ಪ್ರಾದೇಶಿಕ ನಿಯಮಗಳಂತೆ ಅನ್ವಯಿಸುತ್ತದೆ.

ಆದರೆ, ಕೇವಲ ಹೂಡಿಕೆಯ ದೃಷ್ಟಿಯಿಂದ ಮಾಡುವ ವ್ಯವಹಾರ ಇದರಲ್ಲಿ ಒಳಗೊಳ್ಳುವುದಿಲ್ಲ. ಕೆಲವೊಂದು ರೀತಿಯ ಹೂಡಿಕೆಗಳಿಗೆ ರಿಯಾಯಿತಿ ನೀಡಲಾಗಿದೆ. ಉದಾಹರಣೆಗೆ ಹಂತ ಹಂತವಾಗಿ ಷೇರುಗಳನ್ನು ದೀರ್ಘಾವಧಿಗಾಗಿ ಖರೀದಿಸಿ ಕೆಲವು ವರ್ಷಗಳ ಬಳಿಕ ಮಾರಾಟ ಮಾಡಿದಾಗ ಅದು ಹೂಡಿಕೆ ಎಂದೇ ಪರಿಗಣಿಸಲ್ಪಡುತ್ತದೆ.

ದೀರ್ಘಾವಧಿಗೆ ಷೇರುಗಳಲ್ಲದೆ ಎಸ್‌ಐಪಿ, ಗೋಲ್ಡ್ ಬಾಂಡ್, ಆರ್‌ಬಿಐ ಬಾಂಡ್ ಮತ್ತು ಅಂತಹ ಇತರೆ ಹೂಡಿಕೆಗಳನ್ನೂ ಮಾಡಬಹುದು. ಈ ಬಗ್ಗೆ ಅಗತ್ಯ ಬಿದ್ದಲ್ಲಿ ಸಂಬಂಧಿತ ಉನ್ನತ ಅಧಿಕಾರಿಗಳಿಗೂ ನೀವು ಲಿಖಿತ ರೂಪದಲ್ಲಿ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳುವುದು ಸೂಕ್ತ. ನಿಷೇಧಿತ ವ್ಯವಹಾರಗಳಲ್ಲಿ ಅಲ್ಪಾವಧಿಗೆ ಷೇರು ಖರೀದಿ-ಮಾರಾಟ, ಕರೆನ್ಸಿ ಹಾಗೂ ಕಮೋಡಿಟಿ ವಹಿವಾಟು, ಫ್ಯೂಚರ್ಸ್ ಮತ್ತು ಆಪ್ಶನ್ ವ್ಯವಹಾರ ಅಥವಾ ಇಂಟ್ರಾಡೇ ಟ್ರೇಡಿಂಗ್ ಇತ್ಯಾದಿಗಳು ಇಲ್ಲಿ ಬಹುಮುಖ್ಯವಾಗಿ ಒಳಗೊಳ್ಳುತ್ತವೆ.

ನಿಮ್ಮ ಹೂಡಿಕೆಗಳಿಗೂ ಆರ್ಥಿಕ ಮಿತಿ ಇದೆ. 2019ರ ತಿದ್ದುಪಡಿಯಂತೆ ಕ್ಯಾಲೆಂಡರ್ ವರ್ಷದಲ್ಲಿ ಯಾವುದೇ ವರ್ಗದ ನೌಕರರಾಗಿದ್ದರೂ ತಮ್ಮ ಮೂಲ ವೇತನದ 6 ಪಟ್ಟು ಮೊತ್ತ ಹೂಡಿಕೆಗೆ ಮುಕ್ತ ಅವಕಾಶವಿದೆ. ಇನ್ನೂ ಹೆಚ್ಚಿನ ಹೂಡಿಕೆ ಇದ್ದರೆ, ಅದನ್ನು ವರ್ಷಾಂತ್ಯದ ಬಳಿಕ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು.

ಜಿ. ಪ್ರಸನ್ನಕುಮಾರ್, ಮೂಡಲಪಾಳ್ಯ, ಬೆಂಗಳೂರು.

- **ಪ್ರಶ್ನೆ:** ನಾನು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯ ನೌಕರ. ಕಂಪನಿಯ ಉದ್ಯೋಗ ನಿಯಮದಂತೆ ನಮಗೆ ಪ್ರತಿವರ್ಷ ರಜಾ ಪ್ರವಾಸ ಕೈಗೊಳ್ಳುವ ಬಗ್ಗೆ ವೇತನದೊಂದಿಗೆ ಸುಮಾರು ₹75 ಸಾವಿರ ಭತ್ಯೆ ನೀಡಲಾಗುತ್ತದೆ. ಇದಕ್ಕೆ ಪ್ರವಾಸ ಕೈಗೊಂಡು ಬಿಲ್ ಸಹಿತ ತೆರಿಗೆ ರಿಯಾಯಿತಿ ಪಡೆಯಬಹುದು ಎಂದು ತಿಳಿದಿದ್ದೇನೆ.

ನಾನು ಹೊಸ ತೆರಿಗೆ ಪದ್ಧತಿಯಡಿ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ಇದರಡಿ ನನಗೆ ಒಟ್ಟಾರೆ ತೆರಿಗೆ ಉಳಿತಾಯವಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ ಈ ಭತ್ಯೆಗೆ ತೆರಿಗೆ ರಿಯಾಯಿತಿ ಪಡೆಯುವ ಸಾಧ್ಯತೆ ಇದೆಯೇ ಅಥವಾ ಪ್ರವಾಸ ಕೈಗೊಂಡರೂ ತೆರಿಗೆ ಕಟ್ಟಬೇಕಾಗುತ್ತದೆಯೇ? ರಿಯಾಯಿತಿ ಇಲ್ಲವೇ? ತಿಳಿಸಿಕೊಡಿ.

ಉತ್ತರ: ನೀವು ಆದಾಯ ತೆರಿಗೆ ಸೆಕ್ಷನ್ 115ಬಿಎಸಿ ಅಡಿ ರಿಟರ್ನ್ಸ್ ಸಲ್ಲಿಸುತ್ತಿರುವ ಬಗ್ಗೆ ಹೇಳಿದ್ದೀರಿ. ಇದು ಹೊಸ ತೆರಿಗೆ ಪದ್ಧತಿಯಾಗಿದೆ. ತೆರಿಗೆ ದರ ನಿಗದಿ ಮಾಡುವಾಗ ಅನೇಕ ಮಟ್ಟದ ತೆರಿಗೆ ದರವನ್ನು ಈ ಪದ್ಧತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಹಜವಾಗಿ ತೆರಿಗೆ ಉಳಿಸುವ ಅವಕಾಶ ಈ ಪದ್ಧತಿಯಡಿ ಇರುವುದರಿಂದ ಬಹುತೇಕ ತೆರಿಗೆ ರಿಯಾಯಿತಿಗಳನ್ನು ಈ ಕಾರಣಕ್ಕೆ ಕೈಬಿಡಲಾಗಿದೆ.

ಆದಾಯ ತೆರಿಗೆಯ ಸೆಕ್ಷನ್ 10(5) ಅಡಿ ರಜಾ ಸಂಬಂಧಿತ ವೇತನ ಪಾವತಿಗೆ ಸಂಬಂಧಿಸಿದ ರಿಯಾಯಿತಿಗಳನ್ನು ಉಲ್ಲೇಖಿಸಲಾಗಿದೆ. ನಾಲ್ಕು ವರ್ಷದ ಬ್ಲಾಕ್ ಅವಧಿಯಲ್ಲಿ ಎರಡು ಬಾರಿ ಹಳೆಯ ತೆರಿಗೆ ಪದ್ಧತಿ ಅನುಸರಿಸುವವರಿಗೆ ಈ ರಿಯಾಯಿತಿಯ ಲಾಭ ಪಡೆಯಬಹುದು. ಆದರೆ, ಇತರೆ ಎರಡು ವರ್ಷ ಯಾವುದೇ ಅವಕಾಶ ಇಲ್ಲದ ಕಾರಣ ಬರುವ ಮೊತ್ತ ತೆರಿಗೆಗೆ ಒಳಪಡುತ್ತದೆ.

ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡುವವರಿಗೆ ಈ ರಿಯಾಯಿತಿಯಿಂದ ಹೊರಗಿಡಲಾಗಿದೆ. ಹೀಗಾಗಿ, ನಿಮಗೆ ಪ್ರತ್ಯೇಕ ರಿಯಾಯಿತಿ ಸಿಗುವುದಿಲ್ಲ. ನೀವು ನಿಮ್ಮ ಆದಾಯವನ್ನು ಎರಡೂ ಪದ್ಧತಿಯನ್ನು ಅನ್ವಯಿಸಿ ನೋಡಿ. ಒಟ್ಟಾರೆ ತೆರಿಗೆ ಎಷ್ಟು ಬರಬಹುದೆಂಬುದನ್ನು ತಿಳಿದುಕೊಳ್ಳಿ.

ರಾಕೇಶ್, ಹೊಸದುರ್ಗ.

- **ಪ್ರಶ್ನೆ:** ನಾನು ಹೊಸ ಕಾರು ಖರೀದಿಸಬೇಕೆಂದಿದ್ದೇನೆ. ಕೆಲವು ವರ್ಷದ ಹಿಂದೆ ಸರ್ಕಾರ ಬಜೆಟ್‌ನಲ್ಲಿ ಕಾರು ಖರೀದಿಗೆ ಸಂಬಂಧಿಸಿ ಕೆಲವು ತೆರಿಗೆ ರಿಯಾಯಿತಿ ಇದೆ ಎಂದು ಪ್ರಕಟಿದ್ದ ನೆನಪು. ಇದಕ್ಕೆ ಯಾವ ರೀತಿಯ ಕಾರು ಖರೀದಿಸಿದರೆ ಈ ತೆರಿಗೆ ರಿಯಾಯಿತಿ ಸಿಗುತ್ತದೆ. ನಾನು ಬ್ಯಾಂಕ್ ಉದ್ಯೋಗದಲ್ಲಿದ್ದೇನೆ.

ನನ್ನ ವಯಸ್ಸು 45. ನಮ್ಮ ತಂದೆ-ತಾಯಿ ಇರುವ ಹುಬ್ಬಳ್ಳಿಯಲ್ಲಿ ಹೊಸ ಮನೆ ಕಟ್ಟಿಸಿರುತ್ತೇನೆ. ಇದಕ್ಕೆ ಬ್ಯಾಂಕ್ ಸಾಲ ಇದೆ. ನಾನು ಹಳೆಯ ತೆರಿಗೆ ಪದ್ಧತಿಯಡಿ ತೆರಿಗೆ ಕಟ್ಟುತ್ತಿದ್ದೇನೆ. ಅಲ್ಲದೆ ಉದ್ಯೋಗ ವರ್ಗಾವಣೆಯಲ್ಲಿರುವ ಕಾರಣ ಬಾಡಿಗೆ ಮನೆಯಲ್ಲೇ ಪ್ರತಿ ಮೂರರಿಂದ ಐದು ವರ್ಷ ಇರುತ್ತೇನೆ. ಬಾಡಿಗೆ ಭತ್ಯೆ ಹಾಗೂ ತತ್ಸಂಬಂಧಿತ ತೆರಿಗೆ ರಿಯಾಯಿತಿ ಪಡೆಯುತ್ತಿದ್ದೇನೆ. ಈ ಹಿನ್ನೆಲೆ ಇರಿಸಿ ನಾನು ಕಾರು ಖರೀದಿಸಿದರೆ ನನಗೆ ಇನ್ನಷ್ಟು ತೆರಿಗೆ ಉಳಿತಾಯ ಮಾಡುವ ಸಾಧ್ಯತೆ ಇದೆಯೇ? ಈ ಬಗ್ಗೆ ಮಾಹಿತಿ ನೀಡಿ.

ಉತ್ತರ: ನಿಮ್ಮ ಪ್ರಶ್ನೆ ಎಲೆಕ್ಟ್ರಿಕ್ ಕಾರು ಖರೀದಿಗೆ ಸಂಬಂಧಿಸಿ ಸಿಗಬಹುದಾದ ತೆರಿಗೆ ಲಾಭದ ಬಗ್ಗೆ ಆಗಿರುತ್ತದೆ. ಸೆಕ್ಷನ್ 80ಇಇಬಿ ಆರಂಭಗೊಂಡಿದ್ದು 2019ರಲ್ಲಿ. ನಂತರ 2023ರ ಮಾರ್ಚ್ 31ರ ತನಕ ಮಂಜೂರಾದ ಅಧಿಕೃತ ಹಣಕಾಸು ಸಂಸ್ಥೆ, ಬ್ಯಾಂಕ್‌ಗಳಿಂದ ಪಡೆದ ಸಾಲದ ಬಡ್ಡಿಗೆ ಪಾವತಿಗೆ ಸಂಬಂಧಿಸಿ ವಾರ್ಷಿಕವಾಗಿ ₹1.50 ಲಕ್ಷ ತೆರಿಗೆ ಸವಲತ್ತು ಸಿಗುತ್ತಿತ್ತು. ಇಲ್ಲೂ ಹಳೆಯ ತೆರಿಗೆ ಪದ್ಧತಿ ಅನುಸರಿಸುವವರಿಗೆ ಮಾತ್ರ ಈ ಲಾಭ ಪಡೆಯುವ ಅವಕಾಶ ನೀಡಲಾಗಿತ್ತು. ಪ್ರಸ್ತುತ ಈ ತೆರಿಗೆ ಲಾಭ ಜಾರಿಯಲ್ಲಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. **ವಿಳಾಸ:** ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಪತ್ತೆಗೆ ₹1 ಕೋಟಿ ಬಹುಮಾನ ಘೋಷಿಸಲಾಗಿದ್ದ ಕಮಾಂಡರ್ ಜೈರಾಮ್ ಕೂಡ ಹತ

ಎನ್‌ಕೌಂಟರ್: 14 ನಕ್ಸಲರ ಸಾವು

ರಾಯಪುರ (ಎಎಫ್‌ಪಿ): ಛತ್ತೀಸಗಢದಲ್ಲಿ ಮಂಗಳವಾರ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ಉನ್ನತ ಕಮಾಂಡರ್ ಸೇರಿದಂತೆ 14 ಮಂದಿ ನಕ್ಸಲರು ಮೃತಪಟ್ಟಿದ್ದಾರೆ.

'ನಕ್ಸಲರ ವಿರುದ್ಧದ ಕಾರ್ಯಾಚರಣೆಯಲ್ಲಿ ಅತಿ ದೊಡ್ಡಮಟ್ಟದ ಯಶಸ್ಸು ಸಿಕ್ಕಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಮೃತರಲ್ಲಿ ನಕ್ಸಲ್ ಸಂಘಟನೆಯಲ್ಲಿ 'ಛಲಪತಿ' ಎಂದೇ ಖ್ಯಾತಿ ಪಡೆದಿದ್ದ ಕಮಾಂಡರ್ ಜೈರಾಮ್ ಕೂಡ ಮೃತಪಟ್ಟಿದ್ದಾರೆ. ಇವರ ತಲೆಗೆ ಕೇಂದ್ರ, ರಾಜ್ಯ ಸರ್ಕಾರಗಳು ₹1 ಕೋಟಿ ಬಹುಮಾನ ಘೋಷಿಸಿದ್ದವು.

ಛತ್ತೀಸಗಢ- ಒಡಿಶಾ ಗಡಿಭಾಗದಲ್ಲಿರುವ ಗರಿಯಾಬಂದ್ ಜಿಲ್ಲೆಯ ದಟ್ಟ ಅರಣ್ಯದಲ್ಲಿ ನಕ್ಸಲರ ವಿರುದ್ಧ ಸೋಮವಾರದಿಂದಲೇ ಕಾರ್ಯಾಚರಣೆ ನಡೆಸಲಾಗಿತ್ತು. ಸೋಮವಾರವೇ ಇಬ್ಬರು ಮಹಿಳಾ ನಕ್ಸಲರ ಮೃತದೇಹಗಳು ಪತ್ತೆಯಾಗಿದ್ದವು. ಮಂಗಳವಾರ ಮತ್ತಷ್ಟು ಮಂದಿಯ ಮೃತದೇಹಗಳು ಸಿಕ್ಕಿವೆ.

ಕಳೆದ 10 ವರ್ಷಗಳಲ್ಲಿ 10 ಸಾವಿರಕ್ಕೂ ಅಧಿಕ ಮಂದಿ ನಕ್ಸಲರು ಮೃತಪಟ್ಟಿದ್ದಾರೆ. 2024ರಲ್ಲಿಯೇ 287 ಮಂದಿ ನಕ್ಸಲರು ಮೃತಪಟ್ಟಿದ್ದಾರೆ ಎಂದು ಅಧಿಕೃತ ಅಂಕಿಅಂಶ ತಿಳಿಸಿದೆ.

14 ಮಂದಿ ನಕ್ಸಲರ ಸಾವಿನ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಗೃಹ ಸಚಿವ ಅಮಿತ್ ಶಾ, 'ನಕ್ಸಲಿಸಂಗೆ ದೊಡ್ಡ ಹೊಡೆತ ಬಿದ್ದಿದೆ' ಎಂದಿದ್ದಾರೆ. 2026ರ ಮಾರ್ಚ್ ತಿಂಗಳ ಒಳಗಾಗಿ ನಕ್ಸಲ್ ಚಟುವಟಿಕೆಯನ್ನು ಸಂಪೂರ್ಣವಾಗಿ ಮಟ್ಟಹಾಕಲು ಗುರಿ ನಿಗದಿಪಡಿಸಿರುವ ಅವರು, 'ನಕ್ಸಲ್ ಚಟುವಟಿಕೆಯು ಕೊನೆಯುಸಿರೆಳೆಯುತ್ತಿದೆ' ಎಂದು ತಿಳಿಸಿದ್ದಾರೆ.

'ಕಾರ್ಯಾಚರಣೆ ನಡೆದ ಸ್ಥಳಕ್ಕೆ ಹೆಚ್ಚಿನ ಪೊಲೀಸರನ್ನು ಕಳುಹಿಸಲಾಗಿದೆ. ಭದ್ರತಾ ಪಡೆಗಳು ಈಗಲೂ ಕಾಡಿನ ಒಳಭಾಗದಲ್ಲಿವೆ' ಎಂದು ಛತ್ತೀಸಗಢ ಮಾವೋವಾದಿ ನಿಗ್ರಹ ಪಡೆಯ ಮುಖ್ಯಸ್ಥ ವಿವೇಕಾನಂದ ಸಿನ್ಹಾ ತಿಳಿಸಿದರು.

ಯಾರು ಈ ಛಲಪತಿ?

ಪ್ರಜಾವಾಣಿ ವಾರ್ತೆ


ಛಲಪತಿ

ಹೈದರಾಬಾದ್: ಭದ್ರತಾ ಪಡೆಗಳ ಎನ್‌ಕೌಂಟರ್‌ಗೆ ಬಲಿಯಾದ ಕಮಾಂಡರ್ ಜೈರಾಮ್ (60) ಸಾವನ್ನು ನಕ್ಸಲ್ ಚಳವಳಿಗೆ ಉಂಟಾದ ದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಸಂಘಟನೆಯಲ್ಲಿ 'ಛಲಪತಿ' ಎಂದೇ ಖ್ಯಾತಿ ಪಡೆದಿದ್ದ ಅವರನ್ನು 'ಅಪ್ಪಾರಾವ್' ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು. ಯುವ ಮಾವೋವಾದಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಹಾಗೂ ಕಾರ್ಯತಂತ್ರ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಕಾರಣ, ಅವರ ತಲೆಗೆ ಸರ್ಕಾರಗಳು ₹1 ಕೋಟಿ ಬಹುಮಾನ ಘೋಷಿಸಿದ್ದವು.

ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಜನಿಸಿದ್ದ ಜೈರಾಮ್, 27 ವರ್ಷದ ಹಿಂದೆ ಮಾವೋವಾದಿ ಹೋರಾಟಕ್ಕೆ ಇಳಿದಿದ್ದರು. ಆಂಧ್ರ- ಒಡಿಶಾ ಗಡಿಭಾಗದ ಸಂಘಟನೆಯ ಜವಾಬ್ದಾರಿ ವಹಿಸಿದ್ದ ಅವರು, ಸಿಪಿಐ ಮಾವೋವಾದಿಯ ಕೇಂದ್ರ ಸಮಿತಿಯ ಸದಸ್ಯರಾಗಿಯೂ ಗುರುತಿಸಿಕೊಂಡಿದ್ದರು. ಈ ಸಮಿತಿಯೇ ಸಂಘಟನೆಯ ಎಲ್ಲ ನಿರ್ಧಾರ ತೆಗೆದುಕೊಳ್ಳುವ ಅತ್ಯುನ್ನತ ಘಟಕವೂ ಆಗಿದೆ. ಅವರ ಪತ್ನಿ ಅರುಣಾ ಕೂಡ ಮಾವೋವಾದಿಯಾಗಿ ಗುರುತಿಸಿಕೊಂಡಿದ್ದಾರೆ.

ಕೆಲವು ಸಮಯದ ಹಿಂದೆ ಭದ್ರತಾ ಪಡೆಗಳಿಂದ ಕೂದಲೆಳೆಯ ಅಂತರದಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದರು. ದಾಳಿಗಳಿಗೆ ನಿಖರವಾದ ಯೋಜನೆ ರೂಪಿಸುತ್ತಿದ್ದ ಛಲಪತಿ, ಆಂಧ್ರ ಪ್ರದೇಶ, ಒಡಿಶಾ ಹಾಗೂ ಛತ್ತೀಸ್‌ಗಢ ಹಲವು ಮಾವೋವಾದಿ ಕಾರ್ಯಾಚರಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು' ಎಂದು ನಕ್ಸಲ್ ನಿಗ್ರಹ ಪಡೆಯ ಮಾಜಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಸೆಲ್ಫಿ ನೀಡಿದ ಸುಳಿವು: ಕೆಲವು ವರ್ಷಗಳ ಹಿಂದೆ, ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆಸಿದಾಗ, ಶಸ್ತ್ರಾಸ್ತ್ರಗಳ ಜೊತೆಗೆ ಸ್ಮಾರ್ಟ್ ಫೋನ್ ಸಿಕ್ಕಿತ್ತು. 2018ರಲ್ಲಿ ಪತ್ನಿ ಅರುಣಾಳ ಜೊತೆಗೆ ಛಲಪತಿ ಮೊಬೈಲ್‌ನಲ್ಲಿ ತೆಗೆದುಕೊಂಡಿದ್ದ ಸೆಲ್ಫಿಯಿಂದ ನಕ್ಸಲ್ ನಿಗ್ರಹ ಪಡೆಗೆ ಅವರ ಈಚಿನ ಮುಖಚರ್ಯೆಯ ಮಾಹಿತಿ ಸಿಕ್ಕಿತ್ತು. ಅದುವರೆಗೆ, ಛಲಪತಿ ಅವರ 1990ರ ದಶಕದ ಹಳೆಯ ಭಾವಚಿತ್ರಗಳೇ ಪೊಲೀಸರ ಬಳಿ ಇದ್ದವು.

ಸೈನಿಕ ಕಾರ್ತಿಕ್ ಹುತಾತ್ಮ

ಸೊಪೋರ್‌ನಲ್ಲಿ ಉಗ್ರರ ವಿರುದ್ಧ ಕಾರ್ಯಾಚರಣೆ ಸ್ಥಗಿತ

ಪಾಂಗಾಳ ಕಾರ್ತಿಕ್

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಸೊಪೋರ್‌ನಲ್ಲಿ ನಡೆದ ಉಗ್ರರ ವಿರುದ್ಧದ ಎರಡನೇ ದಿನದ ಕಾರ್ಯಾಚರಣೆಯಲ್ಲಿ ಸೈನಿಕರೊಬ್ಬರು ಹುತಾತ್ಮರಾದ ನಂತರ, ಮೂರನೇ ದಿನ ಭಯೋತ್ಪಾದಕರು ಸ್ಥಳದಿಂದ ಪರಾರಿ ಆಗಿರುವುದು ಖಚಿತಪಟ್ಟಿದೆ. ಹೀಗಾಗಿ ಸೇನಾ ಕಾರ್ಯಾಚರಣೆ ಸ್ಥಗಿತ ಗೊಳಿಸಲಾಗಿದೆ.

'ಇಲ್ಲಿನ ಜಲೂರ ಗುಜ್ಜರ್‌ಪತಿ ಭಯೋತ್ಪಾದಕರ ಅಡಗುತಾಣದ ಮೇಲೆ ಸೋಮವಾರ ನಡೆದ ಕಾರ್ಯಾಚರಣೆ ವೇಳೆ ಎರಡು ಕಡೆಗಳಲ್ಲಿ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಗ್ರೆನೇಡ್ ದಾಳಿಯಿಂದ ಸೈನಿಕ ಪಾಂಗಾಳ ಕಾರ್ತಿಕ್ ಗಾಯಗೊಂಡು, ಮೃತಪಟ್ಟರು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಖಚಿತ ಗುಪ್ತಚರ ಮಾಹಿತಿ ಆಧರಿಸಿ, ಸೋಮವಾರ ರಾತ್ರಿಯಿಡೀ ನಡೆದ ಕಾರ್ಯಾಚರಣೆ ವೇಳೆ ಸೈನಿಕರೊಬ್ಬರು ತೀವ್ರವಾಗಿ ಗಾಯಗೊಂಡು ಹುತಾತ್ಮರಾದರು' ಎಂದು ಕಾಶ್ಮೀರ ವಲಯದ ಐಜಿಪಿ ವಿ.ಕೆ. ಬಿರ್ದಿ ತಿಳಿಸಿದರು.

ಮಂಗಳವಾರ ಬೆಳಿಗ್ಗೆ ಮತ್ತೆ ಕಾರ್ಯಾಚರಣೆ ಆರಂಭಿಸಿದರೂ, ನಂತರ ಸ್ಥಗಿತಗೊಳಿಸಲಾಯಿತು.

ಅಡಗುತಾಣದಲ್ಲಿ ಬೆಂಕಿ ಕಾಣಿಸಿಕೊಂಡ ಕೆಲವು ಹೊತ್ತಿನಲ್ಲೇ ಭದ್ರತಾ ಪಡೆಯವರು ಭಾನುವಾರವೇ ಕಾರ್ಯಾಚರಣೆ ಪ್ರಾರಂಭಿಸಿದ್ದರು.

ನೆಲಬಾಂಬ್ ಸ್ಫೋಟ: ಸೈನಿಕನಿಗೆ ಗಾಯ

ಮೆಂಧರ್/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ ಸಮೀಪ ನೆಲಬಾಂಬ್ ಸ್ಫೋಟದಿಂದ ಸೈನಿಕರೊಬ್ಬರು ಗಾಯಗೊಂಡಿದ್ದಾರೆ.

'ಕೃಷ್ಣಘಾಟಿ ಸೆಕ್ಟರ್‌ನಲ್ಲಿ ಗಸ್ತು ತಿರುಗುತ್ತಿದ್ದ ವೇಳೆ 32 ವರ್ಷದ ಸೈನಿಕ ನೆಲಬಾಂಬ್ ಸ್ಫೋಟಗೊಂಡು, ಗಂಭೀರವಾಗಿ ಗಾಯಗೊಂಡರು. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮನಾಲಿ ಉತ್ಸವ ಹಿಮಾಚಲ ಪ್ರದೇಶದ ಮನಾಲಿಯಲ್ಲಿ ನಡೆಯುತ್ತಿರುವ 'ಮನಾಲಿ ಚಳಿಗಾಲದ ಉತ್ಸವ'ದಲ್ಲಿ ಮಂಗಳವಾರ ಕಲಾವಿದರು ಪ್ರವಾಸಿಗರನ್ನು ರಂಜಿಸಿದರು ಪಿಟಿಐ ಚಿತ್ರ

ಸ್ಥಳೀಯರ 'ಆಧಾರ್' ಬಳಸಿ ಸಿಮ್ ಖರೀದಿ

ಹಿಂದೂ ಹೆಸರು ಇಟ್ಟುಕೊಂಡಿದ್ದ. ಮೊಬೈಲ್ ಅಪ್ಲಿಕೇಷನ್ ಬಳಸಿ ಬಾಂಗ್ಲಾದಲ್ಲಿ ಇರುವ ಸಂಬಂಧಿಕರಿಗೆ ಕರೆ ಮಾಡುತ್ತಿದ್ದ

'ಸೈಫ್‌ಗೆ ಇರಿದಿದ್ದ ವ್ಯಕ್ತಿ 7 ತಿಂಗಳಿಂದ ಅಕ್ರಮವಾಸಿ'

ಮುಂಬೈ (ಪಿಟಿಐ): ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರಿಗೆ ಚಾಕುವಿನಿಂದ ತೀವ್ರವಾಗಿ ಇರಿದಿದ್ದ ಆರೋಪಿ, ಬಾಂಗ್ಲಾದೇಶದ ಪ್ರಜೆ ಶರೀಫುಲ್ ಇಸ್ಲಾಂ ಶೆಹಜಾದ್, ಏಳು ತಿಂಗಳಿನಿಂದ ಭಾರತದಲ್ಲಿ ಅಕ್ರಮವಾಗಿ ನೆಲಸಿದ್ದ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಶರೀಫುಲ್ ಇಸ್ಲಾಂ ಶೆಹಜಾದ್

ಉದ್ಯೋಗ ಅರಸಿ ಮುಂಬೈಗೆ ಬರುವ ಮೊದಲು ಆತ, ಪಶ್ಚಿಮ ಬಂಗಾಳದ ನಿವಾಸಿಯೊಬ್ಬರ ಆಧಾರ್ ಕಾರ್ಡ್ ಬಳಸಿ ಮೊಬೈಲ್ ಫೋನ್ ಸಿಮ್ ಕಾರ್ಡ್ ಖರೀದಿಸಿದ್ದ ಎಂದು ಮಂಗಳವಾರ ತಿಳಿಸಿದರು. ಆರೋಪಿಯನ್ನು ಮಹಾರಾಷ್ಟ್ರದ ಠಾಣೆಯಲ್ಲಿ ಪೊಲೀಸರು ಬಂಧಿಸಿದ್ದರು.

ಏಳು ತಿಂಗಳ ಹಿಂದೆ ಡಾಕಿ ನದಿ ದಾಟುವ ಮೂಲಕ ಅಕ್ರಮವಾಗಿ ಭಾರತಕ್ಕೆ ನುಸುಳಿದ್ದ ವ್ಯಕ್ತಿಯು ವಿಜಯ್‌ದಾಸ್ ಎಂದು ಹೆಸರು ಬದಲಿಸಿಕೊಂಡಿದ್ದ. ಆತ ಬಳಸುತ್ತಿದ್ದ ಸಿಮ್, ಪಶ್ಚಿಮ ಬಂಗಾಳದ ನಿವಾಸಿ ಖುಕುಮೊನಿ ಜಹಾಂಗೀರ್ ಸೆಖಾ ಎಂಬುವವರ ಹೆಸರಿನಲ್ಲಿತ್ತು. ಸ್ವತಃ ಆಧಾರ್ ಕಾರ್ಡ್ ಪಡೆಯಲು ಯತ್ನಿಸಿ ಅಪರಾಧಿಯು ವಿಫಲನಾಗಿದ್ದ ಎಂದೂ ಪೊಲೀಸರು ತಿಳಿಸಿದ್ದಾರೆ.

ಬಾಂಗ್ಲಾ ನುಸುಳುಕೋರರ ಪತ್ತೆಗೆ ಎಸ್‌ಐಟಿ: ಬಾಂಗ್ಲಾ ಹಾಗೂ ರೋಹಿಂಗ್ಯಾ ನುಸುಳುಕೋರರನ್ನು ಪತ್ತೆ ಮಾಡಲು, ಅವರ ಜನನ ಪ್ರಮಾಣ ಪತ್ರಗಳ ಪರಿಶೀಲನೆಗಾಗಿ ವಿಶೇಷ ತನಿಖಾ ತಂಡವನ್ನು ಮಹಾರಾಷ್ಟ್ರ ಸರ್ಕಾರ ರಚಿಸಿದೆ.

ಮನೆಗೆ ಮರಳಿದ ಸೈಫ್ ಅಲಿ ಖಾನ್

ಸೈಫ್

ಮುಂಬೈ: ದುಷ್ಕರ್ಮಿಯಿಂದ ಚೂರಿ ಇರಿತಕ್ಕೆ ಗುರಿಯಾಗಿದ್ದ ನಟ ಸೈಫ್ ಅಲಿ ಖಾನ್ ಅವರು ಐದು ದಿನಗಳ ಚಿಕಿತ್ಸೆ ಬಳಿಕ ಮಂಗಳವಾರ ಲೀಲಾವತಿ ಆಸ್ಪತ್ರೆಯಿಂದ ಮನೆಗೆ ತೆರಳಿದರು.

ಜ. 16ರಂದು ಅವರ ಮನೆಯಲ್ಲಿಯೇ ನಟನಿಗೆ, ದುಷ್ಕರ್ಮಿ ಆರು ಬಾರಿ ಚೂರಿಯಿಂದ ಇರಿದಿದ್ದ. ಗಂಭೀರ ಸ್ವರೂಪದ ಗಾಯಗಳೊಂದಿಗೆ ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಬಿಳಿ ಬಣ್ಣದ ಶರ್ಟ್, ನೀಲಿ ಬಣ್ಣದ ಜೀನ್ಸ್ ಧರಿಸಿದ್ದ 54 ವರ್ಷ ವಯಸ್ಸಿನ ನಟ, ಕಪ್ಪು ಬಣ್ಣದ ಕನ್ನಡಕಧಾರಿಯಾಗಿದ್ದರು. ಆಸ್ಪತ್ರೆ ಗೇಟಿನ ಹೊರಗಿದ್ದ ಅಭಿಮಾನಿಗಳು, ಮಾಧ್ಯಮದವರತ್ತ ಕೈಬೀಸಿ, ಕಾರಿನತ್ತ ನಡೆದರು. ಪತ್ನಿ ಕರೀನಾ ಜೊತೆಗಿದ್ದರು.

ಖಾನ್ ಅವರಿಗೆ ಕೈಗೆ 2 ಕಡೆ, ಕತ್ತಿನ ಬಲಭಾಗ ಮತ್ತು ಬೆನ್ನಿನಲ್ಲಿ ಗಾಯ ಆಗಿತ್ತು. ಶಸ್ತ್ರಚಿಕಿತ್ಸೆ ನಡೆಸಿ, ಬೆನ್ನುಮೂಳೆ ಬಳಿ ಸಿಲುಕಿದ್ದ ಚಾಕುವಿನ ಮುರಿದ ಭಾಗವನ್ನು ವೈದ್ಯರು ತೆಗೆದಿದ್ದರು. ತುಸು ಚೇತರಿಕೆ ಬಳಿಕ ತೀವ್ರ ನಿಗಾ ಘಟಕದಿಂದ ವಿಶೇಷ ವಾರ್ಡ್‌ಗೆ ಜ. 17ರಂದು ಸ್ಥಳಾಂತರಿಸಲಾಗಿತ್ತು.

'ಭಿನ್ನ'ರ ಸದ್ದಡಗಿಸಲು ಬಿಗಿಪಟ್ಟು

ಒಂದನೇ ಪುಟದಿಂದ...

ಸಭೆಗೆ ಹಾಜರಾಗಿದ್ದ ಶಾಸಕರ ಪರವಾಗಿ ಸುದ್ದಿಗಾರರ ಜತೆ ಮಾತನಾಡಿದ ಬಸವರಾಜ ಮತ್ತಿಮಡು, 'ಬಣ ರಾಜಕೀಯದಿಂದ ಪಕ್ಷಕ್ಕೆ ಆಗುತ್ತಿರುವ ಹಾನಿ ತಡೆಯಲು ಎಲ್ಲರೂ ಕೋರಿದ್ದೇವೆ. ಇಲ್ಲಿ ವಿಜಯೇಂದ್ರ ಪರ ಅಥವಾ ವಿರುದ್ಧ ಎಂದು ಇಲ್ಲ. ಅವರು ಪಕ್ಷದ ಅಧ್ಯಕ್ಷರು. ಅವರನ್ನು ವರಿಷ್ಠರೇ ನೇಮಕ ಮಾಡಿದ್ದಾರೆ. ಅವರಿಗೆ ಗೌರವ ಕೊಡಬೇಕು. ಅವರ ವಿರುದ್ಧ ಟೀಕೆ ಮಾಡುವುದು, ಪಕ್ಷದ ವರಿಷ್ಠರ ನಿರ್ಧಾರವನ್ನು ಟೀಕೆ ಮಾಡಿದಂತೆ. ನಾಳೆ ಯತ್ನಾಳ ಬಣದ ಯಾರಾದರೂ ಒಬ್ಬರು ಅಧ್ಯಕ್ಷರಾದಾಗ ಈ ಬಣ ಅದೇ ರೀತಿ ವರ್ತಿಸುತ್ತಾ ನಡೆದರೆ ಪಕ್ಷದ ಗತಿ ಏನು? ಹಾಗಾಗಿ, ತಕ್ಷಣ ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ರಾಜ್ಯ ಉಸ್ತುವಾರಿಗಳ ಗಮನಕ್ಕೆ ತಂದಿದ್ದೇವೆ' ಎಂದು ಮಾಹಿತಿ ನೀಡಿದರು.

ಬಿ.ಪಿ. ಹರೀಶ್ ಮಾತನಾಡಿ, 'ಯತ್ನಾಳ ಬಣದ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸುವ ಮೊದಲು ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಪರೋಕ್ಷವಾಗಿ ಕೈಜೋಡಿಸಿ, ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಅಲ್ಲಿಯವರೆಗೂ ಭಿನ್ನಮತ ಶಮನ ವಾಗದು. ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ' ಎಂದರು.

> ರಾಜ್ಯ ಸರ್ಕಾರದ ಹಗಲು ದರೋಡೆ ಬಗ್ಗೆ ಮಾತಾಡಬೇಕಿದ್ದ ನಾವು ನಿತ್ಯ ಜಗಳ ಮಾಡುತ್ತಿದ್ದೇವೆ. ಶಿಸ್ತಿನ ಪಕ್ಷ ಎನ್ನುತ್ತೇವೆ. ಆದರೆ ಶಿಸ್ತು ಎಲ್ಲಿದೆ?
> **ಬೈರತಿ ಬಸವರಾಜ್,** ಶಾಸಕ

ರಾಜ್ಯ ಸಹ ಉಸ್ತುವಾರಿ ಸುಧಾಕರ್ ರೆಡ್ಡಿ, ಬಿ.ವೈ. ವಿಜಯೇಂದ್ರ, 'ಸಂಘಟನಾ ಪರ್ವ'ದ ಕರ್ನಾಟಕದ ವೀಕ್ಷಕ ಪೊನ್ ರಾಧಾಕೃಷ್ಣನ್ ಭಾಗವಹಿಸಿದ್ದರು.

ಪ್ರತ್ಯೇಕ ಭೇಟಿ ಮಾಡಿದ ಕಟ್ಟಾ ಬಣ: ಬಿಜೆಪಿ ಸಭೆಗೂ ಮೊದಲು ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಸಭೆ ನಡೆಸಿದ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ತಂಡ, ಸಂಜೆ ಬಿಜೆಪಿ ಕಾರ್ಯಾಲಯಕ್ಕೆ ಆಗಮಿಸಿತು. ರಾಧಾಮೋಹನ್ ದಾಸ್ ಅಗರವಾಲ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಯತ್ನಾಳ ಮತ್ತು ಅವರ ತಂಡದ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು. ವಿಜಯೇಂದ್ರ ಅವರನ್ನೇ ಮುಂದಿನ ಮೂರು ವರ್ಷ ಮುಂದುವರಿಸಬೇಕು. ದೆಹಲಿ ವರಿಷ್ಠರ ಭೇಟಿಗೆ ದಿನ ನಿಗದಿ ಮಾಡಿಕೊಡಬೇಕು ಎಂದು ಬೇಡಿಕೆ ಸಲ್ಲಿಸಿತು.

ಮಾಹಿತಿದಾರ ಹರೀಶ್

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರೂ ಪಕ್ಷ ಹಾಗೂ ವಿಜಯೇಂದ್ರ ಅವರ ಪರ ಮಾತನಾಡಿದರೆ, ಬಿ.ಪಿ. ಹರೀಶ್ ಮಾತ್ರ ಅವರ ವಿರುದ್ಧ ಅಸಮಾಧಾನ ಹೊರಹಾಕಿದರು. ಸಭೆ ಮುಗಿದ ನಂತರ ಹರೀಶ್ ಹಾಗೂ ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಅವರು ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಬದಲಾಯಿಸಲು ವರಿಷ್ಠರಿಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

'ಇಲ್ಲಿ ನಡೆದ ಸಭೆಯ ಮಾಹಿತಿ ನೀಡಲು ಹರೀಶ್ ಅವರನ್ನು ಯತ್ನಾಳ ಬಣ ಮಾಹಿತಿ ಸಂಗ್ರಹಕಾರರಾಗಿ ಕಳುಹಿಸಿದೆ. ಹಾಗಾಗಿ, ಅವರ ಪರವಾಗಿ ಅವರೊಬ್ಬರೇ ಬಂದಿದ್ದಾರೆ' ಎಂದು ವಿಜಯೇಂದ್ರ ಬಣದ ಶಾಸಕರು ದೂರಿದರು.

ರಾಮ-ಸೀತೆಗೆ ಅವಮಾನ: ಬಿಜೆಪಿ

ನವದೆಹಲಿ (ಪಿಟಿಐ): ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ರಾಮಾಯಣವನ್ನು ತಪ್ಪಾಗಿ ಉಲ್ಲೇಖಿಸಿದ್ದಾರೆ. ಈ ಮೂಲಕ ರಾಮ ಮತ್ತು ಸೀತೆಯನ್ನು ಅವಮಾನಿಸಿದ್ದಾರೆ ಎಂದು ಬಿಜೆಪಿ ಮಂಗಳವಾರ ಆರೋಪಿಸಿದೆ.

ಈ ಸಂಬಂಧ ಬಿಜೆಪಿ ದೆಹಲಿ ಘಟಕದ ಮುಖ್ಯಸ್ಥ ವೀರೇಂದ್ರ ಸಚದೇವ್ ಅವರು ಉಪವಾಸ ಕೈಗೊಂಡಿದ್ದರು. ಪ್ರಾಚೀನ ಹನುಮಾನ್ ದೇಗುಲಕ್ಕೆ ಭೇಟಿ ನೀಡಿದ ನಂತರ ಅವರು ಉಪವಾಸ ಆರಂಭಿಸಿದರು.

'ಕೇಜ್ರಿವಾಲ್ ಅವರು 'ಚುನಾವಣಾ ಹಿಂದೂ'. ಸೀತಾರಾಮರನ್ನು ಅವಮಾನಿಸಿದ ಅವರನ್ನು ಕ್ಷಮಿಸಿಬಿಡಿ' ಎಂದು ಕೋರಿದರು.

'ಕೇಜ್ರಿವಾಲ್ ಒಬ್ಬ 'ಚುನಾವಣಾ ಹಿಂದೂ'. ಚುನಾವಣಾ ರ್‍ಯಾಲಿಗಳಲ್ಲಿ ದೇವಾನುದೇವತೆಗಳ ಹೆಸರನ್ನು ಅವರು ಉಲ್ಲೇಖಿಸುವುದು ವಿಷಾದಕರ. ಅಜ್ಞಾನದ ಕಾರಣ ಅವರು ತಪ್ಪು ತಪ್ಪಾಗಿ ಕತೆಗಳನ್ನು ಹೇಳಿ ಹಿಂದೂಗಳ ಭಾವನೆಗಳನ್ನು ಗಾಸಿಗೊಳಿಸಿದ್ದಾರೆ' ಎಂದು ಹೇಳಿದರು.

ಕೇಜ್ರಿವಾಲ್ ಅವರು ಸೋಮವಾರ ರ್‍ಯಾಲಿ ಉದ್ದೇಶಿಸಿ ಮಾತನಾಡುತ್ತಾ ರಾಮಾಯಣವನ್ನು ಉಲ್ಲೇಖಿಸಿ, 'ರಾಮನು ಆಹಾರ ಹುಡುಕಲು ಹೋಗಿದ್ದ ಸಂದರ್ಭದಲ್ಲಿ ರಾವಣ ಬಂಗಾರದ ಜಿಂಕೆ ರೂಪದಲ್ಲಿ ಬಂದು ಸೀತೆ ಅಪಹರಿಸಿದ' ಎಂದು ಹೇಳಿದ್ದರು.

ಕೇಜ್ರಿವಾಲ್ ಅವರು ಮಹಾಕಾವ್ಯದ ಕತೆಯನ್ನು ತಪ್ಪಾಗಿ ಹೇಳಿದ್ದಾರೆ. 'ಮಾರೀಚ' ಬಂಗಾರದ ಜಿಂಕೆ ರೂಪದಲ್ಲಿ ಬಂದು ರಾಮನ ಗಮನವನ್ನು ಸೆಳೆದಿದ್ದ. ಈ ಸಂದರ್ಭದಲ್ಲಿ ರಾವಣ ಸೀತೆಯನ್ನು ಅಪಹರಿಸಿದ್ದ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

'ಬಿಜೆಪಿಗರಿಗೆ ರಾವಣನ ಮೇಲೆ ಪ್ರೀತಿ'

ಬಿಜೆಪಿ ಆರೋಪದ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕೇಜ್ರಿವಾಲ್, 'ರಾಕ್ಷಸರ ರಾಜ ರಾವಣನನ್ನು ಗೌರವಿಸಿ ಬಿಜೆಪಿಯು ನನ್ನ ವಿರುದ್ಧ ಪ್ರತಿಭಟನೆ ನಡೆಸುತ್ತಿದೆ. ಪಕ್ಷದ ನಾಯಕರು ಸಹ ರಾಕ್ಷಸೀ ಪ್ರವೃತ್ತಿ ಹೊಂದಿದ್ದಾರೆ' ಎಂದು ತಿರುಗೇಟು ನೀಡಿದರು.

'ರಾವಣನನ್ನು ಅವಮಾನಿಸಿದ್ದೇಕೆ ಎಂದು ನನ್ನ ನಿವಾಸದ ಎದುರು ಬಿಜೆಪಿಗರು ಧರಣಿ ಕುಳಿತಿದ್ದಾರೆ. ಅವರಿಗೆ ರಾವಣನ ಮೇಲೆ ವಿಪರೀತ ಪ್ರೀತಿ. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಕ್ಷಸರಂತೆ ಎಲ್ಲವನ್ನೂ ನಾಶ ಮಾಡುತ್ತದೆ ಎಂದು ಕೊಳೆಗೇರಿ ನಿವಾಸಿಗಳು ಮತ್ತು ಬಡವರಿಗೆ ಎಚ್ಚರಿಕೆ ನೀಡುತ್ತೇನೆ ಎಂದು ಹೇಳಿದರು.

'ಪುಷ್ಪ' ನಿರ್ಮಾಣ ಸಂಸ್ಥೆ ಕಚೇರಿಯಲ್ಲಿ ಐ.ಟಿ ಶೋಧ

ಪ್ರಜಾವಾಣಿ ವಾರ್ತೆ

ಹೈದರಾಬಾದ್: 'ಪುಷ್ಪ' ಸಿನಿಮಾ ನಿರ್ಮಾಣ ಮಾಡಿದ ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆಯ ಕಚೇರಿ ಮತ್ತು ಟಾಲಿವುಡ್‌ನ ಪ್ರಮುಖ ನಿರ್ಮಾಪಕರಲ್ಲೊಬ್ಬರಾದ 'ದಿಲ್'ರಾಜು (ವೆಂಕಟ ರಮಣ ರೆಡ್ಡಿ) ಅವರಿಗೆ ಸೇರಿದ ಹಲವು ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಮಂಗಳವಾರ ಶೋಧ ನಡೆಸಿದೆ.

ಇಲ್ಲಿನ ಜುಬಿಲಿ ಹಿಲ್ಸ್ ಮತ್ತು ಬಂಜಾರಾ ಹಿಲ್ಸ್ ಪ್ರದೇಶದಲ್ಲಿ 'ದಿಲ್'ರಾಜು ಅವರಿಗೆ ಸೇರಿದ ಸ್ಥಳಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಐ.ಟಿ ತಂಡ ಶೋಧ ನಡೆಸಿದೆ. 'ದಿಲ್'ರಾಜು ನಿರ್ಮಾಣದ 'ಗೇಮ್ ಚೇಂಜರ್' ಮತ್ತು 'ಸಂಕ್ರಾಂತಿಕಿ ವಸ್ತುನ್ನಾಂ' ಸಿನಿಮಾಗಳು ಈ ಸಂಕ್ರಾಂತಿ ವೇಳೆ ಬಿಡುಗಡೆಯಾಗಿದ್ದವು.

ಮೈತ್ರಿ ಮೂವೀಸ್ ನಿರ್ಮಾಣದ 'ಪುಷ್ಪ-2' ಸಿನಿಮಾ ವರದಿಗಳ ಪ್ರಕಾರ ₹1,850 ಕೋಟಿ ಗಳಿಸಿದೆ.

ಕೆ.ಜಿಯಿಂದ ಪಿ.ಜಿವರೆಗೆ ಶಿಕ್ಷಣ ಉಚಿತ: ಬಿಜೆಪಿ

ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್, ಸಂಸದ ಅನುರಾಗ್

ನವದೆಹಲಿ (ಪಿಟಿಐ): ಬಿಜೆಪಿಯು ದೆಹಲಿ ವಿಧಾನಸಭಾ ಚುನಾವಣೆಗೆ ತನ್ನ ಪ್ರಣಾಳಿಕೆಯ ಎರಡನೇ ಭಾಗವನ್ನು ಬಿಡುಗಡೆ ಮಾಡಿದ್ದು, ಬಡವರ ಮಕ್ಕಳಿಗೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಎಲ್‌ಕೆಜಿಯಿಂದ ಸ್ನಾತಕೋತ್ತರ ಪದವಿ (ಪಿ.ಜಿ) ವರೆಗೆ ಉಚಿತ ಶಿಕ್ಷಣದ ಘೋಷಣೆ ಮಾಡಿದೆ.

'ಸಂಕಲ್ಪ ಪತ್ರ'ದ ಮುಂದುವರಿದ ಭಾಗವನ್ನು ಮಂಗಳವಾರ ಬಿಡುಗಡೆ ಮಾಡಿದ ಬಿಜೆಪಿ ಮುಖಂಡ ಅನುರಾಗ್ ಠಾಕೂರ್, ಆಟೊ ಚಾಲಕರು ಮತ್ತು ಮನೆಕೆಲಸದವರಿಗೆ ₹10 ಲಕ್ಷ ಮೊತ್ತದ ವಿಮೆ ಮತ್ತು ₹5 ಲಕ್ಷದ ಅಪಘಾತ ವಿಮೆ ಜಾರಿಗೊಳಿಸುವ ಭರವಸೆಯನ್ನೂ ನೀಡಿದರು.

ದೆಹಲಿಯಲ್ಲಿ ಪಕ್ಷವು ಅಧಿಕಾರಕ್ಕೆ ಬಂದರೆ ಎಎಪಿ ಸರ್ಕಾರದ ಎಲ್ಲಾ 'ಅಕ್ರಮಗಳು ಮತ್ತು ಹಗರಣಗಳ' ತನಿಖೆಗೆ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲಾಗುವುದು ಎಂದು ಹೇಳಿದರು.

'ಮಹಿಳಾ ಸಮೃದ್ಧಿ ಯೋಜನೆ'ಯಡಿ ಮಹಿಳೆಯರಿಗೆ ಮಾಸಿಕ ₹ 2,500 ನೆರವು ನೀಡುವುದಾಗಿ ಬಿಜೆಪಿಯು 'ಸಂಕಲ್ಪ ಪತ್ರ' ಭಾಗ-1ರಲ್ಲಿ ಘೋಷಿಸಿತ್ತು.

ನವದೆಹಲಿ ವಿಧಾನಸಭಾ ಚುನಾವಣೆಯ ಮತದಾನ ಫೆಬ್ರುವರಿ 5ರಂದು ನಡೆಯಲಿದೆ. ಬಿಜೆಪಿ ಅಲ್ಲದೆ ಕಾಂಗ್ರೆಸ್ ಮತ್ತು ಆಡಳಿತಾರೂಢ ಎಎಪಿಯು ಈಗಾಗಲೇ ಮತದಾರರಿಗೆ ಹಲವು 'ಉಚಿತ ಕೊಡುಗೆ'ಗಳ ಭರವಸೆ ನೀಡಿವೆ.

ಭರವಸೆಗಳು...

- ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ₹ 15 ಸಾವಿರ ನೆರವು; ಪ್ರಯಾಣ ಭತ್ಯೆ
- ನವದೆಹಲಿಯ ಪಾಲಿಟೆಕ್ನಿಕ್‌ಗಳು ಮತ್ತು ಕೌಶಲಾಭಿವೃದ್ಧಿ ಕೇಂದ್ರಗಳಲ್ಲಿ ಕಲಿಯುತ್ತಿರುವ ಎಸ್‌ಸಿ ವಿದ್ಯಾರ್ಥಿಗಳಿಗೆ ಮಾಸಿಕ ₹1000 ನೆರವು ನೀಡಲು 'ಡಾ.ಬಿ.ಆರ್ ಅಂಬೇಡ್ಕರ್ ಸ್ಟೈಪೆಂಡ್ ಯೋಜನೆ' ಜಾರಿ
- ಆಟೊ ಚಾಲಕರು, ಮನೆಕೆಲಸ ವೃತ್ತಿ ಮಾಡುವವರ ಶ್ರೇಯೋಭಿವೃದ್ಧಿಗಾಗಿ ಮಂಡಳಿ ರಚನೆ

ಮೇಲ್ಮನವಿಗೆ ಅನುಮತಿ

ಕೋಲ್ಕತ್ತ (ಪಿಟಿಐ): ಸಿಯಾಲದಹ ನ್ಯಾಯಾಲಯ ನೀಡಿರುವ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕಲ್ಕತ್ತ ಹೈಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

ಅಪರಾಧಿ ಸಂಜಯ್ ರಾಯ್‌ಗೆ ಮರಣ ದಂಡನೆ ವಿಧಿಸಬೇಕು ಎಂಬ ಕೋರಿಕೆಯೊಂದಿಗೆ ಮೇಲ್ಮನವಿ ಸಲ್ಲಿಸಲು ಅನುಮತಿ ನೀಡಬೇಕು ಎಂಬ ಮನವಿಯನ್ನು ರಾಜ್ಯದ ಅಡ್ವೊಕೇಟ್ ಜನರಲ್ ವಿಭಾಗೀಯ ಪೀಠಕ್ಕೆ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸಜ್ಜನ್ ಕುಮಾರ್ ಪ್ರಕರಣ: ತೀರ್ಪು ಮುಂದಕ್ಕೆ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ಗಲಭೆ ವೇಳೆ ನಡೆದಿದ್ದ ಜೋಡಿ ಕೊಲೆ ಕೃತ್ಯದ ಸಂಬಂಧ ಮಾಜಿ ಸಂಸದ, ಕಾಂಗ್ರೆಸ್‌ನ ಸಜ್ಜನ್ ಕುಮಾರ್ ಅವರ ವಿರುದ್ಧದ ಪ್ರಕರಣ ಸಂಬಂಧ ತೀರ್ಪು ಹೊರಡಿಸುವುದನ್ನು ದೆಹಲಿ ಹೈಕೋರ್ಟ್ ಮುಂದೂಡಿದೆ.

ವಿಶೇಷ ನ್ಯಾಯಾಧೀಶರಾದ ಕಾವೇರಿ ಭವೇಜಾ ಅವರು, ಪೂರ್ವನಿಗದಿಯಂತೆ ಮಂಗಳವಾರ ತೀರ್ಪು ನೀಡಬೇಕಾಗಿತ್ತು. ಇನ್ನಷ್ಟು ವಾದಮಂಡನೆ ಅಗತ್ಯವಿದೆ ಎಂಬ ವಕೀಲರ ಕೋರಿಕೆಯ ಕಾರಣದಿಂದಾಗಿ ಆದೇಶ ಹೊರಡಿಸುವುದನ್ನು ಜನವರಿ 31ಕ್ಕೆ ಮುಂದೂಡಿದರು.

ಸಿಖ್ ವಿರೋಧಿ ಗಲಭೆ ಅವಧಿಯಲ್ಲಿ ಸರಸ್ವತಿ ವಿಹಾರ್ ಬಡಾವಣೆಯಲ್ಲಿ ನಡೆದಿದ್ದ ಇಬ್ಬರ ಕೊಲೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಸಜ್ಜನ್ ಕುಮಾರ್ ಅವರು ಸದ್ಯ ತಿಹಾರ್ ಜೈಲಿನಲ್ಲಿ ಇದ್ದು, ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದರು.

ನವೆಂಬರ್ 1, 1984ರಲ್ಲಿ ನಡೆದಿದ್ದ ಘಟನೆಯಲ್ಲಿ ಜಸ್ವಂತ್ ಸಿಂಗ್ ಮತ್ತು ಅವರ ಪುತ್ರ ತರುಣ್‌ದೀಪ್ ಸಿಂಗ್ ಮೃತಪಟ್ಟಿದ್ದರು.

ಅಧಿಕಾರಿಗೆ ₹5 ಸಾಂಕೇತಿಕ ದಂಡ

ಹಮೀರ್‌ಪುರ, ಹಿಮಾಚಲಪ್ರದೇಶ (ಪಿಟಿಐ): ನಾಲ್ಕು ವರ್ಷಗಳಿಂದ ಪಂಚಾಯಿತಿ ಸಮಿತಿ ಸಭೆಗೆ ಹಾಜರಾಗದ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಟೌನಿದೇವಿ ಅವರಿಗೆ ₹5 ದಂಡ ವಿಧಿಸಲಾಗಿದೆ.

ಮೂರು ತಿಂಗಳಿಗೊಮ್ಮೆ ನಡೆಯುವ ಸಭೆಗೆ ಸತತ ಗೈರುಹಾಜರಾಗಿದ್ದರಿಂದ ಇಲ್ಲಿನ ಪಂಚಾಯಿತಿ ಸಮಿತಿ ಅಧ್ಯಕ್ಷ ಹರೀಶ್ ಶರ್ಮಾ ಅವರು ಸೋಮವಾರ ನಡೆದ ಸಭೆಯಲ್ಲಿ ಈ ದಂಡ ವಿಧಿಸಿದ್ದಾರೆ.

ಹಲವು ಸಲ ಎಚ್ಚರಿಕೆ ನೀಡಿದರೂ ಟೌನಿದೇವಿ ಅವರು ಸಭೆಗೆ ಗೈರಾಗಿದ್ದರು. ಇದರಿಂದ ಇಲಾಖೆ ಕೆಲಸ ಕಾರ್ಯಗಳಿಗೆ ತೊಡಕು ಉಂಟಾಗಿದೆ. ಹೀಗಾಗಿ ಸಮಿತಿಯ ಎಲ್ಲ ಸದಸ್ಯರನ್ನು ಒಪ್ಪಿಗೆ ಪಡೆದು, ಟೌನಿದೇವಿಗೆ ₹5 ದಂಡ ವಿಧಿಸಲು ತೀರ್ಮಾನ ತೆಗೆದುಕೊಂಡರು.

ಭುಜಬಲ್‌ಗೆ ಜಾಮೀನು: ಇ.ಡಿ ಅರ್ಜಿ ವಜಾ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎನ್‌ಸಿಪಿ ಹಿರಿಯ ನಾಯಕ ಮತ್ತು ಶಾಸಕ ಛಗನ್ ಭುಜಬಲ್ ಅವರಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.

ಶಾಹಿ ಮಸೀದಿ ಸಮಿತಿ ಅರ್ಜಿ

ನವದೆಹಲಿ: ಧಾರ್ಮಿಕ ಸ್ಥಳ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿದ ಅರ್ಜಿಗಳಿಗೆ ಉತ್ತರಿಸುವ ಕೇಂದ್ರ ಸರ್ಕಾರದ ಹಕ್ಕುಗಳಿಗೆ ತಡೆ ಒಡ್ಡಬೇಕು ಎಂದು ಕೋರಿ ಮಥುರಾದ ಶಾಹಿ ಮಸೀದಿ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

1991ರ ಕಾಯ್ದೆ ಪ್ರಶ್ನಿಸಿ ಸಲ್ಲಿಸಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಮಾರ್ಚ್ 12, 2021ರಂದು ನೀಡಿದ್ದ ನೋಟಿಸ್‌ಗೆ ಪ್ರತಿಯಾಗಿ ಕೇಂದ್ರ ಸರ್ಕಾರ ತನ್ನ ಪ್ರತಿಕ್ರಿಯೆ ಅಥವಾ ಪ್ರಮಾಣಪತ್ರ ಸಲ್ಲಿಸಿಲ್ಲ ಎಂದಿರುವ ಸಮಿತಿ ಸೆ. 9, 2022ರಂದು ಸಲ್ಲಿಸಿದ್ದ ಅರ್ಜಿಯಲ್ಲಿ ಉಲ್ಲೇಖಿಸಿದೆ.

ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿ ಪ್ರಮಾಣಪತ್ರ ಸಲ್ಲಿಸಿಲ್ಲ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಕುಕಿ ಬೇಡಿಕೆ ತಿರಸ್ಕರಿಸಿದ ಸಿ.ಎಂ ಬಿರೇನ್

ಗುವಾಹಟಿ: ಕುಕಿ ಸಮುದಾಯಕ್ಕೆ ಸೇರಿದವರಿಗೆ ಮಣಿಪುರದಲ್ಲಿ 'ಪ್ರತ್ಯೇಕ ಆಡಳಿತ' ವ್ಯವಸ್ಥೆ ಇರಬೇಕು ಎಂದು ಆ ಸಮುದಾಯಕ್ಕೆ ಸೇರಿದ ಕೆಲವು ಸಂಘಟನೆಗಳು ಮಂಡಿಸಿರುವ ಬೇಡಿಕೆಯನ್ನು ತಿರಸ್ಕರಿಸಿರುವ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್, 'ಎಲ್ಲ ಜಿಲ್ಲೆಗಳೂ ರಾಜ್ಯದ ಅವಿಭಾಜ್ಯ ಅಂಗಗಳಿದ್ದಂತೆ, ಅವುಗಳನ್ನು ಯಾರೂ ವಿಭಜಿಸಲಾಗದು' ಎಂದು ಹೇಳಿದ್ದಾರೆ.

'ಬೇಡಿಕೆಗಳನ್ನು ಇರಿಸಬಹುದು. ಆದರೆ, ಮಣಿಪುರವು ಈಗಿರುವಂತೆಯೇ ಉಳಿಯಲಿದೆ. ರಾಜ್ಯವು ಭಾರತದ ಅಂಗ ಮತ್ತು ಇಲ್ಲಿನ ಎಲ್ಲ ಜಿಲ್ಲೆಗಳು ರಾಜ್ಯದ ಅವಿಭಾಜ್ಯ ಅಂಗಗಳು' ಎಂದು ಸಿಂಗ್ ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಚಿರಾಗ್–ಸಾತ್ವಿಕ್ ಶುಭಾರಂಭ

ಜಕಾರ್ತ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕಳೆದೆರಡು ವಾರಗಳಲ್ಲಿ ಎರಡು ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ್ದ ಭಾರತದ ಜೋಡಿಯು ಇಲ್ಲಿ ಮಂಗಳವಾರ ಆರಂಭವಾದ ಸ್ಪರ್ಧೆಯ ಮೊದಲ ಸುತ್ತಿನಲ್ಲಿ 21-16 21-15ರ ನೇರ ಗೇಮ್‌ಗಳಿಂದ ಚೀನಾ ತೈಪೆಯ ಚೆನ್ ಝಿ ರೆ ಮತ್ತು ಲಿನ್ ಯು ಚೀಹ್ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಇಲ್ಲಿ ಮುಂದಿನ ಸುತ್ತಿನಲ್ಲಿ ಥಾಯ್ಲೆಂಡ್‌ನ ಕಿಟ್ಟಿನುಪಾಂಗ್ ಕೆಡ್ರೆನ್ ಮತ್ತು ಡೆಚಾಪೋಲ್ ಪುವಾರಾನು ಕ್ರೋಹ್ ಅವರನ್ನು ಎದುರಿಸಲಿದೆ.

ಮಹಿಳೆಯರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಜೋಡಿಯೂ ನಿರಾಯಾಸವಾಗಿ ಎರಡನೇ ಸುತ್ತು ಪ್ರವೇಶಿಸಿತು. ಭಾರತದ ಜೋಡಿಯು 21-6, 21-14ರಿಂದ ಥಾಯ್ಲೆಂಡ್‌ನ ಓರ್ನಿಚಾ ಜೋಂಗ್ಸಾತಪೋರ್ನ್ಪರ್ನ್ ಮತ್ತು ಸುಕಿರ್ತ ಸುವಾಚೈ ಅವರನ್ನು ಮಣಿಸಿತು.ಅಶ್ವಿನಿ ಮತ್ತು ತನಿಶಾ ಜೋಡಿಯು ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಪಿ ಕೀ ಗೋ ಮತ್ತು ಮೆಯ್ ಕ್ಸಿಂಗ್ ಟೆಹ್ ಅವರನ್ನು ಎದುರಿಸಲಿದೆ.

ಪುರುಷರ ಸಿಂಗಲ್ಸ್‌ನ ಕ್ವಾಲಿಫೈಯರ್ ಸುತ್ತಿನಲ್ಲಿ ಕರ್ನಾಟಕದ ಆಯುಷ್ ಶೆಟ್ಟಿ 21-7, 21-15ರಿಂದ ಕಿದಂಬಿ ಶ್ರೀಕಾಂತ್ ಅವರಿಗೆ ಆಘಾತ ನೀಡಿದರು. ಆಯುಷ್ ಮುಖ್ಯ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಶಿ ಯು ಕಿ (ಚೀನಾ) ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ತಾನ್ಯಾ ಹೇಮಂತ್ 16-21, 21-17, 21-15ರಿಂದ ಚೀನಾ ತೈಪೆಯ ಟೊಂಗ್ ಸಿಯೊಯು ಟಿಂಗ್ ಅವರನ್ನು ಮಣಿಸಿ ಮುಖ್ಯಸುತ್ತು ಪ್ರವೇಶಿಸಿದರು. ಮುಂದಿನ ಸುತ್ತಿನಲ್ಲಿ ಥಾಯ್ಲೆಂಡ್‌ನ ರಾಚನೋಕ್ ಇಂಟನಾನ್ ಅವರನ್ನು ಎದುರಿಸುವರು.

ಎಚ್‌.ಡಿ.ಕುಮಾರಸ್ವಾಮಿ–ಶಿವರಾಜ್ ಸಿಂಗ್ ಚೌಹಾಣ್ ಚರ್ಚೆ

ರಾಜ್ಯದಲ್ಲಿ ತೆಂಗು ಬೆಳೆಗಾರರ ಸಮಾವೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ಕೊಬ್ಬರಿ ಮತ್ತು ಅಡಿಕೆ ಬೆಳೆಗಾರರು ಸೇರಿದಂತೆ ಕೃಷಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಮಂಗಳವಾರ ಇಲ್ಲಿ ಚರ್ಚೆ ನಡೆಸಿದರು.

ಅಡಿಕೆಯ ರೋಗಗಳ ನಿಯಂತ್ರಣಕ್ಕೆ ₹67 ಕೋಟಿಗಳನ್ನು ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗುವುದು ಎಂದು ಚೌಹಾಣ್ ಭರವಸೆ ನೀಡಿದ್ದಾರೆ. ಇದಕ್ಕೆ ಕುಮಾರಸ್ವಾಮಿ ಅವರು ಕೃಷಿ ಸಚಿವರಿಗೆ ಅಭಿನಂದನೆಗಳನ್ನು ತಿಳಿಸಿದರು.

ತೆಂಗು ಬೆಳೆಗಾರರು ಎದುರಿಸುತ್ತಿರುವ ಕಠಿಣ ಸವಾಲುಗಳ ಬಗ್ಗೆ ಕೃಷಿ ಸಚಿವರ ಗಮನ ಸೆಳೆದ ಕುಮಾರಸ್ವಾಮಿ, ತೆಂಗು ಬೆಳೆಗಾರರ ಸಂಕಷ್ಟ ಪರಿಹಾರ ಮಾಡಲು ಕೇಂದ್ರದಿಂದ ದೊಡ್ಡ ಉಪಕ್ರಮ ಆಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ತೆಂಗು ಬೆಳೆಗಾರರ ಸಮಾವೇಶ ನಡೆಸಿ ಅವರ ಸಂಕಷ್ಟಗಳಿಗೆ ಪರಿಹಾರ ನೀಡಬೇಕು ಎಂದು ಮನವಿ ಮಾಡಿದರು.

'ಸಮಾವೇಶದಲ್ಲಿ ಬೆಳೆಗಾರರು ಸಮಸ್ಯೆ ಬಗ್ಗೆ ವಿಸ್ತೃತವಾಗಿ ಚರ್ಚಿಸಲಿ. ಅನಂತರ ಪರಿಹಾರೋಪಾಯಗಳನ್ನು ಕಂಡುಕೊಳ್ಳೋಣ' ಎಂದು ಚೌಹಾಣ್ ಹೇಳಿದರು.

ದುಬಾರಿ ಸಾಗಣೆ ವೆಚ್ಚವೇ ದೊಡ್ಡ ಸಮಸ್ಯೆ ಆಗಿದೆ. ರೈತನ ಬಹುತೇಕ ಆದಾಯ ಸಾಗಾಣಿಕೆಗೆ ವ್ಯಯವಾಗುತ್ತಿದೆ. ಅವರಿಗೆ ನ್ಯಾಯಯುತ ಬೆಲೆ ದಕ್ಕಿಸಿಕೊಡುವುದರ ಜೊತೆಗೆ ಸಾಗಣೆ ವ್ಯವಸ್ಥೆಯನ್ನು ರೈತರ ಕೈಗೆಟುಕುವಂತೆ ಮಾಡುವುದು ಅತ್ಯಗತ್ಯವಾಗಿದೆ. ಇದಕ್ಕೆ ಕೃಷಿ ಸಚಿವಾಲಯದ ನೆರವು ಅಗತ್ಯವಿದೆ' ಕುಮಾರಸ್ವಾಮಿ ಅವರು ಕೋರಿದರು.

ಕೃಷಿ ಉತ್ಪನ್ನಗಳ ಸರಪಳಿಯಿಂದ ಮಧ್ಯವರ್ತಿಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ಅಗತ್ಯದ ಬಗ್ಗೆಯೂ ಇಬ್ಬರೂ ಸಚಿವರು ಚರ್ಚೆ ನಡೆಸಿದರು.

ರ‍್ಯಾಂಕಿಂಗ್: 2ನೇ ಸ್ಥಾನಕ್ಕೆ ಮಂದಾನ

ದುಬೈ (ಪಿಟಿಐ): ಉತ್ತಮ ಲಯದಲ್ಲಿರುವ ಭಾರತ ತಂಡದ ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಮಂಗಳವಾರ ಪ್ರಕಟಗೊಂಡ ಐಸಿಸಿ ಮಹಿಳಾ ಏಕದಿನ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ ಎರಡನೇ ಕ್ರಮಾಂಕಕ್ಕೆ ಏರಿದ್ದಾರೆ. ಐರ್ಲೆಂಡ್ ವಿರುದ್ಧ ಇತ್ತೀಚಿನ ಸರಣಿಯಲ್ಲಿ ಸ್ಮೃತಿ ಉತ್ತಮವಾಗಿ ಆಡಿದ್ದರು.

ಮಂದಾನ ಅವರು ಅಗ್ರ ಹತ್ತರಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕ ಆಟಗಾರ್ತಿ. ಅವರು ಕೊನೆಯ ಏಕದಿನ ಪಂದ್ಯದಲ್ಲಿ 135 ರನ್ ಸಿಡಿಸಿದ್ದರು. ಅದಕ್ಕೆ ಮೊದಲಿನ ಎರಡು ಪಂದ್ಯಗಳಲ್ಲಿ ಕ್ರಮವಾಗಿ 41 ಮತ್ತು 73 ರನ್ ಬಾರಿಸಿದ್ದರು.

ಮಂದಾನ 738 ಪಾಯಿಂಟ್ಸ್ ಕಲೆಹಾಕಿದ್ದಾರೆ. ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ (773) ಅಗ್ರಸ್ಥಾನದಲ್ಲಿದ್ದರೆ, ಶ್ರೀಲಂಕಾದ ಚಮಾರಿ ಅಟ್ಟಪಟ್ಟು (733 ಪಾಯಿಂಟ್ಸ್) ಮೂರನೇ ಸ್ಥಾನದಲ್ಲಿದ್ದಾರೆ.

ದೀಪ್ತಿ ಶರ್ಮಾ 344 ಪಾಯಿಂಟ್ಸ್ ಕಲೆಹಾಕಿದ್ದು, ಆಲ್‌ರೌಂಡರ್‌ಗಳ ವಿಭಾಗದಲ್ಲಿ ಆರನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ವಿರುದ್ಧ ಮೊದಲ ಟಿ20 ಪಂದ್ಯ ಇಂದು • ಭಾರತಕ್ಕೆ ಗೆಲುವಿನ ಸವಾಲು

ಶಮಿ ನಿರ್ವಹಣೆಯ ಮೇಲೆ ಗಮನ

ಅಭ್ಯಾಸನಿರತ ಮೊಹಮ್ಮದ್ ಶಮಿ ಮತ್ತು ಅರ್ಷದೀಪ್ ಸಿಂಗ್ ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಇತ್ತೀಚಿನ ಟೆಸ್ಟ್ ಸರಣಿಯಲ್ಲಿ ನೆಲಕಚ್ಚಿದ ನಂತರ ಅದನ್ನು ಸರಿದೂಗಿಸುವ ಅವಕಾಶವಾಗಿ ಈಗ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ತಂಡ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಫಿಟ್ ಆಗಿ ತಂಡಕ್ಕೆ ಮರಳಿರುವ ಮೊಹಮ್ಮದ್ ಶಮಿ ಅವರ ನಿರ್ವಹಣೆಯ ಮೇಲೆ ಹೆಚ್ಚಿನ ಕುತೂಹಲವಿದೆ.

ಐದು ಪಂದ್ಯಗಳ ಟಿ20 ಸರಣಿಯ ನಂತರ ಇವೆರಡು ತಂಡಗಳು ಮೂರು ಪಂದ್ಯಗಳ ಏಕದಿನ ಸರಣಿ ಆಡಲಿವೆ. ಪಾಕಿಸ್ತಾನ– ದುಬೈನಲ್ಲಿ ನಡೆಯುವ ಚಾಂಪಿಯನ್ಸ್ ಟ್ರೋಫಿಗೆ ಮೊದಲು ತಂಡ ಸಂಯೋಜನೆ, ಪ್ರಯೋಗ ಮತ್ತು ಸಾಮರ್ಥ್ಯ ಪರೀಕ್ಷೆಗೆ ಉಭಯ ತಂಡಗಳಿಗೆ ಈ ಸರಣಿ ಉತ್ತಮ ವೇದಿಕೆಯಾಗಿದೆ.

ಶಮಿ 2023ರ ಏಕದಿನ ವಿಶ್ವಕಪ್‌ನಲ್ಲಿ ಮೊದಲ ನಾಲ್ಕು ಪಂದ್ಯ ಕಳೆದುಕೊಂಡರೂ, ನಂತರ 24 ವಿಕೆಟ್‌ಗಳೊಡನೆ ತಂಡದ ಯಶಸ್ವಿ ಬೌಲರ್ ಎನಿಸಿದ್ದರು. ವಿಶೇಷವೆಂದರೆ, 34 ವರ್ಷ ವಯಸ್ಸಿನ ವೇಗಿ 2014ರಲ್ಲಿ ಪದಾರ್ಪಣೆ ನಂತರ ಆಡಿದ 23 ಟಿ20 ಪಂದ್ಯಗಳಲ್ಲಿ 29.62 ಸರಾಸರಿಯಲ್ಲಿ 24 ವಿಕೆಟ್‌ಗಳನ್ನು ಪಡೆದಿರುವುದು. ಫಿಟ್ನೆಸ್ ಸವಾಲಿನ ಜೊತೆಗೆ ಚುಟುಕು ಕ್ರಿಕೆಟ್‌ನಲ್ಲಿ ತಮ್ಮ ಪ್ರದರ್ಶನ ಸುಧಾರಿಸಲು ಪ್ರಯತ್ನ ನಡೆಸಲಿದ್ದಾರೆ.

ಚಾಂಪಿಯನ್ಸ್ ಟ್ರೋಫಿ ತಂಡಕ್ಕೂ ಆಯ್ಕೆಯಾಗಿರುವ ಶಮಿ ಅವರ ಪುನರಾಗಮನ ದೇಶದ ಕ್ರಿಕೆಟ್ ಪ್ರಿಯರ ಗಮನ ಸೆಳೆದಿದೆ. ಇತ್ತೀಚೆಗೆ ದೇಶಿ ಕ್ರಿಕೆಟ್‌ನಲ್ಲಿ ಅವರ ಬೌಲಿಂಗ್ ಉತ್ತಮ ಮಟ್ಟದಲ್ಲೇ ಇತ್ತು.

ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಬೆನ್ನುನೋವಿನಿಂದ ಬಳಲುತ್ತಿದ್ದು ಚಾಂಪಿಯನ್ಸ್ ಟ್ರೋಫಿ ಆಡುವುದು ಅನುಮಾನ ಆಗಿರುವ ಕಾರಣ ಶಮಿ ಅವರ ಪುನರಾಮಗನಕ್ಕೆ ಹೆಚ್ಚಿನ ಮಹತ್ವವಿದೆ.

ಅಕ್ಷರ್‌ಗೆ ಹೊಣೆ: ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಟಿ20 ಮಾದರಿಯಲ್ಲಿ ಮೊದಲ ಬಾರಿ ಭಾರತ ತಂಡದ ಉಪನಾಯಕನಾಗಿಕಣಕ್ಕಿಳಿಯಲಿದ್ದಾರೆ. ಕೆರಿಬಿಯನ್‌ನಲ್ಲಿ ಕಳೆದ ವರ್ಷ ಟಿ20 ವಿಶ್ವಕಪ್ ಗೆಲುವಿನಲ್ಲಿ ವಹಿಸಿದ ಪ್ರಮುಖ ಪಾತ್ರಕ್ಕಾಗಿ ಅಕ್ಷರ್‌ಗೆ ಈ ಪಟ್ಟ ಒಲಿದಿದೆ.

ಸಂಜು ಸ್ಯಾಮ್ಸನ್ ಪಾಲಿಗೆ ಈ ಸರಣಿ ನಿರ್ಣಾಯಕ. ಅವರನ್ನು ಚಾಂಪಿಯನ್ಸ್ ಟ್ರೋಫಿ ತಂಡಕ್ಕೆ ಪರಿಗಣಿಸಿರಲಿಲ್ಲ. ಕಳೆದ ವರ್ಷ ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯಲ್ಲಿ ಸತತ ಎರಡು ಶತಕಗಳೊಡನೆ ಅವರು ಬಾಹುಬಲ ಮೆರೆದಿದ್ದರು. ಭರವಸೆಯ ಆಲ್‌ರೌಂಡರ್ ನಿತೀಶ್ ರೆಡ್ಡಿ ಅವರು ತಂಡಕ್ಕೆ ಹೆಚ್ಚುವರಿ ಬೌಲಿಂಗ್ ಆಯ್ಕೆ ಒದಗಿಸಿದ್ದಾರೆ.

ಇಂಗ್ಲೆಂಡ್‌ಗೆ ಸವಾಲು: ಜೋಸ್ ಬಟ್ಲರ್ ನೇತೃತ್ವದ ಇಂಗ್ಲೆಂಡ್ ತಂಡ, ನ್ಯೂಜಿಲೆಂಡ್‌ನ ದಿಗ್ಗಜ ಬ್ರೆಂಡನ್ ಮೆಕ್ಕಲಂ ಕೋಚ್ ಆದ ನಂತರ ಮೊದಲ ಸಲ ಕಣಕ್ಕಿಳಿಯುತ್ತಿದೆ. ಟಿ20 ವಿಶ್ವಕಪ್‌ನಲ್ಲಿ ತಂಡ ಹೊರಬಿದ್ದ ಕಾರಣ ಮ್ಯಾಥ್ಯೂ ಮೋಟ್ ಪದತ್ಯಾಗ ಮಾಡಿದ್ದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಬಾಝ್‌ಬಾಲ್ ಮೂಲಕ ಕ್ರಾಂತಿಯೆಬ್ಬಿಸಿದ ಮೆಕ್ಕಲಂ ಈಗ ಸೀಮಿತ ಓವರುಗಳಲ್ಲಿ ಯಾವ ರೀತಿ ತಂತ್ರ ಅನುಸರಿಸುತ್ತಾರೆ ಎಂಬುದು ಕುತೂಹಲಕ್ಕೆ ಎಡೆಮಾಡಿದೆ.

ಮೆಕ್ಕಲಂ ಅವರಿಗೆ ಕೋಲ್ಕತ್ತ ಚಿರಪರಿಚಿತ. ಅವರು ಐಪಿಎಲ್‌ನಲ್ಲಿ ಕೆಕೆಆರ್‌ಗೆ ಆಡಿದ್ದರು. ನಂತರ ತಂಡಕ್ಕೆ ಮಾರ್ಗದರ್ಶನವನ್ನೂ ನೀಡಿದ್ದರು.

ತಂಡವು, ಪ್ರಮುಖ ಆಟಗಾರರಾದ ರೀಸ್ ಟೋಪ್ಲಿ, ಸ್ಯಾಮ್ ಕರನ್ ಮತ್ತು ವಿಲ್ ಜ್ಯಾಕ್ಸ್ ಅವರನ್ನು ಕಳೆದುಕೊಂಡಿದೆ. ಆದರೆ 21 ವರ್ಷ ವಯಸ್ಸಿನ ಬ್ಯಾಟರ್ ಜೇಕಬ್ ಬೆಥೆಲ್ ಭರವಸೆ ಮೂಡಿಸಿದ್ದಾರೆ. ಅವರು ಏಳು ಟಿ20 ಪಂದ್ಯಗಳಲ್ಲಿ 167.96ರ ಸ್ಟ್ರೈಕ್‌ರೇಟ್ ಹೊಂದಿದ್ದು 57.66 ಸರಾಸರಿ ಹೊಂದಿದ್ದಾರೆ.

ತಂಡಗಳು: ಭಾರತ (15): ಸೂರ್ಯಕುಮಾರ್ ಯಾದವ್ (ನಾಯಕ), ಅಕ್ಷರ್ ಪಟೇಲ್ (ಉಪನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ, ವರುಣ್ ಚಕ್ರವರ್ತಿ, ರವಿ ಬಿಷ್ಣೋಯಿ, ವಾಷಿಂಗ್ಟನ್ ಸುಂದರ್ ಮತ್ತು ಧ್ರುವ್ ಜುರೇಲ್ (ವಿಕೆಟ್ ಕೀಪರ್)

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ), ಹ್ಯಾರಿ ಬ್ರೂಕ್ (ಉಪನಾಯಕ), ಫಿಲ್ ಸಾಲ್ಟ್ (ವಿಕೆಟ್ ಕೀಪರ್), ಜೇಕಬ್ ಬೆಥೆಲ್, ಲಿಯಾಮ್ ಲಿವಿಂಗ್‌ಸ್ಟೋನ್, ಜೊಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಬೆನ್ ಡಕೆಟ್, ಜೇಮಿ ಓವರ್ಟನ್, ಅದಿಲ್ ರಶೀದ್ ಮತ್ತು ಮಾರ್ಕ್ ವುಡ್.

‘ಏಕದಿನ ತಂಡದಿಂದ ಬಿಟ್ಟದ್ದಕ್ಕೆ ಬೇಸರವಿಲ್ಲ’

ಸೂರ್ಯ ಕುಮಾರ್

ಕೋಲ್ಕತ್ತ (ಪಿಟಿಐ): ‘ಚಾಂಪಿಯನ್ಸ್ ಟ್ರೋಫಿ ತಂಡದಿಂದ ತಮ್ಮನ್ನು ಕೈಬಿಟ್ಟದ್ದರಿಂದ ನೋವೇನೂ ಆಗಿಲ್ಲ. ಅದನ್ನು ಒಪ್ಪಿಕೊಂಡಿದ್ದೇನೆ. ಆದರೆ ಏಕದಿನ ಮಾದರಿಯಲ್ಲಿ ಉತ್ತಮ ಪ್ರದರ್ಶನ ನೀಡಲಾಗದ್ದಕ್ಕೆ ಬೇಸರವಿದೆ. ಈಗ ಆಯ್ಕೆಯಾದವರು ತಂಡದಲ್ಲಿರಲು ಯೋಗ್ಯರು’ ಎಂದು ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮಂಗಳವಾರ ಹೇಳಿದ್ದಾರೆ.ಬೀಸಾಟಕ್ಕೆ ಹೆಸರಾದ ಸೂರ್ಯ ಅವರನ್ನು ಆಯ್ಕೆಗಾರರು 15 ಆಟಗಾರರ ಚಾಂಪಿಯನ್ಸ್ ಟ್ರೋಫಿ ತಂಡಕ್ಕೆ ಕಡೆಗಣಿಸಿದ್ದರು.ತಮ್ಮ ಬತ್ತಳಿಕೆಯಲ್ಲಿರುವ ವೈವಿಧ್ಯಮಯ ಹೊಡೆತಗಳ ಮೂಲಕ ಸೂರ್ಯಕುಮಾರ್ ಅವರು ಟಿ20 ಕ್ರಿಕೆಟ್‌ನ ಸ್ಫೋಟಕ ಆಟಗಾರರಲ್ಲಿ ಒಬ್ಬರು ಎನಿಸಿದ್ದಾರೆ. ಆದರೆ ಇದೇ ಆಟವನ್ನು ಅವರು 50 ಓವರುಗಳ ಮಾದರಿಯಲ್ಲಿ ತೋರಿಲ್ಲ. 37 ಏಕದಿನ ಪಂದ್ಯಗಳಲ್ಲಿ ಅವರು 25.76 ಸರಾಸರಿಯಲ್ಲಿ 773 ರನ್ ಮಾತ್ರ ಗಳಿಸಿದ್ದಾರೆ. ಚಾಂಪಿಯನ್ಸ್ ಟ್ರೋಫಿ ತಂಡಕ್ಕೆ ಸೇರ್ಪಡೆಗೊಳಿಸ ಕಾರಣ ಬೇಸರ ಆಗಿದೆಯೇ ಎಂಬ ಪ್ರಶ್ನೆಗೆ ಶಾಂತಚಿತ್ತದಿಂದ ಉತ್ತರಿಸಿದ ಅವರು ‘ಬೇಸರ ಏಕೆ ಆಗಬೇಕು? ನಾನು ಚೆನ್ನಾಗಿ ಆಡಿದಿದ್ದರೆ ತಂಡದಲ್ಲಿರುತ್ತಿದ್ದೆ. ನಾನು ಚೆನ್ನಾಗಿ ಆಡದಿದ್ದರೆ, ಅದನ್ನು ಒಪ್ಪಿಕೊಳ್ಳುವುದು ಮುಖ್ಯ’ ಎಂದರು.

ಜೊಕೊವಿಚ್‌ಗೆ ಮಣಿದ ಅಲ್ಕರಾಜ್

ಸೆಮಿಗೆ ಸಬಲೆಂಕಾ, ಜ್ವೆರೇವ್: ಗಾಫ್‌ಗೆ ಬಡೋಸಾ ಆಘಾತ

ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಎಎಫ್‌ಪಿ): ಹತ್ತು ಬಾರಿಯ ಚಾಂಪಿಯನ್, ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಮಂಗಳವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಸದೆಬಡಿದು, ಸೆಮಿಫೈನಲ್‌ನಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ ವಿರುದ್ಧ ಹಣಾಹಣಿಗೆ ವೇದಿಕೆ ಸಜ್ಜುಗೊಳಿಸಿದರು.

ಮಹಿಳೆಯರ ಸಿಂಗಲ್ಸ್‌ನ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಮೂರು ಸೆಟ್‌ಗಳ ಹೋರಾಟದಲ್ಲಿ ಜಯ ಸಾಧಿಸಿ, ನಾಲ್ಕರ ಘಟ್ಟ ಪ್ರವೇಶಿಸುವ ಮೂಲಕ ಹ್ಯಾಟ್ರಿಕ್ ಪ್ರಶಸ್ತಿ ಗೆಲ್ಲುವತ್ತ ದಾಪುಗಾಲಿಟ್ಟರು. ಆದರೆ, ಮೂರನೇ ಶ್ರೇಯಾಂಕದ ಕೊಕೊ ಗಾಫ್ ಕ್ವಾರ್ಟರ್ ಫೈನಲ್‌ನಲ್ಲಿ ಆಘಾತ ಅನುಭವಿಸಿದರು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ 37 ವರ್ಷ ವಯಸ್ಸಿನ ಜೊಕೊವಿಚ್ 4-6, 6-4, 6-3, 6-4ರ ನಾಲ್ಕು ಸೆಟ್‌ಗಳ ಹೈವೋಲ್ಟೇಜ್ ಹೋರಾಟದಲ್ಲಿ ಮೂರನೇ ಶ್ರೇಯಾಂಕದ ಅಲ್ಕರಾಜ್ ಅವರನ್ನು ಮಣಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಹೊಸ್ತಿಲಲ್ಲಿರುವ ಏಳನೇ ಶ್ರೇಯಾಂಕದ ಜೊಕೊವಿಚ್ ಅವರು 21 ವರ್ಷ ವಯಸ್ಸಿನ ಅಲ್ಕರಾಜ್ ವಿರುದ್ಧ ಗೆಲುವಿನ ದಾಖಲೆಯನ್ನು 5-3ಕ್ಕೆ ವಿಸ್ತರಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನ ಫೈನಲ್‌ನಲ್ಲಿ ಜೊಕೊವಿಚ್ ಅವರು ಅಲ್ಕರಾಜ್ ಅವರನ್ನು ಸೋಲಿಸಿದ್ದರು. ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಿಗೆ ಒಡೆಯನಾಗಿರುವ ಅಲ್ಕರಾಜ್ ಅವರಿಗೆ ಈ ಬಾರಿಯೂ ಮೆಲ್ಬರ್ನ್‌ನಲ್ಲಿ ಎಂಟರ ಘಟ್ಟವನ್ನು ದಾಟಲು ಸಾಧ್ಯವಾಗಲಿಲ್ಲ.

ಇದಕ್ಕೂ ಮುನ್ನ ಎರಡನೇ ಶ್ರೇಯಾಂಕದ ಜ್ವೆರೇವ್ 7-6 (7/1), 7-6 (7/0), 2-6, 6-1ರಿಂದ ಅಮೆರಿಕದ ಟಾಮಿ ಪೌಲ್ ಅವರನ್ನು ಹಿಮ್ಮೆಟ್ಟಿಸಿದರು. ಇಲ್ಲಿ ಮೂರನೇ ಬಾರಿ ಸೆಮಿಫೈನಲ್ ಪ್ರವೇಶಿಸಿರುವ 27 ವರ್ಷ ವಯಸ್ಸಿನ ಜ್ವೆರೇವ್, ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿದ್ದಾರೆ.

ಅಗ್ರ ಶ್ರೇಯಾಂಕದ ಸಬಲೆಂಕಾ ಕ್ವಾರ್ಟರ್ ಫೈನಲ್‌ನಲ್ಲಿ 6-2, 2-6, 6-3ರಿಂದ 27ನೇ ಶ್ರೇಯಾಂಕದ ಅನಸ್ತೇಶಿಯಾ ಪಾವ್ಲ್ಯುಚೆಂಕೋವಾ (ರಷ್ಯಾ) ಅವರನ್ನು ಸೋಲಿಸಿದರು. ಅವರು ಸೆಮಿಫೈನಲ್‌ನಲ್ಲಿ ಸ್ಪೇನ್‌ನ ಪೌಲಾ ಬಡೋಸಾ ಅವರ ಸವಾಲನ್ನು ಎದುರಿಸಲಿದ್ದಾರೆ. 11ನೇ ಶ್ರೇಯಾಂಕದ ಬಡೋಸಾ 7-5, 6-4ರಿಂದ ಅಮೆರಿಕದ ಗಾಫ್ ಅವರನ್ನು ಸದೆಬಡಿದರು.

ಬೋಪಣ್ಣ– ಶುಯಿ ಜೋಡಿ ನಿರ್ಗಮನ

ಮೆಲ್ಬರ್ನ್ (ಪಿಟಿಐ): ಭಾರತದ ಅನುಭವಿ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರು ಚೀನಾದ ಜೊತೆಗಾರ್ತಿ ಝಾಂಗ್ ಶುಯಿ ಜೊತೆ ಮಿಶ್ರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಪರಾಭವಗೊಂಡರು.

ಬೋಪಣ್ಣ ಅವರ ನಿರ್ಗಮನದೊಂದಿಗೆ ಟೂರ್ನಿಯಲ್ಲಿ ಭಾರತೀಯರ ಅಭಿಯಾನಕ್ಕೆ ತೆರೆಬಿದ್ದಿದೆ. ಕರ್ನಾಟಕದ 44 ವರ್ಷ ವಯಸ್ಸಿನ ಅವರು ಕಳೆದ ಬಾರಿ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರೊಂದಿಗೆ ಪುರುಷರ ಡಬಲ್ಸ್ ಪ್ರಶಸ್ತಿ ಗೆದ್ದು ಆಗಿ ಇತಿಹಾಸ ನಿರ್ಮಿಸಿದ್ದರು.

ಮಂಗಳವಾರ ನಡೆದ ಪಂದ್ಯದಲ್ಲಿ ಬೋಪಣ್ಣ– ಶುಯಿ ಜೋಡಿಯು 6-2, 4-6, 9-11ರಿಂದ ಸ್ಥಳೀಯ ವೈಲ್ಡ್‌ಕಾರ್ಡ್ ಆಟಗಾರರಾದ ಜಾನ್ ಪೀರ್ಸ್ ಮತ್ತು ಒಲಿವಿಯಾ ಗಡೆಕಿ ಅವರಿಗೆ ಮಣಿಯಿತು.

ವೈಷ್ಣವಿ ಹ್ಯಾಟ್ರಿಕ್: ಭಾರತಕ್ಕೆ ಜಯ

ವೈಷ್ಣವಿ ಶರ್ಮಾ –ಐಸಿಸಿ ಎಕ್ಸ್ ಚಿತ್ರ

ಕ್ವಾಲಾಲಂಪುರ (ಪಿಟಿಐ): ಪದಾರ್ಪಣೆ ಪಂದ್ಯದಲ್ಲೇ ‘ಹ್ಯಾಟ್ರಿಕ್’ ಸೇರಿ ಐದು ವಿಕೆಟ್ ಸಾಧನೆ ಮೆರೆದ ಎಡಗೈ ಸ್ಪಿನ್ನರ್ ವೈಷ್ಣವಿ ಶರ್ಮಾ ಅವರ ಪರಿಣಾಮಕಾರಿ ದಾಳಿಯ ಬಲದಿಂದ ಮಂಗಳವಾರ ಭಾರತದ ವನಿತೆಯರು ಐಸಿಸಿ 19 ವರ್ಷದೊಳಗಿನ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದರು.

ಟಾಸ್ ಸೋತು ಬ್ಯಾಟಿಂಗ್‌ಗೆ ಬಂದ ಆತಿಥೇಯ ತಂಡಕ್ಕೆ ಭಾರತದ ವೈಷ್ಣವಿ ಅವರು (5ಕ್ಕೆ5) ಮತ್ತು ಆಯುಷಿ ಶುಕ್ಲಾ (8ಕ್ಕೆ 3) ಬಲವಾದ ಪೆಟ್ಟು ನೀಡಿದರು. ಯಾವ ಹಂತದಲ್ಲೂ ಎದುರಾಳಿ ತಂಡವನ್ನು ಚೇತರಿಸಿಕೊಳ್ಳಲು ಅವಕಾಶ ನೀಡಲಿಲ್ಲ. ಹೀಗಾಗಿ, ಮಲೇಷ್ಯಾ 14.3 ಓವರ್‌ಗಳಲ್ಲಿ 31 ರನ್‌ಗೆ ಆಲೌಟ್ ಆಯಿತು. ಯಾರೊಬ್ಬರೂ ಐದು ರನ್ ದಾಟಲಿಲ್ಲ.

ಭಾರತ ತಂಡವು ಈ ಗುರಿಯನ್ನು ವಿಕೆಟ್ ನಷ್ಟವಿಲ್ಲದೆ 2.5 ಓವರ್‌ಗಳಲ್ಲಿ ತಲುಪಿ, ಜಯಭೇರಿ ಬಾರಿಸಿತು. ಜಿ. ತ್ರಿಶಾ 12 ಎಸೆತಗಳಲ್ಲಿ ಔಟಾಗದೇ 27 ರನ್ ಗಳಿಸಿದರು.

ವೈಷ್ಣವಿ ಅವರ ಕೈಚಳಕದ ಮುಂದೆ ಆತಿಥೇಯ ತಂಡದ ಬ್ಯಾಟರ್‌ಗಳು ತಬ್ಬಿಬ್ಬಾದರು. ಅವರು 14ನೇ ಓವರ್‌ನಲ್ಲಿ ನೂರ್ ಐನ್ ಬಿಂಟಿ ರೋಸ್ಲಾನ್, ನೂರ್ ಇಸ್ಮಾ ದಾನಿಯಾ ಮತ್ತು ಸಿತಿ ನಜ್ವಾಹ್ ಅವರ ವಿಕೆಟ್ ಪಡೆದು ಹ್ಯಾಟ್ರಿಕ್ ಮೆರೆದರು. ವೈಷ್ಣವಿ ಅವರ ಅಂಕಿಅಂಶವು ಟೂರ್ನಿಯ ಇತಿಹಾಸದಲ್ಲೇ ಅತ್ಯುತ್ತಮ ಬೌಲಿಂಗ್ ದಾಖಲೆಯಾಗಿದೆ.

ಸಂಕ್ಷಿಪ್ತ ಸ್ಕೋರ್: ಮಲೇಷ್ಯಾ: 14.3 ಓವರ್‌ಗಳಲ್ಲಿ 31 (ವೈಷ್ಣವಿ ಶರ್ಮಾ 5ಕ್ಕೆ 5, ಆಯುಷಿ ಶುಕ್ಲಾ 8ಕ್ಕೆ 3). ಭಾರತ: 2.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 32 (ಜಿ.ತ್ರಿಶಾ ಔಟಾಗದೇ 27). ಫಲಿತಾಂಶ: ಭಾರತಕ್ಕೆ 10 ವಿಕೆಟ್ ಜಯ.

ಪಂದ್ಯದ ಆಟಗಾರ್ತಿ: ವೈಷ್ಣವಿ ಶರ್ಮಾ

ಅಗ್ರಸ್ಥಾನಕ್ಕೆ ಪ್ರಜ್ಞಾನಂದ

ಆರ್‌.ಪ್ರಜ್ಞಾನಂದ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಸ್ವದೇಶದ ಅರ್ಜುನ್ ಇರಿಗೇಶಿ ಅವರನ್ನು ಸೋಲಿಸಿದರು. ಈ ಗೆಲುವಿನಿಂದ ಚೆನ್ನೈನ ಆಟಗಾರ, ಟಾಟಾ ಸ್ಟೀಲ್ ಚೆಸ್ ಚಾಂಪಿಯನ್‌ಷಿಪ್‌ನ ಮೂರನೇ ಸುತ್ತಿನ ನಂತರ ಉಜ್ಬೇಕಿಸ್ತಾನದ ಆಟಗಾರ ನದಿರ್ಬೆಕ್ ಅಬ್ದುಸತ್ತಾರೋವ್ ಜೊತೆ ಮುನ್ನಡೆ ಹಂಚಿಕೊಂಡಿದ್ದಾರೆ.

19 ವರ್ಷ ವಯಸ್ಸಿನ ಪ್ರಜ್ಞಾನಂದ ಮತ್ತು ಅಬ್ದುಸತ್ತಾರೋವ್ ಅವರು ತಲಾ 2.5 ಪಾಯಿಂಟ್ಸ್ ಹಂಚಿಕೊಂಡಿದ್ದಾರೆ. ಇದು ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಇರಿಗೇಶಿ ಅವರಿಗೆ ಎರಡನೇ ಸೋಲು. ಮೊದಲ ಸುತ್ತಿನಲ್ಲಿ ಅವರು ಸ್ವದೇಶದ ಪೆಂಟ್ಯಾಲ ಹರಿಕೃಷ್ಣ ಅವರಿಗೆ ಮಣಿದಿದ್ದರು.

ವಿಶ್ವ ಚಾಂಪಿಯನ್ ಗುಕೇಶ್ ದೊಮ್ಮರಾಜು ಅವರು ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ ಜೊತೆ ಡ್ರಾ ಮಾಡಿಕೊಂಡರು. ಗುಕೇಶ್ ಮತ್ತು ಕರುವಾನ ತಲಾ ಎರಡು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಕೊಕ್ಕೊ ವಿಶ್ವಕಪ್‌ನಲ್ಲಿ ಮಿಂಚಿದ ಮಂಡ್ಯ ಜಿಲ್ಲೆಯ ಪ್ರತಿಭೆ

ಗೆಲುವನ್ನು ರಾಜ್ಯಕ್ಕೆ ಅರ್ಪಿಸುವೆ: ಗೌತಮ್

ಪ್ರಜಾವಾಣಿ ವಾರ್ತೆ

ವಿಶ್ವಕಪ್ ಟ್ರೋಫಿಯೊಂದಿಗೆ ಎಂ.ಕೆ. ಗೌತಮ್

ಮಂಡ್ಯ: ‘ಚೊಚ್ಚಲ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಭಾರತವನ್ನು ಪ್ರತಿನಿಧಿಸಿ, ದೇಶಕ್ಕಾಗಿ ಪ್ರಶಸ್ತಿ ಗೆದ್ದ ತೃಪ್ತಿ ನನಗಿದೆ. ಈ ಗೆಲುವನ್ನು ನನ್ನ ರಾಜ್ಯ ಮತ್ತು ನನ್ನೂರು ಮಂಡ್ಯ ಜಿಲ್ಲೆಗೆ ಅರ್ಪಿಸುವೆ...’

– ಇದು ನವದೆಹಲಿಯಲ್ಲಿ ಭಾನುವಾರ ಕೊಕ್ಕೊ ವಿಶ್ವಕಪ್ ಕಿರೀಟ ಜಯಿಸಿದ ಭಾರತದ ಪುರುಷರ ತಂಡದಲ್ಲಿದ್ದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಡಿ.ಮಲ್ಲಿಗೆರೆ ಗ್ರಾಮದ ಎಂ.ಕೆ.ಗೌತಮ್ ಮನದ ಮಾತು.

‘ಬಾಲ್ಯದಿಂದಲೇ ನಾನು ಕೊಕ್ಕೊ ಇಷ್ಟಪಟ್ಟು ಆಡುತ್ತಿರುವೆ. ನನಗೆ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ರಾಷ್ಟ್ರಮಟ್ಟದ ಸೀನಿಯರ್ ಕೊಕ್ಕೊ ಟೂರ್ನಿ ಆಯೋಜನೆಯು ಮರೆಯಲಾಗದ ಸ್ಪರ್ಧೆಯಾಗಿತ್ತು. ಅಲ್ಲಿ ಮೂರನೇ ಬಹುಮಾನ ಒಲಿದಿತ್ತು. ಅಲ್ಲಿನ ನನ್ನ ಆಟವನ್ನು ನೋಡಿ ನನ್ನನ್ನು ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆ ಮಾಡಲಾಗಿತ್ತು. ಅಲ್ಲಿಂದ ರಾಷ್ಟ್ರೀಯ ತಂಡಕ್ಕೆ ಕರ್ನಾಟಕದಿಂದ ನಾನೊಬ್ಬನೇ ಆಯ್ಕೆಯಾಗಿದ್ದೆ’ ಎಂದು ಪ್ರಜಾವಾಣಿ’ ಜೊತೆ ಎಂ.ಕೆ. ಗೌತಮ್ ಸಂತಸ ಹಂಚಿಕೊಂಡರು.

‘ಶಾಲಾ ಮಟ್ಟದಲ್ಲಿ ಕೊಕ್ಕೊ ಆಡುತ್ತಿದ್ದೆ. ಅದೇ ಕ್ರೀಡೆಯ ವಿಶ್ವಕಪ್ ಟೂರ್ನಿಯಲ್ಲಿ ರಾಷ್ಟ್ರೀಯ ತಂಡಕ್ಕೆ ಆಡುತ್ತೇನೆ ಎಂದು ಕನಸಲ್ಲೂ ಊಹಿಸಿರಲಿಲ್ಲ. ನಮ್ಮ ತಂಡವು ಎಲ್ಲಾ ವಿಭಾಗಗಳಿಂದಲೂ ಸಂತುಲಿತವಾಗಿತ್ತು. ಹೀಗಾಗಿ, ಚಾಂಪಿಯನ್ ಆಗಲು ಸಾಧ್ಯವಾಯಿತು’ ಎಂದು ಸೆಮಿಫೈನಲ್‌ನಲ್ಲಿ ಉತ್ತಮ ಡಿಫೆಂಡರ್ ಗೌರವಕ್ಕೆ ಪಾತ್ರವಾಗಿದ್ದ ಗೌತಮ್ ಹೇಳಿದರು.

‘ನಮ್ಮ ದೇಶಿ ಕ್ರೀಡೆಯಾಗಿರುವ ಕೊಕ್ಕೊಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಈ ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ಸೂಕ್ತ ಗೌರವ ದೊರೆಯಬೇಕು. ಆಗ ಇನ್ನಷ್ಟು ಸಾಧನೆಗೆ ಪ್ರೇರಣೆ ಸಿಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ಗೌತಮ್ ಅವರಿದ್ದ ತಂಡವು ಪ್ರಶಸ್ತಿ ಗೆದ್ದಿರುವುದಕ್ಕೆ ಅವರ ಪೋಷಕರಾದ ಕಪನಿಗೌಡ ಎಸ್.ರೇಖಾವತಿ ಹಾಗೂ ಡಿ.ಮಲ್ಲಿಗೆರೆ ಗ್ರಾಮಸ್ಥರಲ್ಲಿ ಸಂಭ್ರಮ ಮನೆಮಾಡಿದೆ.

‘ನಮ್ಮ ಮಗ 16 ವರ್ಷಗಳಿಂದ ಅಂದರೆ, ಆರನೇ ತರಗತಿಯಿಂದಲೂ ಬೆಂಗಳೂರಿನ ಚಾಮರಾಜಪೇಟೆ ರಾಮಮಂದಿರ ಶಾಲೆಯಲ್ಲಿ ಕೊಕ್ಕೊ ಆಡುತ್ತಿದ್ದಾನೆ. ಎಸ್‌ಎಸ್‌ಎಲ್‌ಸಿಯಲ್ಲಿ ವಿಜಯನಗರ ಯಂಗ್ ಪಯೋನಿಯರ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಪ್ರವೇಶ ಪಡೆದು, ತರಬೇತಿ ಮುಂದುವರಿಸಿದ್ದ. ಅಲ್ಲಿಂದಲೇ ಕೊಕ್ಕೊ ಯಾತ್ರೆ ಶುರುವಾಯಿತು. ವಿಶ್ವ ಮೆಚ್ಚುವ ಸಾಧನೆ ಮಾಡಿದ್ದಾನೆ’ ಎಂದು ಕಪನಿ ಗೌಡ ಸಂತಸ ಹಂಚಿಕೊಂಡರು.

24 ವರ್ಷ ವಯಸ್ಸಿನ ಗೌತಮ್ ಅವರು ಬೆಂಗಳೂರಿನ ಎಚ್.ಎಸ್.ಆರ್ ಲೇಔಟ್‌ನ ಅಂಚೆ ಕಚೇರಿಯಲ್ಲಿ ಪೋಸ್ಟ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದಾರೆ.

ಐಎಸ್‌ಎಲ್: ಬಿಎಫ್‌ಸಿಗೆ ಇಂದು ಒಡಿಶಾ ಎಫ್‌ಸಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಗೆಲುವಿನ ಹಳಿಗೆ ಮರಳುವ ಯತ್ನಿಸುತ್ತಿದ್ದು ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆಯುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ಬ್ಲೂಸ್’ ತಂಡ 16 ಪಂದ್ಯಗಳಿಂದ 28 ಪಾಯಿಂಟ್ಸ್ ಸಂಗ್ರಹಿಸಿ ಮೂರನೇ ಸ್ಥಾನದಲ್ಲಿದೆ. ಮೋಹನ್ ಬಾಗನ್ ಸೂಪರ್ ಜೈಂಟ್ಸ್ (37 ಪಾಯಿಂಟ್ಸ್) ಮತ್ತು ಗೋವಾ (30) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.

ಒಡಿಶಾ ತಂಡವೂ ಪರದಾಡುತ್ತಿದ್ದು, 16 ಪಂದ್ಯಗಳಿಂದ 21 ಪಾಯಿಂಟ್ಸ್ ಕಲೆಹಾಕಿ ಲೀಗ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ.

ಟೆನಿಸ್: ಝೆಕ್ ಸಹೋದರಿಯರು ಎರಡನೇ ಸುತ್ತಿಗೆ

ಬೆಂಗಳೂರು: ಝೆಕ್ ರಿಪಬ್ಲಿಕ್‌ನ ಬ್ರೆಂಡಾ ಫ್ರುಹ್ವಿರ್ತೋವಾ ಮತ್ತು ಲಿಂಡಾ ಫ್ರುಹ್ವಿರ್ತೋವಾ ಇಲ್ಲಿನ ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಮಂಗಳವಾರ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಫ್ರುಹ್ವಿರ್ತೋವಾ ಸಹೋದರಿಯರು 6-2, 6-7 (0-7), 11-9ರ ಮೂರು ಸೆಟ್‌ಗಳ ಹೋರಾಟದಲ್ಲಿ ಭಾರತದ ಸಹಜ ಯಮಲಪಲ್ಲಿ ಮತ್ತು ವೈಷ್ಣವಿ ಅಡ್ಕರ್ ಅವರನ್ನು ಹಿಮ್ಮೆಟ್ಟಿಸಿದರು.

ಭಾರತದ ಅಂಕಿತಾ ರೈನಾ ಮತ್ತು ಬ್ರಿಟನ್‌ನ ನಾಯ್ಕ್ತಾ ಬೈನ್ಸ್ ಜೋಡಿಗೆ ಮೊದಲ ಸುತ್ತಿನಲ್ಲೇ ನಿರಾಸೆಯಾಯಿತು. ಜಕುಪೋವಿಕ್ (ಸ್ಲೋವೇನಿಯಾ) ಮತ್ತು ಲಾರಾ ಪಿಗೋಸಿ (ಬ್ರೆಜಿಲ್) ಜೋಡಿಯು 6-3, 6-2ರಿಂದ ಅಂಕಿತಾ– ಬೈನ್ಸ್ ಜೋಡಿಯನ್ನು ಮಣಿಸಿತು.

ಭಾರತದ ಏಕೈಕ ಆಟಗಾರ್ತಿ ರಿಯಾ ಭಾಟಿಯಾ ಗಾಯದ ಕಾರಣದಿಂದ ಪಂದ್ಯದ ಮಧ್ಯದಲ್ಲೇ ಹಿಂದೆ ಸರಿದರು. ದಲಿಲಾ ಜಕುಪೋವಿಕ್ 6-1, 2-1ರಿಂದ ರಿಯಾ ವಿರುದ್ಧ ಮುನ್ನಡೆಯಲ್ಲಿದ್ದರು. ಆದರೆ, ‘ಲಕ್ಕಿ ಲೂಸರ್’ ಆಗಿ ರಿಯಾ ಮುಖ್ಯಸುತ್ತು ಪ್ರವೇಶಿಸಿದರು.

200 ಮೀ. ಓಟ: ಚಿನ್ನ ಗೆದ್ದ ಜ್ಯೋತಿಕಾ

ಕರ್ನಾಟಕ ಕ್ರೀಡಾಕೂಟ: ಈಜಿನಲ್ಲಿ ಚಿಂತನ್‌ಗೆ ನಾಲ್ಕನೇ ಚಿನ್ನ

• ನವೀನ್ ಕುಮಾರ್ ಜಿ
• ಪ್ರವೀಣ್ ಕುಮಾರ್ ಪಿ.ವಿ

ಚಿನ್ನ ಗೆದ್ದ ಜ್ಯೋತಿಕಾ

ಉಡುಪಿ/ಮಂಗಳೂರು: ಉಡುಪಿ ಜಿಲ್ಲೆಯ ಬೈಂದೂರಿನ ಜ್ಯೋತಿಕಾ ಅವರು ಕರ್ನಾಟಕ ಕ್ರೀಡಾಕೂಟದ ಐದನೇ ದಿನವಾದ ಮಂಗಳವಾರ ನಡೆದ ಅಥ್ಲೆಟಿಕ್ಸ್ ಮಹಿಳೆಯರ 200 ಮೀ. ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡರು.

ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ ಜ್ಯೋತಿಕಾ 24 ನಿ. 72 ಸೆ.ಗಳಲ್ಲಿ ಗುರಿ ತಲುಪಿದರೆ, ಉಡುಪಿಯ ಸ್ತುತಿ ಶೆಟ್ಟಿ ಎರಡನೇ ಸ್ಥಾನ ಗಳಿಸಿದರು. ಮೈಸೂರಿನ ಮಮತಾ ಎಂ. ಅವರು ಮೂರನೇ ಸ್ಥಾನ ಪಡೆದರು.

ರಾಷ್ಟ್ರೀಯ ಕ್ರೀಡಾಕೂಟದಲ್ಲಿ 4X100 ಮೀ. ಮತ್ತು 4X400 ಮೀ. ರಿಲೇ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಲು ಅರ್ಹತೆ ಪಡೆದಿರುವ ಜ್ಯೋತಿಕಾ ಬೆಂಗಳೂರಿನ ಜೈನ್ ಕಾಲೇಜಿನ ಎಂ.ಕಾಂ. ದ್ವಿತೀಯ ವರ್ಷದ ವಿದ್ಯಾರ್ಥಿನಿ.

ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ಯಾದಗಿರಿಯ ರಾಥೋಡ್ ಲೋಕೇಶ್ ದಾಮು 15 ನಿಮಿಷ 3 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಮೊದಲಿಗರಾದರು. ದಕ್ಷಿಣ ಕನ್ನಡದ ತಾಜಲ್ ಕೆ.ಆರ್. ಎರಡನೇ ಸ್ಥಾನ ಗಳಿಸಿದರು. ಬೆಂಗಳೂರಿನ ಸಂತೋಷ್ ಕುಮಾರ್ ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟರು.

ಯಾದಗಿರಿ ಜಿಲ್ಲೆ ಶಹಾಪುರದ ಬಿ.ಎನ್. ತಾಂಡಾದ ರಾಥೋಡ್ ಲೋಕೇಶ್ ದಾಮು ಅವರು ಡೆಕಾಥ್ಲಾನ್ ಆಟಗಾರರಾಗಿದ್ದು, ರಾಜ್ಯಮಟ್ಟದಲ್ಲಿ ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಏಳು ಬಾರಿ ಚಿನ್ನದ ಪದಕ ವಿಜೇತರಾಗಿದ್ದಾರೆ.

ಎಮ್ಮೆಕೆರೆಯ ಅಂತರರಾಷ್ಟ್ರೀಯ ಈಜುಕೊಳದಲ್ಲಿ ಈಜು ಸ್ಪರ್ಧೆಯ ಮೊದಲ ದಿನ ದಕ್ಷಿಣ ಕನ್ನಡ ಜಿಲ್ಲೆಯ ಚಿಂತನ್ ಶೆಟ್ಟಿ ನಾಲ್ಕನೇ ಚಿನ್ನ ಗೆದ್ದುಕೊಂಡರು. ವೈಯಕ್ತಿಕ ಸ್ಪರ್ಧೆಗಳಲ್ಲಿ ಮೂರು, ರಿಲೆಯಲ್ಲಿ ಒಂದು ಚಿನ್ನ ಗೆದ್ದರು.

ಫಲಿತಾಂಶಗಳು:

ಅಥ್ಲೆಟಿಕ್ಸ್: ಪುರುಷರ ವಿಭಾಗ: 10 ಸಾವಿರ ಮೀ. ಓಟ: ವಿಜಯ ಸವರಾತ್ಕರ್ (ಬೆಳಗಾವಿ)-1. ಕಾಲ: 23ನಿ. 35.78 ಸೆ, ಗುರುಪ್ರಸಾದ್ (ಬೆಂಗಳೂರು)2, ಸಂದೀಪ್ (ಬೆಂಗಳೂರು)-3; 800 ಮೀ. ಓಟ: ಕಮಲಕಣ್ಣನ್ ಎಸ್.(ಬೆಂಗಳೂರು)-1. ಕಾಲ: 1 ನಿ. 52.92 ಸೆ., ಲೋಕೇಶ್ ಕೆ. (ರಾಮನಗರ)-2, ವಿನಾಯಕ ಅಂಗಡಿ (ಬೆಂಗಳೂರು)3; 200 ಮೀ. ಓಟ: ಗುರುಪ್ರಸಾದ್ (ಮೈಸೂರು)-1. ಕಾಲ: 21ನಿ. 43 ಸೆ., ಪ್ರಸನ್ನ ಕುಮಾರ್ (ಬೆಂಗಳೂರು)2, ಧನುಷ್ ಡಿ. (ಉಡುಪಿ)3; ಡಿಸ್ಕಸ್ ಥ್ರೋ: ಮೊಹಮ್ಮದ್ ಸಕ್ಲೈನ್ (ಮೈಸೂರು)-1.ದೂರ: 52.36 ಮೀ., ನಾಗೇಂದ್ರ ಎ. ನಾಯ್ಕ್ (ಉ.ಕ)-2, ಮೋಹಿತ್ ಎನ್. ರಾಜ್ (ಮೈಸೂರು)3; ಲಾಂಗ್ ಜಂಪ್: ಜಾಫರ್ ಖಾನ್ (ಬೆಳಗಾವಿ)-1. ಅಂತರ: 7.44 ಮೀ., ಅನುಷ್ ಟಿ.ಆರ್. (ಉಡುಪಿ)2, ಸುಶಾನ್ ಜಿ. ಸುವರ್ಣ (ಬೆಂಗಳೂರು)-3; ಪೋಲ್‌ವಾಲ್ಟ್: ರಾಹುಲ್ ಅಶೋಕ್ ನಾಯ್ಕ್ (ಮೈಸೂರು)-1. ಎತ್ತರ: 4.20 ಮೀ., ಆದಿತ್ಯ ವಿ.ಎಂ. (ಬೆಂಗಳೂರು)-2, ಲೋಕೇಶ್ ರಾಥೋಡ್ (ಯಾದಗಿರಿ)-3.

ಮಹಿಳೆಯರು:

800 ಮೀ. ಓಟ:

ವಿಜಯ ಕುಮಾರಿ ಜಿ.ಕೆ. (ಬೆಂಗಳೂರು)-1. ಕಾಲ: 2 ನಿ.14.02 ಸೆ, ದೀಪಾಶ್ರೀ (ದಕ್ಷಿಣ ಕನ್ನಡ)-2, ರೇಖಾ ಬಸಪ್ಪ ಪಿರೋಜಿ (ದ.ಕ.)-3; 100 ಮೀ. ಹರ್ಡಲ್ಸ್: ಇಶಾ ಎಲಿಜಬೆತ್ (ಬೆಂಗಳೂರು)-1. ಕಾಲ: 14ನಿ.58 ಸೆ., ದೀಕ್ಷಿತಾ (ದ.ಕ.)-2, ರಕ್ಷಿತಾ (ಉಡುಪಿ)-3; ಶಾಟ್‌ಪಟ್: ಅಂಬಿಕಾ ವಿ.(ಮೈಸೂರು)-1, ದೂರ: 14.53 ಮೀ., ಬೃಂದಾ ಎಸ್. (ಮೈಸೂರು)-2, ಮಾಧುರ್ಯ (ಉಡುಪಿ3; ಜಾವೆಲಿನ್ ಥ್ರೋ: ಶ್ರಾವ್ಯಾ (ಉಡುಪಿ)-1.ದೂರ 40.62 ಮೀ., ಜೀವಿತಾ ಡಿ. (ದ.ಕ.)2, ಸಿಂಚನಾ (ದ.ಕ.)-3.

ALVA'S SCHOOLS
Puttige, Moodubidire - 574 227
APPOINTMENTS
ALVA'S CBSE & ICSE SCHOOL
TGT & PGT
English | Maths | Physics | Chemistry | Biology | Kannada | Sanskrit | Hindi | IT | Social | Drawing
• Graduates / Post Graduates with B.Ed.
• Excellent English Communication with IT Skills.
• Teaching Experience in CBSE School.
ALVA'S ENGLISH MEDIUM SCHOOL
SCIENCE | MATHS | HINDI | SOCIAL | KANNADA
ALVA'S KANNADA MEDIUM HIGH SCHOOL
MATHS | PHYSICS | KANNADA | SOCIAL
Qualification: Post Graduation with B.Ed
Eligible candidates mail your application with updated Bio-data to ao-schools@alvas.org within 7 days
+91 7026530843, 6366377824

ಬೈದ್ಯನಾಥ್
ನಾಗಪುರ
ಅಸಲಿ ಆಯುರ್ವೇದ
ಪೈಲ್ಸ್?
ಅನಾನುಕೂಲತೆ ಮತ್ತು ನೋವಿನಿಂದ ಸಾಕಾಗಿದೆಯೆ?
ಸಿಡ್‌ಪೈಲ್ಸ್
ಟ್ಯಾಬ್ಲೆಟ್
ರಕ್ತಸ್ರಾವ ಮತ್ತು ರಕ್ತಸ್ರಾವರಹಿತ ಮೂಲವ್ಯಾಧಿ, ಫಿಸ್ತೂಲಾ & ಫಿಶ್ಶೂರ್. ಗುದದ್ವಾರದಲ್ಲಿ ಮಲಬದ್ಧತೆ ಊತ, ಉರಿಯೂತ, ನೋವು, ತುರಿಕೆ ಮತ್ತು ಕೆರೆತಗಳಂತಹ ಮೂಲ ವ್ಯಾಧಿ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿಯಾಗಿದೆ.

ಅಭಯಾಮೃತ
ದೀರ್ಘಕಾಲೀನ ಮಲಬದ್ಧತೆ ಹಾಗೂ ಜೀರ್ಣಕ್ರಿಯೆ ಸುಧಾರಣೆಗೆ ನೆರವಾಗುತ್ತದೆ

UIN-MP 1724
ಉತ್ತಮ ಜೀರ್ಣಕ್ರಿಯೆ, ಆರೋಗ್ಯಕರ ಜೀವನ
Customer Care : +91 844 844 4935
www.baidyanath.co

ಯಾವಾಗ ನೀವು
ಮಂಡಿನೋವು, ಭುಜದ ಅಥವಾ ಬೆನ್ನು ನೋವು
ಸಮಸ್ಯೆಯಿಂದ ಬಳಲುವಿರೊ, ಆಗ ಆಯುರ್ವೇದಿಕ ಪರಿಹಾರ ಮಾತ್ರ ಪಡೆಯಿರಿ.
ಡಾ. ಆರ್ಥೋ ರೋಲ್-ಆನ್ ನೋವನ್ನು ಪರಿಣಾಮಕಾರಿಯಾಗಿ ಶಮನಗೊಳಿಸಲು ನೆರವಾಗುತ್ತದೆ

Dr. Juneja's
ಡಾ. ಆರ್ಥೋ®
Ayurvedic Oil, Capsules, Spray & Ointment
Helpline: 78769 77777 | www.drorthooil.com
Available at all medical & general stores
UIN-MP 1724
ಡಾ. ಆರ್ಥೋ ನೋವು ನಿವಾರಕ ರೋಲ್– ಆನ್ ಉತ್ಪನ್ನವನ್ನು ಅನನ್ಯ ಆಯುರ್ವೇದಿಕ ಸೂತ್ರೀಕರಣದಿಂದ ತಯಾರಿಸಲಾಗಿದ್ದು, ಇದರಲ್ಲಿ ಗಂಧಪುರಿ ತೈಲ, ಲವಂಗ ತೈಲ, ಕಟುವಿರ ತೈಲ, ಕರ್ಪೂರ ಸತ್ವ, ಮತ್ತು ಪುದಿನ ಸತ್ವಗಳಂಥ – 5 ಶಕ್ತಿಶಾಲಿ ತೈಲಗಳು ಅಡಕಗೊಂಡಿವೆ. ಇದು ಆಳಕ್ಕೆ ಇಳಿದು ಸ್ನಾಯು ನೋವು, ಸೆಡೆತ, ಉಳುಕು ಮತ್ತು ಕೀಲುನೋವು ಶಮನಗೊಳಿಸಲು ನೆರವಾಗುತ್ತದೆ. ಇದು ಸಂಪೂರ್ಣ ಸುರಕ್ಷಿತ ಮತ್ತು ಆಯುರ್ವೇದಿಕ ಆಗಿರುವುದರಿಂದ, ಇದರ ಪರಿಣಾಮಗಳು ದೀರ್ಘಾವಧಿ ಕಾಲದವರೆಗೆ ನಿವಾರಣೆ ನೀಡುತ್ತವೆ.